ಬುಧವಾರ, ಸೆಪ್ಟೆಂಬರ್ 15, 2021 | ₹ 6.00

ಪ್ರಜಾ ವಾ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ರಾಷ್ಟ್ರೀಯ ಶಿಕ್ಷಣ ನೀತಿಗೆ ವಿರೋಧ • ವಿಧಾನಸೌಧ ಮುತ್ತಿಗೆಗೆ ಯತ್ನ

ವಿದ್ಯಾರ್ಥಿಗಳ ಮೇಲೆ ಲಾಠಿ ಪ್ರಹಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಹಿಂಪಡೆಯಬೇಕು' ಎಂದು ಒತ್ತಾಯಿಸಿ ವಿಧಾನಸೌಧಕ್ಕೆ ಮಂಗಳವಾರ ಮುತ್ತಿಗೆ ಹಾಕಲು ಯತ್ನಿಸಿದ ವಿದ್ಯಾರ್ಥಿಗಳ ಮೇಲೆ ಪೊಲೀಸರು ಲಾಠಿ ಪ್ರಹಾರ ನಡೆಸಿದ್ದು, ಹಲವರು ಗಾಯಗೊಂಡರು.

50ಕ್ಕೂ ವಿದ್ಯಾರ್ಥಿಗಳನ್ನು ವಶಕ್ಕೆ ಪಡೆದ ಪೊಲೀಸರು, ಸಂಜೆ ಬಿಡುಗಡೆ ಮಾಡಿದರು.

ಮಂಗಳೂರು, ತುಮಕೂರು, ಮೈಸೂರು, ಕಲಬುರ್ಗಿ, ದಾವಣಗೆರೆ, ಬೀದರ್ ಸೇರಿದಂತೆ ರಾಜ್ಯದ ಹಲವು ಕಾಲೇಜುಗಳ 400ಕ್ಕೂ ಹೆಚ್ಚು ವಿದ್ಯಾರ್ಥಿಗಳು 'ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ' ನೇತೃತ್ವದಲ್ಲಿ ಬೆಂಗಳೂರಿನಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿದರು. 'ರಾಷ್ಟ್ರೀಯ ಶಿಕ್ಷಣ ನೀತಿಯು ಆರ್‌ಎಸ್‌ಎಸ್, ಬಿಜೆಪಿ ಹುನ್ನಾರ' ಹಾಗೂ 'ಶಿಕ್ಷಣದ ಹಕ್ಕು ಹತ್ತಿಕ್ಕುವ ತಂತ್ರ' ಎಂಬ ಘೋಷಣಾ ಫಲಕಗಳನ್ನು ಪ್ರದರ್ಶಿಸಿದರು.

ಕೆಲ ವಿದ್ಯಾರ್ಥಿಗಳು, ಶಿಕ್ಷಣ ನೀತಿಯ ಪ್ರತಿಗಳನ್ನು ಹರಿದು ಹಾಕಿ ಆಕ್ರೋಶ ವ್ಯಕ್ತಪಡಿಸಿದರು. ಮೆರವಣಿಗೆ ಮೂಲಕ ಮೈಸೂರು ಬ್ಯಾಂಕ್ ವೃತ್ತಕ್ಕೆ ಬಂದು ಸೇರಿದ್ದ ವಿದ್ಯಾರ್ಥಿಗಳು, ಕೆಲ ಹೊತ್ತು ಪ್ರತಿಭಟನೆ ನಡೆಸಿದರು. ನಂತರ, ವಿಧಾನಸೌಧಕ್ಕೆ ಮುತ್ತಿಗೆ ಹಾಕಲು ಹೊರಟಿದ್ದರು.

ಅವರನ್ನು ತಡೆದ ಪೊಲೀಸರು, 'ವಿಧಾನಸೌಧ ಸುತ್ತ ನಿಷೇಧಾಜ್ಞೆ ಜಾರಿಯಲ್ಲಿದೆ. ಮೆರವಣಿಗೆಗೆ ಅವಕಾಶವಿಲ್ಲ. ವಾಪಸ್ ಹೋಗಿ' ಎಂದರು. ಅದಕ್ಕೆ ಒಪ್ಪದ ವಿದ್ಯಾರ್ಥಿಗಳು, ಬ್ಯಾರಿಕೇಡ್‌ಗಳನ್ನು ತಳ್ಳಾಡಿ ಮುನ್ನುಗಿದರು. ಇದೇ ವೇಳೆ ಪ್ರತಿಭಟನಕಾರರು ಹಾಗೂ ಪೊಲೀಸರ ನಡುವೆ ಮಾತಿನ ಚಕಮಕಿ ನಡೆಯಿತು.

ಪರಿಸ್ಥಿತಿ ಬಿಗಡಾಯಿಸುತ್ತಿದ್ದಂತೆ ಪೊಲೀಸರು, ವಿದ್ಯಾರ್ಥಿಗಳ ಮೇಲೆ ಲಾಠಿ ಬೀಸಿದರು. ಬಹುತೇಕ ವಿದ್ಯಾರ್ಥಿಗಳು, ಪರಸ್ಪರ ಕೈ ಹಿಡಿದು ರಸ್ತೆಯಲ್ಲಿ ಕುಳಿತು ಪ್ರತಿಭಟನೆ ಮುಂದುವರಿಸಿದರು. ಅವರನ್ನೆಲ್ಲ ವಶಕ್ಕೆ ಪಡೆದ ಪೊಲೀಸರು, ಎಳೆದೊಯ್ದು ಬಸ್ ಹತ್ತಿಸಿದರು.

ಲಾಠಿ ಪ್ರಹಾರದ ವೇಳೆ ವಿದ್ಯಾರ್ಥಿಯೊಬ್ಬರ ತಲೆಗೆ ಪೆಟ್ಟು ಬಿದ್ದು ರಕ್ತ ಸೋರುತ್ತಿತ್ತು. ವಾಹನ ಹತ್ತಲು ಒಪ್ಪದ ಅವರನ್ನು ಪೊಲೀಸರೇ ಎಳೆದೊಯ್ದು ಜೀಪು ಹತ್ತಿಸಿದರು. ಪರಸ್ಪರ ತಳ್ಳಾಟ–ನೂಕಾಟವೂ ನಡೆಯಿತು.

ಅನುಮತಿ ಪಡೆಯದೇ ಪ್ರತಿಭಟನೆ: 'ವಿಧಾನಸೌಧ ಸುತ್ತಮುತ್ತಲಿನ 2 ಕಿ.ಮೀ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಹಾಗೂ ಐಪಿಸಿ ಸೆಕ್ಷನ್ 188 ಜಾರಿಗೊಳಿಸಲಾಗಿದೆ. ಇಂಥ ಸಂದರ್ಭದಲ್ಲೇ 400ಕ್ಕೂ ಹೆಚ್ಚು ಮಂದಿ ವಿಧಾನಸೌಧಕ್ಕೆ ಮುತ್ತಿಗೆ ಹಾಕಲು ಯತ್ನಿಸಿದರು. ಬ್ಯಾರಿಕೇಡ್‌ಗಳನ್ನು ತಳ್ಳಿ, ಪೊಲೀಸರನ್ನೇ ನೂಕಾಡಿದರು. ಪರಿಸ್ಥಿತಿ ನಿಯಂತ್ರಿಸಲು ಬಲಪ್ರಯೋಗ ಮಾಡಬೇಕಾಯಿತು' ಎಂದು ದಕ್ಷಿಣ ವಿಭಾಗದ ಡಿಸಿಪಿ ಎಂ.ಎನ್. ಅನುಚೇತ್ ಹೇಳಿದರು.

'ಪ್ರತಿಭಟನೆಗೆ ಯಾವುದೇ ಅನುಮತಿ ಸಹ ಪಡೆದಿರಲಿಲ್ಲ. ಪ್ರತಿಭಟನೆ ಆಯೋಜಿಸಿದ್ದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದು ಅವರು ಹೇಳಿದರು.

ಪ್ರತಿಭಟನೆ ನಿರತ ವಿದ್ಯಾರ್ಥಿನಿಯೊಬ್ಬರನ್ನು ವಶಕ್ಕೆ ಪಡೆದು ಎತ್ತಿಕೊಂಡು ಹೋದ ಮಹಿಳಾ ಪೊಲೀಸ್ ಸಿಬ್ಬಂದಿ

ಲಾಠಿ ಪ್ರಹಾರದ ಮೂಲಕ ವಿದ್ಯಾರ್ಥಿ ಹೋರಾಟವನ್ನು ಹತ್ತಿಕ್ಕಲು ಸರ್ಕಾರ ಯತ್ನಿಸಿದೆ. ಇದಕ್ಕೆ ನಾವು ಅಂಜುವುದಿಲ್ಲ. ನಮ್ಮ ಹೋರಾಟ ಮುಂದುವರಿಯಲಿದೆ

ಅಥಾವುಲ್ಲಾ ಪೂಂಜಾಲಕಟ್ಟೆ,
ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ ರಾಜ್ಯ ಘಟಕದ ಅಧ್ಯಕ್ಷ

ಲಾಠಿ ಪ್ರಹಾರದಿಂದ ವಿದ್ಯಾರ್ಥಿಯೊಬ್ಬರು ಸ್ಥಳದಲ್ಲಿ ಕುಸಿದು ಬಿದ್ದರು

ಪೊಲೀಸರ ವರ್ತನೆಗೆ ಆಕ್ರೋಶ

ವಿದ್ಯಾರ್ಥಿಗಳ ಮೇಲೆ ಲಾಠಿ ಪ್ರಹಾರ ಮಾಡಿರುವ ಪೊಲೀಸರ ವರ್ತನೆಗೆ ಸಾಮಾಜಿಕ ಜಾಲತಾಣಗಳಲ್ಲಿ ಆಕ್ರೋಶ ವ್ಯಕ್ತವಾಗಿದೆ.

ಲಾಠಿ ಪ್ರಹಾರದ ವಿಡಿಯೊ, ಫೋಟೊ ಹಂಚಿಕೊಂಡಿರುವ ಹಲವರು, 'ವಿದ್ಯಾರ್ಥಿಗಳ ಮೇಲೆ ಲಾಠಿ ಬೀಸಿರುವುದು ಖಂಡನೀಯ. ಲಾಠಿ ಬೀಸಲು ಹೇಳಿದ ಅಧಿಕಾರಿ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದ್ದಾರೆ.

'ಪ್ರತಿಯೊಬ್ಬರಿಗೂ ಪ್ರತಿಭಟಿಸುವ ಹಕ್ಕಿದೆ. ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದ ವಿದ್ಯಾರ್ಥಿಗಳನ್ನು ಪೊಲೀಸರೇ ಪ್ರಚೋದಿಸಿ ಲಾಠಿಯಿಂದ ಹೊಡೆದಿದ್ದಾರೆ. ಹೋರಾಟದ ದಿಕ್ಕು ತಪ್ಪಿಸುವ ಯತ್ನ ಇದಾಗಿದೆ. ಘಟನೆ ಬಗ್ಗೆ ಸೂಕ್ತ ತನಿಖೆ ನಡೆಸಬೇಕು' ಎಂದೂ ಒತ್ತಾಯಿಸಿದ್ದಾರೆ.

'ಶಿಕ್ಷಣದ ಕೇಸರೀಕರಣದ ಹುನ್ನಾರ'

'ರಾಷ್ಟ್ರೀಯ ಶಿಕ್ಷಣ ನೀತಿಯು ಸಂವಿಧಾನದ ವಿರೋಧಿಯಾಗಿದೆ. ಶಿಕ್ಷಣದ ಖಾಸಗೀಕರಣಕ್ಕೆ ಒತ್ತು ನೀಡಿ, ಶಿಕ್ಷಣವನ್ನು ಕೇಸರೀಕರಣಗೊಳಿಸುವ ಹುನ್ನಾರ ಇದರ ಹಿಂದಿದೆ' ಎಂದು ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾದ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಅನೀಸ್ ಕುಂಬ್ರ ಹೇಳಿದರು.

ಪ್ರತಿಭಟನೆ ವೇಳೆ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದ ನಮ್ಮ ಮೇಲೆ ಪೊಲೀಸರು ಲಾಠಿ ಪ್ರಹಾರ ನಡೆಸಿದ್ದಾರೆ. ಇದರಿಂದಾಗಿ 25ಕ್ಕೂ ಹೆಚ್ಚು ವಿದ್ಯಾರ್ಥಿಗಳು ಗಾಯಗೊಂಡು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದರು.

'ನೀತಿ ಹಿಂಪಡೆಯುವಂತೆ ಸರ್ಕಾರಕ್ಕೆ ಹಲವು ಬಾರಿ ಮನವಿ ಸಲ್ಲಿಸಿದರೂ ಸ್ಪಂದನೆ ಸಿಕ್ಕಿಲ್ಲ. ನೀತಿ ಬಗ್ಗೆ ಮುಕ್ತ ಚರ್ಚೆಗೆ ಸಿದ್ಧ ಎಂದಿದ್ದ ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ, ಇದುವರೆಗೂ ಚರ್ಚೆಗೆ ಬಂದಿಲ್ಲ' ಎಂದೂ ಹೇಳಿದರು.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

https://bit.ly/3tEzPSZ

'ಲಾಠಿಯಿಂದ ಪ್ರತಿಭಟನೆ ಹತ್ತಿಕ್ಕಬಹುದೆಂಬುದು ಭ್ರಮೆ': 'ರಾಷ್ಟ್ರೀಯ ಶಿಕ್ಷಣ ನೀತಿ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದ ವಿದ್ಯಾರ್ಥಿಗಳ ಮೇಲೆ ಪೊಲೀಸರು ನಡೆಸಿದ ದೌರ್ಜನ್ಯ ಖಂಡನೀಯ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೇ, ಪೊಲೀಸರ ಲಾಠಿಯಿಂದ ಪ್ರತಿಭಟನೆ ಹತ್ತಿಕ್ಕಬಹುದೆಂದು ತಿಳಿದುಕೊಂಡಿದ್ದರೆ ಅದು ನಿಮ್ಮ ಭ್ರಮೆ' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಕಿಡಿಕಾರಿದ್ದಾರೆ.

ಆತುರದಿಂದ ದೇವಸ್ಥಾನ ಒಡೆಯದಂತೆ ಸಿ.ಎಂ ಸೂಚನೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಸ್ತೆ ಬದಿ ಇರುವ ಧಾರ್ಮಿಕ ಕಟ್ಟಡಗಳ ತೆರವಿಗೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ನೀಡಿರುವ ಆದೇಶ ಮುಂದಿಟ್ಟುಕೊಂಡು ಆತುರದಲ್ಲಿ ಯಾವುದೇ ದೇವಸ್ಥಾನ ಒಡೆಯದಂತೆ ಎಲ್ಲ ಜಿಲ್ಲಾಧಿಕಾರಿಗಳಿಗೂ ಸೂಚನೆ ನೀಡಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ವಿಧಾನಸೌಧದಲ್ಲಿ ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಮೈಸೂರು ಜಿಲ್ಲೆಯಲ್ಲಿ ದೇವಾಲಯಗಳ ತೆರವಿಗೆ ಸಂಬಂಧಿಸಿದಂತೆ ಎಲ್ಲ ವಿವರಗಳನ್ನು ಸದನದಲ್ಲೇ ನೀಡುತ್ತೇನೆ. ಸಾರ್ವಜನಿಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಕಾರ್ಯಾಚರಣೆ ನಡೆಸಿರುವ ಕುರಿತು ಜಿಲ್ಲಾಧಿಕಾರಿ ಮತ್ತು ತಹಶೀಲ್ದಾರ್‌ಗೆ ನೋಟಿಸ್ ನೀಡಲಾಗಿದೆ' ಎಂದರು.

ದೇವಸ್ಥಾನಗಳನ್ನು ಒಡೆಯುವ ವಿಚಾರದಲ್ಲಿ ರಾಜ್ಯದಲ್ಲಿ ಅವಸರದ ತೀರ್ಮಾನ ಮಾಡಬಾರದು. ಸುಪ್ರೀಂ ಕೋರ್ಟ್ ಆದೇಶದ ಕುರಿತು ಸಮಗ್ರವಾಗಿ ಅಧ್ಯಯನ ಮಾಡಲಾಗುವುದು. ಸಂಪುಟ ಸಭೆಯಲ್ಲೂ ಈ ಬಗ್ಗೆ ಚರ್ಚಿಸಿ ಎರಡು ದಿನಗಳಲ್ಲಿ ಎಲ್ಲ ಜಿಲ್ಲಾಧಿಕಾರಿಗಳಿಗೂ ನಿರ್ದಿಷ್ಟ ಸೂಚನೆಗಳನ್ನು ನೀಡಲಾಗುವುದು ಎಂದು ಹೇಳಿದರು.

ದಿಢೀರ್ ಕಾರ್ಯಾಚರಣೆಗೆ ತಡೆ: ಇದೇ ವಿಷಯ ಕುರಿತು ಸುದ್ದಿಗಾರರ ಜತೆ ಮಾತನಾಡಿದ ಕಂದಾಯ ಸಚಿವ ಆರ್. ಅಶೋಕ, 'ದಿಢೀರ್ ಆಗಿ ಧಾರ್ಮಿಕ ಕಟ್ಟಡಗಳನ್ನು ತೆರವು ಮಾಡುವಂತೆ ಸುಪ್ರೀಂಕೋರ್ಟ್ ಹೇಳಿಲ್ಲ. ಅಂತಹ ಕಟ್ಟಡಗಳ ಸ್ಥಳಾಂತರಕ್ಕೆ ಅವಕಾಶವಿದೆ. ಅನಿವಾರ್ಯ ಆದಲ್ಲಿ ಸಾರ್ವಜನಿಕರನ್ನು ಮನವೊಲಿಸಿ ತೆರವು ಕಾರ್ಯಾಚರಣೆ ಮಾಡುವಂತೆ ನ್ಯಾಯಾಲಯ ಹೇಳಿದೆ. ಈ ನಿರ್ದೇಶನಗಳನ್ನು ಪಾಲಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದರು.

'ಧಾರ್ಮಿಕ ಕಟ್ಟಡಗಳನ್ನು ದಿಢೀರ್ ನೆಲಸಮಗೊಳಿಸುವುದು ಸರಿಯಲ್ಲ ಎಂಬುದು ಸರ್ಕಾರದ ಭಾವನೆ. ಸುಪ್ರೀಂಕೋರ್ಟ್ ಆದೇಶ ದೇವಸ್ಥಾನಗಳಿಗೆ ಮಾತ್ರವಲ್ಲ, ಮಸೀದಿ, ಚರ್ಚ್ ಸೇರಿದಂತೆ ಎಲ್ಲ ಧಾರ್ಮಿಕ ಕಟ್ಟಡಗಳಿಗೂ ಅನ್ವಯಿಸುತ್ತದೆ. ಈ ವಿಚಾರದಲ್ಲಿ ಸರ್ಕಾರದ ನಿಲುವನ್ನು ಸದನದಲ್ಲಿ ಪ್ರಕಟಿಸಲಾಗುವುದು' ಎಂದರು.

ಜನರ ದಿಕ್ಕುತಪ್ಪಿಸಲು ದೇವಸ್ಥಾನ ಧ್ವಂಸ: ಎಚ್‌ಡಿಕೆ



ಬೆಂಗಳೂರು: ತನ್ನ ಜವಾಬ್ದಾರಿಗಳನ್ನು ನಿರ್ವಹಿಸಲು ವಿಫಲವಾಗಿರುವ ರಾಜ್ಯದ ಬಿಜೆಪಿ ಸರ್ಕಾರ, ಜನರ ಗಮನವನ್ನು ಬೇರೆಡೆ ಸೆಳೆಯಲು ದೇವಸ್ಥಾನಗಳ ಧ್ವಂಸಕ್ಕೆ ಕೈಹಾಕಿರುವ ಸಂಶಯ ಕಾಡುತ್ತಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ.

ಮೈಸೂರು ಜಿಲ್ಲೆಯಲ್ಲಿ ರಸ್ತೆ ಬದಿ ಇರುವ ಅನಧಿಕೃತ ದೇವಸ್ಥಾನಗಳ ತೆರವು ಕಾರ್ಯಾಚರಣೆ ಕುರಿತು ಮಂಗಳವಾರ ಸರಣಿ ಟ್ವೀಟ್ ಮಾಡಿರುವ ಅವರು, 'ದೇವಾಲಯಗಳಿಗೆ ರಕ್ಷಣೆ ನೀಡಬೇಕಾಗಿರುವುದು ಸರ್ಕಾರದ ಜವಾಬ್ದಾರಿ. ಅದನ್ನು ಮಾಡದೇ, ತೆರವುಗೊಳಿಸಲಾಗಿದೆ. ಮಗುವನ್ನು ಚಿವುಟುವುದೂ, ತೊಟ್ಟಿಲು ತೂಗುವುದು ಎರಡೂ ಕೆಲಸವನ್ನು ಬಿಜೆಪಿ ಸರ್ಕಾರ ಏಕಕಾಲಕ್ಕೆ ಮಾಡುತ್ತಿದೆ' ಎಂದು ಟೀಕಿಸಿದ್ದಾರೆ.

ಮೈಸೂರು ಜಿಲ್ಲೆಯಲ್ಲಿ 93 ದೇವಸ್ಥಾನಗಳ ಧ್ವಂಸಕ್ಕೆ ಬಿಜೆಪಿ ಸರ್ಕಾರದ ದ್ವಂದ್ವ ನೀತಿಯೇ ಕಾರಣ. ಸರ್ಕಾರಕ್ಕಿಂತ ಜಿಲ್ಲಾಡಳಿತ ದೊಡ್ಡದೆ? ಒಂದೆಡೆ ದೇವಸ್ಥಾನಗಳ ಧ್ವಂಸ ನಡೆಯುತ್ತಿದೆ, ಇನ್ನೊಂದೆಡೆ ಆಡಳಿತ ಪಕ್ಷದ ಮಿತ್ರ ಸಂಘಟನೆ ಹಿಂದೂ ಜಾಗರಣ ವೇದಿಕೆ ಹಾದಿ ಬೀದಿಯಲ್ಲಿ ಪ್ರತಿಭಟನೆ ನಡೆಸುತ್ತಿದೆ ಎಂದು ವಾಗ್ದಾಳಿ ನಡೆಸಿದ್ದಾರೆ.

ದೇವಾಲಯಗಳನ್ನು ಏಕೆ ನೆಲಸಮ ಮಾಡಲಾಗುತ್ತಿದೆ ಎಂಬ ಪ್ರಶ್ನೆಗೆ ಸರ್ಕಾರ ಉತ್ತರ ನೀಡಬೇಕು. ದೇವಾಲಯಗಳ ಬಗ್ಗೆ ನಿಜವಾಗಿಯೂ ಕಾಳಜಿ ಇದ್ದರೆ ಕಾರ್ಯಾಚರಣೆ ನಿಲ್ಲಿಸಿ, ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಿ. ಎಲ್ಲ ಪಕ್ಷಗಳ ಮುಖಂಡರ ಜತೆ ಚರ್ಚಿಸಲಿ ಎಂದು ಆಗ್ರಹಿಸಿದ್ದಾರೆ.

ಸಂಸದ ಪ್ರತಾಪಸಿಂಹ ವಿರುದ್ಧ ಡಿ.ಸಿ.ಗೆ ದೂರು

ಮೈಸೂರು: 'ಕೋಮುಗಲಭೆಯನ್ನು ಪ್ರಚೋದಿಸುವಂಥ ಹೇಳಿಕೆ ನೀಡಿರುವ ಸಂಸದ ಪ್ರತಾಪಸಿಂಹ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿ ಜಿಲ್ಲಾ ಕಾಂಗ್ರೆಸ್ ಸಮಿತಿಯ ಪ್ರಮುಖರು ನಗರದಲ್ಲಿ ಮಂಗಳವಾರ ಜಿಲ್ಲಾಧಿಕಾರಿ ಬಗಾದಿ ಗೌತಮ್ ಅವರಿಗೆ ದೂರು ಸಲ್ಲಿಸಿದರು.

'ದೇವರಾಜ ಅರಸು ರಸ್ತೆಯಲ್ಲಿರುವ ದರ್ಗಾ ಹಾಗೂ ಇರ್ವಿನ್ ರಸ್ತೆಯಲ್ಲಿರುವ ಮಸೀದಿಯನ್ನು ಒಡೆದು ಹಾಕಬೇಕು ಎಂದು ಜಿಲ್ಲಾಧಿಕಾರಿಯವರಿಗೆ ಸಭೆಯಲ್ಲಿ ಧಮ್ಕಿ ಹಾಕಿದ್ದರು. ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಸಮ್ಮುಖದಲ್ಲೇ ಧಾರ್ಮಿಕ ಭಾವನೆಗಳನ್ನು ಕೆರಳಿಸಿ, ಸಮುದಾಯಗಳ ನಡುವೆ ಕಿಚ್ಚು ಹಚ್ಚಿಸುವಂತಹ ಹೇಳಿಕೆ ನೀಡಿರುವುದನ್ನು ಗಂಭೀರವಾಗಿ ಪರಿಗಣಿಸಬೇಕು' ಎಂದು ಕಾಂಗ್ರೆಸ್ ಜಿಲ್ಲಾ ಸಮಿತಿ ಅಧ್ಯಕ್ಷ ಬಿ.ಜೆ.ವಿಜಯಕುಮಾರ್ ಆಗ್ರಹಿಸಿದರು.

'ಪ್ರತಾಪಸಿಂಹ ವಿರುದ್ಧ ಕಾನೂನು ಕ್ರಮ ಜರುಗಿಸದೆ, ಮುಂದೆ ಕೋಮುಗಲಭೆ ನಡೆದರೆ ಜಿಲ್ಲಾಡಳಿತವೇ ಹೊಣೆಯಾಗಬೇಕಾಗುತ್ತದೆ' ಎಂದು ಕೆಪಿಸಿಸಿ ವಕ್ತಾರರಾದ ಎಂ.ಲಕ್ಷ್ಮಣ, ಮಂಜುಳಾ ಮಾನಸ ಪ್ರತಿಪಾದಿಸಿದರು.

ರಾಜ್ಯ ವೃತ್ತಿಶಿಕ್ಷಣ ಪರಿಷತ್ ಅನುಮೋದನೆ • ಪ್ರಸಕ್ತ ವರ್ಷವೇ ಪ್ರವೇಶಾತಿ

ಐಟಿಐಗೆ 6 ಹೊಸ ಕೋರ್ಸ್ ಸೇರ್ಪಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟಾಟಾ ಕಂಪನಿಯ ಸಹಯೋಗದಲ್ಲಿ ರಾಜ್ಯದ 150 ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು (ಐಟಿಐ) ಉನ್ನತೀಕರಿಸಲಾಗುತ್ತಿದ್ದು, ಈ ಕಾರ್ಯಕ್ರಮದ ಅಡಿಯಲ್ಲಿ ಐಟಿಐಗೆ 6 ಹೊಸ ಕೋರ್ಸ್‌ಗಳನ್ನು ಸೇರ್ಪಡೆ ಮಾಡಲು ನಿರ್ಧರಿಸಲಾಗಿದೆ. ಇದಕ್ಕೆ ರಾಜ್ಯ ವೃತ್ತಿಶಿಕ್ಷಣ ಪರಿಷತ್ (ಎಸ್.ವಿ.ಸಿ.ಟಿ.) ಅನುಮೋದನೆ ನೀಡಿದೆ.

ಉನ್ನತ ಶಿಕ್ಷಣ ಹಾಗೂ ಕೌಶಲಾಭಿವೃದ್ಧಿ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮಂಗಳವಾರ ಈ ನಿರ್ಧಾರ ಕೈಗೊಳ್ಳಲಾಗಿದೆ.

ಯಾವ್ಯಾವ ಕೋರ್ಸ್‌ಗಳ ಸೇರ್ಪಡೆ

ಕೋರ್ಸ್	ಅವಧಿ
ಬ್ಯಾಟರಿ ಎಲೆಕ್ಟ್ರಿಕ್ ವೆಹಿಕಲ್	2 ವರ್ಷ
ಬೇಸಿಕ್ಸ್ ಆಫ್ ಡಿಸೈನ್ ಆ್ಯಂಡ್ ವರ್ಚುವಲ್ ವೆರಿಫಿಕೇಷನ್	2 ವರ್ಷ
ಅಡ್ವಾನ್ಸ್ಡ್ ಮ್ಯಾನ್ಯುಫ್ಯಾಕ್ಚರಿಂಗ್	1 ವರ್ಷ
ಆರ್ಟಿಸಾನ್ ಯೂಸಿಂಗ್ ಅಡ್ವಾನ್ಸ್ಡ್ ಟೂಲ್ಸ್	1 ವರ್ಷ
ಇಂಡಸ್ಟ್ರಿಯಲ್ ರೊಬೊಟಿಕ್ಸ್ ಆ್ಯಂಡ್ ಡಿಜಿಟಲ್ ಮ್ಯಾನ್ಯುಫ್ಯಾಕ್ಚರ್	1 ವರ್ಷ
ಮ್ಯಾನ್ಯುಫ್ಯಾಕ್ಚರಿಂಗ್ ಪ್ರೊಸೆಸ್ ಕಂಟ್ರೋಲ್ ಆಟೋಮೇಷನ್	1 ವರ್ಷ

'ಇದು 150 ಐಟಿಐಗಳಿಗೂ ಅನ್ವಯವಾಗಲಿದ್ದು, ಪ್ರಸಕ್ತ ಸಾಲಿನಿಂದಲೇ ವಿದ್ಯಾರ್ಥಿಗಳ ಪ್ರವೇಶಾತಿಗೆ ಅನುಕೂಲ ಮಾಡಿಕೊಡುವುದಕ್ಕಾಗಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ' ಎಂದು ಅಶ್ವತ್ಥನಾರಾಯಣ ತಿಳಿಸಿದ್ದಾರೆ.

'ಹೊಸ ಕೋರ್ಸ್‌ಗಳಿಗೆ ರಾಷ್ಟ್ರೀಯ ವೃತ್ತಿಶಿಕ್ಷಣ ತರಬೇತಿ ಪರಿಷತ್ (ಎನ್.ಸಿ.ವಿ.ಇ.ಟಿ.) ಮಾನ್ಯತೆ ಸಿಗಬೇಕಿದೆ. ಇವುಗಳ ಪಠ್ಯಕ್ರಮಕ್ಕೆ ನವದೆಹಲಿಯ ತರಬೇತಿ ಮಹಾನಿರ್ದೇಶನಾಲಯದಿಂದ (ಡಿ.ಜಿ.ಟಿ.) ಅನುಮೋದನೆ ಪಡೆಯಬೇಕಿದೆ. ಪಠ್ಯಕ್ರಮವನ್ನು ಈಗಾಗಲೇ ಡಿ.ಜಿ.ಟಿ.ಗೆ ಸಲ್ಲಿಸಲಾಗಿದೆ. ವಿದ್ಯಾರ್ಥಿಗಳ ಪ್ರವೇಶಾತಿಗೆ ಅನುಕೂಲ ಮಾಡಿಕೊಡುವುದಕ್ಕಾಗಿ ಎನ್.ಸಿ.ವಿ.ಇ.ಟಿ.ಯಿಂದ ಮಾನ್ಯತೆ ಪಡೆಯುವ ಷರತ್ತಿಗೆ ಒಳಪಟ್ಟು ಈ ನಿರ್ಣಯ ತೆಗೆದುಕೊಳ್ಳಲಾಗಿದೆ' ಎಂದೂ ಹೇಳಿದ್ದಾರೆ.

'23 ಅಲ್ಪಾವಧಿ (3 ತಿಂಗಳು) ಸರ್ಟಿಫೈಡ್ ಕೋರ್ಸ್‌ಗಳ ಆರಂಭಕ್ಕೂ ಎಸ್.ವಿ.ಸಿ.ಟಿ.ಯು ಅನುಮೋದನೆ ನೀಡಿದೆ' ಎಂದು ತಿಳಿಸಿದ್ದಾರೆ.

ಕೌಶಲಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ಎಸ್.ಸೆಲ್ವಕುಮಾರ್, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ಆಯುಕ್ತ ಕೆ.ಹರೀಶ್ ಕುಮಾರ್ ಇದ್ದರು.

ಹಿಕ್ಕೆ ಹಾಕುತ್ತವೆ ಎಂದು ಕೊಂಬೆಗಳನ್ನೇ ಕಡಿದ ಗ್ರಾಮಸ್ಥರು

ಬೆಳ್ಳಕ್ಕಿ ಮರಿಗಳ ಸಾವು

ಪ್ರಜಾವಾಣಿ ವಾರ್ತೆ

ಮೈಸೂರು: ಟಿ.ನರಸೀಪುರ ತಾಲ್ಲೂಕಿನ ಕುಪ್ಯ ಗ್ರಾಮದಲ್ಲಿ ಮರದ ಕೊಂಬೆಗಳನ್ನು ಏಕಾಏಕಿ ಕತ್ತರಿಸಿದರಿಂದ ಬೆಳ್ಳಕ್ಕಿ (ಲಿಟಲ್ ಇಗ್ರೆಟ್) ಮರಿಗಳು ನೆಲಕ್ಕೆ ಬಿದ್ದು ಮೃತಪಟ್ಟಿವೆ.

'ಪಕ್ಷಿಗಳು ಹಿಕ್ಕೆ ಹಾಕಿ ಅರಳಿಕಟ್ಟೆಯನ್ನು ಗಲೀಜು ಮಾಡುತ್ತವೆ' ಎಂಬ ಕಾರಣಕ್ಕೆ ಗ್ರಾಮದ ಕೆಲವರು ಕೊಂಬೆಗಳನ್ನು ಕತ್ತರಿಸಿದ್ದಾರೆ. ಗಾಯಗೊಂಡು ನರಳುತ್ತಿದ್ದ ಕೆಲ ಮರಿಗಳನ್ನು ಅಲ್ಲಿಯೇ ಸುಟ್ಟಿದ್ದಾರೆ.

ವಿಷಯ ತಿಳಿದು ಸ್ಥಳಕ್ಕೆ ಧಾವಿಸಿದ ಪ್ರಗತಿ ಬರ್ಡ್ ಚಾರಿಟಬಲ್ ಆಸ್ಪತ್ರೆಯ ಅಧ್ಯಕ್ಷ ಡಾ.ಅಜಯಕುಮಾರ್ ಜೈನ್, ಉಳಿದ ಮರಿಗಳನ್ನು ರಕ್ಷಿಸಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿದ್ದಾರೆ.

'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಅವರು, 'ಇದು ಬೆಳ್ಳಕ್ಕಿಗಳು ಗೂಡುಕಟ್ಟಿ ಮರಿ ಮಾಡುವ ಕಾಲ. ಹಾರಲಾಗದ ಹಾಗೂ ಹಾರಲು ಕಲಿಯುತ್ತಿದ್ದ 14 ಪಕ್ಷಿಗಳ ಕಾಲು ಹಾಗೂ ರೆಕ್ಕೆಗಳು ಮುರಿದಿವೆ' ಎಂದು ಹೇಳಿದರು.

'ಈ ಕುರಿತು ಪರಿಶೀಲಿಸಲು ವಲಯ ಅರಣ್ಯ ಸಂರಕ್ಷಣಾಧಿಕಾರಿಗೆ ಸೂಚಿಸಲಾಗುವುದು' ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಕಮಲಾ ಕರಿಕಾಳನ್ ತಿಳಿಸಿದರು.

'ಪಕ್ಷಿ ವೀಕ್ಷಣೆ ಹಾಗೂ ಸಂರಕ್ಷಣೆಯ ಬಗ್ಗೆ ಕಾಳಜಿಯುಳ್ಳ ತಜ್ಞರು, ಕಾರ್ಯಕರ್ತರ ತವರು ಎಂದೇ ಹೆಸರಾದ ಮೈಸೂರಿಗೆ ಸಮೀಪದಲ್ಲೇ ಪಕ್ಷಿಗಳ ಕಗ್ಗೊಲೆ ನಡೆದಿರುವುದು ವಿಪರ್ಯಾಸ' ಎಂದು ಪಕ್ಷಿತಜ್ಞ ಕೆ.ಮನು, ತನುಜ ವಿಷಾದಿಸಿದರು.

ಬೆಳ್ಳಕ್ಕಿಗಳು ಗೂಡು ಕಟ್ಟಿದ್ದ ಮರವು ಕೊಂಬೆಗಳಿಲ್ಲದೆ ಬೋಳಾಗಿದೆ

ಪೆಟ್ರೋಲ್, ಡೀಸೆಲ್‌ಗೆ ಜಿಎಸ್‌ಟಿ: ಪರಿಶೀಲನೆ?

ನವದೆಹಲಿ (ಪಿಟಿಐ): ಪೆಟ್ರೋಲ್, ಡೀಸೆಲ್ ಹಾಗೂ ಇತರ ಪೆಟ್ರೋಲಿಯಂ ಉತ್ಪನ್ನಗಳನ್ನು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯಾಪ್ತಿಗೆ ತರುವ ಬಗ್ಗೆ ಜಿಎಸ್‌ಟಿ ಮಂಡಳಿಯು ಶುಕ್ರವಾರದ ಸಭೆಯಲ್ಲಿ ಪರಿಶೀಲಿಸುವ ಸಾಧ್ಯತೆ ಇದೆ.

ಈ ಉತ್ಪನ್ನಗಳನ್ನು ಜಿಎಸ್‌ಟಿ ವ್ಯಾಪ್ತಿಗೆ ತಂದರೆ ಕೇಂದ್ರ, ರಾಜ್ಯ ಸರ್ಕಾರಗಳು ತಮ್ಮ ವರಮಾನದ ವಿಚಾರದಲ್ಲಿ ದೊಡ್ಡ ಪ್ರಮಾಣದಲ್ಲಿ ರಾಜಿ–ಹೊಂದಾಣಿಕೆ ಮಾಡಿಕೊಳ್ಳ ಬೇಕಾಗುತ್ತದೆ. ಕೋವಿಡ್–19 ಚಿಕಿತ್ಸೆಗೆ ಸಂಬಂಧಪಟ್ಟ ಕೆಲವು ಅಗತ್ಯ ವಸ್ತುಗಳಿಗೆ ಸುಂಕ ವಿನಾಯಿತಿಯನ್ನು ವಿಸ್ತರಿಸುವ ಬಗ್ಗೆಯೂ ಮಂಡಳಿಯು ಪರಿಶೀಲನೆ ನಡೆಸಬಹುದು ಎಂದು ಮೂಲಗಳು ತಿಳಿಸಿವೆ.

ಪೆಟ್ರೋಲ್, ಡೀಸೆಲ್ ಬೆಲೆ ತಗ್ಗಿಸಬೇಕು ಎಂದಾದರೆ ಇವುಗಳನ್ನು ಜಿಎಸ್‌ಟಿ ವ್ಯಾಪ್ತಿಗೆ ತರುವುದು ಸೂಕ್ತ ಎಂಬ ಅಭಿಪ್ರಾಯ ಇದೆ. ಪೆಟ್ರೋಲ್, ಡೀಸೆಲ್‌ಅನ್ನು ಜಿಎಸ್‌ಟಿ ವ್ಯಾಪ್ತಿಗೆ ತರುವ ಬಗ್ಗೆ ತೀರ್ಮಾನ ಕೈಗೊಳ್ಳುವಂತೆ ಜಿಎಸ್‌ಟಿ ಮಂಡಳಿಗೆ ಕೇರಳ ಹೈಕೋರ್ಟ್ ಜೂನ್‌ನಲ್ಲಿ ಸೂಚಿಸಿತ್ತು. ಈ ವಿಚಾರವನ್ನು ಮಂಡಳಿಯ ಮುಂದೆ ಚರ್ಚೆಗೆ ಇರಿಸಲಾಗುವುದು ಎಂದು ಮೂಲಗಳು ಹೇಳಿವೆ.

ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರ ಪ್ರತಿಭಟನೆ

ಹಿಂದಿ ದಿವಸದ ವಿರುದ್ಧ ಮೊಳಗಿದ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದಿ ದಿವಸ ವಿರೋಧಿಸಿ ರಾಜ್ಯದಾದ್ಯಂತ ಆಕ್ರೋಶ ಮೊಳಗಿತು. ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರಲ್ಲಿ ಕೆಲವರು ರಸ್ತೆಗಿಳಿದು ಪ್ರತಿಭಟನೆ ನಡೆಸಿದರೆ, ಹಲವರು ಸರಣಿ ಟ್ವೀಟ್ ಮಾಡಲು ಮೂಲಕ ತಮ್ಮ ಸಿಟ್ಟು ಹೊರ ಹಾಕಿದರು.

ರಾಷ್ಟ್ರೀಕೃತ, ಗ್ರಾಮೀಣ ಮತ್ತು ಖಾಸಗಿ ಬ್ಯಾಂಕ್‌ಗಳ ಮುಂದೆ ಎರಡು ಸಾವಿರಕ್ಕೂ ಹೆಚ್ಚು ಪ್ರತಿಭಟನೆಗಳು ನಡೆದವು. ಎಲ್ಲ ಜಿಲ್ಲೆ, ತಾಲ್ಲೂಕು, ಹೋಬಳಿ ಕೇಂದ್ರಗಳಲ್ಲೂ ಕರವೇ ಕಾರ್ಯಕರ್ತರು ಪ್ರತಿಭಟನೆ ದಾಖಲಿಸಿದರು.

ಕರ್ನಾಟಕ ರಕ್ಷಣಾ ವೇದಿಕೆಯ ನಾರಾಯಣಗೌಡ ಬಣ ಮತ್ತು ಎಚ್. ಶಿವರಾಮೇಗೌಡ ಬಣದಿಂದ ಪ್ರತ್ಯೇಕ ಪ್ರತಿಭಟನೆಗಳು ನಡೆದವು. ಮೈಸೂರು ಬ್ಯಾಂಕ್ ವೃತ್ತದಲ್ಲಿ ಶಿವರಾಮೇಗೌಡ ಬಣದ ಕಾರ್ಯಕರ್ತರು ಹಿಂದಿ ಫಲಕಕ್ಕೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು. ನಾರಾಯಣಗೌಡ ಬಣದ ಕಾರ್ಯಕರ್ತರು ಬ್ಯಾಂಕ್‌ಗಳ ಮುಂದೆ ನೆರೆದು ಹಿಂದಿ ದಿವಸ ಆಚರಣೆ ವಿರುದ್ಧ ಘೋಷಣೆ ಕೂಗಿದರು. ಹಲವೆಡೆ ಪಾದಯಾತ್ರೆ, ಬೈಕ್ ರ‍್ಯಾಲಿಗಳನ್ನು ನಡೆಸಿದರು. ಹಿಂದಿ ಫಲಕಗಳಿಗೆ ಮಸಿ ಬಳಿದು ಅಸಮಾಧಾನ ಹೊರ ಹಾಕಿದರು. ಶಾಸಕರು, ಸಂಸದರ ಕಚೇರಿಗಳಿಗೂ ಮನವಿ ಸಲ್ಲಿಸಿದರು.

'ರಾಷ್ಟ್ರೀಕೃತ ಬ್ಯಾಂಕುಗಳಲ್ಲೂ ಕನ್ನಡದಲ್ಲೇ ವ್ಯವಹಾರಗಳು ನಡೆಯಬೇಕು. ಬ್ಯಾಂಕಿನಲ್ಲಿ ಬಳಕೆಯಾಗುವ ಚಲನ್, ಚೆಕ್ ಪುಸ್ತಕ, ಪಾಸ್ ಪುಸ್ತಕಗಳಲ್ಲಿ ಕನ್ನಡ ಬಳಕೆಯಾಗಬೇಕು. ಎಟಿಎಂಗಳಲ್ಲಿ ಕನ್ನಡದ ಆಯ್ಕೆ ಇರಬೇಕು. ಗ್ರಾಹಕರೊಂದಿಗೆ ಕನ್ನಡದಲ್ಲೇ ಮಾತನಾಡಬೇಕು' ಎಂದು ಒತ್ತಾಯಿಸಿ ಮನವಿ ಪತ್ರಗಳನ್ನು ಸಲ್ಲಿಸಲಾಯಿತು.

ಹೋರಾಟದ ಕುರಿತು ಟ್ವೀಟ್ ಮಾಡಿರುವ ಟಿ.ಎ.ನಾರಾಯಣಗೌಡ, 'ಹಿಂದಿ ದಿವಸ ಎಂಬುದು ದೇಶದ ಹಿಂದಿಯೇತರ ಜನರ ಮೇಲೆ ನಡೆಸುವ ದೌರ್ಜನ್ಯ, ಭಾಷಾ ಸಮುದಾಯಗಳನ್ನು ವಂಚಿಸುವ ಹುನ್ನಾರ. ಹಿಂದಿ ದಿವಸ ಎಂಬ ಆಚರಣೆ ಪ್ರಜಾಪ್ರಭುತ್ವ ವಿರೋಧಿ ಮಾತ್ರವಲ್ಲ ಅನೈತಿಕ. ಭಾರತ ಒಕ್ಕೂಟದಲ್ಲಿ ನಾವು ಯಾರ ಅಡಿಯಾಳೂ ಅಲ್ಲ. ಭಾರತ ಒಕ್ಕೂಟದಲ್ಲಿ ಪ್ರಥಮ ದರ್ಜೆ ಪ್ರಜೆಗಳು, ಎರಡನೇ ದರ್ಜೆ ಪ್ರಜೆಗಳು ಎಂಬ ಎರಡು ವಿಭಾಗ ಇರಲು ಸಾಧ್ಯವಿಲ್ಲ. ಇದು ಒಕ್ಕೂಟ ತತ್ವಕ್ಕೆ ಮಾರಕ. ಇದು ನಿಲ್ಲಲೇಬೇಕು' ಎಂದು ಆಗ್ರಹಿಸಿದ್ದಾರೆ.

ಮೈಸೂರು ಬ್ಯಾಂಕ್ ವೃತ್ತದಲ್ಲಿ ನಡೆದ ಪ್ರತಿಭಟನೆ ವೇಳೆ ಹಿಂದಿ ಫಲಕಕ್ಕೆ ಶಿವರಾಮೇಗೌಡ ಬಣದ ಕಾರ್ಯಕರ್ತರು ಬೆಂಕಿ ಹಚ್ಚಿದರು

ಹಿಂದಿ ದಿವಸ ವಿರೋಧಿಸಿ ಟ್ವೀಟ್ ಮಾಡುತ್ತಿರುವ ಟಿ.ಎ. ನಾರಾಯಣಗೌಡ –ಪ್ರಜಾವಾಣಿ ಚಿತ್ರಗಳು

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಸ್ಪೇಸ್‌-ಎಕ್ಸ್‌ ಎಂಬ ಸಂಸ್ಥೆಯ ಮೂಲಕ ಹಮ್ಮಿಕೊಂಡಿರುವ ಸ್ಟಾರ್ಲಿಂಕ್‌ ಯೋಜನೆ ಸಾಕಾರವಾದರೆ ಉಪಗ್ರಹಗಳ ಮೂಲಕ ಆಕಾಶಮಾರ್ಗವಾಗಿಯೂ ನೆಟ್ಟು ಬರಲಿದೆ...

ಅನುಭವ ಮಂಟಪ – ಕನಸುಗಳಿಗೆ ರೆಕ್ಕೆ ಕಟ್ಟಿದ ಸುಧಾರಣೆ
ಜಾಟ್‌ ದೊರೆ ಹೆಸರಲ್ಲಿ ವಿಶ್ವವಿದ್ಯಾಲಯ 9
ಅಪಘಾತ: ಮೇಲ್ಸೇತುವೆಯಿಂದ ಬಿದ್ದು ಇಬ್ಬರ ಸಾವು 3B

ಸೆನ್ಸೆಕ್ಸ್‌	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
58,247 ▲	17,380 ▲	₹48,600 (ಬೆಂಗಳೂರು)	₹65,100 (ಬೆಂಗಳೂರು)	73.68

ಐಎಸ್‌ಐ ಬೆಂಬಲದಲ್ಲಿ ಸ್ಫೋಟದ ಷಡ್ಯಂತ್ರ • ಆರು ಮಂದಿ ಸೆರೆ • ದೆಹಲಿ ಪೊಲೀಸರ ಮಾಹಿತಿ

ಉಗ್ರರ ಸಂಚು ಬಯಲು

ಪ್ರಜಾವಾಣಿ ವಾರ್ತೆ

ನವದೆಹಲಿ: ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐ ಬೆಂಬಲಿತ ಭಯೋತ್ಪಾದನಾ ಕೃತ್ಯದ ಷಡ್ಯಂತ್ರವನ್ನು ಬಯಲಿಗೆಳೆದಿರುವುದಾಗಿ ದೆಹಲಿ ಪೊಲೀಸರು ಮಂಗಳವಾರ ಹೇಳಿದ್ದಾರೆ. ಆರು ಜನರನ್ನು ಬಂಧಿಸಿದ್ದರಿಂದಾಗಿ ಈ ಸಂಚು ವಿಫಲವಾಗಿದೆ. ಬಂಧಿತರಲ್ಲಿ ಇಬ್ಬರು ತರಬೇತಿಗಾಗಿ ಪಾಕಿಸ್ತಾನಕ್ಕೆ ಈ ವರ್ಷದ ಆರಂಭದಲ್ಲಿ ಹೋಗಿದ್ದರು. ನವರಾತ್ರಿ ಮತ್ತು ರಾಮಲೀಲಾ ಆಚರಣೆ ಸಂದರ್ಭದಲ್ಲಿ ದಾಳಿ ನಡೆಸುವುದು ಇವರ ಉದ್ದೇಶವಾಗಿತ್ತು ಎಂದು ಪೊಲೀಸರು ಹೇಳಿದ್ದಾರೆ.

ದೆಹಲಿ ಪೊಲೀಸ್‌ ಇಲಾಖೆಯ ಭಯೋತ್ಪಾದನೆ ತಡೆ ವಿಶೇಷ ಘಟಕವು ಉಗ್ರರ ಸಂಚನ್ನು ಬಯಲು ಮಾಡಿತು.

ಭೂಗತ ಪಾತಕಿ ದಾವೂದ್‌ ಇಬ್ರಾಹಿಂನ ತಮ್ಮ ಅನೀಸ್‌ ಇಬ್ರಾಹಿಂ ಈ ಸಂಚಿಗೆ ಹಣ ಮತ್ತು ಇತರ ಸೌಲಭ್ಯ ಒದಗಿಸಿದ್ದಾನೆ. ಹವಾಲಾ ಮೂಲಕ ಹಣ ರವಾನೆ ಮಾಡಲಾಗಿದೆ. ಸ್ಫೋಟಕಗಳನ್ನು ಸುರಕ್ಷಿತವಾಗಿ ಗಡಿ ದಾಟಿಸಿ, ದೇಶದ ವಿವಿಧ ಭಾಗಗಳಿಗೆ ತಲುಪಿಸುವ ಕೆಲಸವನ್ನು ಅನೀಸ್‌ನ ಕಡೆಯವರು ಮಾಡಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

ದೆಹಲಿ, ಉತ್ತರ ಪ್ರದೇಶ ಮತ್ತು ರಾಜಸ್ಥಾನದಲ್ಲಿ ಮಂಗಳವಾರ ಬೆಳಿಗ್ಗೆ ಏಕಕಾಲಕ್ಕೆ ನಡೆಸಿದ ದಾಳಿಯಲ್ಲಿ ಆರು ಮಂದಿಯನ್ನು ಬಂಧಿಸಲಾಯಿತು. ಕೇಂದ್ರದ ಸಂಸ್ಥೆಗಳು ನೀಡಿದ್ದ ಗುಪ್ತಚರ ಮಾಹಿತಿ ಅನ್ವಯ ಈ ಕಾರ್ಯಾಚರಣೆ ನಡೆಯಿತು ಎಂದು ವಿಶೇಷ ಘಟಕದ ಆಯುಕ್ತ ನೀರಜ್‌ ಠಾಕೂರ್‌ ಮಾಧ್ಯಮಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಬಂಧಿತರನ್ನು ಜಾನ್‌ ಮೊಹಮ್ಮದ್‌ ಶೇಖ್‌ ಅಲಿಯಾಸ್‌ ಸಮೀರ್‌ ಕಾಲಿಯಾ (47), ಒಸಾಮಾ (22), ಮೂಲ್‌ಚಂದ್‌ ಅಲಿಯಾಸ್‌ ಲಾಲಾ (47), ಝೀಶನ್‌ ಕಮರ್‌ (28), ಮೊಹಮ್ಮದ್‌ ಅಬು ಬಕರ್‌ (23) ಮತ್ತು ಮೊಹಮ್ಮದ್‌ ಅಮೀರ್‌ ಜಾವೇದ್‌ (31) ಎಂದು ಗುರುತಿಸಲಾಗಿದೆ.

ಇವರಲ್ಲಿ ಒಸಾಮಾ ಮತ್ತು ಝೀಶನ್‌ ಅವರು ಪಾಕಿಸ್ತಾನದಲ್ಲಿ 15 ದಿನಗಳ ತರಬೇತಿ ಪಡೆದಿದ್ದಾರೆ. ಎಕೆ–47 ಬಂದೂಕು ಬಳಕೆ, ಸ್ಫೋಟಕ ಬಳಕೆಯಲ್ಲಿ ಇವರಿಗೆ ತರಬೇತಿ ನೀಡಲಾಗಿದೆ. ಒಸಾಮಾ ಏಪ್ರಿಲ್‌ 22ರಂದು ಹೋಗಿ ಝೀಶನ್‌ನನ್ನು ಒಮಾನ್‌ನಲ್ಲಿ ಭೇಟಿಯಾಗಿದ್ದ. ಅಲ್ಲಿಂದ ಅವರು ಹಡಗು ಮತ್ತು ದೋಣಿಯ ಮೂಲಕ ಪಾಕಿಸ್ತಾನ ತಲುಪಿದ್ದರು ಎಂದು ಠಾಕೂರ್‌ ಮಾಹಿತಿ ನೀಡಿದ್ದಾರೆ.

ಬಾಂಗ್ಲಾ ಭಾಷೆ ಮಾತನಾಡುತ್ತಿದ್ದ 14–15 ಮಂದಿ ತಮ್ಮಂತೆಯೇ ತರಬೇತಿಗೆ ಪಾಕಿಸ್ತಾನಕ್ಕೆ ಹೋಗಿದ್ದರು. ಇದೆಲ್ಲವನ್ನೂ ಗಡಿಯಾಚೆನಿಂದಲೇ ನಡೆಸಲಾಗಿದೆ ಎಂದು ಬಂಧಿತರು ಮಾಹಿತಿ ನೀಡಿದ್ದಾಗಿ ಪೊಲೀಸರು ಹೇಳಿದ್ದಾರೆ. ಇವರು ಯಾವ ದೇಶದವರು ಎಂಬುದನ್ನು ಠಾಕೂರ್‌ ತಿಳಿಸಿಲ್ಲ.

ಅನೀಸ್‌ ಇಬ್ರಾಹಿಂ ಶಾಮೀಲು ಆಗಿರುವುದರಿಂದ ಉಗ್ರರ ಕಾರ್ಯಾಚರಣೆಗೆ ಭೂಗತ ನಂಟು ಕೂಡ ಸಿಕ್ಕಂತಾಗಿದೆ.

ಬಂಧಿತರಿಂದ ವಶಪಡಿಸಿಕೊಂಡ ಶಸ್ತ್ರಾಸ್ತ್ರಗಳಲ್ಲಿ ಇಟಲಿ ನಿರ್ಮಿತ ಪಿಸ್ತೂಲ್‌ಗಳು ಕೂಡ ಸೇರಿವೆ. ಗುಂಡು ಹಾರಾಟದ ಮೂಲಕ ಜನರ ಹತ್ಯೆಯ ಪಿತೂರಿಯನ್ನೂ ಇವರು ಮಾಡಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ. ಉತ್ತರ ಪ್ರದೇಶ ಸೇರಿ ಐದು ರಾಜ್ಯಗಳ ವಿಧಾನಸಭೆ ಚುನಾವಣೆಯೂ ಇವರ ಗುರಿ ಆಗಿರಬಹುದು ಎಂದು ಹಿರಿಯ ಪೊಲೀಸ್‌ ಅಧಿಕಾರಿಯೊಬ್ಬರು ಹೇಳಿದ್ದಾರೆ.

ರಾಜಸ್ಥಾನದ ಕೋಟದಿಂದ ಬಂಧಿತನಾದ ಸಮೀರ್‌ಗೆ ಅನೀಸ್‌ ಜತೆಗೆ ಹತ್ತಿರದ ನಂಟು ಇದೆ. ಸ್ಫೋಟಕಗಳನ್ನು ಸುರಕ್ಷಿತವಾಗಿ ತಲುಪಿಸುವುದು ಈತನ ಹೊಣೆಯಾಗಿತ್ತು. ದೆಹಲಿಯ ಜಾಮಿಯಾ ನಗರದಲ್ಲಿ ಸಿಕ್ಕ ಒಸಾಮಾ ಮತ್ತು ಉತ್ತರ ಪ್ರದೇಶದ ಅಲಹಾಬಾದ್‌ನಲ್ಲಿ ಸಿಕ್ಕ ಝೀಶನ್‌ ಅವರಿಗೆ ಸ್ಫೋಟ ನಡೆಸಲು ಸೂಕ್ತವಾದ ಸ್ಥಳವನ್ನು ಗುರುತಿಸುವ ಹೊಣೆ ವಹಿಸಲಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಉಗ್ರರ ದಮನಕ್ಕೆ ಅಮೆರಿಕ–ಭಾರತ ಸಹಕಾರ

ಅಫ್ಗಾನಿಸ್ತಾನದ ಒಳಗೆ ಮತ್ತು ಹೊರಗೆ ಇರುವ ಉಗ್ರರ ಮೇಲೆ ನಿಗಾ ಇರಿಸುವುದಕ್ಕಾಗಿ ಮತ್ತು ದಾಳಿ ನಡೆಸುವುದಕ್ಕಾಗಿ ಭಾರತದ ವಾಯುನೆಲೆಗಳನ್ನು ಬಳಸಿಕೊಳ್ಳುವ ಬಗ್ಗೆ ಮಾತುಕತೆ ನಡೆಯುತ್ತಿದೆ ಎಂಬ ಸುಳಿವನ್ನು ಅಮೆರಿಕ ನೀಡಿದೆ.

ಭಾರತದ ಜತೆಗೆ ನಿಕಟವಾದ ಸಂಪರ್ಕದಲ್ಲಿ ಅಮೆರಿಕ ಇದೆ ಎಂದು ಅಲ್ಲಿನ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್‌ ಅವರು ಅಮೆರಿಕ ಸಂಸತ್ತಿನ ಕೆಳಮನೆಯ ವಿದೇಶಾಂಗ ವ್ಯವಹಾರಗಳ ಸಮಿತಿಯ ಮುಂದೆ ಹೇಳಿಕೆ ನೀಡಿದ್ದಾರೆ. ಅಫ್ಗಾನಿಸ್ತಾನ ಮತ್ತು ಸುತ್ತಮುತ್ತಲಿನ ಪ್ರದೇಶದಿಂದ ಅಮೆರಿಕಕ್ಕೆ ಇರುವ ಅಪಾಯವನ್ನು ನಿರ್ಮೂಲನಗೊಳಿಸಲು ವಾಯವ್ಯ ಭಾರತದ ವಾಯುನೆಲೆಗಳನ್ನು ಬಳಸುವ ಚಿಂತನೆ ಇದೆಯೇ ಎಂಬ ಪ್ರಶ್ನೆಗೆ ಬ್ಲಿಂಕನ್‌ ಹೀಗೆ ಉತ್ತರಿಸಿದ್ದಾರೆ. ಆದರೆ, ಎರಡೂ ದೇಶಗಳ ನಡುವೆ ನಡೆದಿರುವ ಮಾತುಕತೆಯ ವಿವರಗಳನ್ನು ಬ್ಲಿಂಕನ್‌ ಅವರು ಸಮಿತಿಗೆ ತಿಳಿಸಿಲ್ಲ. ಈ ವಿಚಾರದಲ್ಲಿ ಭಾರತವು ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಭಾರತವು ಅಮೆರಿಕದ ಪ್ರಮುಖ ರಕ್ಷಣಾ ಪಾಲುದಾರ ದೇಶ. ಎರಡೂ ದೇಶಗಳ ನಡುವೆ 2016ರಲ್ಲಿ ಸೌಕರ್ಯ ವಿನಿಮಯ ಒಪ್ಪಂದವೂ ಆಗಿದೆ.

ಡಿ.ಕೆ ಶಿವಕುಮಾರ್‌ ವಿರುದ್ಧ ವಾರಂಟ್‌

ಪ್ರಜಾವಾಣಿ ವಾರ್ತೆ

ಸುಳ್ಯ: ಹಲವು ಬಾರಿ ಸಮನ್ಸ್‌ ಜಾರಿಗೊಳಿಸಿದ್ದರೂ ಸಾಕ್ಷಿ ಹೇಳಲು ಹಾಜರಾಗದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್‌ ವಿರುದ್ಧ ಇಲ್ಲಿನ ನ್ಯಾಯಾಲಯವು ಮಂಗಳವಾರ ವಾರಂಟ್‌ ಜಾರಿ ಮಾಡಿದೆ.

ಬೆಳ್ಳಾರೆಯ ವರ್ತಕರ ಸಂಘದ ಮಾಜಿ ಅಧ್ಯಕ್ಷ ಸಾಯಿ ಗಿರಿಧರ ರೈ ಅವರು, ಆಗ ಇಂಧನ ಸಚಿವರಾಗಿದ್ದ ಡಿ.ಕೆ. ಶಿವಕುಮಾರ್‌ ಅವರಿಗೆ 2016ರ ಫೆ. 28ರಂದು ರಾತ್ರಿ ದೂರವಾಣಿ ಕರೆ ಮಾಡಿ, ನಿರಂತರವಾಗಿ ಎದುರಾಗುತ್ತಿರುವ ವಿದ್ಯುತ್‌ ಸಮಸ್ಯೆ ಬಗ್ಗೆ ದೂರಿದ್ದರು. ಆಗ ಇಬ್ಬರ ನಡುವೆ ಮಾತಿನ ಚಕಮಕಿ ನಡೆದಿತ್ತು.

ಈ ಕುರಿತು ಶಿವಕುಮಾರ್‌ ಅವರು, ಮೆಸ್ಕಾಂ ಎಂ.ಡಿ ಹಾಗೂ ಸುಳ್ಯ ಕಚೇರಿಯ ಅಂದಿನ ಪ್ರಭಾರ ಎಇಇ ಹರೀಶ್‌ ನಾಯ್ಕ್‌ ಮೂಲಕ ಸಾಯಿ ಗಿರಿಧರ ವಿರುದ್ಧ ಸುಳ್ಯ ಠಾಣೆಗೆ ದೂರು ನೀಡಿದ್ದರು. ಬಳಿಕ ಗಿರಿಧರ ರೈ ಅವರನ್ನು ಪೊಲೀಸರು ಬಂಧಿಸಿದ್ದರು. ಈ ಪ್ರಕರಣದಲ್ಲಿ ಡಿ.ಕೆ. ಶಿವಕುಮಾರ್‌ ಸಾಕ್ಷಿಯಾಗಿದ್ದು, ಸಾಕ್ಷಿ ಹೇಳಲು ಅವರು ನ್ಯಾಯಾಲಯಕ್ಕೆ ಹಾಜರಾಗಿಲ್ಲ. ಇದನ್ನು ಗಂಭೀರವಾಗಿ ಪರಿಗಣಿಸಿರುವ ನ್ಯಾಯಾಧೀಶರು, ಶಿವಕುಮಾರ್‌ ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಐಜಿಪಿ ಮತ್ತು ಡಿಐಜಿಗೂ ನೋಟಿಸ್‌ ಜಾರಿ ಮಾಡುವಂತೆ ಆದೇಶಿಸಿದ್ದಾರೆ. ಮುಂದಿನ ವಿಚಾರಣೆ ಸೆ. 29ರಂದು ನಡೆಯಲಿದೆ.

ಬಡ್ತಿ ಮೀಸಲು: ಹೊಸ ನೀತಿ ಇಲ್ಲ – ಸುಪ್ರೀಂ ಕೋರ್ಟ್‌

ಪ್ರಜಾವಾಣಿ ವಾರ್ತೆ

ನವದೆಹಲಿ: ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಸರ್ಕಾರಿ ನೌಕರರಿಗೆ ಬಡ್ತಿಯಲ್ಲಿ ಮೀಸಲಾತಿ ನೀಡಲು ಹೊಸ ನೀತಿಯನ್ನು ರೂಪಿಸಿಕೊಡುವುದಿಲ್ಲ ಎಂದು ಸುಪ್ರೀಂ ಕೋರ್ಟ್‌ ಮಂಗಳವಾರ ಸ್ಪಷ್ಟಪಡಿಸಿದೆ. ಎಂ. ನಾಗರಾಜ್‌ (2006) ಮತ್ತು ಜರ್ನೈಲ್‌ ಸಿಂಗ್‌ (2018) ಪ್ರಕರಣಗಳಲ್ಲಿ ಬಡ್ತಿಯಲ್ಲಿ ಮೀಸಲಾತಿಯ ವಿಚಾರದ ತೀರ್ಪು ನೀಡಲಾಗಿದೆ ಎಂದು ಪೀಠವು ಹೇಳಿದೆ.

‘ಹಿಂದುಳಿದಿರುವಿಕೆಯನ್ನು ನಿರ್ಧರಿಸುವುದು ಹೇಗೆ ಎಂಬ ಬಗ್ಗೆ ಆದೇಶ ನೀಡಲಾಗಿದೆ. ಆ ನೀತಿಯನ್ನು ರಾಜ್ಯಗಳು ಜಾರಿ ಮಾಡಬೇಕು. ಹೊಸ ನೀತಿಯನ್ನು ನಾವು ರೂಪಿಸುವ ಅಗತ್ಯ ಇಲ್ಲ’ ಎಂದು ನ್ಯಾಯಮೂರ್ತಿ ಎಲ್‌. ನಾಗೇಶ್ವರ ರಾವ್‌ ನೇತೃತ್ವದ ತ್ರಿಸದಸ್ಯ ಪೀಠವು ಹೇಳಿದೆ.

ವಿವಿಧ ಹೈಕೋರ್ಟ್‌ಗಳು ನೀಡಿದ ಆದೇಶಗಳಿಂದಾಗಿ ಸುಮಾರು 2,500 ಹುದ್ದೆಗಳಿಗೆ ನೀಡಬೇಕಿದ್ದ ಬಡ್ತಿಯು ಸ್ಥಗಿತಗೊಂಡಿದೆ. ಹಾಗಾಗಿ, ಈ ವಿಚಾರದಲ್ಲಿ ಇನ್ನಷ್ಟು ಸ್ಪಷ್ಟನೆ ಬೇಕು ಎಂದು ಕೇಂದ್ರ ಹಾಗೂ ಹಲವು ರಾಜ್ಯ ಸರ್ಕಾರಗಳು ಕೋರಿದ್ದವು.

9ನೇ ಪುಟ ನೋಡಿ

‘ಉದ್ಯೋಗಿಯ ವಿಚ್ಛೇದಿತ ಪುತ್ರಿಗೆ ಅನುಕಂಪ ಆಧಾರದ ನೌಕರಿ ಇಲ್ಲ’

ನವದೆಹಲಿ: ಸರ್ಕಾರಿ ನೌಕರ ಮರಣ ಹೊಂದಿದ ಬಳಿಕ ಅವರ ಪುತ್ರಿ ವಿವಾಹ ವಿಚ್ಛೇದನ ಪಡೆದಿದ್ದರೆ, ಅನುಕಂಪದ ಆಧಾರದಲ್ಲಿ ಸರ್ಕಾರಿ ಉದ್ಯೋಗ ಪಡೆಯಲು ಆಕೆ ಅರ್ಹತೆ ಹೊಂದಿರುವುದಿಲ್ಲ ಎಂದು ಸುಪ್ರೀಂ ಕೋರ್ಟ್‌ ಹೇಳಿದೆ.

ನ್ಯಾಯಮೂರ್ತಿಗಳಾದ ಎಂ.ಆರ್‌.ಶಾ ಹಾಗೂ ಅನಿರುದ್ಧ ಬೋಸ್‌ ಅವರಿರುವ ನ್ಯಾಯಪೀಠ ಈ ತೀರ್ಪು ನೀಡಿದೆ.

ಖಜಾನೆ ಇಲಾಖೆಯ ಮಂಡ್ಯ ಜಿಲ್ಲಾ ಕಚೇರಿಯಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದ ಪಿ.ಭಾಗ್ಯಮ್ಮ ಅವರು 2012ರ ಮಾರ್ಚ್‌ 25ರಂದು ನಿಧನರಾದರು.

ಅವರ ಪುತ್ರಿ ವಿ. ಸೌಮ್ಯಶ್ರೀ ಅವರಿಗೆ ಅನುಕಂಪದ ಆಧಾರದಲ್ಲಿ ಉದ್ಯೋಗ ನೀಡುವಂತೆ ಕರ್ನಾಟಕ ಹೈಕೋರ್ಟ್‌ ನಿರ್ದೇಶನ ನೀಡಿತ್ತು. ಹೈಕೋರ್ಟ್‌ನ ಈ ಆದೇಶ ಪ್ರಶ್ನಿಸಿ ಕರ್ನಾಟಕ ಖಜಾನೆ ಇಲಾಖೆ ನಿರ್ದೇಶಕರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

9ನೇ ಪುಟ ನೋಡಿ

ಈಗಲ್‌ಟನ್‌ ಒತ್ತುವರಿ ಜಾಗ ಜಿಲ್ಲಾಡಳಿತದ ವಶಕ್ಕೆ

ರಾಮನಗರ: ಬಿಡದಿ ಬಳಿ ಈಗಲ್‌ಟನ್‌ ರೆಸಾರ್ಟ್‌ ಒತ್ತುವರಿ ಮಾಡಿಕೊಂಡಿದ್ದ 77 ಎಕರೆ 18 ಗುಂಟೆ ಜಾಗವನ್ನು ಜಿಲ್ಲಾಡಳಿತ ಮಂಗಳವಾರ ವಶಕ್ಕೆ ಪಡೆದಿದ್ದು, ಬೇಲಿ ನಿರ್ಮಿಸಲಾಗುತ್ತಿದೆ.

8

ಅತ್ಯಾಚಾರ: ಅಪರಾಧಿಗೆ 20 ವರ್ಷ ಕಠಿಣ ಶಿಕ್ಷೆ 4

ರಾಜ್ಯದ ಕೋವಿಡ್‌ ಅಂಕಿ–ಅಂಶ

ಒಟ್ಟು ಪ್ರಕರಣಗಳು	29,62,967 ▲
ಸಕ್ರಿಯ ಪ್ರಕರಣಗಳು	15,754 ▼
ಗುಣಮುಖರಾದವರು	29,09,656 ▲
ಒಟ್ಟು ಸಾವು	37,529 ▲
ದಿನದ ಏರಿಕೆ	
ಹೊಸ ಪ್ರಕರಣ	559 ▼
ಗುಣಮುಖ	1,034 ▼
ಸಾವು	12 ▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್‌

ಚಿನಕುರಳಿ

ಪ್ರಕಾಶ್‌ ಶೆಟ್ಟಿ



ಯಾರೊಂದಿಗೂ ಹಸ್ತಲಾಘವ ಮಾಡಬೇಡಿ

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್
(ಹಿಂದಿನ ಹೆಸರು ಕರ್ನಾಟಕ ಭೂ ಸೇನಾ ನಿಗಮ ನಿಯಮಿತ)
ಗ್ರಾಮೀಣಾಭಿವೃದ್ಧಿ ಭವನ, 4ನೇ ಮತ್ತು 5ನೇ ಮಹಡಿ
ಆನಂದರಾವ್ ವೃತ್ತ, ಬೆಂಗಳೂರು, ಕರ್ನಾಟಕ – 560 009

ಕೆ.ಆರ್.ಐ.ಡಿ.ಎಲ್ ಸಂಸ್ಥೆಯು ಸಾರ್ವಜನಿಕ ವಲಯದ ಬ್ಯಾಂಕ್ / ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ / ಖಾಸಗಿ ವಲಯದ ಬ್ಯಾಂಕುಗಳಿಂದ ಒಂದು ವರ್ಷದ ಅವಧಿಗೆ **ರೂ. 450.00 ಕೋಟಿಗಳನ್ನು** ಮತ್ತು **ರೂ. 395.00 ಕೋಟಿಗಳನ್ನು** ನಿಶ್ಚಿತ ಠೇವಣಿಯಲ್ಲಿ ಹೂಡಲು ಇ–ಬಿಡ್ ಮೂಲಕ ಮರುಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಷರತ್ತು ಮತ್ತು ನಿಬಂಧನೆಗಳ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ **www.eproc.karnataka.gov.in** ರಲ್ಲಿ 14–09–2021 ರಿಂದ ಪಡೆಯಬಹುದಾಗಿದೆ.

ಸಹಿ/– ವ್ಯವಸ್ಥಾಪಕ ನಿರ್ದೇಶಕರು

Safal ಖರೀದಿದಾರರನ್ನುಆಹ್ವಾನಿಸಲಾಗುತ್ತಿದೆ NCDFI eMarket

ಕರ್ನಾಟಕ ಸಹಕಾರಿ ಎಣ್ಣೆಬೀಜ ಬೆಳೆಗಾರರ ಮಹಾಮಂಡಳಿ ನಿಯಮಿತ (ಸಫಲ್) ಇವರಿಂದ 20 ಎಂ.ಟಿ. ಸಾಸಿವೆ ಎಣ್ಣೆಯ (ಕಚ್ಚೀಘಾನಿ) ಸಗಟು ಇ–ಹರಾಜುಎನ್.ಸಿ.ಡಿ.ಎಫ್.ಐ. ಇ–ಮಾರುಕಟ್ಟೆಯಲ್ಲಿ ಸೆಪ್ಟೆಂಬರ್ 16, 2021ರಂದು ನಡೆಯಲಿದೆ. ನೋಂದಾಯಿಸಿಕೊಂಡು ಇ–ಹರಾಜಿನಲ್ಲಿ ಭಾಗವಹಿಸಬೇಕೆಂದು ಆಸಕ್ತ ಖರೀದಿದಾರರನ್ನು ಆಹ್ವಾನಿಸಲಾಗಿದೆ. ವಿವರಗಳಿಗಾಗಿ ದಯವಿಟ್ಟು ಭೇಟಿ ನೀಡಿ: **www.ncdfiemarket.com**

ನೋಂದಣಿಗಾಗಿ ಸಂಪರ್ಕಿಸಿ :
+91 99786 96021; +91 99786 03226
ಮಿಂಚೆ:info@ncdfiemarket.com

ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್.,
ಪ್ರಧಾನ ಕಛೇರಿ, ನಂ.14, ರಜತ ಭವನ, 1ನೇ ಮುಖ್ಯರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು – 560104.
Ph: 080-23300497, 23359600, 41159606. Email: jscbinfo@jscbl.com, website: www.jscbl.com

40ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯ ನೋಟೀಸು

ದೇಶಾದ್ಯಂತ ಕೋವಿಡ್–19 ಸಾಂಕ್ರಾಮಿಕ ರೋಗ ಹರಡುತ್ತಿರುವ ಹಿನ್ನಲೆಯಲ್ಲಿ ಸದಸ್ಯರೆಲ್ಲರ ಸುರಕ್ಷತೆಯ ದೃಷ್ಠಿಯಿಂದ ಕರ್ನಾಟಕ ರಾಜ್ಯ ಸರ್ಕಾರದ ಸೂಚನೆಗಳನ್ನು ಅನುಸರಿಸಿ, ದಿನಾಂಕ: 31–03–2021ಕ್ಕೆ ಮುಕ್ತಾಯಗೊಂಡ (2020–2021ನೇ ಸಾಲಿನ) 40ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಹೆಚ್ ಸಿ ಗೋಪಾಲ್‌ರವರ ಅಧ್ಯಕ್ಷತೆಯಲ್ಲಿ ದಿನಾಂಕ: 19–09–2021ನೇ ಭಾನುವಾರ ಬೆಳಗ್ಗೆ: 10.30 ಘಂಟೆಗೆ ಬ್ಯಾಂಕಿನ ರಾಜರಾಜೇಶ್ವರಿನಗರ ಶಾಖೆಯಲ್ಲಿ VIRTUAL MEETING (ಅಂದರೆ ಇಂಟರ್‌ನೆಟ್ ಸೌಲಭ್ಯವಿರುವ ಮೊಬೈಲ್ ಮೂಲಕ ಭಾಗವಹಿಸುವುದು. ವೈಯುಕ್ತಿಕವಾಗಿ ಭಾಗವಹಿಸಲು ಅವಕಾಶವಿರುವುದಿಲ್ಲ) ಮೂಲಕ ಹಮ್ಮಿಕೊಳ್ಳಲಾಗಿದೆ. ಈಗಾಗಲೇ ಸದಸ್ಯರ ವಿಳಾಸಗಳಿಗೆ ಸರ್ವಸದಸ್ಯರ ಸಭೆಯ ನೋಟಿಸನ್ನು ಅಂಚೆ ಮೂಲಕ ಸಕಾಲದಲ್ಲಿ ಕಳುಹಿಸಲಾಗಿದೆ. ಒಂದು ವೇಳೆ ನೋಟಿಸ್ ತಲುಪದೇ ಇದ್ದಲ್ಲಿ ಇದನ್ನೇ ಸರ್ವಸದಸ್ಯರ ಸಭೆಯ ನೋಟಿಸ್ ಎಂದು ಪರಿಗಣಿಸಿ, ತಪ್ಪದೇ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕೆಂದು ಈ ಮೂಲಕ ಕೋರಲಾಗಿದೆ.

ಸಭೆಯಲ್ಲಿ ಭಾಗವಹಿಸಲು ಸದಸ್ಯರು ತಮ್ಮ ಸದಸ್ಯತ್ವ ಸಂಖ್ಯೆ, ಮೊಬೈಲ್ ಸಂಖ್ಯೆಯನ್ನು ತಮ್ಮ ಖಾತೆಯಿರುವ ಶಾಖೆಗಳಲ್ಲಿ ನೋಂದಾಯಿಸಿ ಕೊಳ್ಳಬೇಕೆಂದು ಕೋರಲಾಗಿದ್ದು, ಖುದ್ದು ಶಾಖೆಗೆ ಭೇಟಿ ನೀಡಲು ಸಾಧ್ಯವಾಗದಿದ್ದಲ್ಲಿ ನಮ್ಮ ಬ್ಯಾಂಕಿನ ಇ–ಮೇಲ್ ವಿಳಾಸ jscbinfo@jscbl.com ಗೆ ಮಾಹಿತಿ ಕಳುಹಿಸಬಹುದು ಸದಸ್ಯರು www. dreamswebinar. com/jscbl. comಈ ಲಿಂಕ್ ಅನ್ನು ಡೌನ್‌ಲೋಡ್ ಮಾಡಿಕೊಂಡು ಸರ್ವ ಸದಸ್ಯರ ವರ್ಚುಯಲ್ ಸಭೆಗೆ ಹಾಜರಾಗಬಹುದು ಮತ್ತು ಬ್ಯಾಂಕಿನ 40ನೇ ವಾರ್ಷಿಕ ವರದಿಯನ್ನು ಬ್ಯಾಂಕಿನ ವೆಬ್‌ಸೈಟನಲ್ಲಿ ಪಡೆದುಕೊಳ್ಳಬಹುದು..

ಶ್ರೀ. ಹೆಚ್.ಸಿ.ಗೋಪಾಲ್
ಅಧ್ಯಕ್ಷರು

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ,
ಶ್ರೀಮತಿ. ಭಾಗ್ಯ. ಎಸ್.
ಮುಖ್ಯಕಾರ್ಯನಿರ್ವಹಣಾಧಿಕಾರಿ

ಮೆಟ್ರೊ ಅವಧಿ ವಿಸ್ತರಿಸಿ: ಶಾಸಕರ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದಲ್ಲಿ ಮೆಟ್ರೊ ರೈಲು ಸಂಚಾರ ಸಮಯವನ್ನು ವಿಸ್ತರಿಸಬೇಕು ಎಂಬ ಒತ್ತಾಯ ದಿನದಿಂದ ದಿನಕ್ಕೆ ಹೆಚ್ಚಾಗುತ್ತಲೇ ಇದೆ. ಸಂಚಾರದ ಅವಧಿ ವಿಸ್ತರಿಸಿದರೆ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ. ಹಾಗಾಗಿ ಬೆಂಗಳೂರು ಮೆಟ್ರೊ ರೈಲು ನಿಗಮವು (ಬಿಎಂಆರ್‌ಸಿಎಲ್) ಈ ಬಗ್ಗೆ ಶೀಘ್ರ ಕ್ರಮ ಕೈಗೊಳ್ಳಬೇಕು' ಎಂದು ಅನೇಕ ಶಾಸಕರೂ ಒತ್ತಾಯಿಸಿದ್ದಾರೆ.

'ಮೆಟ್ರೊ ವಿಸ್ತರಿಸಿ'

ಹಲವು ಕಚೇರಿಗಳಲ್ಲಿ ಈಗಾಗಲೇ ರಾತ್ರಿ ಪಾಳಿಯ ಕೆಲಸಗಳು ಶುರುವಾಗಿವೆ. ರಾತ್ರಿ 8ರ ನಂತರ ಮೆಟ್ರೊ ರೈಲು ಸೇವೆ ಇರದ ಕಾರಣ ದುಡಿಯುವ ವರ್ಗದವರಿಗೆ ತುಂಬಾ ಅನನುಕೂಲವಾಗುತ್ತಿದೆ. ಎಲ್ಲವೂ ಸಹಜ ಸ್ಥಿತಿಯಲ್ಲಿರುವಾಗ ಮೆಟ್ರೊ ರೈಲು ಸೇವೆ ಮಾತ್ರ ನೀಡುವುದಿಲ್ಲ ಎಂಬುದು ಸರಿಯಲ್ಲ.

ಬೈರತಿ ಸುರೇಶ್, ಹೆಬ್ಬಾಳ ಕ್ಷೇತ್ರ

'20 ನಿಮಿಷಗಳಿಗೊಂದು ಮೆಟ್ರೊ ಸಂಚರಿಸಲಿ'

ಪೆಟ್ರೋಲ್, ಡೀಸೆಲ್ ಬೆಲೆ ಗಗನಕ್ಕೆ ಏರಿದೆ. ಖಾಸಗಿ ವಾಹನಗಳ ಬಳಕೆಯೂ ದುಬಾರಿಯಾಗುತ್ತಿದೆ. ಇಂತಹ ಸಂದರ್ಭದಲ್ಲಿ ಮೆಟ್ರೊ ರೈಲು ಸಂಚಾರದ ಸಮಯವನ್ನೂ ಕಡಿತಗೊಳಿಸಿರುವುದು ಸರಿಯಲ್ಲ. ವಿದೇಶಗಳಲ್ಲಿ ದಿನದ 24 ಗಂಟೆಯೂ ಮೆಟ್ರೊ ರೈಲು ಸೇವೆ ಇರುತ್ತದೆ. ಬೆಂಗಳೂರಿನಲ್ಲಿ ರಾತ್ರಿ 10ರವರೆಗಾದರೂ ಮೆಟ್ರೊ ರೈಲು ಸೇವೆ ಇಲ್ಲ ಎಂದರೆ ಹೇಗೆ. ರಾತ್ರಿ 8ರಿಂದ 11ರವರೆಗೆ ಕನಿಷ್ಠ 20 ನಿಮಿಷ ಅಥವಾ ಅರ್ಧ ತಾಸಿಗೆ ಒಂದರಂತೆ ರೈಲು ಸಂಚರಿಸಲು ಕ್ರಮ ಕೈಗೊಳ್ಳಬೇಕು

ಸೌಮ್ಯಾ ರೆಡ್ಡಿ, ಜಯನಗರ ಕ್ಷೇತ್ರ

'2 ತಾಸು ವಿಸ್ತರಿಸಲೇಬೇಕು'

ರಾತ್ರಿ ಕರ್ಫ್ಯೂ ಜಾರಿಯಲ್ಲಿ ಇರುವುದರಿಂದ ಮೆಟ್ರೊ ರೈಲು ಸಂಚಾರ ಸಮಯ ಕಡಿತಗೊಳಿಸಲಾಗಿದೆ. ಆದರೆ, ಈಗ ಜನಜೀವನ ಸಹಜ ಸ್ಥಿತಿಗೆ ಬಂದಿದೆ. ಬಸ್, ರೈಲುಗಳು ಮೊದಲಿನಂತೆ ಕಾರ್ಯನಿರ್ವಹಿಸುತ್ತಿರುವುದರಿಂದ ಮೆಟ್ರೊ ರೈಲುಗಳ ಸೇವೆಯನ್ನು ಮೊದಲಿನಂತೆ ನೀಡಬೇಕು. ಕನಿಷ್ಠಪಕ್ಷ ರಾತ್ರಿ 10ರವರೆಗಾದರೂ ಸಂಚಾರ ಸಮಯವನ್ನು ವಿಸ್ತರಿಸಬೇಕು.

ಸತೀಶ್ ರೆಡ್ಡಿ, ಬೊಮ್ಮನಹಳ್ಳಿ ಕ್ಷೇತ್ರ

'ಜನರ ಅನುಕೂಲಕ್ಕೆ ಆದ್ಯತೆ ಸಿಗಬೇಕು'



ಸಾರ್ವಜನಿಕ ಸಾರಿಗೆ ಅಥವಾ ಯಾವುದೇ ಸೇವೆ ಜನರಿಗೆ ಅನುಕೂಲಕ್ಕೆ ತಕ್ಕಂತೆ ಇರಬೇಕು. ಮೆಟ್ರೊ ರೈಲು ಸಾರಿಗೆಯೂ ಎಲ್ಲರಿಗೂ ಅನುಕೂಲಕರ. ರಾತ್ರಿ ವೇಳೆಯಲ್ಲಿ, ಸುರಕ್ಷತೆಯ ದೃಷ್ಟಿಯಿಂದಲೂ ಮೆಟ್ರೊ ಸೇವೆ ಅತ್ಯುಪಯುಕ್ತ. 10 ಗಂಟೆಯವರೆಗಾದರೂ ಇದನ್ನು ವಿಸ್ತರಿಸಬೇಕು.

ಉದಯ್ ಗರುಡಾಚಾರ್, ಚಿಕ್ಕಪೇಟೆ ಕ್ಷೇತ್ರ

'ಬಸ್, ರೈಲು, ಮೆಟ್ರೊ ನಡುವೆ ಸಮನ್ವಯವಿರಲಿ'

ಸಾರ್ವಜನಿಕ ಸಾರಿಗೆಗಳು ಒಂದಕ್ಕೊಂದು ಪೂರಕವಾಗಿರಬೇಕು. ಬಸ್, ರೈಲು ಮತ್ತು ಮೆಟ್ರೊ ರೈಲು ಸೇವೆಗಳ ನಡುವೆ ಸಮನ್ವಯ ಇರಬೇಕು. ವ್ಯಾಪಾರ–ವಹಿವಾಟು, ಆರ್ಥಿಕ ಚಟುವಟಿಕೆಗಳೆಲ್ಲವೂ ಹಿಂದಿನಂತೆಯೇ ನಡೆಯುತ್ತಿವೆ. ಸಾರ್ವಜನಿಕರ ಸಹಜ ಓಡಾಟಕ್ಕೆ ವ್ಯವಸ್ಥೆ ಮಾಡಬೇಕಾದುದು ಸರ್ಕಾರದ ಕರ್ತವ್ಯ. ರಾತ್ರಿ 10.30ರವರೆಗಾದರೂ ಮೆಟ್ರೊ ಸೇವೆ ವಿಸ್ತರಿಸಬೇಕು.

ರಿಜ್ವಾನ್ ಅರ್ಷದ್, ಶಿವಾಜಿನಗರ ಕ್ಷೇತ್ರ

'ಕಾರ್ಮಿಕರಿಗೆ ಅನುಕೂಲ'

ನಗರದಲ್ಲಿ ಕೋವಿಡ್ ಪ್ರಕರಣಗಳು ಕಡಿಮೆಯಾಗುತ್ತಿದ್ದು, ಕೈಗಾರಿಕೆಗಳು ಪೂರ್ಣ ಪ್ರಮಾಣದಲ್ಲಿ ಚಟುವಟಿಕೆ ನಡೆಸುತ್ತಿವೆ. ಕೆಲವು ಕೈಗಾರಿಕೆಗಳು ರಾತ್ರಿ 9 ಗಂಟೆ ವರೆಗೂ ಕಾರ್ಯನಿರ್ವಹಿಸುತ್ತಿವೆ. ಮೆಟ್ರೊ ರೈಲು ಸೇವೆ ರಾತ್ರಿ 8.30ರ ವರೆಗೆ ಮಾತ್ರ ಇರುವುದರಿಂದ ಕಾರ್ಮಿಕರಿಗೆ ತೊಂದರೆಯಾಗುತ್ತಿದೆ. ಕನಿಷ್ಠ ರಾತ್ರಿ 10 ಗಂಟೆ ವರೆಗೆ ಮೆಟ್ರೊ ಸೇವೆಯನ್ನು ವಿಸ್ತರಿಸಬೇಕು. ಈ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ಅವರಿಗೆ ಪತ್ರ ಬರೆದಿದ್ದೇನೆ.

ಆರ್.ಮಂಜುನಾಥ್, ದಾಸರಹಳ್ಳಿ ಕ್ಷೇತ್ರ

ಸಿ.ಡಿ ಪ್ರಕರಣ: ವಿಚಾರಣೆ ಇಂದು

ಬೆಂಗಳೂರು: ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಸಿ.ಡಿ ಪ್ರಕರಣದ ವಿಚಾರಣೆಯನ್ನು ಸಂತ್ರಸ್ತ ಯುವತಿ ಪರ ವಕೀಲರ ಕೋರಿಕೆ ಮೇರೆಗೆ ಹೈಕೋರ್ಟ್ ಬುಧವಾರಕ್ಕೆ ಮುಂದೂಡಿತು.

ಸಿಬಿಐ ತನಿಖೆಗೆ ವಹಿಸುವಂತೆ ಕೋರಿ ಸಲ್ಲಿಕೆಯಾಗಿದ್ದ ಅರ್ಜಿಗಳನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತು.

ಯುವತಿ ಪರ ಹಿರಿಯ ವಕೀಲೆ ಇಂದಿರಾ ಜೈಸಿಂಗ್ ಹಾಜರಾಗಿ, ಅರ್ಜಿ ವಿಚಾರಣೆಯನ್ನು ಒಂದು ದಿನ ಮುಂದೂಡಬೇಕು ಎಂದು ಕೋರಿದರು.

ತನಿಖೆ ಆರಂಭವಾದ ಬಳಿಕ ಸಿಆರ್‌ಪಿಸಿ ನಿಯಮ ಪಾಲಿಸಬೇಕಾಗುತ್ತದೆ. ಅದರಂತೆ ತನಿಖಾ ಅಂತಿಮ ವರದಿ ಸಲ್ಲಿಸಲು ಅನುಮತಿ ನೀಡಬೇಕು ಎಂದು ಅಡ್ವೊಕೇಟ್ ಜನರಲ್ ಪ್ರಭುಲಿಂಗ ನಾವದಗಿ ವಾದಿಸಿದರು.

ಎಸ್ಐಟಿ ತನಿಖೆಯನ್ನೇ ಯುವತಿ ಪ್ರಶ್ನಿಸಿದ್ದಾರೆ. ಅವರ ವಾದವನ್ನೂ ಆಲಿಸಬೇಕಾಗುತ್ತದೆ ಎಂದು ತಿಳಿಸಿದ ಪೀಠ, ವಿಚಾರಣೆಯನ್ನು ಬುಧವಾರಕ್ಕೆ ಮುಂದೂಡಿತು.

ರಾಷ್ಟ್ರಧ್ವಜಕ್ಕೆ ಅವಮಾನ: ನಡ್ಡಾ ವಿರುದ್ಧ ಪ್ರಕರಣ

ಮುಜಾಫರ್‌ಪುರ, ಬಿಹಾರ (ಪಿಟಿಐ): ಆಗಸ್ಟ್ 22ರಂದು ಲಖನೌನಲ್ಲಿ ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಕಲ್ಯಾಣ್ ಸಿಂಗ್ ಅವರ ಪಾರ್ಥಿವ ಶರೀರಕ್ಕೆ ಗೌರವ ಸಲ್ಲಿಸುವ ವೇಳೆ ರಾಷ್ಟ್ರಧ್ವಜಕ್ಕೆ ಅವಮಾನ ಮಾಡಿದ ಆರೋಪದಡಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ವಿರುದ್ಧ ಪ್ರಕರಣ ದಾಖಲಾಗಿದೆ.

ಸಿಕಂದರ್‌ಪುರ ನಿವಾಸಿ ಚಂದ್ರ ಕಿಶೋರ್ ಪರಾಶರ್ ಎಂಬುವವರು ಮುಜಾಫರ್‌ಪುರದ ಚೀಫ್ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕೆ ನಡ್ಡಾ ಅವರ ವಿರುದ್ಧ ದೂರು ನೀಡಿದ್ದಾರೆ.

'ಕಲ್ಯಾಣ್ ಸಿಂಗ್ ಅವರ ಅಂತ್ಯಕ್ರಿಯೆಗೆ ಮುನ್ನ ಪಾರ್ಥಿವ ಶರೀರದ ಮೇಲೆ ಹೊದಿಸಿದ್ದ ರಾಷ್ಟ್ರಧ್ವಜದ ಮೇಲೆ ಬಿಜೆಪಿ ಧ್ವಜವನ್ನು ಹೊದಿಸುವ ಮೂಲಕ ನಡ್ಡಾ ಅವರು ರಾಷ್ಟ್ರಧ್ವಜಕ್ಕೆ ಅವಮಾನ ಮಾಡಿದ್ದಾರೆ' ಎಂದು ಚಂದ್ರ ಕಿಶೋರ್ ದೂರಿದ್ದಾರೆ.

ನೈಋತ್ಯ ರೈಲ್ವೆ
Tender Notice No. SnT_KPN_TM_Siding
Dated: 13.09.2021

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಬೆಂಗಳೂರು – ಜೋಲಾರಪೇಟ್ಟೆ ವಿಭಾಗ: ಕುಪ್ಪಂ ನಿಲ್ದಾಣದಲ್ಲಿ ಟ್ರ್ಯಾಕ್ ಮೆಷಿನ್ ಸೈಡಿಂಗ್‌ನ ಉದ್ದೇಶಿತ ನಿರ್ಮಾಣ (ಸಿಗ್ನಲಿಂಗ್ ಕಾಮಗಾರಿಗಳು).	Rs. 37,60,265.88/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **05–10–2021, 15:00 ಗಂಟೆಯವರೆಗೆ**
ಹೆಚ್ಚಿನ ಮಾಹಿತಿಗಾಗಿ **www.ireps.gov.in** ಗೆ ಲಾಗ್ ಆನ್ ಆಗಿ
ಸಹಾಯಕ ವಿಭಾಗೀಯ ಸಿಗ್ನಲ್ ಮತ್ತು ಟೆಲಿಕಾಂ ಇಂಜಿನೀಯರ್ / ಬೆಂಗಳೂರು
PUB/189/AAV/PRB/SWR/2021-22
S.W.Railways SWRRLY SWRRLY

ನೈಋತ್ಯ ರೈಲ್ವೆ
ಟೆಂಡರ್ ಪ್ರಕಟಣೆ ಸಂ. ಸಿಎಒ/ಸಿಎನ್/ಬಿಎನ್‌ಸಿ/37/2021
ದಿನಾಂಕ : 09–09–2021

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು, ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಗದಗ – ವಿಜಯಪುರ ಮತ್ತು ಹುಬ್ಬಳ್ಳಿ – ಯಳವಿಗಿ ನಿಲ್ದಾಣಗಳ ನಡುವೆ 52/60 ಕೆಜಿ ಇನ್ ಸಿಟು ಗ್ಲೂಡ್ ಜಾಯಿಂಟ್‌ಗಳ ಫ್ಯಾಬ್ರಿಕೇಷನ್ (ಹೆಚ್‌ಐಜಿಎ/77)	ರೂ. 5,04,85,000/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **30–09–2021 ರಂದು 11.00 ಗಂಟೆಯವರೆಗೆ**
ಹೆಚ್ಚಿನ ವಿವರಗಳಿಗೆ **www.ireps.gov.in** ಗೆ ಲಾಗ್‌ಆನ್ ಮಾಡಿ.
ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ / ಕಾಮಗಾರಿಗಳು ಬೆಂಗಳೂರು ದಂಡು
ಪಿಯುಬಿ/184/ಎಎವಿ/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2021–22
S.W.Railways SWRRLY SWRRLY

ಫುಟ್‌ಬಾಲ್ ಆಟಗಾರ ಕೃಷ್ಣಾಜಿರಾವ್ ಸ್ಮರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫುಟ್‌ಬಾಲ್ ಆಟಗಾರ ಕ್ಯಾಪ್ಟನ್ ಕೃಷ್ಣಾಜಿರಾವ್ ಹೆಸರಿನಲ್ಲಿ ಪ್ರತಿವರ್ಷ ಫುಟ್‌ಬಾಲ್ ಪಂದ್ಯಾವಳಿ ಆಯೋಜಿಸಬೇಕು ಎಂದು ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಪ್ರಧಾನ ಆಯುಕ್ತ ಪಿ.ಜಿ.ಆರ್ ಸಿಂಧ್ಯ ಹೇಳಿದರು.

ಕ್ಯಾಪ್ಟನ್ ಕೃಷ್ಣಾಜಿರಾವ್ ಯಾದವ್ ಅವರ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಭಾರತದ ಫುಟ್‌ಬಾಲ್ ತಂಡದ ಮಿಡ್ ಫೀಲ್ಡರ್ ಆಗಿ, ತರಬೇತುದಾರರಾಗಿ, ಕರ್ನಾಟಕ ತಂಡದ ನಾಯಕರಾಗಿ ಫುಟ್‌ಬಾಲ್ ಕೇತ್ರಕ್ಕೆ ಹಲವು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಭಾರತದ ಫುಟ್‌ಬಾಲ್ ಕ್ರೀಡೆಗೆ ಅವರು ಕೊಡುಗೆ ನೀಡುವ ಮೂಲಕ ಕರ್ನಾಟಕದ ಹೆಸರನ್ನು ವಿಶ್ವ ಮಟ್ಟಕ್ಕೆ ಕೊಂಡೊಯ್ದಿದ್ದರು. ಅವರ ಅಗಲಿಕೆ ರಾಷ್ಟ್ರಕ್ಕೆ ತುಂಬಲಾರದ ನಷ್ಟ' ಎಂದರು.

ಕೃಷ್ಣಾಜಿ ರಾವ್ ಅವರ ಭಾವಚಿತ್ರ ಒಳಗೊಂಡ ಗೋಡೆ ಗಡಿಯಾರವನ್ನು ಪಿಜಿಆರ್ ಸಿಂಧ್ಯ ಬಿಡುಗಡೆ ಮಾಡಿದರು. ಕೃಷ್ಣಾಜಿ ರಾವ್ ಅವರ ಸಹೋದರ ರಾಘವೇಂದ್ರ ರಾವ್ ರಾಮಚಂದ್ರರಾವ್, ಶ್ಯಾಮಸುಂದರ್ ಗಾಯಕವಾಡ, ಮಹದೇವ ರಾವ್ ಕೇಸರ್ಕರ್, ಲಯನ್ ಮನೋಜ್ ಕುಮಾರ್, ರಘುನಾಥ ರಾವ್ ಚವ್ಹಾಣ್ ಇದ್ದರು

ಫುಟ್‌ಬಾಲ್ ಮಾಜಿ ಆಟಗಾರ ರವಿಕುಮಾರ್ ಮಾತನಾಡಿ, 'ನಾಲ್ಕು ದಶಕಗಳಿಂದ ನಾನು ಮತ್ತು ಕೃಷ್ಣಾಜಿ ರಾವ್ ಒಡನಾಡಿಗಳಾಗಿದ್ದೆವು. ಫುಟ್‌ಬಾಲ್ ಕ್ಷೇತ್ರದಲ್ಲಿ ಅವರು ಮಾಡಿರುವ ಸಾಧನೆ ಮತ್ತು ಅವರ ಶಿಸ್ತುಬದ್ಧ ಜೀವನ ಯುವ ಪೀಳಿಗೆಗೆ ಮಾದರಿ' ಎಂದು ಅಭಿಪ್ರಾಯಪಟ್ಟರು.

ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್.,

ಪ್ರಧಾನ ಕಛೇರಿ, ನಂ.14, ರಜತ ಭವನ, 1ನೇ ಮುಖ್ಯರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು – 560104. ಫೋ: 080 – 23300497, 23359600, 41159606. Email: jscbinfo@jscbl.com, web : www.jscbl.com

ದಿನಾಂಕ 01–04–2020 ರಿಂದ 31–03–2021ರವರೆಗಿನ ಲಾಭ ಮತ್ತು ನಷ್ಟ ತಃಖ್ತೆ

ಮೊಬಲಗು 31/03/2020 ರೂ. ಪೈ	ಕ್ರ ಸಂ.	ವೆಚ್ಚದ ವಿವರಗಳು	ಮೊಬಲಗು 31/03/2021 ರೂ. ಪೈ	ಮೊಬಲಗು 31/03/2020 ರೂ. ಪೈ	ಕ್ರ ಸಂ.	ಆದಾಯದ ವಿವರಗಳು	ಮೊಬಲಗು 31/03/2021 ರೂ. ಪೈ
1,02,55,42,931.91	1	ಠೇವಣಿ ಮತ್ತು ಸಾಲಗಳ ಮೇಲೆ ಬಡ್ಡಿ ಪಾವತಿಸಿದ್ದು	84,56,43,495.00	88,84,95,512.93	1	ಸಾಲಗಳ ಮೇಲಿನ ಬಡ್ಡಿ ಬಂದದ್ದು	81,15,96,144.00
3,64,87,358.00	2	ಸಿಬ್ಬಂದಿ ಸಂಬಳ ಹಾಗೂ ಇತರೆ	4,21,64,283.00				
7,31,420.00	3	ನಿರ್ದೇಶಕರ ಸಭೆ ಹಾಜರಾತಿ ವೆಚ್ಚ	10,58,000.00	61,41,37,878.01	2	ಗುಂತಾಯಗಳ ಮೇಲಿನ ಬಡ್ಡಿ ಹಾಗೂ ಆದಾಯ	54,86,47,543.92
1,79,07,951.80	4	ಬಾಡಿಗೆ ಹಾಗೂ ಇತರೆ	1,64,45,759.49				
43,600.00	5	ಕಾನೂನು ವೆಚ್ಚ	2,70,400.00	1,25,61,284.67	3	ಇತರೆ ಆದಾಯ	88,36,619.60
20,56,938.30	6	ಅಂಚೆ ಮತ್ತು ದೂರವಾಣಿ	44,97,340.23				
9,83,540.00	7	ಲೆಕ್ಕ ಪರಿಶೋಧನಾ ವೆಚ್ಚ	10,71,960.00	0	4	ಆದಾಯ ತೆರಿಗೆಗೆ ಹೆಚ್ಚಿನ ಅವಕಾಶ ಕಲ್ಪಿಸಿದ್ದು 2019–20	1,35,71,680.00
25,03,64,198.69	8	ಸವಕಳಿ ಮತ್ತು ಕಾಯ್ದಿರಿಸಿದ್ದು	32,35,33,902.16				
19,29,039.08	9	ಇತರೆ ನಿರ್ವಹಣೆ	10,42,553.34				
19,21,294.94	10	ಮುದ್ರಣ, ಲೇಖನ ಸಾಮಗ್ರಿಗಳು ಮತ್ತು ಜಾಹೀರಾತು	16,16,270.05				
1,82,43,973.00	11	ಇತರೆ ಖರ್ಚುಗಳು	63,02,550.19				
16,03,254.86	12	ಜಿ.ಎಸ್.ಟಿ	26,91,119.14				
1,35,78,15,500.58		ಒಟ್ಟು ರೂ.	1,24,63,37,632.60				
15,73,79,175.03		ಲಾಭ ಆದಾಯ ತೆರಿಗೆಗೆ ಮೊದಲು	13,63,14,354.92				
7,50,00,000.00	13	ಆದಾಯ ತೆರಿಗೆ	4,30,00,000.00				
8,23,79,175.03		ನಿವ್ವಳ ಲಾಭ	9,33,14,354.92				
1,51,51,94,675.61		ಒಟ್ಟು ರೂ.	1,38,26,51,987.52	1,51,51,94,675.61		ಒಟ್ಟು ರೂ.	1,38,26,51,987.52

ದಿನಾಂಕ 31–03–2021 ರ ಅಂತ್ಯಕ್ಕೆ ಆಸ್ತಿ–ಜವಾಬ್ದಾರಿ ತಃಖ್ತೆ

ಮೊಬಲಗು 31/03/2020 ರೂ. ಪೈ	ಶೆಡ್ಯೂಲ್	ಜವಾಬ್ದಾರಿಗಳು	ಮೊಬಲಗು 31/03/2021 ರೂ. ಪೈ	ಮೊಬಲಗು 31/03/2020 ರೂ. ಪೈ	ಶೆಡ್ಯೂಲ್	ಆಸ್ತಿಗಳು	ಮೊಬಲಗು 31/03/2021 ರೂ. ಪೈ
31,29,51,200.00	I	ಪಾವತಿಯಾದ ಷೇರು ಬಂಡವಾಳ	28,00,19,700.00	2,28,27,391.00	VI	ನಗದು ಶಿಲ್ಕು	1,67,63,445.00
85,98,28,213.65		ಕಾಯ್ದಿಟ್ಟ ನಿಧಿ ಮತ್ತು ಇತರೆ ನಿಧಿಗಳು	93,92,60,618.11	53,71,60,255.57	VII	ಇತರೆ ಬ್ಯಾಂಕುಗಳಲ್ಲಿ ಶಿಲ್ಕು	59,23,50,876.17
10,92,25,22,225.21	II	ಠೇವಣಾತಿಗಳು	11,34,07,72,767.87	1,57,66,81,763.00	VIII	ಠೇವಣಿಗಳು	1,38,26,81,763.00
42,96,941.60		ಚೆಕ್ ಪಾರ್ ಕಲೆಕ್ಷನ್ (ಕಾಂಟ್ರ)	1,79,09,203.02	3,67,72,67,754.00	IX	ಹೂಡಿಕೆಗಳು	5,04,76,65,000.00
13,69,54,949.56		ಸಾಲದ ಮೇಲಿನ ಬಡ್ಡಿಗಾಗಿ ಕಾದಿರಿಸಿದ್ದು (ಕಾಂಟ್ರ)	22,30,80,012.56	6,49,06,62,970.36	X	ಸಾಲ ಮತ್ತು ಮುಂಗಡಗಳು	5,98,63,94,236.30
80,37,282.00	III	ಠೇವಣಿಗಳ ಮೇಲಿನ ಬಡ್ಡಿಗಾಗಿ ಕಾಯ್ದಿರಿಸಿದ್ದು	78,45,728.00	17,50,08,273.00	XI	ಬ್ಯಾಂಕೇತರ ಆಸ್ತಿಗಳು	8,29,73,383.00
3,24,904.26	IV	ಶಾಖೆಗಳ ಹೊಂದಾಣಿಕೆ	3,11,213.42	13,69,54,949.56		ಸಾಲದ ಮೇಲಿನ ಬಡ್ಡಿಗಾಗಿಕಾದಿರಿಸಿದ್ದು(ಕಾಂಟ್ರ)	22,30,80,012.56
12,34,35,928.94	V	ಇತರೆ ಜವಾಬ್ದಾರಿಗಳು	9,94,63,565.93	42,96,941.60		ಚೆಕ್ ಪಾರ್ ಕಲೆಕ್ಷನ್ (ಕಾಂಟ್ರ)	1,79,09,203.02
42,48,48,659.60		ಅವಕಾಶಗಳು	73,89,92,948.00	7,06,97,642.00	XII	ಬ್ಯಾಂಕಿನ ಕಟ್ಟಡ ಖಾತೆ	13,77,46,507.00
8,23,79,175.03		ಲಾಭ ಮತ್ತು ನಷ್ಟದ ಖಾತೆ	9,33,14,354.92	1,36,52,380.00		ಪೀಠೋಪಕರಣ ಹಾಗೂ ಇತರೆ	1,38,31,906.46
				46,67,499.00		ಗಣಕ ಯಂತ್ರ ಹಾರ್ಡ್‌ವೇರ್	32,32,755.00
				9,99,949.00		ಗಣಕ ಯಂತ್ರ ಸಾಫ್ಟ್‌ವೇರ್	19,22,388.00
				14,28,051.00		ಬ್ಯಾಂಕಿನ ವಾಹನ	12,13,843.00
				16,32,73,660.16	XIII	ಇತರೆ ಆಸ್ತಿಗಳು	23,32,04,793.32
12,87,55,79,479.25		ಒಟ್ಟು ರೂ.	13,74,09,70,111.83	12,87,55,79,479.25		ಒಟ್ಟು ರೂ.	13,74,09,70,111.83
43,19,489.62		ಡೆಫ್ ಖಾತೆ (ಕಾಂಟ್ರ)	78,71,118.83	43,19,489.62	XIV	ಡೆಫ್ ಖಾತೆ (ಕಾಂಟ್ರ)	78,71,118.83
1,44,05,000.00		ಬ್ಯಾಂಕ್ ಗ್ಯಾರಂಟಿ (ಕಾಂಟ್ರ)	1,53,94,480.00	1,44,05,000.00		ಬ್ಯಾಂಕ್ ಗ್ಯಾರಂಟಿ (ಕಾಂಟ್ರ)	1,53,94,480.00
1,87,24,489.62		ಒಟ್ಟು ರೂ.	2,32,65,598.83	1,87,24,489.62		ಒಟ್ಟು ರೂ.	2,32,65,598.83

ಭಾರತೀಯ ರಿಸರ್ವ್ ಬ್ಯಾಂಕ್ ಸುತ್ತೋಲೆ ಸಂಖ್ಯೆ:UBD.CO.BPD(PCB)Cir.No.52/12.05.001/2013-14 dt.25/03/2014ರಲ್ಲಿ ಸೂಚಿಸಿದಂತೆ ಪ್ರಮುಖ ಅಂಶಗಳ ಬಗ್ಗೆ ಟಿಪ್ಪಣಿ:

1) Capital to Risk Asset Ratio ಶೇಕಡ 17.83%
2) 2020–21ರ ಪ್ರಾರಂಭದಲ್ಲಿ Capital to Risk Asset Ratio ಶೇಕಡ 15.60% ರಷ್ಟಿದ್ದು ವರ್ಷಾಂತ್ಯಕ್ಕೆ, ಶೇಕಡ 17.83% ಆಗಿದ್ದು ವರದಿ ಸಾಲಿನಲ್ಲಿ ಶೇಕಡ 2.23ರಷ್ಟು ಹೆಚ್ಚಾಗಿರುತ್ತದೆ..
3) ಹೂಡಿಕೆಗಳು:ಕೇಂದ್ರ ಸರ್ಕಾರಿ ಮತ್ತು ರಾಜ್ಯ ಅಭಿವೃದ್ಧಿ ಪತ್ರಗಳಲ್ಲಿ ಹೂಡಿಕೆ ಮಾಡಿದ್ದು ವಿವರಗಳು ಈ ಕೆಳಗಿನಂತಿರುತ್ತದೆ.

ವಿವರಗಳು	31.03.2020 (ರೂ. ಲಕ್ಷಗಳಲ್ಲಿ)	31.03.2021 (ರೂ. ಲಕ್ಷಗಳಲ್ಲಿ)
ಹೂಡಿಕೆಗಳ ಪುಸ್ತಕದ ಬೆಲೆ	36772.43	50600.00
ಹೂಡಿಕೆಗಳ ಮುಖ ಬೆಲೆ	37609.56	50476.40
ಹೂಡಿಕೆಗಳ ಮಾರುಕಟ್ಟೆ ಬೆಲೆ	38601.60	50364.13

4) ದಿನಾಂಕ 31/03/2021ರಲ್ಲಿದ್ದಂತೆ ಶಾಸನ ಬದ್ದವಲ್ಲದ ದ್ರವ್ಯಾಸ್ತಿ/ದ್ರವ್ಯ ಮೂಲಗಳ ಸಂಯುಕ್ತ ವಿನಿಯೋಜನೆ ಮತ್ತು ಅನುತ್ಪಾದಕ ಶಾಸನ ಬದ್ದವಲ್ಲದ ದ್ರವ್ಯಾಸ್ತಿ/ದ್ರವ್ಯ ವಿವರ: (ರೂ. ಗಳಲ್ಲಿ)

ಶಾಸನ ಬದ್ಧವಲ್ಲದ ದ್ರವ್ಯಾಸ್ತಿ	ಅನುತ್ಪಾದಕ ಶಾಸನ ಬದ್ದವಲ್ಲದ ದ್ರವ್ಯಾಸ್ತಿ
ರೂ.25,000.00	–

ಕ್ರ ಸಂ.	ವಿತರಕರು	ಮೊತ್ತ	ಅರ್ಹತೆಗಿಂತ ಕೆಳ ದರ್ಜೆಯ ಭದ್ರತಾ ಪತ್ರದ ವಿವರ	ಬೆಲೆ ನಿಗಧಿಪಡಿಸದಿರುವ ಭದ್ರತಾ ಪತ್ರದ ವಿವರ	ಬೆಲೆ ದಾಖಲಿಸದ ಭದ್ರತಾ ಪತ್ರದ ವಿವರ
(1)	(2)	(3)	(4)	(5)	(6)
1	ಸಾರ್ವಜನಿಕ ಕ್ಷೇತ್ರದ ಉದ್ಯಮಗಳಲ್ಲಿ	––	––	––	––
2	ಹಣಕಾಸು ಸಂಸ್ಥೆಗಳಲ್ಲಿ	––	––	––	––
3	ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ	––	NIL	––	––
4	ಸಾರ್ವಜನಿಕ ವಲಯದ ಬ್ಯಾಂಕು	––	––	––	––
5	ಮ್ಯೂಚುಯಲ್ ಫಂಡ್	––	––	––	––
6	ಇತರೆ	––	––	––	––

5) ಕಮರ್ಷಿಯಲ್, ರಿಯಲ್ ಎಸ್ಟೇಟ್ ಆಧಾರ ಸಾಲಗಳು ವರ್ಷಾಂತ್ಯಕ್ಕೆ **ರೂ. 2242.09** ಲಕ್ಷಗಳಿರುತ್ತದೆ.
6) ವರ್ಷಾಂತ್ಯಕ್ಕೆ ಸಂಸ್ಥೆಯು ಷೇರು ಮತ್ತು ಡಿಬೆಂಚರುಗಳ ಮೇಲೆ ಸಾಲವನ್ನು ನೀಡಿರುವುದಿಲ್ಲ.
7) ಅ) ಆಡಳಿತ ಮಂಡಳಿ ಸದಸ್ಯರು ಹಾಗೂ ಅವರ ಹತ್ತಿರದ ಸಂಬಂಧಿಗಳಿಗೆ ಯಾವುದೇ ಸಾಲಗಳನ್ನು ನೀಡಿರುವುದಿಲ್ಲ. (ಠೇವಣಿ ಸಾಲಗಳನ್ನು ಹೊರತುಪಡಿಸಿ)
ಆ) ಆಡಳಿತ ಮಂಡಳಿ ಸದಸ್ಯರು ಹಾಗೂ ಅವರ ಹತ್ತಿರದ ಸಂಬಂಧಿಗಳಿಗೆ ಸಂಸ್ಥೆಯು ಯಾವುದೇ ಬ್ಯಾಂಕ್ ಗ್ಯಾರಂಟಿ ಮತ್ತು ಖಾತರಿ ಪತ್ರವನ್ನು ಪ್ರಸಕ್ತ ಸಾಲಿನಲ್ಲಿ ನೀಡಿರುವುದಿಲ್ಲ.
8) ಸದರಿ ಆರ್ಥಿಕ ವರ್ಷದಲ್ಲಿ ಸಂಸ್ಥೆಯಠೇವಣಿ ಬಡ್ಡಿ ವೆಚ್ಚ **(Cost of Deposits) 7.78** % ಇರುತ್ತದೆ

ಸಹಿ/– (ಭಾಗ್ಯ ಎಸ್.)
ಮು.ಕಾ.ನಿ.

9) ಬ್ಯಾಂಕಿನ ಪ್ರಸಕ್ತ ಸಾಲಿನ ಅನುತ್ಪಾದಕ ಆಸ್ತಿಗಳನ್ನು ಹಿಂದಿನ ಸಾಲಿನ ಅನುತ್ಪಾದಕ ಆಸ್ತಿಗಳೊಂದಿಗೆ ತುಲನೆ ಮಾಡಿದ ವಾಸ್ತವಾಂಶದ ವಿವರಗಳು ಈ ಕೆಳಕಂಡಂತಿರುತ್ತದೆ.

ದಿನಾಂಕ	ಒಟ್ಟು ಅನುತ್ಪಾದಕ ಆಸ್ತಿಗಳು ಮೊಬಲಗು (ರೂ. ಲಕ್ಷಗಳಲ್ಲಿ)	ಒಟ್ಟು ಅನುತ್ಪಾದಕ ಆಸ್ತಿಗಳು ಶೇಕಡಾವಾರು	ನಿವ್ವಳ ಅನುತ್ಪಾದಕ ಆಸ್ತಿಗಳು ಮೊಬಲಗು (ರೂ. ಲಕ್ಷಗಳಲ್ಲಿ)	ನಿವ್ವಳ ಅನುತ್ಪಾದಕ ಆಸ್ತಿಗಳು ಶೇಕಡಾವಾರು
31/03/2020	8007.64	12.34%	3235.41	5.46%
31/03/2021	10014.53	16.73%	6434.00	4.90%
ವ್ಯತ್ಯಾಸ	+ 2006.89	+4.39	+3198.59	-0.56%

10) ವರ್ಷಾಂತ್ಯಕ್ಕೆ ಬ್ಯಾಂಕಿನ ಲಾಭ ಗಳಿಕೆ ಈ ಕೆಳಕಂಡಂತಿರುತ್ತದೆ.

ವಿವರಗಳು	2019-2020	2020-2021
ಅ) ಬಡ್ಡಿ ಆದಾಯ ಮತ್ತು ಗುಂತಾಯಗಳ ಮೇಲಿನ ಇತರೆಆದಾಯ ದುಡಿಯುವ ಬಂಡವಾಳಕ್ಕೆ ಶೇಕಡಾವಾರು	9.54	8.93
ಆ) ಇತರೆ ಆದಾಯ ದುಡಿಯುವ ಬಂಡವಾಳಕ್ಕೆ ಶೇಕಡಾವಾರು	0.80	1.32
ಇ) ಗಳಿಸಿರುವ ಒಟ್ಟು ಲಾಭವನ್ನು ಸಂಸ್ಥೆಯ ದುಡಿಯುವ ಬಂಡವಾಳದ ಶೇಕಡಾವಾರು (Operating Profit as a percentage of working funds (%))	1.07	4.31
ಈ) ಪ್ರಸಕ್ತ ಸಾಲಿನಲ್ಲಿ ಗಳಿಸಿರುವ ಗಳಿಕೆಯನ್ನು ಒಟ್ಟು ಆಸ್ತಿಗಳೊಂದಿಗೆ ಹೋಲಿಸಿದಾಗ, ಒಟ್ಟು ಆಸ್ತಿಗಳ ಮೇಲಿನ ಗಳಿಕೆ ಶೇಕಡವಾರು (Return on Assets (%) – Advances)	0.60	0.73
ಉ) ಪ್ರಸಕ್ತ ಸಾಲಿನಲ್ಲಿ ಬ್ಯಾಂಕಿನ ವ್ಯವಹಾರವನ್ನು ಪ್ರತಿ ಸಿಬ್ಬಂದಿಯೊಂದಿಗೆ ಹೋಲಿಸಿದಾಗ ಪ್ರತಿ ಸಿಬ್ಬಂದಿಗೆ ಬ್ಯಾಂಕಿನ ವ್ಯವಹಾರ (ರೂ.ಕೋಟಿಗಳಲ್ಲಿ)	29.02	29.36
ಊ) ಪ್ರಸಕ್ತ ಸಾಲಿನ ನಿವ್ವಳ ಲಾಭವನ್ನು ಪ್ರತಿ ಸಿಬ್ಬಂದಿಯೊಂದಿಗೆ ಹೋಲಿಸಿದಾಗ ಪ್ರತಿ ಸಿಬ್ಬಂದಿ ಗಳಿಸಿದ ನಿವ್ವಳ ಲಾಭ(ರೂ.ಲಕ್ಷಗಳಲ್ಲಿ)	13.73	16.09

ಸಹಿ/– (ಶ್ರೀ ಹೆಚ್.ಸಿ.ಗೋಪಾಲ್)
ಅಧ್ಯಕ್ಷರು

11) ಪ್ರಸಕ್ತ ಆರ್ಥಿಕ ವರ್ಷದಲ್ಲಿ ಅನುತ್ಪಾದಕ ಆಸ್ತಿಗಳು ಮತ್ತು ಉತ್ಪಾದಕ ಆಸ್ತಿ ಮತ್ತು ಸ್ಟ್ಯಾಂಡ್‌ಸ್ಟಿಲ್ ಖಾತೆಗಳ ಮೇಲೆ ಈ ಕೆಳಕಂಡಂತೆ ಅವಕಾಶ ಕಲ್ಪಿಸಲಾಗಿದೆ. (ರೂ. ಲಕ್ಷಗಳಲ್ಲಿ)

ವಿವರಗಳು	2020-2021
ಅನುತ್ಪಾದಕ ಆಸ್ತಿಯ ಮೇಲೆ ಅವಕಾಶ	2616.34
ಸ್ಟ್ಯಾಂಡ್‌ಸ್ಟಿಲ್ ಖಾತೆಗಳ ಮೇಲೆ ಅವಕಾಶ (ಕೋವಿಡ್–19)	425.10
ಹೂಡಿಕೆ ಮೇಲಿನ ಅವಕಾಶ	--
ಅನುತ್ಪಾದಕ ಹೂಡಿಕೆಯ ಮೇಲೆ ಅವಕಾಶ	100.00
ಒಟ್ಟು ಅವಕಾಶಗಳು	3141.44

12) ಕೋವಿಡ್–19ರ ಪ್ಯಾಕೇಜ್ ರೀತ್ಯಾ ಆರು ತಿಂಗಳ Moritorium ಅನ್ವಯಿಸಲಾಗಿ ದಿನಾಂಕ 31/03/2021 ರವರೆಗೆ ಸಂಭವಿಸಬಹುದಾದ ಅನುತ್ಪಾದಕ ಸಾಲಗಳನ್ನು ಉತ್ಪಾದಕ ಸಾಲಗಳಾಗಿ ಪರಿಗಣಿಸಿದ ಪ್ರಕರಣಗಳು 54ಗಳಿದ್ದು, ಅವುಗಳ ಒಟ್ಟು ಸಾಲಗಳು ರೂ.4,85,41,223.36 ಗಳನ್ನು ವರ್ಗೀಕರಿಸಲಾಗಿದ್ದುಇದಕ್ಕೆ ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳ ರೀತ್ಯಾ ಅಂತಹ ಒಟ್ಟು ಸಾಲಗಳ ಶೇಕಡ 10%ರಷ್ಟು ಅವಶ್ಯವಿದ್ದ ಅವಕಾಶಗಳು ರೂ.4,85,10,000/-ಗಳ ಕೋವಿಡ್–19ರ ಪ್ಯಾಕೇಜ್ ಸಂಬಂಧ ಅವಕಾಶ ಕಲ್ಪಿಸಲಾಗಿದೆ.

13) ಪ್ರಸಕ್ತ ಸಾಲಿನ ಅಂತ್ಯಕ್ಕೆ ಇರುವಂತಹ ಈ ಕೆಳಕಂಡ ಅವಕಾಶಗಳ ಮೊಬಲಗುಗಳನ್ನು ಹಿಂದಿನ ಸಾಲಿನಲ್ಲಿದ್ದ ಅವಕಾಶ ಮೊಬಲಗುಗಳೊಂದಿಗೆ ತುಲನೆ ಮಾಡಿದ ಹೋಲಿಕೆಯ ವಿವರಗಳು ಈ ಕೆಳಕಂಡಂತಿರುತ್ತದೆ. (ರೂ. ಲಕ್ಷಗಳಲ್ಲಿ)

ವಿವರಗಳು	31.03.2020	31.03.2021	ವ್ಯತ್ಯಾಸ ಏರಿಕೆ/ಇಳಿಕೆ
ಅ) ಅನುತ್ಪಾದಕ ಆಸ್ತಿಯ ಮೇಲೆ ಅವಕಾಶ	3698.49	6314.83	+2616.34
ಆ) ಉತ್ಪಾದಕ ಆಸ್ತಿಯ ಮೇಲೆ ಅವಕಾಶ	490.00	490.00	0.00
ಇ) ಸ್ಟ್ಯಾಂಡ್‌ಸ್ಟಿಲ್ ಖಾತೆಗಳ ಮೇಲೆ ಅವಕಾಶ (ಕೋವಿಡ್–19)	60.00	485.10	+425.10
ಈ) ಹೂಡಿಕೆಯ ಮೇಲೆ ಸವಕಳಿ	522.11	522.11	0.00
ಉ) ಹಣದುರಪಯೋಗದ ಪ್ರಕರಣಕ್ಕೆ	111.13	111.13	0.00
ಊ) ಕರಡು ಸಾಲದ ನಿಧಿ	1073.75	1133.69	+59.94

14) ವಿದೇಶಿ ವಿನಿಮಯದಿಂದ ಆಸ್ತಿ ಮತ್ತು ಜವಾಬ್ದಾರಿಗಳು:–ಅನ್ವಯಿಸುವುದಿಲ್ಲ
15) ಡೆಪಾಸಿಟ್ ಇನ್ಸುರನ್ಸ್ ಅಂಡ್ ಕ್ರೆಡಿಟ್ ಗ್ಯಾರಂಟಿ ಕಾರ್ಪೋರೇಷನ್, ಮುಂಬಯಿರವರ ಠೇವಣಿ ವಿಮಾ ಯೋಜನೆ ಹೊಂದಿದ್ದು 2020–21 ನೇ ಸಾಲಿಗೆ ಒಟ್ಟು ರೂ.131.11 ಲಕ್ಷ ಪ್ರೀಮಿಯಂ ಅನ್ನು ಪಾವತಿಸಲಾಗಿದೆ.
16) ಪುನರ್ ರಚಿತ ಖಾತೆಗಳು (ಕೋವಿಡ್–19ರಅನ್ವಯ)– ಒಟ್ಟು 155 ಸಾಲದ ಖಾತೆಗಳನ್ನು ಪುನರ್ ರಚಿಸಿಕೊಡಲಾಗಿದೆ
17) ಸಂಸ್ಥೆಯು ಸಾಲಾಂತ್ಯಕ್ಕೆ ಬ್ಯಾಂಕ್ ಗ್ಯಾರಂಟಿ ರೂ.153.94 ಲಕ್ಷಗಳನ್ನು ನೀಡಲಾಗಿರುತ್ತದೆ.
18) ಠೇವಣಿಗಳು ಮರುಪಾವತಿಗಾಗಿ ಅರ್ಹವಾಗಿ 10 ವರ್ಷಗಳು ಕಳೆದರೂ ಕ್ಲೇಮು ಮಾಡದಕಾರಣ DEAF ಗೆ ವರ್ಗಾಯಿಸಿರುವ ಒಟ್ಟು ಠೇವಣಿಗಳು ದಿನಾಂಕ 31/03/2021ಕ್ಕೆ 4924 ಪ್ರಕರಣಗಳಲ್ಲಿ ರೂ.78.71 ಲಕ್ಷಗಳು

ಸಹಿ/– (ಶ್ರೀಮತಿ ಕನ್ಯಾಕುಮಾರಿ ಬಿ.ಎಸ್.)
ಉಪಾಧ್ಯಕ್ಷರು

ದೃಢೀಕರಣ ಪತ್ರ

ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ., ಬೆಂಗಳೂರು ಇದರ 2020–2021ನೇ ಸಾಲಿನ ಲೆಕ್ಕ ಪುಸ್ತಕಗಳನ್ನು ಪರಿಶೀಲಿಸಿರುತ್ತೇವೆ. ನಮ್ಮ ಸಾಮಾನ್ಯ ಜ್ಞಾನ ಮತ್ತು ನಂಬಿಕೆಯಂತೆ ಅಗತ್ಯವಾದ ಎಲ್ಲಾ ಮಾಹಿತಿ ಮತ್ತು ಸಮಜಾಯಿಷಿಗಳನ್ನು ಪಡೆದಿರುತ್ತೇವೆ. ಅವು ತೃಪ್ತಿಕರವಾಗಿರುತ್ತವೆ. ನಮ್ಮ ಸಾಮಾನ್ಯ ಜ್ಞಾನ ಮತ್ತು ನಂಬಿಕೆಯಂತೆ ಮೇಲ್ಕಂಡ ಆಸ್ತಿ–ಜವಾಬ್ದಾರಿ ತ:ಖ್ತೆ ಮತ್ತು ಲಾಭ–ನಷ್ಟ ತ:ಖ್ತೆಯು ದಿನಾಂಕ 31–03–2021ಕ್ಕೆ ನಮ್ಮ ಪ್ರತ್ಯೇಕ ಸ್ಥಿತಿಯನ್ನು ವರದಿಯಲ್ಲಿನ ಅಂಶಗಳಿಗೊಳಪಟ್ಟು ಬ್ಯಾಂಕಿನ ನಿಜವಾದ ಆರ್ಥಿಕ ಸ್ಥಿತಿಯನ್ನು ಕರಾರುವಾಕ್ಕಾಗಿ ತೋರಿಸುತ್ತದೆಯೆಂದು ದೃಢೀಕರಿಸುತ್ತೇವೆ.

ದಿನಾಂಕ: 16/08/2021
ಸ್ಥಳ: ಬೆಂಗಳೂರು

ಪರಿಶೀಲಿಸಿದೆ
ಬಿ.ಎಸ್. ರೆಡ್ಡಿ & ಕೋ.
ಸನ್ನದು ಲೆಕ್ಕಪರಿಶೋಧಕರು
ಸಂಸ್ಥೆಯ ನೋಂದಣಿ ಸಂಖ್ಯೆ 006129S

ಸಹಿ/–
ಸಿಎ ಬಿ. ಸಹಾದೇವ ರೆಡ್ಡಿ
ಪಾಲುದಾರರು
ಸದಸ್ಯತ್ವ ಸಂಖ್ಯೆ 202179
UIDN:21202179AAAACZ4015

ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮಂಡಳಿಗೆ ಸಿಎಫ್‌ಟಿಎಫ್‌ಕೆ ಆಗ್ರಹ

‘ಮಕ್ಕಳ ರಕ್ಷಣೆಗೆ ತಂಬಾಕು ತೆರಿಗೆ ಹೆಚ್ಚಿಸಿ’

ಪ್ರಜಾವಾಣಿ ವಾರ್ತೆ

ಸಾಂದರ್ಭಿಕ ಚಿತ್ರ

ಬೆಂಗಳೂರು: ‘ಮಕ್ಕಳು ಹಾಗೂ ಯುವಜನರು ತಂಬಾಕು ಉತ್ಪನ್ನಗಳ ಸೇವನೆಯ ಚಟಕ್ಕೆ ಒಳಪಡುವುದನ್ನು ತಪ್ಪಿಸಲು ಹಾಗೂ ಸರ್ಕಾರದ ಆದಾಯ ವೃದ್ಧಿಸಲು ಈ ಉತ್ಪನ್ನಗಳ ಮೇಲಿನ ತೆರಿಗೆಯನ್ನು ಹೆಚ್ಚಿಸಬೇಕು’ ಎಂದು ತಂಬಾಕು ನಿಯಂತ್ರಣಕ್ಕೆ ಶ್ರಮಿಸುತ್ತಿರುವ ನಗರದ ಸಂಸ್ಥೆಗಳು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮಂಡಳಿಯನ್ನು ಒತ್ತಾಯಿಸಿವೆ.

ಈ ವಿಷಯವನ್ನು ಜಿಎಸ್‌ಟಿ ಮಂಡಳಿಯ ಸಭೆಯಲ್ಲಿ ಪ್ರಸ್ತಾಪಿಸುವಂತೆ ಕನ್ಸೋರ್ಟಿಯಂ ಫಾರ್ ಟೊಬ್ಯಾಕೊ ಫ್ರೀ ಕರ್ನಾಟಕ (ಸಿಎಫ್‌ಟಿಎಫ್‌ಕೆ) ನೇತೃತ್ವದಲ್ಲಿ ವಿವಿಧ ಸಂಸ್ಥೆಗಳ ಪ್ರತಿನಿಧಿಗಳು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಐ.ಎಸ್.ಎನ್. ಪ್ರಸಾದ್ ಅವರಿಗೆ ಪತ್ರ ಬರೆದಿದ್ದಾರೆ.

‘ತಂಬಾಕು ಉತ್ಪನ್ನಗಳ ಸೇವನೆಯನ್ನು ತಗ್ಗಿಸಲು ಇರುವ ಪರಿಣಾಮಕಾರಿ ನೀತಿಗಳಲ್ಲಿ ತೆರಿಗೆ ಹೆಚ್ಚಳವೂ ಒಂದು. ಮಕ್ಕಳ ವಿಚಾರದಲ್ಲಿ ಇದು ವಿಶೇಷವಾಗಿ ಅನ್ವಯವಾಗುತ್ತದೆ. ತಂಬಾಕು ಸೇವನೆಯ ಜಾಗತಿಕ ಸಮೀಕ್ಷೆ (ಜಿವೈಟಿಎಸ್) ಪ್ರಕಾರ ಅನೇಕ ಮಕ್ಕಳು 10 ವರ್ಷದ ಹುಟ್ಟು ಹಬ್ಬ ಆಚರಿಸುವ ಮುನ್ನವೇ ತಂಬಾಕು ಸೇವಿಸುತ್ತಾರೆ. ಅವರಲ್ಲಿ ಶೇ 38ರಷ್ಟು ಮಕ್ಕಳು ಸಿಗರೇಟು, ಶೇ 47ರಷ್ಟು ಮಕ್ಕಳು ಬೀಡಿ ಹಾಗೂ ಶೇ 52ರಷ್ಟು ಮಕ್ಕಳು ಹೊಗೆರಹಿತ ತಂಬಾಕು ಸೇವನೆಯ ಚಟಕ್ಕೆ ಒಳಪಟ್ಟಿರುವುದು ತಿಳಿದುಬಂದಿದೆ. ಜಿಎಸ್‌ಟಿ ಜಾರಿಗೆ ಬಂದಾಗಿನಿಂದ ತಂಬಾಕು ತೆರಿಗೆಗಳಲ್ಲಿ ಹೇಳಿಕೊಳ್ಳುವಂತಹ ಏರಿಕೆಯಾಗಿಲ್ಲ’ ಎಂದು ಸಿಎಫ್‌ಟಿಎಫ್‌ಕೆ ತಿಳಿಸಿದೆ.

‘ಬೀಡಿ ಅತ್ಯಂತ ವ್ಯಾಪಕವಾಗಿ ಬಳಕೆಯಲ್ಲಿರುವ ಮತ್ತು ಅಗ್ಗದ ತಂಬಾಕು ಉತ್ಪನ್ನ. ಇವುಗಳ ಸೇವನೆ ಪ್ರಮಾಣ ಇಳಿಕೆ ಮಾಡಲು ತೆರಿಗೆ ಹೆಚ್ಚಳ ಪ್ರಮುಖ ಅಸ್ತ್ರ. ಯುವಜನರ ಆರೋಗ್ಯದ ದೃಷ್ಟಿಯಿಂದ ತಂಬಾಕು ಉತ್ಪನ್ನಗಳ ಸೇವನೆಗೆ ತುರ್ತಾಗಿ ಕಡಿವಾಣ ಹಾಕಬೇಕು’ ಎಂದು ಸಾರ್ವಜನಿಕ ಆರೋಗ್ಯ ಸಂಶೋಧಕ ಡಾ. ಉಪೇಂದ್ರ ಭೋಜಾನಿ ಹೇಳಿದ್ದಾರೆ.

ಕ್ಯಾನ್ಸರ್ ತಗಲುವ ಅಪಾಯ: ‘ತಂಬಾಕು ಉತ್ಪನ್ನಗಳ ಸೇವನೆಯಿಂದ ಕ್ಯಾನ್ಸರ್ ಪೀಡಿತರಾದವರು ತಮ್ಮ ಸಂಪಾದನೆಯ ಎಲ್ಲ ಹಣವನ್ನು ಚಿಕಿತ್ಸೆಗೆ ವ್ಯಯಿಸುತ್ತಿರುವುದನ್ನು ಪ್ರತಿನಿತ್ಯ ನೋಡುತ್ತಿದ್ದೇವೆ. ಪ್ರತಿ ಮೂವರಲ್ಲಿ ಒಬ್ಬರು ಯಾವುದಾದರೊಂದು ರೂಪದಲ್ಲಿ ತಂಬಾಕು ಉತ್ಪನ್ನ ಬಳಸುತ್ತಾರೆ. ಅವರು ಸಾಂಕ್ರಾಮಿಕವಲ್ಲದ ರೋಗಕ್ಕೆ ಒಳಪಡುತ್ತಿದ್ದಾರೆ. ಹಾಗಾಗಿ, ತಂಬಾಕು ಉತ್ಪನ್ನಗಳ ಮೇಲಿನ ತೆರಿಗೆ ಹೆಚ್ಚಿಸಬೇಕು’ ಎಂದು ಕ್ಯಾನ್ಸರ್ ತಜ್ಞ ಮತ್ತು ರಾಜ್ಯ ಸರ್ಕಾರದ ತಂಬಾಕು ನಿಯಂತ್ರಣಕ್ಕೆ ಸಂಬಂಧಿಸಿದ ಉನ್ನತ ಮಟ್ಟದ ಸಮಿತಿಯ ಸದಸ್ಯ ಡಾ. ವಿಶಾಲ್ ರಾವ್ ಒತ್ತಾಯಿಸಿದ್ದಾರೆ.

ಸಿಎಫ್‌ಟಿಎಫ್‌ಕೆ ಸಂಚಾಲಕ ಎಸ್. ಜೆ. ಚಂದರ್, ‘ತಂಬಾಕು ಉತ್ಪನ್ನಗಳ ತೆರಿಗೆ ಹೆಚ್ಚಳ ಮಾಡಿದಲ್ಲಿ ಯುವಜನರು ತಂಬಾಕು ಉತ್ಪನ್ನಗಳ ಸೇವನೆ ಚಟಕ್ಕೆ ಒಳಪಡುವುದನ್ನು ತಪ್ಪಿಸಬಹುದು. ಸರ್ಕಾರಕ್ಕೆ ಆದಾಯವೂ ಹೆಚ್ಚಳವಾಗಲಿದೆ’ ಎಂದು ಸಲಹೆ ನೀಡಿದ್ದಾರೆ.

‘ಅನಧಿಕೃತ ಮಳಿಗೆ ತೆರವುಗೊಳಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಆರ್. ಮಾರುಕಟ್ಟೆ ಪಾದಚಾರಿ ಮಾರ್ಗದಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ಮಳಿಗೆ ತೆರವು ಮತ್ತು ಗುತ್ತಿಗೆ ಅವಧಿ ಮುಕ್ತಾಯಗೊಂಡಿರುವ ಮಳಿಗೆಯ ಪರವಾನಗಿ ನವೀಕರಣ ಕಾರ್ಯವನ್ನು ಮೂರು ತಿಂಗಳಲ್ಲಿ ಪೂರ್ಣಗೊಳಿಸುವಂತೆ ಬಿಬಿಎಂಪಿಗೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಕೆ.ಆರ್. ಮಾರುಕಟ್ಟೆ ಸಂಕೀರ್ಣದಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ಮಳಿಗೆಗಳನ್ನು ತೆರವುಗೊಳಿಸಲು ಪಾಲಿಕೆಗೆ ನಿರ್ದೇಶನ ನೀಡುವಂತೆ ಕೋರಿ ಬೆಂಗಳೂರು ಹೂವು ವ್ಯಾಪಾರಿಗಳ ಸಂಘ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಸತೀಶ್‌ಚಂದ್ರ ಶರ್ಮ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ಪ್ರಮಾಣ ಪತ್ರ ಸಲ್ಲಿಸಿದ ಬಿಬಿಎಂಪಿ, ‘ಕೆ.ಆರ್. ಮಾರುಕಟ್ಟೆಯಲ್ಲಿ ಪಾದಚಾರಿ ಮಾರ್ಗ ಮತ್ತು ಅಗ್ನಿಶಾಮಕ ಮತ್ತು ತುರ್ತು ಸೇವೆಗಳಿಗಾಗಿ ಮೀಸಲಿಟ್ಟದ್ದ ಜಾಗದಲ್ಲಿ ಅನಧಿಕೃತ 24 ಮಳಿಗೆಗಳು ನಿರ್ಮಾಣವಾಗಿದ್ದು, ತೆರವು ಕಾರ್ಯಾಚರಣೆ ಕೈಗೆತ್ತಿಕೊಳ್ಳಲಾಗಿದೆ. ಒಟ್ಟು 1,266 ಮಳಿಗೆಗಳ ಗುತ್ತಿಗೆ ಅವಧಿ ಮುಗಿದಿದೆ. ಸ್ಮಾರ್ಟ್‌ಸಿಟಿ ಯೋಜನೆಯಡಿ ಮಾರುಕಟ್ಟೆ ಅಭಿವೃದ್ಧಿಪಡಿಸಲಾಗುವುದು’ ಎಂದು ತಿಳಿಸಿತು.

ಕಸ ಗುಡಿಸುವ 26 ಯಂತ್ರಗಳ ಕಾರ್ಯವೈಖರಿ ಪರಿಶೀಲನೆ

ನಿಖರ ವರದಿ: ಗೌರವ್ ಗುಪ್ತ ಸೂಚನೆ

ಪ್ರಜಾವಾಣಿ ವಾರ್ತೆ

ಆರ್‌.ಟಿ.ನಗರದ ಎಚ್‌ಎಂಟಿ ಮೈದಾನದಲ್ಲಿ ಬಿಬಿಎಂಪಿಯ ಕಸ ಗುಡಿಸುವ ಯಂತ್ರಗಳನ್ನು ಗೌರವ್ ಗುಪ್ತ ಪರಿಶೀಲಿಸಿದರು. ಸರ್ಫರಾಜ್ ಖಾನ್ ಹಾಗೂ ಇತರ ಅಧಿಕಾರಿಗಳು ಇದ್ದಾರೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಸ ಗುಡಿಸುವ 26 ಯಂತ್ರಗಳ ಕಾರ್ಯವೈಖರಿ ಕುರಿತು ತಾಂತ್ರಿಕ ಪರಿಣಿತರಿಂದ ಪರಿಶೀಲನೆ ನಡೆಸಿ ನಿಖರವಾದ ವರದಿ ನೀಡುವಂತೆ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಕಸ ನಿರ್ವಹಣೆ ವಿಭಾಗದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಪ್ರಮುಖ ರಸ್ತೆಗಳನ್ನು ಸ್ವಚ್ಛಗೊಳಿಸಲು ಖರೀದಿಸಿರುವ ಕಸ ಗುಡಿಸುವ ಯಂತ್ರಗಳನ್ನು ಆರ್. ಟಿ.ನಗರದ ಎಚ್.ಎಂ.ಟಿ ಮೈದಾನದಲ್ಲಿ ಮಂಗಳವಾರ ಪರಿಶೀಲನೆ ನಡೆಸಿದರು.

17 ಸ್ವಯಂಚಾಲಿತ ಯಂತ್ರಗಳು, 8 ಟ್ರಕ್‌ನಲ್ಲಿ ಅಳವಡಿಸಿರುವಂತಹವು ಹಾಗೂ ಒಂದು ಸಣ್ಣ ಕಸ ಗುಡಿಸುವ ಯಂತ್ರ ಸೇರಿ ಒಟ್ಟು ಕಸ ಗುಡಿಸುವ 26 ಯಂತ್ರಗಳನ್ನು ಬಿಬಿಎಂಪಿ ಖರೀದಿಸಿದೆ.

ಈ ಯಂತ್ರಗಳು ಹೇಗೆ ಕಾರ್ಯನಿರ್ವಹಿಸುತ್ತಿವೆ. ಯಾವ ವಲಯದಲ್ಲಿ ಎಷ್ಟು ಯಂತ್ರಗಳು ಕಾರ್ಯನಿರ್ವಹಿಸುತ್ತಿವೆ. ಇದುವರೆಗೆ ಎಲ್ಲೆಲ್ಲಿ ರಸ್ತೆಗಳ ಕಸ ಗುಡಿಸಿವೆ. ಪ್ರತಿ ಯಂತ್ರವು ಗಂಟೆಗೆ ಹಾಗೂ ದಿನಕ್ಕೆ ಎಷ್ಟು ಕಿ.ಮೀ ಉದ್ದದ ರಸ್ತೆಯನ್ನು ಸ್ವಚ್ಛ ಮಾಡುತ್ತದೆ ಎಂದು ಮುಖ್ಯ ಆಯುಕ್ತರು ಅಧಿಕಾರಿಗಳಿಂದ ವಿವರ ಪಡೆದರು.

‘ಕಸ ಗುಡಿಸುವ ಯಂತ್ರಗಳು ಸುಸ್ಥಿತಿಯಲ್ಲಿವೆಯೇ, ಸರಿಯಾಗಿ ಕಾರ್ಯನಿರ್ವಹಿಸುತ್ತಿವೆಯೇ, ಅವುಗಳ ಸಾಮರ್ಥ್ಯ ಎಷ್ಟಿದೆ, ಟೆಂಡರ್ ಪ್ರಕ್ರಿಯೆಯಲ್ಲಿ ನೀಡಿರುವ ಮಾಹಿತಿ ನಿಖರವಾಗಿದೆಯೇ, ಅವುಗಳ ಎಂಜಿನ್‌ನ ಸಾಮರ್ಥ್ಯ ಹೇಗಿದೆ, ದಿನಕ್ಕೆ ಎಷ್ಟು ಕಿ.ಮೀ ರಸ್ತೆ ಸ್ವಚ್ಛ ಮಾಡುತ್ತವೆ, ಪ್ರತಿ ಯಂತ್ರವು ಎಷ್ಟು ಕ್ಯೂಬಿಕ್ ಮೀಟರ್ ಕಸ ಸಂಗ್ರಹಿಸಬಹುದು. ಕಸ ಗುಡಿಸುವ ಬ್ರಷ್ ಹಾಗೂ ಮಣ್ಣಿನ ದೂಳಿನ ಕಣಗಳನ್ನು ಹೊರಹಾಕಲು ಅಳವಡಿಸಿರುವ ಫಿಲ್ಟರ್‌ಗಳ ಕಾರ್ಯವೈಖರಿ ಹೇಗಿದೆ ಎಂಬ ಪೂರ್ಣ ಮಾಹಿತಿ ವರದಿಯಲ್ಲಿರಬೇಕು. ಬಿಎಂಟಿಸಿ ಅಥವಾ ಕೆಎಸ್‌ಆರ್‌ಟಿಸಿ ಪ್ರಾದೇಶಿಕ ಕಾರ್ಯಾಗಾರಗಳ ತಾಂತ್ರಿಕ ಪರಿಣಿತರಿಂದ ಪರಿಶೀಲನೆ ನಡೆಸಬಹುದು’ ಎಂದರು.

ವಿಶೇಷ ಆಯುಕ್ತ (ಕಸ ನಿರ್ವಹಣೆ) ಡಾ.ಕೆ.ಹರೀಶ್ ಕುಮಾರ್, ಜಂಟಿ ಆಯುಕ್ತ (ಕಸ ನಿರ್ವಹಣೆ) ಸರ್ಫರಾಜ್ ಖಾನ್, ಸೂಪರಿಂಟೆಂಡಿಂಗ್ ಎಂಜಿನಿಯರ್ ಬಸವರಾಜ್ ಕಬಾಡೆ, ಎಲ್ಲ ವಲಯ ಕಾರ್ಯಪಾಲಕ ಎಂಜಿನಿಯರ್‌ಗಳು ಉಪಸ್ಥಿತರಿದ್ದರು.

ಪ್ರತ್ಯೇಕ ಕೇಂದ್ರಗಳಲ್ಲಿ ಪರೀಕ್ಷೆ ಬರೆದಿದ್ದರು: ಕೆಪಿಎಸ್‌ಸಿ

ಬೆಂಗಳೂರು: ‘2019-20ನೇ ಸಾಲಿನ ಪ್ರಥಮ ದರ್ಜೆ ಸಹಾಯಕ (ಎಫ್‌ಡಿಎ) ಹುದ್ದೆಗಳ ಭರ್ತಿಗೆ ಸಂಬಂಧಿಸಿದಂತೆ ಸೆ. 9ರಂದು ಪ್ರಕಟಿಸಿರುವ ಅರ್ಹತಾ ಪಟ್ಟಿಯಲ್ಲಿ ಒಂದೇ ಸಮುದಾಯಕ್ಕೆ ಸೇರಿದ 70 ಮಂದಿ ಆಯ್ಕೆಯಾಗಿದ್ದಾರೆ ಎಂಬ ಅಂಶ ಆಧಾರ ರಹಿತವಾಗಿದೆ’ ಎಂದು ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ತಿಳಿಸಿದೆ.

ಈ ಬಗ್ಗೆ ಸ್ಪಷ್ಟನೆ ನೀಡಿರುವ ಕೆಪಿಎಸ್‌ಸಿ ಕಾರ್ಯದರ್ಶಿ ಜಿ. ಸತ್ಯವತಿ, ‘ಅರ್ಹತಾ ಪಟ್ಟಿಯಲ್ಲಿರುವ ಒಂದು ಸಮುದಾಯಕ್ಕೆ ಸೇರಿದ ಅಭ್ಯರ್ಥಿಗಳು ಒಂದೇ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ಬರೆದಿದ್ದಾರೆ ಎಂಬುದು ತಪ್ಪು. ಪಟ್ಟಿಯಲ್ಲಿರುವ ಎಲ್ಲ ಅಭ್ಯರ್ಥಿಗಳು ಪ್ರತ್ಯೇಕ ಕೇಂದ್ರಗಳಲ್ಲಿ ಪರೀಕ್ಷೆಗೆ ಹಾಜರಾಗಿದ್ದರು’ ಎಂದು ತಿಳಿಸಿದ್ದಾರೆ.

‘ಅಲ್ಲದೆ, ನಿಯಮಾನುಸಾರ ವಿವಿಧ ಮೀಸಲಾತಿ ಅಡಿ ಅರ್ಹತಾ ಪಟ್ಟಿಯಲ್ಲಿ ಆಯ್ಕೆ ಹೊಂದಿದ್ದಾರೆ. ಅಷ್ಟಕ್ಕೂ ಪ್ರಸ್ತುತ ಪ್ರಕಟವಾಗಿರುವುದು ಅರ್ಹತಾ ಪಟ್ಟಿಯಾಗಿದ್ದು, ಜೇಷ್ಠತಾ ಪಟ್ಟಿಯಲ್ಲ’ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತುಮಕೂರು ರಸ್ತೆ: ಸಂಚಾರ ಮಾರ್ಪಾಡು

ಬೆಂಗಳೂರು: ಬಿಬಿಎಂಪಿಯು ತುಮಕೂರು ರಸ್ತೆಯಲ್ಲಿ ಗೊರಗುಂಟೆ ಪಾಳ್ಯ ಮೆಟ್ರೊನಿಲ್ದಾಣದಿಂದ ಸ್ಯಾಂಡಲ್ ಸೋಪ್ ಫ್ಯಾಕ್ಟರಿ ಮೆಟ್ರೊ ನಿಲ್ದಾಣದವರೆಗೆ ವೈಟ್ ಟಾಪಿಂಗ್ ಕಾಮಗಾರಿಯನ್ನು ಇದೇ 15ರಿಂದ (ಬುಧವಾರ) ಆರಂಭಿಸಲಿದೆ.

‘1.9 ಕಿ.ಮೀ ಉದ್ದದ ರಸ್ತೆಯನ್ನು ವೈಟ್ ಟಾಪಿಂಗ್ ಮಾಡಲಾಗುತ್ತದೆ. ಈ ರಸ್ತೆಯು 15 ಮೀ ಅಗಲವಿದೆ. ಅರ್ಧ ರಸ್ತೆಯಲ್ಲಿ ಕಾಮಗಾರಿ ಪ್ರಾರಂಭಿಸಿ, ಇನ್ನುಳಿದ ಅರ್ಧ ಭಾಗದಲ್ಲಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗುವುದು’ ಎಂದು ಬಿಬಿಎಂಪಿಯ ಕಾರ್ಯಪಾಲಕ ಎಂಜಿನಿಯರ್ ಚಂದ್ರಶೇಖರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ವೈಟ್ ಟಾಪಿಂಗ್ ಕಾಮಗಾರಿಯು ಪೂರ್ಣಗೊಳ್ಳುವವರೆಗೂ ವಾಹನಗಳು ಇಲ್ಲಿನ ಪರ್ಯಾಯ ರಸ್ತೆಗಳಲ್ಲಿ ಸಂಚರಿಸಬಹುದು. ಕಾಮಗಾರಿಗೆ ಸಾರ್ವಜನಿಕರು ಸಹಕರಿಸಬೇಕು’ ಎಂದು ಕೋರಿದ್ದಾರೆ.

27ಕ್ಕೆ ಕೈಗಾರಿಕಾ ಅದಾಲತ್

ಬೆಂಗಳೂರು: ರಾಜ್ಯದ ಕೈಗಾರಿಕಾ ಉದ್ದಿಮೆದಾರರ ಕುಂದು ಕೊರತೆಗಳನ್ನು ಆಲಿಸಲು ಹಾಗೂ ಅವರು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸುವ ಸಲುವಾಗಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯು ಇದೇ 27ರಂದು ಕೈಗಾರಿಕಾ ಅದಾಲತ್ ಆಯೋಜಿಸಿದೆ.

ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಲಿದೆ. ಎಲ್ಲಾ ಜಿಲ್ಲೆಯ ಕೈಗಾರಿಕಾ ಉದ್ದಿಮೆದಾರರು ತಾವು ಎದುರಿಸುತ್ತಿರುವ ಸಮಸ್ಯೆಗಳ ಕುರಿತ ಮಾಹಿತಿಯನ್ನು ಇದೇ 22ರೊಳಗೆ ಸಲ್ಲಿಸಬೇಕು.

‘ಹೆಚ್ಚಿನ ಮಾಹಿತಿಗಾಗಿ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಬೆಂಗಳೂರು ನಗರ ಜಿಲ್ಲೆ, 1ನೇ ಮಹಡಿ, ಜಿಟಿಟಿಸಿ ಹತ್ತಿರ, ರಾಜಾಜಿನಗರ ಕೈಗಾರಿಕಾ ವಸಾಹತು ಸಂಪರ್ಕಿಸಬಹುದು. ಅರ್ಜಿಯನ್ನೂ ಇಲ್ಲಿ ಪಡೆಯಬಹುದು’ ಎಂದು ಪ್ರಕಟಣೆ ತಿಳಿಸಿದೆ.

ಕನ್ನಡ ಸಂಘದ ಪ್ರಶಸ್ತಿಗೆ ಆಯ್ಕೆ

ನಾರಾಯಣ ಭಟ್

ಎಸ್‌.ಆರ್‌.ಅರುಣ ಕುಮಾರ್

ಮೂಡುಬಿದಿರೆ: ಕಾಂತಾವರ ಕನ್ನಡ ಸಂಘದ ‘ಶ್ರೇಷ್ಠ ಶಿಕ್ಷಕ ಸೌರಭ’ ಪ್ರಶಸ್ತಿಗೆ ನಿವೃತ್ತ ಶಿಕ್ಷಕ ಟಿ.ನಾರಾಯಣ ಭಟ್ ರಾಮಕುಂಜ ಹಾಗೂ ‘ಮಹೋಪಾಧ್ಯಾಯ ಜಾನಪದ ಸಾಹಿತ್ಯ ಪ್ರಶಸ್ತಿ'ಗೆ ಜಾನಪದ ತಜ್ಞ ಡಾ.ಎಸ್.ಆರ್.ಅರುಣ ಕುಮಾರ್ ಆಯ್ಕೆಯಾಗಿದ್ದಾರೆ.

ಡಾ.ನಾ. ಮೊಗಸಾಲೆ ಅಧ್ಯಕ್ಷತೆಯಲ್ಲಿ ಸೋಮವಾರ ನಡೆದ ಸಭೆಯಲ್ಲಿ 2021ನೇ ಸಾಲಿನ ಪ್ರಶಸ್ತಿಗಳನ್ನು ಘೋಷಿಸಲಾಯಿತು. ಪ್ರಶಸ್ತಿ ತಲಾ ₹10 ಸಾವಿರ ಗೌರವ ಸಂಭಾವನೆ, ತಾಮ್ರಪತ್ರ ಮತ್ತು ಸನ್ಮಾನ ಒಳಗೊಂಡಿದೆ.

ಅಕ್ರಮ ವಾಸ; ಕಾಂಗೊ ಪ್ರಜೆಗಳ ಬಂಧನ

ಬೆಂಗಳೂರು: ನಗರದಲ್ಲಿ ಅಕ್ರಮವಾಗಿ ನೆಲೆಸಿದ್ದ ಕಾಂಗೊ ಪ್ರಜೆಗಳಿಬ್ಬರನ್ನು ಬಾಣಸವಾಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ವಿದ್ಯಾಭ್ಯಾಸ ವೀಸಾದಡಿ ಡಿಡಿಯಾರ್ (26) ಹಾಗೂ ಬೊಹಾಕ್ವೈರ್ (21) ಎಂಬುವರು ನಗರಕ್ಕೆ ಬಂದಿದ್ದರು. ವೀಸಾ ಅವಧಿ ಮುಗಿದರೂ ಸ್ವದೇಶಕ್ಕೆ ಮರಳಿರಲಿಲ್ಲ. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಅವರಿಬ್ಬರನ್ನು ಬಂಧಿಸಿ, ನೆಲಮಂಗಲದಲ್ಲಿರುವ ವಿದೇಶಿಯರ ಪುನರ್ವಸತಿ ಕೇಂದ್ರದಲ್ಲಿ ಇರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ನಗರದಲ್ಲಿ ಅಕ್ರಮವಾಗಿ ನೆಲೆಸಿರುವ ಕೆಲ ವಿದೇಶಿಯರು, ಡ್ರಗ್ಸ್ ಮಾರಾಟ ಹಾಗೂ ಇತರ ಅಪರಾಧ ಕೃತ್ಯಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ. ಅಂಥವರ ಬಗ್ಗೆ ಮಾಹಿತಿ ಕಲೆಹಾಕಲಾಗುತ್ತಿದೆ. ಅಕ್ರಮವಾಗಿ ನೆಲೆಸಿರುವವರ ವಿರುದ್ಧ ವಿದೇಶಿ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ಕ್ರಮ ಕೈಗೊಳ್ಳಲಾಗುತ್ತಿದೆ’ ಎಂದೂ ತಿಳಿಸಿವೆ.

ಪ್ರಥಮ ಪುಣ್ಯ ಸ್ಮರಣೆ

ದಿನಾಂಕ: 15.9.2021

ಮರೆಯಲಾಗದ ಮಹಾನ್ ಚೇತನಕ್ಕೆ ಹೃದಯ ಪೂರ್ಣ ನಮನ

ಶ್ರೀ ಕೆ. ರಾಮಚಂದ್ರ (ಚಲ್ಲಘಟ್ಟ)

ಜನನ: 01/06/1942 – ನಿಧನ: 15/09/2020

ಧರ್ಮದರ್ಶಿಗಳು : ಶ್ರೀ ಅಂಕಾಳಮ್ಮ ಆದಿಭೈರವ ದೇವಸ್ಥಾನದ ಟ್ರಸ್ಟ್ (ರಿ).

ಚೆನ್ನರಾಯನಹಳ್ಳಿ (ತಲಾರೋಳ್ಳಪಲ್ಲಿ), ಮುಂಗಾನಹಳ್ಳಿ ಹೋ॥, ಚಿಂತಾಮಣಿ ತಾ॥, ಚಿಕ್ಕಬಳ್ಳಾಪುರ ಜಿ॥, ಕರ್ನಾಟಕ.

ನೀವು ನಮ್ಮನ್ನಗಲಿ ಒಂದು ವರ್ಷವಾಯಿತು. ನಿಮ್ಮ ಆದರ್ಶಮಯ ಜೀವನ ನಮಗೆ ದಾರಿದೀಪ ನಿಮ್ಮ ನೆನಪು ಅವಿಸ್ಮರಣೀಯ.

:ಇಂತಿ ದುಃಖ ತಪ್ತರು:

ಧರ್ಮಪತ್ನಿ, ಶ್ರೀಮತಿ ಜಾನಕಮ್ಮನವರು, ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.

GOVERNEMNT OF INDIA
MINISTRY OF MINORITY AFFAIRS

सत्यमेव जयते

ANNOUNCEMENT OF SCHOLARSHIP: 2021-22
(Pre-Matric, Post-Matric and Merit-Cum-Means)

Ministry of Minority Affairs (MoMA) provides an opportunity to the students belonging to six Minority Communities notified by the Government of India (Jain, Buddhist, Sikh, Zoroastrian (Parsis), Muslim and Christian) for availing scholarships under three scholarship schemes viz. Pre-Matric, Post-Matric and Merit-Cum-Means based scholarship for the year 2021-22 **“The Directorate of Minorities, Department of Minority Welfare, Government of Karnataka invites applications for above scholarships, given by the Ministry of Minority Affairs, Government of India for the above schemes”.**

Timeline

Timeline	Last date for submission of online applications for fresh scholarship (first time applicant) and Renewal scholarship (applicant who has got scholarship under NSP during 2020-21) by students	Pre-Matric Scholarship	15th November 2021
		I. Post-Matric Scholarship & ii. Merit-Cum-Means based scholarship	30th November 2021

Eligibility

- The applicant should be the student of the notified minority communities (Jain, Buddhist, Sikh, Zoroastrian (Parsis), Muslim and Christian).
- The applicant should be pursuing studies in India in Government or recognized Private University/Institute/College/School.
- The course being pursued should be of minimum one year duration.
- The applicant should have secured 50% marks in the last annual Board/Class examination.

Instructions

For Applicants:

- Applicants are advised to apply online against any one of the scholarship schemes on the website of National Scholarship Portal at: www.scholarships.gov.in (a link to the site is also available at www.minorityaffairs.gov.in) or Mobile App –National Scholarships (NSP).
- Detailed 'instructions' for filling in online application and Frequently Asked Questions (FAQs)' are available on the National Scholarship Portal home page.
- Applicant is advised to give only that bank account details which remains in active mode or compliant as per bank's instructions so that payment of scholarship does not fail.

For Universities/Institutes/Colleges/Schools:

- All Universities/Institutes/Colleges/Schools, where a minority student is studying, should get themselves registered (if not done earlier) on National Scholarship Portal.

Note

- Applying for scholarship under National Scholarship Portal (NSP)(Ministry of Minority Affairs, GoI) is must for applying under State Scholarship Portal (SSP) - Karnataka, because NSP ID is required for applying under SSP.
- Only those students who are not covered in NSP will be covered under SSP.
- Date of commencement of the State Scholarship under State Scholarship Portal (SSP)for the year 2021-22 will be announced later.

For more detailed information:

- Visit the website: www.minorityaffairs.gov.in or https://dom.karnataka.gov.in
- Samadhaan Helpline (Toll Free)-1800-11-2001(Timing: **9:00 A.M. to 5:30 P.M. Monday to Friday,** except holidays)
- Minority Welfare Department, Karnataka - Helpline – 8277799990 (24/7)

ಸಿಸಿಬಿ ದಾಳಿ: ₹ 30 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ವ್ಯವಸ್ಥಿತ ಜಾಲ ರೂಪಿಸಿಕೊಂಡು ಡ್ರಗ್ಸ್ ಮಾರುತ್ತಿದ್ದ ಆರೋಪದಡಿ ಮೂವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.



ಆರೋಪಿಗಳಿಂದ ಜಪ್ತಿ ಮಾಡಲಾದ ಎಕ್ಸ್‌ಟೆಸ್ಸಿ ಮಾತ್ರೆಗಳು

'ಕೇರಳದ ನಿವಾಸಿಯಾದ ಆರೋಪಿ, ನೈಜೀರಿಯಾದ ಇಬ್ಬರು ಪ್ರಜೆಗಳ ಜೊತೆ ಸೇರಿ ಡ್ರಗ್ಸ್ ದಂಧೆ ನಡೆಸುತ್ತಿದ್ದ. ಇದೀಗ ಮೂವರನ್ನು ಬಂಧಿಸಲಾಗಿದೆ. ಅವರಿಂದ ₹ 30 ಲಕ್ಷ ಮೌಲ್ಯದ ಮಾದಕ ವಸ್ತು ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಕೆಲ ಕಾಲೇಜು ವಿದ್ಯಾರ್ಥಿಗಳು ಹಾಗೂ ಕೆಲ ಕಂಪನಿಗಳ ಉದ್ಯೋಗಿಗಳಿಗೆ ಆರೋಪಿಗಳು ಡ್ರಗ್ಸ್ ಮಾರುತ್ತಿದ್ದರು. ಕೊಡಿಗೇಹಳ್ಳಿ ಬಳಿ ಸೋಮವಾರ ಕಾಣಿಸಿಕೊಂಡಿದ್ದ ಆರೋಪಿಗಳು, ಡ್ರಗ್ಸ್ ಮಾರಲು ಯತ್ನಿಸುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ನಡೆಸಿ ಅವರನ್ನು ಸೆರೆಹಿಡಿಯಲಾಯಿತು' ಎಂದು ತಿಳಿಸಿದರು.

'210 ಗ್ರಾಂ ತೂಕದ 500 ಎಕ್ಸ್‌ಟೆಸ್ಸಿ ಮಾತ್ರೆಗಳು ಹಾಗೂ ಆರು ಮೊಬೈಲ್‌ಗಳನ್ನು ಆರೋಪಿಗಳಿಂದ ಜಪ್ತಿ ಮಾಡಲಾಗಿದೆ. ಈ ಬಗ್ಗೆ ಎನ್‌ಡಿಪಿಎಸ್ ಕಾಯ್ದೆಯಡಿ ಕೊಡಿಗೇಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದೂ ಹೇಳಿದರು.

'ಅಜಂತ ಟ್ರಿನಿಟಿ ಇನ್'ನ ಇಬ್ಬರು ಕೆಲಸಗಾರರಿಗೆ ಗಾಯ

ಹೋಟೆಲ್‌ನಲ್ಲಿ ಬೆಂಕಿ ಅವಘಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಟ್ರಿನಿಟಿ ವೃತ್ತದಲ್ಲಿರುವ 'ಅಜಂತ ಟ್ರಿನಿಟಿ ಇನ್' ಹೋಟೆಲ್‌ನಲ್ಲಿ ಸೋಮವಾರ ರಾತ್ರಿ ಬೆಂಕಿ ಅವಘಡ ಸಂಭವಿಸಿದ್ದು, ಇಬ್ಬರು ಕೆಲಸಗಾರರು ಗಾಯಗೊಂಡಿದ್ದಾರೆ. ಆಟೊ ಹಾಗೂ ಬೊಲೆರೊ ಜೀಪು ಭಾಗಶಃ ಸುಟ್ಟಿವೆ.

ಮೂರು ಅಂತಸ್ತುಗಳ ಹಳೇ ಕಟ್ಟಡದಲ್ಲಿ ಹೋಟೆಲ್ ಇದ್ದು, ಇದರಲ್ಲಿ 96 ಕೊಠಡಿಗಳಿವೆ. ನೆಲಮಹಡಿಯಲ್ಲಿ ವಾಣಿಜ್ಯ ಮಳಿಗೆಗಳನ್ನು ತೆರೆಯಲಾಗಿದೆ. ಇದೇ ಸ್ಥಳದಲ್ಲಿ ವಾಹನಗಳ ಪಾರ್ಕಿಂಗ್ ಜಾಗವಿದ್ದು, ಅಲ್ಲಿಯೇ ಜೀಪು ಹಾಗೂ ಆಟೊ ನಿಲ್ಲಿಸಲಾಗಿತ್ತು.

'ಸೋಮವಾರ ರಾತ್ರಿ 10.30ರ ಸುಮಾರಿಗೆ ನೆಲಮಹಡಿಯಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಬೊಲೆರೊ ಜೀಪು ಹಾಗೂ ಆಟೊಗೆ ಬೆಂಕಿ ಹೊತ್ತಿಕೊಂಡಿತ್ತು. ಕೆಲ ನಿಮಿಷಗಳಲ್ಲಿ ಮೊದಲ ಮಹಡಿಯಲ್ಲಿ ಬೆಂಕಿ ಕಾಣಿಸಿಕೊಂಡು, ಎರಡನೇ ಹಾಗೂ ಮೂರನೇ ಮಹಡಿಗಳಲ್ಲಿ ಹೊಗೆ ಆವರಿಸಿತ್ತು' ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದರು.

'ಸ್ಥಳಕ್ಕೆ ಬಂದ ದಕ್ಷಿಣ ಅಗ್ನಿಶಾಮಕ ಠಾಣೆ ಸಿಬ್ಬಂದಿ, ಎರಡು ಗಂಟೆ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದರು. ಗಾಯಗೊಂಡಿದ್ದ ಇಬ್ಬರನ್ನು ಆಂಬುಲೆನ್ಸ್‌ನಲ್ಲಿ ಬೌರಿಂಗ್ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಐವರನ್ನು ರಕ್ಷಿಸಲಾಯಿತು' ಎಂದೂ ತಿಳಿಸಿದರು.


ಬೆಂಕಿ ಅವಘಡದಲ್ಲಿ ಸುಟ್ಟಿರುವ ಬೊಲೆರೊ ಜೀಪು

ಎರಡು ಕೊಠಡಿ ಮಾತ್ರ ಬುಕ್ಕಿಂಗ್: ಹಳೇ ಕಟ್ಟಡವಾಗಿದ್ದರಿಂದ ಹೆಚ್ಚು ಗ್ರಾಹಕರು ಹೋಟೆಲ್‌ಗೆ ಬರುತ್ತಿರಲಿಲ್ಲ. ಸೋಮವಾರ ಎರಡು ಕೊಠಡಿಗಳನ್ನು ಮಾತ್ರ ಕಾಯ್ದಿರಿಸಲಾಗಿತ್ತು. ಕೆಲಸಗಾರರು ಸೇರಿ ಏಳು ಮಂದಿ ಹೋಟೆಲ್‌ನಲ್ಲಿ ಸಿಲುಕಿಕೊಂಡಿದ್ದರು.

'ದಟ್ಟ ಹೊಗೆ ಹಬ್ಬಿದ್ದರಿಂದ ಉಸಿರಾಡಲು ಸಾಧ್ಯವಾಗಿರಲಿಲ್ಲ. ಇಬ್ಬರು ಕೆಲಸಗಾರರು, ಕಿಟಕಿ ಗಾಜು ಒಡೆಯಲು ಯತ್ನಿಸಿ ಗಾಯಗೊಂಡಿದ್ದರು. ಅಭಿಷೇಕ್, ದಿನೇಶ್, ಸತ್ಯಪ್ರಕಾಶ್, ಮಹೇಂದ್ರ ಸೇರಿದಂತೆ ಏಳು ಮಂದಿಯನ್ನು ರಕ್ಷಿಸಲಾಗಿದ್ದು, ಅವರೆಲ್ಲರೂ ಸುರಕ್ಷಿತವಾಗಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ನೆಲಮಹಡಿ, ಮೊದಲ ಹಾಗೂ ಎರಡನೇ ಮಹಡಿಯಲ್ಲಿದ್ದ ಪೀಠೋಪಕರಣಗಳು ಸಂಪೂರ್ಣ ಸುಟ್ಟಿವೆ. ಲಕ್ಷಾಂತರ ರೂಪಾಯಿ ಹಾನಿಯಾಗಿದೆ. ಮಾಲೀಕರಿಂದ ಮಾಹಿತಿ ಪಡೆದು ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ವಿದ್ಯುತ್ ಶಾರ್ಟ್ ಸರ್ಕೀಟ್‌ನಿಂದಾಗಿ, ಬೊಲೆರೊ ಜೀಪಿನಲ್ಲಿ ಮೊದಲಿಗೆ ಬೆಂಕಿ ಕಾಣಿಸಿಕೊಂಡಿರುವ ಶಂಕೆ ಇದೆ' ಎಂದೂ ತಿಳಿಸಿವೆ.

'ತನಿಖೆಯಿಂದ ನಿಖರ ಕಾರಣ'

'ಬೆಂಕಿ ಅವಘಡದ ಮಾಹಿತಿ ಬರುತ್ತಿದ್ದಂತೆಯೇ ಸ್ಥಳಕ್ಕೆ ಹೋಗಿ ಕಾರ್ಯಾಚರಣೆ ನಡೆಸಿದೆವು. ಅದೃಷ್ಟವಶಾತ್ ಯಾವುದೇ ಪ್ರಾಣ ಹಾನಿ ಸಂಭವಿಸಿಲ್ಲ. ಬೆಂಕಿ ಹೊತ್ತಿಕೊಳ್ಳಲು ಕಾರಣವೇನು ಎಂಬುದು ತನಿಖೆಯಿಂದ ತಿಳಿಯಬೇಕಿದೆ' ಎಂದು ಅಗ್ನಿಶಾಮಕ ದಳದ ಜಿಲ್ಲಾ ಅಧಿಕಾರಿ (ಬೆಂಗಳೂರು ದಕ್ಷಿಣ) ಕೆ. ಹೇಮಂತ್ ಕುಮಾರ್ 'ಪ್ರಜಾವಾಣಿ'ಗೆ ಹೇಳಿದರು.

ಡ್ರಗ್ಸ್ ಮಾರುತ್ತಿದ್ದ 'ಪೊಲೀಸ್ ಮಾಹಿತಿದಾರ'ನ ಬಂಧನ

ಬೆಂಗಳೂರು: 'ಪೊಲೀಸ್ ಮಾಹಿತಿದಾರ' ಎಂದು ಹೇಳಿಕೊಂಡು ತನ್ನದೇ ಜಾಲದ ಮೂಲಕ ಡ್ರಗ್ಸ್ ಮಾರುತ್ತಿದ್ದ ಆರೋಪದಡಿ ರವಿ ಎಂಬಾತನನ್ನು ಕೆ.ಜಿ.ಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ನಿವಾಸಿ ರವಿ, ಡ್ರಗ್ಸ್ ಮಾರಾಟದಲ್ಲಿ ತೊಡಗಿದ್ದ ಮಾಹಿತಿ ಬಂದಿತ್ತು. ಆತನ ಮೇಲೆ ಕಣ್ಣಿಟ್ಟು ಬಂಧಿಸಲಾಗಿದೆ. ₹ 5 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು. 'ಕೆಲ ಪೊಲೀಸರ ಜೊತೆ ಒಡನಾಟ ಹೊಂದಿದ್ದ ಆರೋಪಿ ರವಿ, ಅಪರಾಧ ಕೃತ್ಯಗಳ ಬಗ್ಗೆ ಆಗಾಗ ಮಾಹಿತಿ ನೀಡುತ್ತಿದ್ದ. ತನಗೆ ಪೊಲೀಸರು ಪರಿಚಯವೆಂದು ಹೇಳಿಕೊಂಡು ಓಡಾಡುತ್ತಿದ್ದ ಆರೋಪಿ, ಡ್ರಗ್ಸ್ ಮಾರಾಟಕ್ಕೆ ಇಳಿದಿದ್ದ' ಎಂದೂ ತಿಳಿಸಿದರು. ಇತ್ತೀಚೆಗಷ್ಟೇ ಕಾಮಾಕ್ಷಿಪಾಳ್ಯ ಠಾಣೆ ವ್ಯಾಪ್ತಿಯಲ್ಲೂ ಪೊಲೀಸ್ ಮಾಹಿತಿದಾರ ರತನ್ ಲಾಲ್ ಎಂಬಾತನನ್ನು ಬಂಧಿಸಲಾಗಿತ್ತು.

18 ಕೆ.ಜಿ ಗಾಂಜಾ ಜಪ್ತಿ: ಜ್ಞಾನಭಾರತಿ ಠಾಣೆ ವ್ಯಾಪ್ತಿಯಲ್ಲಿ ಗಾಂಜಾ ಮಾರುತ್ತಿದ್ದ ಆರೋಪದಡಿ ಮೂವರನ್ನು ಪೊಲೀಸರು ಬಂಧಿಸಿದ್ದು, ಅವರಿಂದ 18 ಕೆ.ಜಿ ಗಾಂಜಾ ಜಪ್ತಿ ಮಾಡಿದ್ದಾರೆ. 'ಮುಸ್ತಫಾ, ಮಾರಪ್ಪ ಹಾಗೂ ರಾಜಬಾಬು ಬಂಧಿತರು. ಹಲವು ವರ್ಷಗಳಿಂದ ಪರಿಚಯಸ್ಥರಾಗಿದ್ದ ಆರೋಪಿಗಳು, ತಮ್ಮದೇ ಜಾಲ ಸೃಷ್ಟಿಸಿಕೊಂಡು ಗಾಂಜಾ ಮಾರುತ್ತಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಠಾಣೆ ವ್ಯಾಪ್ತಿಯಲ್ಲಿ ಸೆ. 1ರಂದು ಗಾಂಜಾ ಮಾರಲು ಬಂದಿದ್ದ ಇಬ್ಬರು ಆರೋಪಿಗಳು, ಗಸ್ತು ಸಿಬ್ಬಂದಿ ಕೈಗೆ ಸಿಕ್ಕಿಬಿದ್ದರು. ಅವರ ಬಳಿ 2 ಕೆ.ಜಿ 500 ಗ್ರಾಂ ಗಾಂಜಾ ಸಿಕ್ಕಿತ್ತು. ಅವರಿಬ್ಬರು ನೀಡಿದ್ದ ಮಾಹಿತಿ ಆಧರಿಸಿ ಮತ್ತೊಬ್ಬನ್ನು ಇತ್ತೀಚೆಗೆ ಬಂಧಿಸಲಾಗಿದೆ. ಹೊರರಾಜ್ಯದಿಂದ ಗಾಂಜಾ ತರುತ್ತಿದ್ದ ಆರೋಪಿಗಳು, ಕೆಲ ಕಾಲೇಜು ವಿದ್ಯಾರ್ಥಿಗಳು, ಕೆಲ ಖಾಸಗಿ ಕಂಪನಿ ಉದ್ಯೋಗಿಗಳು ಹಾಗೂ ಕೆಲ ಕೂಲಿ ಕಾರ್ಮಿಕರಿಗೆ ಮಾರುತ್ತಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ' ಎಂದೂ ಮೂಲಗಳು ತಿಳಿಸಿವೆ.

ಪ್ರಶಸ್ತಿ ಪುರಸ್ಕೃತ ತಂಡದ ವಿದ್ಯಾರ್ಥಿಗಳಾದ ಎಸ್. ಶ್ವೇತಶ್ರೀ, ವಿ.ವಿದ್ಯಾಶ್ರೀ ಹಾಗೂ ಸಿ.ಕೆ.ಅಮೃತ,ರಾಹುಲ್ ಎಸ್.ಮಹೇಂದ್ರಕರ್, ಎನ್.ಜೈನ್ ಅಹ್ಮದ್, ನಿತೀಶ್ ಸೃಜನ್ ಅವರೊಂದಿಗೆ ಸಿಎಂಆರ್ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಸಂಜಯ್ ಜೈನ್ ಇದ್ದಾರೆ

ಸಿಎಂಆರ್ ಮಹಾವಿದ್ಯಾಲಯಕ್ಕೆ 'ರಾಷ್ಟ್ರೀಯ ಚಾತ್ರ ವಿಶ್ವಕರ್ಮ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಎಂಆರ್ ತಾಂತ್ರಿಕ ಮಹಾವಿದ್ಯಾಲಯವು 'ಆತ್ಮ ನಿರ್ಭರ ಭಾರತ' ಮಿಷನ್‌ನ ಸಣ್ಣ ಮತ್ತು ಮಧ್ಯಮ ಉದ್ಯಮಶೀಲತೆ ಆವಿಷ್ಕಾರ ವಿಭಾಗದಲ್ಲಿ ನೀಡಲಾಗುವ 2020ನೇ ಸಾಲಿನ 'ಎಐಸಿಟಿಇ ರಾಷ್ಟ್ರೀಯ ಚಾತ್ರ ವಿಶ್ವಕರ್ಮ ಪ್ರಶಸ್ತಿಯನ್ನು ಪಡೆದಿದೆ.

ಎಂಜಿನಿಯರಿಂಗ್ ವಿಭಾಗದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ಯಮಶೀಲತೆ ಕೋಶದ ವಿದ್ಯಾರ್ಥಿಗಳು ಅಭಿವೃದ್ಧಿಪಡಿಸಿದ್ದ 'ಯು.ವಿ.ಸ್ಯಾನಿಟೈಸೇಷನ್ ಚೇಂಬರ್'ಗೆ ಈ ಪುರಸ್ಕಾರ ಲಭಿಸಿದೆ.

ಪ್ರಾಧ್ಯಾಪಕರಾದ ಫಣಿ ಕುಮಾರ್ ಪುಲ್ಲೇಲಾ, ಕೋದಂಡಪಾಣಿ, ಶ್ರೀನಿವಾಸ ರೆಡ್ಡಿ, ಆರ್.ಎಸ್. ಚಿದಾನಂದ ಅವರ ಮಾರ್ಗದರ್ಶನದಲ್ಲಿ ಸಿಎಸ್‌ಇ, ಸಿವಿಲ್ ಮತ್ತು ಮೆಕ್ಯಾನಿಕಲ್ ವಿಭಾಗದ ವಿದ್ಯಾರ್ಥಿಗಳು ಈ ಚೇಂಬರ್ ಸಿದ್ಧಪಡಿಸಿದ್ದರು.

'ಯು.ವಿ.ಸ್ಯಾನಿಟೈಸೇಷನ್ ಚೇಂಬರ್, ಕೊರೊನಾ ವೈರಾಣು ನಾಶಕ್ಕೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತದೆ. ನೋಟುಗಳು, ಪರ್ಸ್ ಸೇರಿದಂತೆ ಇತರೆ ಗೃಹೋಪಯೋಗಿ ವಸ್ತುಗಳನ್ನು ವೈರಾಣುವಿನಿಂದ ರಕ್ಷಿಸಲು ಇದು ಸಹಕಾರಿ' ಎಂದು ಪ್ರಕಟಣೆ ತಿಳಿಸಿದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

MORNING STAR School, Ramachandra Puram, (Rajajinagar Entrance), Requires B.A/M.A, BED (Hindi), B.Sc/ M.Sc, B.Ed, (Mathematics, Science) Lady Teachers, Contact: 9845018480

II Jai Sri Gurudev II
Sri Adichunchanagiri Shikshana Trust®
SJB INSTITUTE OF TECHNOLOGY
(A Constituent of SJB & BGS Group of Institutions and Hospitals)
WE ARE HIRING
The Institute invites candidates for all its branches with Ph.D qualification (AICTE APH norms - 2021) for all the positions: (Both UG & PG Programmes),
Professor in CSE / ISE
Associate Professor in CSE / ISE / CIVIL / MBA / MATHS
Assistant Professor in CSE / ECE / EEE / ENGLISH
Placement officer in HRD
Interested candidates may submit the applications along with Bio-data, recent pass-port size photograph and relevant certificates / credentials via email only to principalsr@sjbit.edu.in on or before 25.09.2021. Please submit your portfolio regarding your work experience / work outcome / unique skills.
www.sjbit.edu.in

SESHADRIPURAM INSTITUTIONS
27, Nagappa Street, Seshadripuram Bengaluru-560 020. Phone: 22955350
Website: www.set.edu.in E-mail : info@set.edu.in
Invites applications for the following posts
for Seshadripuram Pre-University College Tumakuru
LECTURERS
for the following subjects
• English • Physics • Chemistry
• Physical Education Instructor
Eligibility: Master's Degree in the relevant subject with atleast 55% marks in the aggregate and minimum two years teaching experience.
COMPUTER PROGRAMMER
BCA / 3 years Diploma in Computer Science / B. Sc Computer Science / PGDCA with at least 2 years experience
Walk-in-Interview on Tuesday, 21st September 2021 at 9.30 a. m.
Venue: Seshadripuram Pre-University College Campus, 'Chaitanya Bharathi', 5, Melekote, Veerasagara Layout, Gangasandra Road, Tumakuru-572 105.
Eligible candidates should bring handwritten application along with their Resume, recent photograph and copies of testimonials at the time of Interview.
N. R. Pandith Aradhya, President — Dr. Wooday P. Krishna, Hon. General Secretary

SESHADRIPURAM INSTITUTIONS
27, Nagappa Street, Seshadripuram Bengaluru-560 020. Phone: 22955350
Website: www.set.edu.in E-mail : info@set.edu.in
Invites applications for the following posts at Seshadripuram Law College, Bengaluru
ASSOCIATE PROFESSOR
Eligibility: Dynamic and result-oriented candidates with Master's Degree in Law with atleast 55% marks in the aggregate and Ph. D. in the relevant discipline.
Minimum 8 years of teaching experience as an Assistant Professor in a reputed institution.
ASSISTANT PROFESSOR
Eligibility: Dynamic and result-oriented candidates with Master's Degree in Law with atleast 55% marks in the aggregate
Eligible candidates may apply in handwritten application along with their resume, recent photograph and copies of testimonials etc., to the Hon. General Secretary within 10 days.
N. R. Pandith Aradhya, President — Dr. Wooday P. Krishna, Hon. General Secretary

Sri Srinivasa Educational & Charitable Trust®
SAPTHAGIRI COLLEGE OF ENGINEERING
(Affiliated to Visvesvaraya Technological University, Belagavi & Approved by AICTE, New Delhi.)
(Accredited by NAAC with "A" Grade)
(ISO 9001 – 2015 & ISO14001 – 2015 Certified Institute)
14/5, Chikkasandra, Hesaraghatta Main Road, Bengaluru – 560057 Ph : 080 – 28372800
Applications are invited from candidates for the selection of
PROFESSORS , ASSOCIATE PROFESSORS & ASSISTANT PROFESSOR in the Department of
❖ Electronics & Communication ❖ Computer Science ❖ Information Science ❖ Bio-Technology ❖ Mathematics ❖ Physics ❖ Clerical Post
of Sapthagiri College of Engineering , Bengaluru, Qualification, experience & pay scale are as prescribed by the AICTE. Preference will be given to candidates having Ph.D
The Interested candidates should send the resume along with Degree certificates to the email id : careers@sapthagiri.edu.in or hard copy through post to The Principal, Sapthagiri College of Engineering, No 14/5, Chikkasandra, Hesaraghatta Main Road, Bengaluru-560057 on or before 10 days from the date of Advertisement
www.sapthagiri.edu.in Principal

DIAMOND COLLEGE, TC-Palya,KR Puram. Required LECTURERS for Commerce and Computer. Contact: 8095058006 Mail: agnrdiamondcollege@gmail.com.

WANTED ENGLISH, Hindi, Science, Maths TEACHERS (Higher-Primary) 'SRI-VIDYA KENDRA' Peenya, Bangalore-58 Contact: 9900708182, 28398833, 41179155

V.E.S. MODEL CONVENT
Affiliated to CISCE, New Delhi KA 212
No. 63, Magadi Main Road, Tavarekere, Bangalore South – 562 130. Ph. 080-28434407/ 29772305
Email : vesmodelconvent@gmail.com | www.ves.org.in
3 Decade old signature school
VES born to teach, inspire & influence
Required experienced, young and dynamic teachers for a reputed ICSE School for all the classes.
♦ English
♦ Mathematics
♦ Physical Education
Interested candidates can contact school office for demo class appointment.
Contact: 82961 94095 / 82961 85175
Note – Selected candidates can avail transportation facilities.

VIDYA SOUDHA PU COLLEGE
An Integrated PU College (AN 840)
No.9/1, 1st Main, Peenya 1st Stage, Near Basaveshwara Bus Station, Bengaluru- 560 058
Phone: 8971566659 Website: www.vidyasoudha.edu.in
REQUIRES LECTURERS FOR I PUC & II PUC
❖ MATHEMATICS ❖ CHEMISTRY ❖ ACCOUNTANCY ❖ BIOLOGY
Qualification: Master degree with B.Ed.
Experience: Min. 5 years.
Experience in teaching IIT-JEE, NEET, CET is preferred.
Salaries and benefits will be on par with industry standards.
Interested Candidates can email their CV to
principal.vspublr@vidyasoudha.edu.in
on or before 20th September, 2021

WANTED TEACHER FOR IMMEDIATE Appointment Higher primary and High school to handle MATHS and SCIENCE Contact: St.Charles HIGH SCHOOL #1086, 1st Block, 3rd Stage,Adarshalayout WOC Road, Basaveshwaranagar, Bangalore:79. Phone: 080 23235220 9740677886

WANTED TEACHERS FOR IMMEDIATE APPOINTMENT, SUBJECTS: ENGLISH, CBZ, PHYSICS and MATHEMATICS. Contact: St.YASH PUBLIC SCHOOL. Phone: 7204347583/ 7204347584/ 9066242255

WANTED TEACHERS high school, All subjects. Contact: Carmel School Garvebhavipalya, Hosur Road, Bangalore. Phone: 9900872744.

WANTED EXPERIENCED Faculties to teach UPSC-IAS Subjects & Admins Send resume to: ceo@vxplore.co.in /9740191676 VXplore IAS Academy Kengeri Satellite Town Bangalore

SURYODAYA PU COLLEGE, Thirupalya, Bommasandra (Post), Near Electronicity. REQUIRES LECTURERS. Full-Time in Physics, Chemistry and Kannada Minimum Qualification: Post- Graduate with 1-5 years experience preferred. Contact:- 8296261228/ 7975796544. Email:- principal.suryodaya@gmail.com

INNOVATIVE INTERNATIONAL PUBLIC SCHOOL AND PU COLLEGE, Ramasandra, Kengeri Hobli, Bengaluru-60, Phone- 8904051343. REQUIRED: LECTURERS- English, Economics, Accountancy, Statistics, Business Studies (P.G with B.ED) PGT- English, Social, Science, Mathematics (P.G with B.ED) TGT-EVS, Mathematics (D.Ed/ B.Ed) Send your resume before 28.09.2021. iipschool2014@gmail.com

NEW INDIAN Public School, #12,15th Cross, Vijayanagar Pipeline,Near Kuvempu Circle, Bangalore-23. Ph: 9740398943, 9945488055- Invites applications from B.Sc.,B.Ed/M.Sc,B.Ed/ M.Sc Lady candidates to teach Maths & Science in English Medium. Attractive Salary based on qualification & experience.

Accounts & Finance

B.COM FRESHERS (Female) required for CA's office in Shankarapuram. Whatsapp you resume to 9845608707. Salary Rs. 7 K

Engg/ Production Technical

REPUTED INDUSTRY at Peenya Industrial Area requires 1-2 years experienced or more VMC OPERATORS:- 10 no's, VMC PROGRAMMERS: 4 no's, QUALITY INSPECTORS: 5 no's HELPERS: 5 no's, Good salary for desire candidates. Contact:- 9620218020

WE REQUIRE: 1.Senior Marketing Manager, 2.Account Assistant, 3.Engineers for Purchase & Quality (Preferably ITI/ Diploma Mechanical's) For our special Pumps-Manufacturing-Unit at Devarachikkanahalli, Bannergatta Road, Bangalore. Email: flowoilpumps@hotmail.com

EXPERIENCED ENGINEERS for Production and Quality - B.E./ Diploma (Mechanical). 'VINIMAC' 205A, Peenya 3rd phase, Bangalore-58 Phone: 080-28391959, admin@vinumac.com

General

ELECTRICIAN REQUIRED, Contact: Mitra Academy, ICSE SCHOOL, 7/1, 2nd Main, Arekere, Bengaluru-76. 9606064442/ 9606064000; Email: careers@mitraacademy.in

WANTED FOR Reputed Company, Graduates Age-30-70, Bangalore only, Earn: 30,000- 50,000. Contact: 9008305194/ 9880441530.

REQD HR-PROF for Bhavnagar Gujarat 7-15 Exp in Core HR for renowned Manufacturing Company Mail Cv Kanexhr@kanexfire.com

FULFILL YOUR dreams/ desires with a Corporate which looks for NRIs,Ex-Bankers, State/Central VRS,Unemployed Teachers Educated Housewives with flexible timings.Benefits: Fixed salary,flexible timings, PF+ESI, Unlimited Incentives.Call:8660526113.

REQUIRED TYPISTS, part time or full time, to an Advocate Office at PRABHAT Complex, K.G.Road, Bengaluru-09. Contact K.Jayaram, 9008951266/ 9164164284/ 08029603846.

WANTED FEMALE OFFICE ASSISTANT (age below 50 yrs), MALE SUPERVISOR at Indiranagar Petrol Bunk. Candidates near Indiranagar Call 9108993199/ 9738651162

INDIANOIL & ICICI associate need COMPUTER OPERATORS for Insurance services at Petrol Pumps in Bangalore. 9742149598.

Marketing & Sales

WANTED MARKETING Executives For Private Limited Company Bangalore, Age Below 40 Years with Good Communication Skill Fluent In English, Kannada, Hindi Contact: 9108458798/ 23384085

Multiple Vacancy

SURABHI Chits Ltd (Govt. Licensed Company)
We are one of the leading chit company having 10 branches in Bangalore city.
We are Hiring For :
1.Business Development Manager
2.Senior Marketing Manager
3.Marketing Manager
4.Marketing Executive
5.Collection Executive
Walk-in-Interview
From: 11 AM to 2 PM
Apply with Resume
e-Mail: surabhirtn2001@gmail.com
#396, 1st Floor, 1st Main, K.H.M. Block, Ganganagar, R T Nagar Post, Bangalore-32.
Mob: 9606149253 9535033101

WANTED EXPERIENCED 1. Advocate with strong knowledge in civil conveyance with legal Opinion, Minimum of 5years of Experience 2. Civil Engineers for Residential Layout projects 3. Accountant Minimum 5year Experience Equinox Global Shelters Office @ Yelahanaka New Town, Attractive salary 8217482988, egsadm159@gmail.com

WANTED BILLING&DISPATCH, Accounts, Security, Loadingand Unloading, Production Manager, Unskilled Labours for Gayathri Associates, Dodda Gubbi Main Road, Opp.to Gavi Gudi, Bangalore. Call: 9448488536/ 9844083318

GEF EYE HOSPITAL Hoskote, Wanted candidates having Knowledge of Computer with Qualification of PUC /Degree/ DCA. Wanted Drivers for Four Wheeler Salary Negotiable. Contact: 080-29700230, 9844789046

Part-Time Jobs

JOBS FOR-WOMEN (Reliance)Age above 30yrs (Degree) Fixed Salary 18k to 23k, PF+ESI Malleswaram: 9343349670

Wanted

LIMITED MNC COMPANY Lost Job, Provide Work From Home Earn 30K to35K: 7019215243/ 9886641282

WANTED A mature pleasant & pretty Female travelling companion for a senior male executive in Bangalore. Age less than 50 years, height not less than 160 cms. Excellent remuneration package for right candidate. Please forward details via WhatsApp to Gautam 8217347627.

Walk-in

LIFE INSURANCE- Walk-in Interviews Leading Life Insurance company is looking for Dynamic & Experienced Insurance professionals (Life/ Health) for Bangalore City, Salary + Incentive; Graduates 35 yrs below with required Experience call for details 7993856837. Only Male candidates respond.

WALK- IN- INTERVIEW Restart your career as Distribution Manager with Renowned Nationalised Bank. We are in the process of expansion in Bangalore. Structured 3 year income plan of Rs.15 to 25 lacs. p/a. Age 30 to 65 years 7828352747 / 9483757493

RENTAL PROPERTIES

Accommodation Available

Commercial

80,000-SQUARE FEET of Office Space For Software Companies. Available for Rent.Near Bommasandra Metro Station,Bangalore. Contact:- 9844016139.

INDIRA NAGAR OFFICE SPACE AVAILABLE 1200 sft Second Floor, Opp airtel office, First stage, Canara Bank Road. 9845680613

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

REAL ESTATE SELLING

Flat

Koramangala

FLAT RESALE 'N' facing, 2BHK with attached bathrooms, 1071SBUA, covered Car-parking, Adugodi signal, Koramangala. Call Verna Developers,MG Road. 9916310226/ 9945343051.

Mathikere

FULLY FURNISHED 2 bhk FLAT 1251 sq.ft. for immediate sale in Muthyalanagar Contact 9686973320

House

Koramangala

RENTAL INCOME 70,000/- per month, House for Sale, near Koramangala, Sarjapur Road, details, 8660514834, 9342410224.

BUSINESS

Business to Business

Finance

WE ARRANGE Housing, Purchase, Mortgage Loan for Commercial, Residential, Industrial Building & Sites for A Khata, B Khata, Gram Panchayat & 9/11 Khatas from Schedule Banks. Contact Jyothi 7019117364.

Business Offers

Finance

NRI'S INVESTMENT And Finance AvailableOn LowInterest AgainstProperties, Land& Building,Sites,Flats, Converted& AgricultureLandsCall: 7411265189

General

EARN REGULAR INCOME through online TRADING from your home. FOREX, EQUITY, COMMODITY, F & O. Get personal TRAINING from experts. Call: 8105303232

EDUCATIONAL

Admission

DIRECT FINAL/ REGULAR:Ph.D/ M.Phil/LL.B/ (3/5 Years)/ B.Tech/ Diploma/BAMS/BHMS/ NURSING/ B.Pharma/ D.Pharma/B.Sc (MLT/ Audiology/ Ophthalmology/ Orthopedics/ Renal Etc.) GOVT Recognised, Limited Seats, Join Immediately, Asha Institute,Bangalore: 9448460103

PERSONAL

Change of Name

14838254Y- SEP/MT- SALIBINDI VENKATA KRISHNA at ASC Records (South) Bangalore, changed my minor Son's name S PRASHANTH to SALIBINDI PRASHANTH notary KV Mani, Bangalore.

I, IFTHIKAR AHMED, residing at #1/33, 9th main, near Muzammil Masjid Govindapura, Bangalore-560045, have changed my name to SYED IFTHIQUARUDDIN vide affidavit dated 09.09.2021 before Notary Leela, Bangalore. Henceforth I shall be called SYED IFTHIQUARUDDIN only

I, SYED ZAINULABEDIN ALIAS FARHAN, S/o. Mukhtar Ahmed, aged 37 years, residing at No.177/2, 14th Main, 2nd Block, HBR Layout, Yaseen Nagar, Bangalore - 560043 have changed my name to SYED ZAINULABIDEEN vide affidavit dated 13/09/2021 before notary C. Sharada, Bengaluru-84

SEEMA KUMARI W/o 6497360W NK Deshraj Choudhary, Vill & Post Jatwara Laxmangarh Alwar, Rajasthan, my name SEEMA KUMARI to Seema, Notary KV Mani, Bangalore.

14815617L HAV/MT Rampravesh Chaurasia 539 ASC BN son name Records SUBHAM CHAURASIA instead of SHUBHAM CHAURASIA, Notary KV Mani, Bangalore.

PRAVALLIKA W/O 14838254Y- SEP/MT- SALIBINDI VENKATA KRISHNA R/a Konepalli, Pamidi Mandalam, Katrimala, Ananthapur, Andhra Pradesh, changed name from PRAVALLIKA to BALA PRAVALIKA notary KV Mani, Bangalore.

I,NANDINI SUNDAR, D/o. V.R.Lakshmanan, and W/o. Sundar.S,residing at No.13, 13th Cross, 4thMain Road, Chinnappa Garden, Benson TownPost, Bangalore-560046,have changed my name to NANDHINI. V.L. vide affidavit dated:26.08.2021, before Notary R.Basavaraja, Bangalore. Henceforth I shall be called as NANDHINI V.L only in all documents.

14838254Y- SEP/MT- SALIBINDI VANKATA KRISHNA at ASC Records (South) Bangalore, changed name from SALIBINDI VANKATA KRISHNA to SALIBINDI VENKATA KRISHNA notary KV Mani, Bangalore.

R. KALAISELVI W/o 14844526K NK/MT Tamilarusu P, Vill & Post Nedungal, Krishnagiri TN, my name R. KALAISELVI to KALAISELVI TAMILARUSU, Notary KV Mani, Bangalore.

14816036A HAV/MT Rajender Singh 1ATC mother name Records PANMESHWRI instead of PANMESHWARI, Notary KV Mani, Bangalore.

BOOK YOUR CLASSIFIEDS ONLINE
5 EASY STEP TO BOOK YOUR CLASSIFIEDS ADS ONLINE
5 Easy steps to book your ads
1 LOG INTO WWW.DHCLASSIFIEDS.COM
2 CHOOSE THE CATEGORY
3 CHOOSE THE AD DATES
4 COMPOSE THE MATTER
5 CONFIRM AND PAY
REAL ESTATE · NAME CHANGE · JOB · EDUCATION · HEALTH · MATRI · AUTO · ASTRO
condition apply*
WWW.DHCLASSIFIEDS.COM
FOR MORE INFORMATION
CONTACT 9880856233 | 9886213331
Email: santhoshkumar@deccanherald.co.in
DH DECCAN HERALD · ಪ್ರಜಾವಾಣಿ ಕ್ಲಾಸಿಫೈಡ್ಸ್

ವೈಷ್ಣವಿ ಬಡಾವಣೆಯಲ್ಲಿ ನಿತ್ಯ ನರಕಯಾತನೆ: ಸಮಸ್ಯೆ ಪರಿಹಾರಕ್ಕೆ ಆಗ್ರಹ

ಗುಂಡಿಗಳಿಂದ ಹದಗೆಟ್ಟ ರಸ್ತೆಗಳು

• ಡಿ.ಸುರೇಶ್

ಯಲಹಂಕ: ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ಕುವೆಂಪುನಗರ ವಾರ್ಡ್ ವ್ಯಾಪ್ತಿಯ ವೈಷ್ಣವಿ ಬಡಾವಣೆಯಲ್ಲಿ ರಸ್ತೆಗಳು ತೀರಾ ಹದಗೆಟ್ಟಿದ್ದು, ವಾಹನ ಸಂಚಾರ ದುಸ್ತರವಾಗಿದೆ.

ಬಡಾವಣೆಯಲ್ಲಿ ಕಾವೇರಿ ಪೈಪ್‌ಲೈನ್, ಒಳಚರಂಡಿ ಮಾರ್ಗ, ಅನಿಲ ಮಾರ್ಗ, ಬೆಸ್ಕಾಂ ಭೂಗತ ಕೇಬಲ್ ಅಳವಡಿಸಲು ರಸ್ತೆಗಳನ್ನು ಅಗೆಯಲಾಗಿದೆ. ಕಾಮಗಾರಿ ಮುಗಿದ ನಂತರ ಸರಿಯಾಗಿ ಮುಚ್ಚದಿರುವುದರಿಂದ ಅಲ್ಲಲ್ಲಿ ಗುಂಡಿಗಳು ಬಿದ್ದಿವೆ. ಗುಂಡಿಗಳಲ್ಲಿ ಬಿದ್ದು ಜನ ನಿತ್ಯ ತೊಂದರೆ ಅನುಭವಿಸುತ್ತಿದ್ದಾರೆ.

ಸಮಸ್ಯೆ ಬಗೆಹರಿಸುವಂತೆ ಸ್ಥಳೀಯ ಜನಪ್ರತಿನಿಧಿಗಳು, ಅಧಿಕಾರಿಗಳಿಗೆ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ಶಾಸಕ ಕೃಷ್ಣಬೈರೇಗೌಡ ಅವರು ಒಮ್ಮೆ ಬಡಾವಣೆಗೆ ಭೇಟಿ ನೀಡಿ ಪರಿಶೀಲಿಸಿದ್ದರು. ಸಮಸ್ಯೆ ಬಗೆಹರಿಸಲು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದರು. ಆದರೂ ಸಮಸ್ಯೆ ಹಾಗೇ ಉಳಿದಿದೆ.

ವೈಷ್ಣವಿ ಬಡಾವಣೆಯಲ್ಲಿ ಗುಂಡಿ ಬಿದ್ದಿರುವ ರಸ್ತೆ

‘1986ರಲ್ಲಿ ನಿರ್ಮಾಣವಾದ ಬಡಾವಣೆಯಲ್ಲಿ ಸುಮಾರು 300 ಮನೆಗಳಿದ್ದು, ಶೇ 90ರಷ್ಟು ಜನ ‘ಎ’ ಖಾತ ಹೊಂದಿದ್ದಾರೆ. ಕಾಲಮಿತಿಯೊಳಗೆ ಎಲ್ಲ ರೀತಿಯ ತೆರಿಗೆ ಪಾವತಿಸುತ್ತಿದ್ದಾರೆ. ಅದಕ್ಕೆ ಅನುಗುಣವಾಗಿ ಮೂಲಸೌಕರ್ಯ ಒದಗಿಸುವುದು ಸರ್ಕಾರ ಜವಾಬ್ದಾರಿ. ಆದರೆ, ಈ ಬಡಾವಣೆಯ ಜನ ತೊಂದರೆ ಅನುಭವಿಸಬೇಕಾಗಿದೆ’ ಎಂದು ಸ್ಥಳೀಯ ನಿವಾಸಿ ಕೆ.ರಾಮಕೃಷ್ಣನ್ ದೂರಿದರು.

‘ಮಳೆ ಬಂದರೆ ಗುಂಡಿಗಳಲ್ಲಿ ದ್ವಿಚಕ್ರ ವಾಹನ ಸವಾರರು ನಿತ್ಯ ಬೀಳುತ್ತಿದ್ದಾರೆ. ರಾತ್ರಿ ವೇಳೆಯಂತೂ ಈ ರಸ್ತೆಗಳಲ್ಲಿ ಸಂಚರಿಸುವುದೇ ದುಸ್ತರವಾಗಿದೆ. ಸಂಬಂಧಪಟ್ಟವರು ತಕ್ಷಣ ಸಮಸ್ಯೆ ಪರಿಹರಿಸಬೇಕು’ ಎಂದು ಬಡಾವಣೆಯ ನಿವಾಸಿ ಸೂರಜ್ ಪ್ರಭಾಕರ್ ಆಗ್ರಹಿಸಿದರು.

‘ಚರಂಡಿಗಳಲ್ಲಿ ಹೂಳು ತುಂಬಿಕೊಂಡಿದ್ದು, ಮಳೆ ನೀರಿನೊಂದಿಗೆ ಕೊಳಚೆ ನೀರು ರಸ್ತೆಗಳ ಮೇಲೆ ಹರಿಯುತ್ತಿದೆ. ಕೆಲವೊಮ್ಮೆ ಮನೆಗಳಿಗೂ ನುಗ್ಗುತ್ತಿದೆ. ವಾಯುಪಡೆ ಕೇಂದ್ರದ ಕಾಂಪೌಂಡ್ ಬಡಾವಣೆಗೆ ಹೊಂದಿಕೊಂಡಿದ್ದು, ಅಲ್ಲಿಂದ ಬರುವ ಕೊಳಚೆ ನೀರು ರಸ್ತೆಗಳ ಮೇಲೆ ಹರಿದು ದುರ್ವಾಸನೆ ಬೀರುತ್ತಿದೆ’ ಎಂದು ಅವರು ಬೇಸರ ವ್ಯಕ್ತಪಡಿಸಿದರು.

ವಿವಿಧ ಕಾಮಗಾರಿಗೆ ರಸ್ತೆ ಅಗೆದು ತೊಂದರೆಯಾಗಿದೆ. ರಸ್ತೆ ಅಭಿವೃದ್ಧಿಗೆ ಅನುದಾನ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಕೆಯಾಗಿದೆ. ಬಿಡುಗಡೆಯಾದ ಕೂಡಲೇ ಕಾಮಗಾರಿ ಆರಂಭವಾಗಲಿದೆ

ವಿ.ವಿ.ಪಾರ್ತಿಬರಾಜನ್, ಪಾಲಿಕೆ ಮಾಜಿ ಸದಸ್ಯ, ಕುವೆಂಪುನಗರ ವಾರ್ಡ್

ರಾಮಕೃಷ್ಣನ್

ಸೂರಜ್ ಪ್ರಭಾಕರ್

ಮೇಲ್ಸೇತುವೆಯಲ್ಲಿ ಅಪಘಾತ: ಸಾವು

ಬೆಂಗಳೂರು: ಎಲೆಕ್ಟ್ರಾನಿಕ್ ಸಿಟಿ ಬಳಿಯ ಮೇಲ್ಸೇತುವೆಯಲ್ಲಿ ಮಂಗಳವಾರ ರಾತ್ರಿ ಅಪಘಾತ ಸಂಭವಿಸಿದ್ದು, ಇಬ್ಬರು ಮೃತಪಟ್ಟಿದ್ದಾರೆ.

‘ಕಾರು ಹಾಗೂ ದ್ವಿಚಕ್ರ ವಾಹನದ ನಡುವೆ ಡಿಕ್ಕಿಯಾಗಿ ಈ ಅಪಘಾತ ಸಂಭವಿಸಿದೆ. ಪುರುಷ ಹಾಗೂ ಮಹಿಳೆ, ಮೇಲ್ಸೇತುವೆಯಿಂದ ಕೆಳಗಿನ ರಸ್ತೆಗೆ ಬಿದ್ದು ಸ್ಥಳದಲ್ಲೇ ಮೃತಪಟ್ಟಿದ್ದಾರೆ’ ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದರು.

‘ರಕ್ತಸಿಕ್ತವಾಗಿ ಬಿದ್ದಿದ್ದ ಮೃತದೇಹಗಳನ್ನು ಕಂಡು ಸ್ಥಳೀಯರು ಗಾಬರಿಗೊಂಡರು. ಮೃತದೇಹಗಳ ಮೇಲೆ ಬಟ್ಟೆ ಮುಚ್ಚಿ, ಠಾಣೆಗೆ ವಿಷಯ ತಿಳಿಸಿದರು’ ಎಂದರು.

ಅಪಘಾತದ ಬಗ್ಗೆ ಪ್ರಕರಣ ದಾಖಲಿಸಿಕೊಂಡಿರುವ ಎಲೆಕ್ಟ್ರಾನಿಕ್ ಸಿಟಿ ಸಂಚಾರ ಪೊಲೀಸರು, ‘ಮೃತರು ತಮಿಳುನಾಡಿನವರು ಎಂಬ ಮಾಹಿತಿ ಸಿಕ್ಕಿದೆ. ಅವರ ಹೆಸರು ಗೊತ್ತಾಗಿಲ್ಲ’ ಎಂದರು.

‘ಮೃತರಿಬ್ಬರು, ದ್ವಿಚಕ್ರ ವಾಹನದಲ್ಲಿ ಮೇಲ್ಸೇತುವೆ ಮೇಲೆ ಹೊರಟಿದ್ದರು. ಅದೇ ಮಾರ್ಗದಲ್ಲಿ ವೇಗವಾಗಿ ಬಂದಿದ್ದ ಕಾರು, ಓವರ್‌ಟೇಕ್ ಮಾಡಲು ಹೋಗಿ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿತ್ತು ಎಂಬುದು ಪ್ರತ್ಯಕ್ಷದರ್ಶಿಗಳಿಂದ ಗೊತ್ತಾಗಿದೆ.’

‘ಡಿಕ್ಕಿ ರಭಸಕ್ಕೆ ಪುರುಷ ಹಾಗೂ ಯುವತಿ, ಇಬ್ಬರೂ ಮೇಲ್ಸೇತುವೆಯಿಂದ ಕೆಳಗಿನ ರಸ್ತೆಗೆ ಬಿದ್ದು ತೀವ್ರ ಗಾಯಗೊಂಡು ಸ್ಥಳದಲ್ಲೇ ಅಸುನೀಗಿದ್ದಾರೆ.

ಇಬ್ಬರ ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ’ ಎಂದೂ ಹೇಳಿದರು.

‘ಕಾರು ಸಹ ಜಖಂಗೊಂಡಿದ್ದು, ಅದರಲ್ಲಿದ್ದ ಇಬ್ಬರಿಗೆ ಗಾಯವಾಗಿದೆ. ಅವರನ್ನು ಸ್ಥಳೀಯರೇ ಆಸ್ಪತ್ರೆಗೆ ದಾಖಲಿಸಿದ್ದಾರೆ’ ಎಂದೂ ಪೊಲೀಸರು ತಿಳಿಸಿದರು.

ಕಾರು ಚಾಲಕ ನಿತೀನ್ ವಿರುದ್ಧ ಪ್ರಕರಣ ದಾಖಲಾಗಿದೆ.

ಐಎಎಸ್ ಅಧಿಕಾರಿಗಳ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಎಎಸ್ ಅಧಿಕಾರಿಗಳನ್ನು ಮಂಗಳವಾರ ವರ್ಗಾವಣೆ ಮಾಡಲಾಗಿದ್ದು, ಆರೋಗ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿ ಟಿ.ಕೆ. ಅನಿಲ್ ಕುಮಾರ್ ಅವರನ್ನು ನೇಮಿಸಲಾಗಿದೆ. ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರಾಗಿ ಆರ್. ವಿಶಾಲ್ ಅವರನ್ನು ವರ್ಗಾವಣೆ ಮಾಡಲಾಗಿದೆ.

ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕರಾಗಿ ವಿ. ಅನ್ಬುಕುಮಾರ್, ಕೆಯುಐಡಿಎಫ್‌ಸಿ ವ್ಯವಸ್ಥಾಪಕ ನಿರ್ದೇಶಕರಾಗಿ ಎಂ.ಟಿ.ರೇಜು ಅವರನ್ನು ನೇಮಿಸಲಾಗಿದೆ.

ಹಿಂದುಳಿದ ವರ್ಗಗಳ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್ ಅವರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ. ಕೌಶಲಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಎಸ್. ಸೆಲ್ವಕುಮಾರ್ ಅವರಿಗೆ ಸಹಕಾರ ಇಲಾಖೆಯ ಕಾರ್ಯದರ್ಶಿ ಹುದ್ದೆಯ ಹೊಣೆಯನ್ನೂ ವಹಿಸಲಾಗಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಯಾಗಿದ್ದ ಜೆ. ರವಿಶಂಕರ್ ಅವರನ್ನು ವೈದ್ಯಕೀಯ ಶಿಕ್ಷಣ ಇಲಾಖೆ ಕಾರ್ಯದರ್ಶಿಯಾಗಿ ವರ್ಗಾವಣೆ ಮಾಡಲಾಗಿದೆ. ಅವರಿಗೆ ಹೆಚ್ಚುವರಿಯಾಗಿ ಅಬಕಾರಿ ಇಲಾಖೆಯ ಆಯುಕ್ತ ಹುದ್ದೆಯನ್ನು ನೀಡಲಾಗಿದೆ.

ಬಿಬಿಎಂಪಿ ವಿಶೇಷ ಆಯುಕ್ತರಾಗಿ (ಕಂದಾಯ) ವಿ. ರಾಮ್ ಪ್ರಶಾಂತ್ ಮನೋಹರ್ ಅವರನ್ನು ವರ್ಗಾವಣೆ ಮಾಡಲಾಗಿದ್ದು, ಕರ್ನಾಟಕ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಮಹಾ ನಿರ್ದೇಶಕರಾಗಿ ಪಿ. ಎನ್. ರವೀಂದ್ರ ಅವರನ್ನು ವರ್ಗಾವಣೆ ಮಾಡಲಾಗಿದೆ. ಅವರಿಗೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ನಿರ್ದೇಶಕ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

ಕಾಡಾ (ಅಚ್ಚುಕಟ್ಟು ಪ್ರದೇಶಾಭಿವೃದ್ಧಿಗಳ ನಿರ್ದೇಶನಾಲಯ) ನಿರ್ದೇಶಕ ಪ್ರಕಾಶ್‌ಕುಮಾರ್ ಎಚ್.ಎಸ್. ಅವರನ್ನು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಆಯುಕ್ತರಾಗಿ ನೇಮಿಸಲಾಗಿದೆ.

₹ 1ಕ್ಕೆ ಕೆ.ಜಿ ಈರುಳ್ಳಿ ಮಾರಿದ ರೈತ

ಭರಮಸಾಗರ: ಹೋಬಳಿಯಾದ್ಯಂತ ಹಾಗೂ ಜಗಳೂರು ತಾಲ್ಲೂಕಿನ ಕೆಲ ಭಾಗಗಳಲ್ಲಿ ರೈತರು ಬಿತ್ತಿದ್ದ ಈರುಳ್ಳಿ ಬೆಳೆಗೆ ದರ ಸಿಗದ ಕಾರಣ ರೈತರು ಸಿಕ್ಕಷ್ಟು ಬೆಲೆಗೆ ಈರುಳ್ಳಿ ಮಾರಾಟ ಮಾಡುತ್ತಿದ್ದಾರೆ. ಕೆಲವರು ತಿಪ್ಪೆಗೆ ಎಸೆಯುತ್ತಿದ್ದಾರೆ.

ಜಗಳೂರು ಗಡಿ ಭಾಗದ ರೈತ ಉದಯಕುಮಾರ್ ಅವರು ಮಂಗಳವಾರ ₹ 1 ಕ್ಕೆ ಕೆ.ಜಿ.ಯಂತೆ ಮನೆಮನೆಗೆ ಬಂದು ಈರುಳ್ಳಿ ಮಾರಾಟ ಮಾಡಿದರು. ವಾಹನದಲ್ಲಿ 50 ಚೀಲಗಳನ್ನು ಹೇರಿಕೊಂಡು ಬಂದಿದ್ದ ಅವರು ಮನೆಗಳ ಮುಂದೆ ತಂದು ಒಂದು ಚೀಲಕ್ಕೆ ₹ 60ರಿಂದ ₹ 100ರಂತೆ ನೀಡಿದರು. ಮಹಿಳೆಯರು ಮುಗಿ ಬಿದ್ದು ಖರೀದಿಸಿದರು.

‘ಹೋಬಳಿಯಾದ್ಯಂತ ಈರುಳ್ಳಿ ದರ ಕುಸಿದಿರುವುದರಿಂದ ಖರೀದಿದಾರರು ಈರುಳ್ಳಿ ಖರೀದಿಸಲು ಮುಂದೆ ಬರುತ್ತಿಲ್ಲ. ಬೇಸತ್ತು ನಾವೇ ವಾಹನ ಮಾಡಿಕೊಂಡು ಬಂದಷ್ಟು ಬರಲಿ ಎಂದು ಬೀದಿ ಬೀದಿ ತಿರುಗಿ ಮಾರಾಟ ಮಾಡುತ್ತಿದ್ದೇವೆ. ಒಂದು ಚೀಲಕ್ಕೆ ₹ 60ರಿಂದ ₹ 100ರವರೆಗೆ ಮಾರಾಟ ಮಾಡುತ್ತಿದ್ದೇವೆ. ಈರುಳ್ಳಿಗೆ ವೆಚ್ಚ ಮಾಡಿದ ಖರ್ಚು ನೆನೆಸಿಕೊಂಡರೆ ಕಣ್ಣೀರು ಬರುತ್ತದೆ.’ ಎಂದು ಉದಯಕುಮಾರ್ ಬೇಸರಿಸಿದರು.

‘ಕಲೆಯ ಪಾತ್ರ ಮಹತ್ವದ್ದು: ವಿಕ್ರಂ ಸೂರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೌಲ್ಯಯುತ ವಿಚಾರಗಳನ್ನು ಜನರಿಗೆ ತಲುಪಿಸುವಲ್ಲಿ ಕಲೆಯ ಪಾತ್ರ ಮಹತ್ವದ್ದು. ಇದರಲ್ಲಿ ಮಕ್ಕಳನ್ನು ತೊಡಗಿಸಬೇಕು. ಅವರಿಗೆ ಅಗತ್ಯ ತರಬೇತಿಯನ್ನೂ ನೀಡಬೇಕು. ಕಲೆಯ ಬೆಳವಣಿಗೆ ದೃಷ್ಟಿಯಿಂದ ಇದು ಉತ್ತಮ ನಡೆ. ಮಕ್ಕಳಲ್ಲಿ ಸಾಮಾಜಿಕ ಜವಾಬ್ದಾರಿ ಬೆಳೆಸುವುದಕ್ಕೂ ಇದು ಸಹಕಾರಿ’ ಎಂದು ನಟ ಹಾಗೂ ನಿರ್ದೇಶಕ ವಿಕ್ರಂ ಸೂರಿ ಅಭಿಪ್ರಾಯಪಟ್ಟರು.

ಕಲಾ ಕದಂಬ ಆರ್ಟ್ ಸೆಂಟರ್ ಕಲಾಗುಡಿಯಲ್ಲಿ ಹಮ್ಮಿಕೊಂಡಿದ್ದ ‘ಗುಡಿನಡೆ’ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಸಮಾರಂಭದಲ್ಲಿ ಮಕ್ಕಳು ‘ಅಜ್ಜಿಕಥೆ’ ನಾಟಕ ಪ್ರದರ್ಶಿಸಿದರು. ಮಧುಮಿತ, ಅದಿತಿ, ತೇಜಸ್, ನಿತ್ಯ, ಸುಹಾಸ್, ಚಿರಾಗ್, ರಜತ್, ಪ್ರಶಸ್ತಿ, ಅನೀಶ್, ಅನ್ವಿತಾ, ಸೃಜನ್, ನಿತಿನ್, ಮನೀಶ್ ಅವರು ಅಭಿನಯದ ಮೂಲಕ ನೆರೆದಿದ್ದವರ ಮೆಚ್ಚುಗೆಗೆ ಪಾತ್ರರಾದರು.

‘ಸತತ 12 ವರ್ಷಗಳಿಂದ ಬೆಂಗಳೂರಿನ ವಿವಿಧ ಬಡಾವಣೆಗಳಲ್ಲಿ ಯಕ್ಷಗಾನ, ನಾಟಕ, ನೃತ್ಯ ಪ್ರದರ್ಶನ, ಶಿಕ್ಷಣದ ಮೂಲಕ ಕಲಾ ಪರಂಪರೆ ಬೆಳೆಸುವ ಕೆಲಸವನ್ನು ನಮ್ಮ ಸಂಸ್ಥೆ ಮಾಡುತ್ತಿದೆ. ಈಗ ‘ಗುಡಿನಡೆ’ಯ ಮೂಲಕ ವಿಶ್ವೇಶ್ವರಯ್ಯ ಬಡಾವಣೆಯಲ್ಲೂ ಕಲೆ ಬೆಳೆಸುವ, ಅದಕ್ಕೆ ಪ್ರೇಕ್ಷಕ ವಲಯ ಸೃಷ್ಟಿಸುವ ಕಾರ್ಯ ಮಾಡುತ್ತಿದೆ. ಪರಿಸರ ಸ್ವಚ್ಛತೆ, ಕಸ ವಿಂಗಡಣೆ, ಕೋವಿಡ್ ಕುರಿತು ಬೀದಿ ನಾಟಕಗಳ ಮೂಲಕ ಜನಜಾಗೃತಿ ಮೂಡಿಸುವಲ್ಲೂ ನಿರತವಾಗಿದೆ’ ಎಂದು ನಿರ್ದೇಶಕ ರಾಧಾಕೃಷ್ಣ ಉರಾಳ ತಿಳಿಸಿದರು.

ಬ್ಯಾಂಕ್‌ನ ನಿವೃತ್ತ ಉದ್ಯೋಗಿ ಕೃಷ್ಣಮೂರ್ತಿ, ಸಮಾಜ ಸೇವಕ ಗೌಡಯ್ಯ ಇದ್ದರು.

ಕಾರ್ಯಕ್ರಮದಲ್ಲಿ ಮಕ್ಕಳು ‘ಅಜ್ಜಿಕಥೆ’ ನಾಟಕ ಪ್ರದರ್ಶಿಸಿದರು

‘ಕಾರ್ವೆ ಸ್ಟಾಕ್ ಬ್ರೋಕಿಂಗ್’ ವಂಚನೆ; ಬಂಧನ

ಬೆಂಗಳೂರು: ಷೇರು ವ್ಯವಹಾರ ಹೆಸರಿನಲ್ಲಿ ನೂರಾರು ಕೋಟಿ ಹಣ ಹೂಡಿಕೆ ಮಾಡಿಸಿಕೊಂಡು ಸಾರ್ವಜನಿಕರನ್ನು ವಂಚಿಸಿದ್ದ ಆರೋಪದಡಿ ‘ಕಾರ್ವೆ ಸ್ಟಾಕ್ ಬ್ರೋಕಿಂಗ್’ ಕಂಪನಿ ವಿರುದ್ಧ ಶೇಷಾದ್ರಿಪುರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದ್ದು, ಈ ಸಂಬಂಧ ಆರೋಪಿಯೊಬ್ಬನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ದಕ್ಷಿಣ ಭಾರತದ ಹಲವರು ಕಂಪನಿಯಲ್ಲಿ ಹಣ ಹೂಡಿಕೆ ಮಾಡಿದ್ದರು. ಹಣ ವಾಪಸು ನೀಡದೇ ವಂಚಿಸಿದ್ದ ಆರೋಪದಡಿ ಕಂಪನಿ ವಿರುದ್ಧ ತೆಲಂಗಾಣ ಹಾಗೂ ಆಂಧ್ರಪ್ರದೇಶದಲ್ಲಿ ಪ್ರಕರಣಗಳು ದಾಖಲಾಗಿದ್ದವು. ಪ್ರಮುಖ ಆರೋಪಿಗಳನ್ನು ಬಂಧಿಸಿರುವ ಅಲ್ಲಿಯ ಪೊಲೀಸರು, ತನಿಖೆ ಮುಂದುವರಿಸಿದ್ದಾರೆ.

ಬೆಂಗಳೂರಿನ ಮೂವರು ಉದ್ಯಮಿಗಳು ಸಹ ಕಂಪನಿಯಲ್ಲಿ ಹಣ ಹೂಡಿಕೆ ಮಾಡಿ ವಂಚನೆಗೀಡಾಗಿದ್ದಾರೆ. ಅವರು ನೀಡಿದ್ದ ದೂರು ಆಧರಿಸಿ ಶೇಷಾದ್ರಿಪುರ ಠಾಣೆಯಲ್ಲಿ ಇತ್ತೀಚೆಗಷ್ಟೇ ಎಫ್‌ಐಆರ್ ದಾಖಲಾಗಿದ್ದು, ತನಿಖೆ ಹೊಣೆಯನ್ನು ಸಿಸಿಬಿ ಪೊಲೀಸರಿಗೆ ವಹಿಸಲಾಗಿದೆ.

‘ಜೋಗ ಜಲಪಾತ ದರ್ಶನಕ್ಕೆ ಬೇಕಿಲ್ಲ ಕೋವಿಡ್ ನೆಗಟಿವ್ ವರದಿ’

ಪ್ರಜಾವಾಣಿ ವಾರ್ತೆ

ಕಾರ್ಗಲ್: ‘ಪ್ರವಾಸಿಗರು ವಿಶ್ವವಿಖ್ಯಾತ ಜೋಗ ಜಲಪಾತ ನೋಡಲು ಕೋವಿಡ್ ನೆಗಟಿವ್ ದೃಢೀಕರಣ ಪತ್ರ ಹಾಜರುಪಡಿಸಬೇಕಿಲ್ಲ’ ಎಂದು ಪ್ರವಾಸೋದ್ಯಮ ಇಲಾಖೆಯ ಜಂಟಿ ಕಾರ್ಯದರ್ಶಿ ಎಚ್.ಎಸ್.ರಾಮಕೃಷ್ಣ ತಿಳಿಸಿದರು.

ಕೋವಿಡ್ ನಿರ್ಬಂಧದ ಕಾರಣ ಜೋಗದಲ್ಲಿ ಪ್ರವಾಸಿಗರಿಗೆ ಆಗುತ್ತಿರುವ ತೊಂದರೆಗಳನ್ನು ನಿವಾರಿಸಲು ಕೈಗೊಳ್ಳುತ್ತಿರುವ ಕ್ರಮಗಳ ಬಗ್ಗೆ ಅವರು ಮಾಹಿತಿ ನೀಡಿದರು.

ನಗರ ಕೇಂದ್ರ ಗ್ರಂಥಾಲಯದಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಲೇಖಕಿ ಮಾಲತಿಶೆಟ್ಟಿ ಅವರ ‘ಬಾಲ ರಾಮಾಯಣ ದರ್ಶನ’ ಹಾಗೂ ‘ಹೊನ್ನುಡಿ ಕನ್ನಡ’ ಕೃತಿಯನ್ನು ಕವಿ ದೊಡ್ಡರಂಗೇಗೌಡ ಹಾಗೂ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ನಿರ್ದೇಶಕ ಸತೀಶ್ ಕುಮಾರ್ ಹೊಸಮನಿ ಬಿಡುಗಡೆ ಮಾಡಿದರು. ಕನ್ನಡ ಬರಹಗಾರರು ಹಾಗೂ ಪ್ರಕಾಶಕರ ಸಂಘದ ಕಾರ್ಯದರ್ಶಿ ಆರ್. ದೊಡ್ಡೇಗೌಡ, ಅಂಕಿತ ಪ್ರಕಾಶನದ ಪ್ರಕಾಶ್ ಕಂಬತ್ತಳ್ಳಿ, ಸಂವಹನ ಪ್ರಕಾಶನದ ಲೋಕಪ್ಪ, ಕನ್ನಡಪರ ಹೋರಾಟಗಾರ ರಾ.ನಂ. ಚಂದ್ರಶೇಖರ್ ಹಾಗೂ ಲೇಖಕಿ ಎಸ್.ಆರ್. ಲೀಲಾ ಇದ್ದರು.

ಕೆಲವರಿಗಷ್ಟೇ ಬಿಡುಗಡೆ ಮಾಡಿ ಸುಮ್ಮನಾದ ಸರ್ಕಾರ

ಮಾಸಾಶನ ನಿರೀಕ್ಷೆಯಲ್ಲಿ ಜಾನಪದ ಕಲಾವಿದರು

ಪ್ರಜಾವಾಣಿ ವಾರ್ತೆ

ಮೈಸೂರು: ರಾಜ್ಯದ ಜಾನಪದ ಕಲಾವಿದರ ಪೈಕಿ ಕೆಲವರಿಗಷ್ಟೇ ಮಾಸಾಶನ ಬಿಡುಗಡೆಯಾಗಿದೆ. ಸರ್ಕಾರದ ಈ ನಿರ್ಧಾರದಿಂದ ಉಳಿದ ಕಲಾವಿದರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಅವರಿಗೆ ಜೂನ್ ತಿಂಗಳಿಂದ ಮಾಸಾಶನ ದೊರಕಿಲ್ಲ.

ಕರ್ನಾಟಕ ಜಾನಪದ ಅಕಾಡೆಮಿ ವ್ಯಾಪ್ತಿಯಲ್ಲಿ ಸುಮಾರು 10 ಸಾವಿರ ಕಲಾವಿದರು ಪ್ರತಿ ತಿಂಗಳು ತಲಾ ₹1,500 ಮಾಸಾಶನ ಪಡೆಯುತ್ತಿದ್ದರು. ಬಾಕಿ ಇದ್ದ ಏಪ್ರಿಲ್, ಮೇ ತಿಂಗಳ ಮಾಸಾಶನವನ್ನಷ್ಟೇ ಎಲ್ಲ ಕಲಾವಿದರಿಗೂ ನೀಡಲಾಗಿದೆ. ನಂತರದ ತಿಂಗಳುಗಳ ಮಾಸಾಶನ ಕೆಲವರಿಗಷ್ಟೇ ದೊರಕಿದೆ.

ಬಿ.ಮಂಜಮ್ಮ ಜೋಗತಿ

‘ಮಾಸಾಶನ ಬಾಕಿ ಇರುವವರ ವಿವರಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ನೀಡಲಾಗಿದೆ. ಶೀಘ್ರದಲ್ಲೇ ಹಣ ಬಿಡುಗಡೆಯಾಗಲಿದೆ’ ಎಂದು ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷೆ ಬಿ.ಮಂಜಮ್ಮ ಜೋಗತಿ ‘ಪ್ರಜಾವಾಣಿ’ಗೆ ತಿಳಿಸಿದರು. ‘ಎಷ್ಟು ಕಲಾವಿದರಿಗೆ ಮಾಸಾಶನ ಬಿಡುಗಡೆ ಮಾಡಿಲ್ಲ’ ಎಂಬ ಮಾಹಿತಿಯನ್ನು ಅವರು ನೀಡಲಿಲ್ಲ.

‘300 ಲೈಂಗಿಕ ಅಲ್ಪಸಂಖ್ಯಾತರಿಗೆ ತರಬೇತಿ, ಜನಪದ ಕಲೆಗಳಿಗೆ ಸಂಬಂಧಿಸಿ ಅಖಿಲ ಭಾರತ ಮಹಿಳಾ ಸಮಾವೇಶ ಮಾಡಬೇಕೆಂಬ ಉದ್ದೇಶವಿತ್ತು. ಆದರೆ, ಕೋವಿಡ್‌ನಿಂದಾಗಿ ಅನುದಾನದ ಕೊರತೆ ಎದುರಾಗಿದೆ’ ಎಂದು ವಿಷಾದಿಸಿದರು.

‘ಅಕಾಡೆಮಿಗೆ ನಾನು ಅಧ್ಯಕ್ಷೆಯಾದಾಗ ₹1 ಕೋಟಿ ಅನುದಾನ ದೊರೆತಿತ್ತು. ಹಿಂದಿನ ವರ್ಷ ₹ 80 ಲಕ್ಷ, ಈ ಬಾರಿ ₹60 ಲಕ್ಷ ದೊರೆತಿದೆ. ಅಕಾಡೆಮಿಯ ಖರ್ಚಿಗೆ ₹ 20 ಲಕ್ಷ, ವಾರ್ಷಿಕ ಪ್ರಶಸ್ತಿಗಳಿಗೆ ₹20 ಲಕ್ಷ ಖರ್ಚಾಗುತ್ತದೆ. ಉಳಿದ ₹20 ಲಕ್ಷದಲ್ಲಿ ಕಾರ್ಯಕ್ರಮ ಆಯೋಜಿಸಬೇಕು. ಈ ಹಣ ಯಾವುದಕ್ಕೂ ಸಾಲುವುದಿಲ್ಲ’ ಎಂದರು.

‘ದೈವಾರಾಧನೆ’ ಕಲಾವಿದರಿಗೆ ಮಾಸಾಶನ; ‘ಉಡುಪಿ ಜಿಲ್ಲೆಯಲ್ಲಿ ಆಚರಣೆಯಲ್ಲಿರುವ ‘ದೈವಾರಾಧನೆ’ಯನ್ನು ಜಾನಪದ ಪ್ರಕಾರಕ್ಕೆ ಸೇರಿಸಬೇಕು. ಆ ಕಲಾವಿದರಿಗೆ ಮಾಸಾಶನ ನೀಡಲು, ಅರ್ಹ ಕಲಾವಿದರ ಪಟ್ಟಿಯನ್ನು ಅಕಾಡೆಮಿಗೆ ಕಳುಹಿಸುವಂತೆ ಸಹಾಯಕ ನಿರ್ದೇಶಕರಿಗೆ ಕನ್ನಡ ಸಂಸ್ಕೃತಿ ಇಲಾಖೆ ಸಚಿವ ವಿ.ಸುನೀಲ್‌ಕುಮಾರ್ ಸೂಚಿಸಿದ್ದಾರೆ’ ಎಂದು ತಿಳಿಸಿದರು.

ಚಿತ್ರಾವಳಿ

ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಅಗ್ರಹಾರ ದಾಸರಹಳ್ಳಿ ವಾರ್ಡ್ 105ರಲ್ಲಿ ಹೊಸದಾಗಿ ನವೀಕರಣಗೊಂಡ ಕ್ರೀಡಾ ಸಂಕೀರ್ಣವನ್ನು ಸಂಸದ ತೇಜಸ್ವಿ ಸೂರ್ಯ ಮತ್ತು ವಸತಿ ಸಚಿವ ವಿ.ಸೋಮಣ್ಣ ಅವರು ಉದ್ಘಾಟಿಸಿದರು. ಸ್ಥಳೀಯ ಬಿಜೆಪಿ ಮುಖಂಡರಾದ ಅರುಣ್ ಸೋಮಣ್ಣ, ಶ್ರೀಧರ್, ಶಿಲ್ಪಾ ಇದ್ದರು

ಶಾರ್ವರಿ ಪ್ರತಿಷ್ಠಾನ ಮತ್ತು ಭಾರತೀಯ ರೆಡ್ ಕ್ರಾಸ್ ಸೊಸೈಟಿ ಸಹಯೋಗದಲ್ಲಿ ವಿಜಯನಗರದ ಆದಿಚುಂಚನಗಿರಿ ಸಮುದಾಯ ಭವನದಲ್ಲಿ ನಡೆದ ‘ಬೃಹತ್ ರಕ್ತದಾನ ಶಿಬಿರ’ದಲ್ಲಿ ವ್ಯಕ್ತಿಯೊಬ್ಬರು ರಕ್ತದಾನ ಮಾಡಿದರು. ಶಿಬಿರದಲ್ಲಿ ಒಟ್ಟು 65 ಯೂನಿಟ್ ರಕ್ತ ಸಂಗ್ರಹಿಸಲಾಗಿದೆ. ಕರ್ನಾಟಕ ಪೌರ ರಕ್ಷಣಾ ದಳದ ಹೆಚ್ಚುವರಿ ಮುಖ್ಯ ಅಧಿಕಾರಿ ಪಿ.ಆರ್.ಎಸ್. ಚೇತನ್, ವಾರ್ತಾ ಇಲಾಖೆಯ ಉಪ ನಿರ್ದೇಶಕ ಸಿ.ಆರ್. ನವೀನ್ ಕುಮಾರ್, ಶಾರ್ವರಿ ಪ್ರತಿಷ್ಠಾನದ ಅಧ್ಯಕ್ಷ ರಘು ಕೃಷ್ಣಪ್ಪ ಇದ್ದರು.

ನಗರದಲ್ಲಿ ಇಂದು

ಸರ್.ಎಂ. ವಿಶ್ವೇಶ್ವರಯ್ಯ ಅವರ ಪ್ರತಿಮೆಗೆ ಮಾಲಾರ್ಪಣೆ: ಬಸವರಾಜ ಬೊಮ್ಮಾಯಿ, ಉಪಸ್ಥಿತಿ: ರಾಕೇಶ್ ಸಿಂಗ್, ಗೌರವ್ ಗುಪ್ತ, ಆಯೋಜನೆ: ಬಿಬಿಎಂಪಿ, ಸ್ಥಳ: ಕೆ.ಆರ್. ವೃತ್ತ, ಬೆಳಿಗ್ಗೆ 9.30

ಎಂಜಿನಿಯರ್ ಭವನ ಲೋಕಾರ್ಪಣೆ, ಸರ್.ಎಂ. ವಿಶ್ವೇಶ್ವರಯ್ಯ ಅವರ 161ನೇ ಜನ್ಮದಿನಾಚರಣೆ: ಬಸವರಾಜ ಬೊಮ್ಮಾಯಿ, ಮುಖ್ಯ ಅತಿಥಿಗಳು: ಸಿ.ಸಿ. ಪಾಟೀಲ, ಗೋವಿಂದ ಕಾರಜೋಳ, ಉಪಸ್ಥಿತಿ: ಶಿವಾನಂದ ಹೂಗಾರ, ಅಧ್ಯಕ್ಷತೆ: ಬಿ. ಪೀತಾಂಬರಸ್ವಾಮಿ, ಆಯೋಜನೆ: ಕರ್ನಾಟಕ ಎಂಜಿನಿಯರಿಂಗ್ ಸೇವಾ ಸಂಘ, ಸ್ಥಳ: ಮುಖ್ಯ ಎಂಜಿನಿಯರ್ ಸಂಪರ್ಕ ಮತ್ತು ಕಟ್ಟಡ (ದಕ್ಷಿಣ) ಕಚೇರಿ ಆವರಣ, ಕೆ.ಆರ್. ವೃತ್ತ, ಬೆಳಿಗ್ಗೆ 10

ಚರ್ಚೆ: ಜನಪ್ರತಿನಿಧಿಗಳಿರದ ಒಂದು ವರ್ಷದ ಕಥೆ–ನಮ್ಮ ಕಾರ್ಪೊರೇಟರ್ ಎಲ್ಲಿ?, ಭಾಗವಹಿಸುವವರು: ಅಬ್ದುಲ್ ವಾಜಿದ್, ಪದ್ಮನಾಭ ರೆಡ್ಡಿ, ಉಷಾ ಮೋಹನ್, ಶಿಲ್ಪಾ ಅಭಿಲಾಷ್, ಸಿ.ಎನ್. ದೀಪಕ್, ಶ್ವೇತಾ ವಿಜಯ್ ಕುಮಾರ್, ಲಲಿತಾಂಬಾ ಬಿ.ವಿ., ಕೆ.ವಿ. ಯಶೋಧಾ ರಾಜಣ್ಣ, ಆಯೋಜನೆ: ಜನಾಗ್ರಹ, ಬೆಳಿಗ್ಗೆ 10.30 (ಆನ್‌ಲೈನ್ ಕಾರ್ಯಕ್ರಮ)

‘ತೇಜಸ್ವಿ ಜೀವಲೋಕ–9, ಕುರಿಂಜಿ ಲೋಕ’ ಛಾಯಾಚಿತ್ರ, ಸಾಕ್ಷ್ಯಚಿತ್ರ ಪ್ರದರ್ಶನ ಮತ್ತು ಸಂವಾದ ಕಾರ್ಯಕ್ರಮ: ಆಯೋಜನೆ: ಪರಿಸರ, ನಿಸರ್ಗ ಸಂರಕ್ಷಣಾ ಸಂಸ್ಥೆ, ಕರ್ನಾಟಕ ಚಿತ್ರಕಲಾ ಪರಿಷತ್, ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನ ಹಾಗೂ ಪೀಣ್ಯ ಕೈಗಾರಿಕಾ ಸಂಘ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ಕುಮಾರಕೃಪ ರಸ್ತೆ, ಬೆಳಿಗ್ಗೆ 11

ದೃಶ್ಯೋತ್ಸವ ವಾರ್ಷಿಕ ಪ್ರದರ್ಶನ 2021: ಮುಖ್ಯ ಅತಿಥಿ: ಪ್ರೊ. ಲಿಂಗರಾಜ ಗಾಂಧಿ, ಗೌರವ ಅತಿಥಿ: ಸುರೇಖಾ, ಅಜಯ್ ರಾಘವ್, ಆಯೋಜನೆ: ಕರ್ನಾಟಕ ಚಿತ್ರಕಲಾ ಪರಿಷತ್ತು, ಸ್ಥಳ: ಕಾಲೇಜ್ ಆಫ್ ಫೈನ್ ಆರ್ಟ್ಸ್, ಕರ್ನಾಟಕ ಚಿತ್ರಕಲಾ ಪರಿಷತ್ತು, ವಿಷ್ಣುವರ್ಧನ ರಸ್ತೆ, ಶ್ರೀನಿವಾಸಪುರ, ಸಂಜೆ 4

ರಫ್ತು ಶ್ರೇಷ್ಠತಾ ಪ್ರಶಸ್ತಿ: ಮುಖ್ಯ ಅತಿಥಿ: ಮುರುಗೇಶ ನಿರಾಣಿ, ಉಪಸ್ಥಿತಿ: ಪೆರಿಕಲ್ ಎಂ. ಸುಂದರ್, ಐ.ಎಸ್.ಎನ್. ಪ್ರಸಾದ್, ಬಿ.ವಿ. ಗೋಪಾಲ ರೆಡ್ಡಿ, ವಿ.ಜಿ. ಕಿರಣ್ ಕುಮಾರ್, ಆಯೋಜನೆ: ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ, ಸ್ಥಳ: ಎಂ.ವಿ. ಸಭಾಂಗಣ, ಎಫ್‌ಕೆಸಿಸಿಐ ಸೆಂಚುರಿ ಕಟ್ಟಡ, ಕೆ.ಜಿ. ರಸ್ತೆ, ಸಂಜೆ 5

5 ದಿನಗಳ ಜಾನಪದ ಹಬ್ಬ: ಸಮಾರೋಪ ನುಡಿ: ಕೆ.ಎ. ದಯಾನಂದ, ಅಧ್ಯಕ್ಷತೆ: ಟಾಕಪ್ಪ, ಮುಖ್ಯ ಅತಿಥಿಗಳು: ರಂಗಪ್ಪ, ಶಿವಸ್ವಾಮಿ, ಶೇಖರ್‌ಗೌಡ ಮಾಲಿ ಪಾಟೀಲ, ಬಿ.ಆರ್. ರಾಜಶೇಖರ್, ಆಯೋಜನೆ: ಪದ, ಸ್ಥಳ: ಉದಯಭಾನು ಕಲಾ ಸಂಘ, ಸಂಜೆ 5.30

ಐಸಿಐ ವಾರ್ಷಿಕ ಸಾಮಾನ್ಯ ಸಭೆ, ಎಂಜಿನಿಯರಿಂಗ್ ದಿನ ಮತ್ತು ಪ್ರಶಸ್ತಿ ಪ್ರದಾನ: ಉಪನ್ಯಾಸ: ‘ಬೆಂಗಳೂರು ಮೆಟ್ರೊದ ಗುಣಮಟ್ಟ ನಿರ್ವಹಣೆ ಪ್ರಕ್ರಿಯೆ’: ಸೈಮನ್ ನಿರಂಜನ್ ಗಿಲ್ಬರ್ಟ್, ಆಯೋಜನೆ: ಇಂಡಿಯನ್ ಕಾಂಕ್ರೀಟ್ ಇನ್‌ಸ್ಟಿಟ್ಯೂಟ್, ಸ್ಥಳ: ಒಡೆಯರ್ ಹಾಲ್, ಸೆಂಚುರಿ ಕ್ಲಬ್, ಸಂಜೆ 6

100% ORIGINAL
ONLY BRANDS
2021 ರಲ್ಲಿ ಹಿಂದೆಂದೂ ಕಾಣದ ಕೊಡುಗೆಗಳು
ನೇರವಾಗಿ → 80% ವರೆಗೆ ಆಫರ್
ಕೋವಿಡ್–19 ಸಂಕಷ್ಟದಿಂದ, ಸ್ಟಾಕ್ ಮಾಡಲಾದ ಬ್ರ್ಯಾಂಡೆಡ್ ರೆಡಿಮೇಡ್ ಬಟ್ಟೆಗಳು ಮತ್ತು ಚರ್ಮದ ಹಾಗೂ ಕ್ರೀಡಾ ಶೂಗಳ ನೂತನ ದಾಸ್ತಾನನ್ನು
ಸೆಪ್ಟೆಂಬರ್ 19, 2021ರ ಒಳಗೆ 80%
ಅತ್ಯಧಿಕ ರಿಯಾಯಿತಿಯಲ್ಲಿ ಮಾರಾಟ ಮಾಡಲಾಗುತ್ತಿದೆ.
ಪುರುಷ, ಮಹಿಳೆಯರ, ಮಕ್ಕಳ ಬ್ರ್ಯಾಂಡೆಡ್ ಜೀನ್ಸ್, ಚಿನೋಸ್, ಟ್ರೌಸರ್, ಕಾರ್ಗೋ, 100% ಕಾಟನ್ ಶರ್ಟ್, ಟಿ–ಶರ್ಟ್, ಜಾಕೆಟ್, ಬರ್ಮುಡ, 3/4 ಕಪ್ರಿ, ಮಹಿಳೆಯರ ಅಪ್ಪಟ ಕಾಟನ್ ಕುರ್ತಿಗಳು, ಟಿ–ಶರ್ಟ್, ಟಾಪ್, ಪಲಾಸೊ, ಕೆಳವಸ್ತ್ರ, ಜೀನ್ಸ್–ಪ್ಯಾಂಟ್ ಮತ್ತು ಸಹಸ್ರಾರು ಇತರೆ ಬಗೆಗಳು
ಪ್ರತಿಯೊಂದು ಐಟಂ ಅನ್ನು ಕೇವಲ ರೂ. 300– 1200ಕ್ಕೆ ಮಾರಾಟ ಮಾಡಲಾಗುವುದು.
ಚಳಿಗಾಲದ ಹೊದಿಕೆ – ರೂ. 4000–8000 ಮೌಲ್ಯದ ಬ್ಲಾಕ್ ಬೆರ್ರಿ, ಜಾನ್‌ಪ್ಲೇಯರ್ ಬ್ಲೇಜರ್, ಕೋಟ್, ಜಾಕೆಟ್ ಮತ್ತು ಇತರೆ ಪ್ರೀಮಿಯಂ ಗಾರ್ಮೆಂಟ್‌ಗಳ ಬೆಲೆ ಕೇವಲ ರೂ. 800/– ರಿಂದ ರೂ. 1500/– ವರೆಗೆ
ಪುರುಷರು, ಮಹಿಳೆಯರು ಮಕ್ಕಳ ಬ್ರ್ಯಾಂಡೆಡ್ ಪಾದರಕ್ಷೆಗಳ ಎಂಆರ್‌ಪಿ ಮೇಲೆ ನೇರ 75% ರಿಯಾಯಿತಿ
ರೂ. 3000/– 8,000/– ಮೌಲ್ಯದ ಅಪ್ಪಟ ಲೆದರ್ ಮತ್ತು ಕ್ರೀಡಾ ಶೂ ಗಳ ಬೆಲೆ ಕೇವಲ → ರೂ. 600/– ರೂ. 2000/–
ರೂ. 300 ಮೌಲ್ಯದ ಹುಡುಗಿಯರ ಒಳ ಉಡುಪು, ಟಾಪ್‌ಗಳ ಬೆಲೆ ಕೇವಲ ರೂ. 100/–
ಸೂಚನೆ: 1. ಇತರೆ ಹಲವಾರು ವಿಶೇಷ ಕೌಂಟರ್‌ಗಳು ಲಭ್ಯ
2. ಸೂಟ್‌ಕೇಸ್ ಅಥವಾ ಬ್ಯಾಗ್‌ನ್ನು ಒಳಗೆ ಅನುಮತಿಸುವುದಿಲ್ಲ
3. ಒಮ್ಮೆ ವಿವಿಧ ಐಟಂಗಳ ದಾಸ್ತಾನು ಮುಗಿದ ಕೂಡಲೇ ಕೌಂಟರ್‌ಗಳನ್ನು ಮುಚ್ಚಲಾಗುವುದು.

ಹೊಸ ದಾಸ್ತಾನನ್ನು ಸೇರಿಸಲಾಗಿದೆ
Offer Only 4 Days 15th, 16th, 17th, & 18th Sept. 2021
VENUES:
ದಿ ಚಾನ್ಸರಿ ಪೆವಿಲಿಯನ್ ಹೋಟೆಲ್
ನಂ. 135, ರೆಸಿಡೆನ್ಸಿ ರಸ್ತೆ, ಬೆಂಗಳೂರು ಕ್ಲಬ್ ಎದುರು, ಬೆಂಗಳೂರು.
Mob: 98454 60132
THE CHANCERY PAVILION
ಶೆರಾಟಾನ್ ಗ್ರಾಂಡ್ ಹೋಟೆಲ್ ಅಂಡ್ ಕನ್‌ವೆನ್ಷನ್ ಸೆಂಟರ್
ಪ್ರೆಸ್ಟೀಜ್ ಶಾಂತಿನಿಕೇತನ್ ಹೂಡಿ, ವೈಟ್‌ಫೀಲ್ಡ್, ಬೆಂಗಳೂರು
Mob: 98454 60132
Sheraton HOTELS & RESORTS
ಕೋವಿಡ್–19 ನಿಂಬಂಧನೆಗಳನ್ನು ಕಟ್ಟು ನಿಟ್ಟಾಗಿ ಅನುಸರಿಸಲಾಗುತ್ತಿದೆ.
Note :1. Hall will be sanitised every hour 2. Masks are compulsory for everyone 3. To adhere to the covid guidelines, thermal scanners, sanitising machines and counter distancing will be followed for safety of the customers.
ಪ್ರವೇಶ ಉಚಿತ
ಪಾರ್ಕಿಂಗ್ ಉಚಿತ

'ಪಠ್ಯಪುಸ್ತಕಗಳ ಕೇಸರೀಕರಣದ ಭಾಗ'– ಹಲವು ಶಿಕ್ಷಣ ತಜ್ಞರ ವ್ಯಾಖ್ಯಾನ

ಚಕ್ರತೀರ್ಥ ನೇಮಕಕ್ಕೆ ಶೈಕ್ಷಣಿಕ ವಲಯದ ಆಕ್ಷೇಪ

• ರಶ್ಮಿ ಬೇಲೂರು

ಬೆಂಗಳೂರು: ಸಾರ್ವಜನಿಕ ಶಿಕ್ಷಣ ಇಲಾಖೆಯು ಪಠ್ಯಪುಸ್ತಕಗಳ ಪರಿಶೀಲನಾ ಸಮಿತಿಯ ಅಧ್ಯಕ್ಷರನ್ನಾಗಿ ಬರಹಗಾರ ರೋಹಿತ್ ಚಕ್ರತೀರ್ಥ ಅವರನ್ನು ನೇಮಿಸಿರುವುದಕ್ಕೆ ಶೈಕ್ಷಣಿಕ ವಲಯದಲ್ಲಿ ತೀವ್ರ ಆಕ್ಷೇಪ ವ್ಯಕ್ತವಾಗಿದೆ.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಹಾಗೂ ಹಿಂದುತ್ವ ವಿಚಾರ ಧಾರೆಯ ಪ್ರಬಲ ಪ್ರತಿಪಾದಕ ರೋಹಿತ್ ಅಧ್ಯಕ್ಷತೆಯಲ್ಲಿ ಪಠ್ಯಪುಸ್ತಕ ಪರಿಶೀಲನಾ ಸಮಿತಿ ನೇಮಿಸಿ ಸಾರ್ವಜನಿಕ ಶಿಕ್ಷಣ ಇಲಾಖೆ ಇತ್ತೀಚೆಗೆ ಆದೇಶ ಹೊರಡಿಸಿದೆ.

ಈ ನಡೆಗೆ ಆಕ್ಷೇಪ ವ್ಯಕ್ತಪಡಿಸಿರುವ ಹಲವು ಮಂದಿ ಶಿಕ್ಷಣ ತಜ್ಞರು, 'ಇದು ಪಠ್ಯಪುಸ್ತಕಗಳ ಕೇಸರೀಕರಣದ ಭಾಗ' ಎಂದು ವ್ಯಾಖ್ಯಾನಿಸಿದ್ದಾರೆ.

'ಇದು ಕರ್ನಾಟಕದಲ್ಲಿ ಶಿಕ್ಷಣದ ಕೇಸರೀಕರಣದ ಮೊದಲ ಹೆಜ್ಜೆ. ಭಾರತೀಯ ಸಂಪ್ರದಾಯ ಮತ್ತು ಮೌಲ್ಯಗಳ ಆಧಾರದಲ್ಲಿ ಶಿಕ್ಷಣ ವ್ಯವಸ್ಥೆಯನ್ನು ರೂಪಿಸುವ ಉದ್ದೇಶ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿದೆ. ಅದಕ್ಕೆ ಪೂರಕವಾಗಿಯೇ ಪಠ್ಯಪುಸ್ತಕ ಪರಿಷ್ಕರಣೆಗೆ ಸಮಿತಿ ರಚಿಸಲಾಗಿದೆ' ಎನ್ನುತ್ತಾರೆ ಶಿಕ್ಷಣ ತಜ್ಞ ಡಾ.ವಿ.ಪಿ. ನಿರಂಜನಾರಾಧ್ಯ.

> ವರದಿ ಸಲ್ಲಿಕೆಗೂ ಮುನ್ನ ಆಕ್ಷೇಪಿಸುವುದು ಪರೀಕ್ಷೆಗೂ ಮೊದಲು ವಿದ್ಯಾರ್ಥಿಯ ಫಲಿತಾಂಶ ಪ್ರಕಟಿಸಿದಂತೆ. ಅವರು ನಿಜವಾದ ಶಿಕ್ಷಣ ತಜ್ಞರೇ ಆದರೆ ಅಂತಿಮ ವರದಿ ಬರುವವರೆಗೂ ಕಾಯಲಿ.
>
> **ರೋಹಿತ್ ಚಕ್ರತೀರ್ಥ,** ಪಠ್ಯ ಪುಸ್ತಕಗಳ ಪರಿಷ್ಕರಣಾ ಸಮಿತಿ ಅಧ್ಯಕ್ಷ

ಪ್ರಜಾವಾಣಿ ವಿಶೇಷ

'ಇತಿಹಾಸವನ್ನು ಹೊಸದಾಗಿ ಬರೆಯುವ ಕೆಲಸ ಬೇರೆ ರಾಜ್ಯಗಳಿಗಿಂತ ಮೊದಲು ಕರ್ನಾಟಕದಲ್ಲಿ ಆರಂಭವಾಗಿದೆ. ಮೊದಲ ಹಂತದಲ್ಲೇ ಇದನ್ನು ಬಲವಾಗಿ ವಿರೋಧಿಸಬೇಕು. ಉಗ್ರ ಬಲಪಂಥೀಯರಾಗಿರುವ ಸಂಘ ಪರಿವಾರದ ಈ ಜನರು ತಮಗೆ ಬೇಕಾದಂತೆ ಪಠ್ಯ ಪುಸ್ತಕಗಳನ್ನು ತಿರುಚುವ ಅಪಾಯವಿದೆ. 17 ತಿಂಗಳು ಶಾಲೆಗಳು ಕೋವಿಡ್‌ನಿಂದ ಮುಚ್ಚಿದ್ದಾಗಲೇ ಈ ಪ್ರಯತ್ನ ನಡೆದಿದೆ. ಶಿಕ್ಷಣ ಕ್ಷೇತ್ರದಲ್ಲಿ ಕೋವಿಡ್‌ನಿಂದ ಎದುರಾಗಿರುವ ತುರ್ತು ಸ್ಥಿತಿಯನ್ನು ಪರಿಹರಿಸಲು ಈ ಜನರು ಸಣ್ಣ ಪ್ರಮಾಣದ ಕಾಳಜಿ ಅಥವಾ ಒಳ್ಳೆಯ ಆಲೋಚನೆಯನ್ನು ಮಾಡಿಲ್ಲ. ಪಠ್ಯ ಪುಸ್ತಕ ತಿದ್ದುವಂತಹ ಕೀಳುಮಟ್ಟದ ಕೆಲಸಕ್ಕೆ ಕೈಹಾಕಿದ್ದಾರೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪಕ್ಷ ರಾಜಕೀಯ ಸಲ್ಲದು: ಈ ಕುರಿತು ಪ್ರತಿಕ್ರಿಯಿಸಿರುವ ಹಿಂದೆ ಪಠ್ಯಪುಸ್ತಕ ಪರಿಶೀಲನಾ ಸಮಿತಿ ಅಧ್ಯಕ್ಷರಾಗಿದ್ದ ಸಾಹಿತಿ ಪ್ರೊ. ಬರಗೂರು ರಾಮಚಂದ್ರಪ್ಪ, 'ಪಠ್ಯಪುಸ್ತಕ ಪರಿಶೀಲನೆಗಾಗಿ 172 ಸದಸ್ಯರನ್ನು ಒಳಗೊಂಡಿರುವ 27 ವಿಷಯ ಸಮಿತಿಗಳಿವೆ. ಯಾವುದಾದರೂ ಬದಲಾವಣೆ ಅಗತ್ಯವಿದ್ದರೆ ಆ ಸಮಿತಿಗಳೇ ಅದನ್ನು ಮಾಡಬೇಕು. ಸಣ್ಣಪುಟ್ಟ ದೋಷಗಳನ್ನು ಸರಿಪಡಿಸಲು ಒಪ್ಪಬಹುದು. ಆದರೆ, ಇಡೀ ಪಠ್ಯಪುಸ್ತಕವನ್ನೇ ಮರುಪರಿಶೀಲನೆಗೆ ಒಳಪಡಿಸುವುದು ಒಪ್ಪತಕ್ಕ ನಿರ್ಧಾರವಲ್ಲ' ಎಂದರು.

ಪಕ್ಷ ರಾಜಕಾರಣವು ಪಠ್ಯಪುಸ್ತಕಗಳ ರಚನೆ ಮತ್ತು ಪರಿಷ್ಕರಣೆಯಲ್ಲಿ ತಲೆ ಹಾಕಬಾರದು ಎಂದು ಅವರು ಸಲಹೆ ನೀಡಿದರು.

ಬದಲಾವಣೆಗೆ ಆಗ್ರಹ: ಸಮಿತಿ ಅಧ್ಯಕ್ಷರನ್ನು ಬದಲಿಸುವಂತೆ ಆಗ್ರಹಿಸಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರಿಗೆ ಪತ್ರ ಬರೆದಿರುವ ವಿಧಾನ ಪರಿಷತ್‌ನ ಮಾಜಿ ಸದಸ್ಯ ರಮೇಶ್ ಬಾಬು, 'ಪಠ್ಯ ಪುಸ್ತಕಗಳ ಪರಿಷ್ಕರಣೆಗೆ ರಚಿಸಿರುವ ಸಮಿತಿಯ ಅಧ್ಯಕ್ಷ ಹಿಂದುತ್ವ ವಿಚಾರಧಾರೆಯ ಪ್ರಬಲ ಪ್ರತಿಪಾದಕ. ಇದು ಎಲ್ಲರಿಗೂ ತಿಳಿದಿರುವ ಸತ್ಯ. ಅವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಿರುವುದರಿಂದ ದುಷ್ಪರಿಣಾಮಗಳು ಆಗಲಿವೆ' ಎಂದಿದ್ದಾರೆ.

ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳು ಕೂಡ ಈ ಸಮಿತಿಯನ್ನು ವಿರೋಧಿಸಿವೆ.

ಈ ಕುರಿತು ಪ್ರತಿಕ್ರಿಯಿಸಿದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ಆಡಳಿತ ಮಂಡಳಿಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಡಿ. ಶಶಿಕುಮಾರ್, 'ಸರ್ಕಾರದ ಆದೇಶದ ಪ್ರಕಾರ ಶಾಲಾ ಆಡಳಿತ ಮಂಡಳಿಗಳ ಸದಸ್ಯರೂ ಪಠ್ಯಪುಸ್ತಕ ಪರಿಷ್ಕರಣಾ ಸಮಿತಿ ಸದಸ್ಯರಾಗಿರಬೇಕು. ಆದರೆ, ಶಿಕ್ಷಣ ಸಂಸ್ಥೆಗಳ ಪ್ರತಿನಿಧಿಗಳನ್ನು ಹೊರಗಿಟ್ಟು ಸಮಿತಿ ರಚಿಸಿರುವುದನ್ನು ವಿರೋಧಿಸುತ್ತೇವೆ' ಎಂದರು.

ವರದಿ ಬಂದ ಬಳಿಕ ನಿರ್ಧಾರ: ಸಚಿವ ಬಿ.ಸಿ. ನಾಗೇಶ್

'ಪಠ್ಯಪುಸ್ತಕಗಳ ಪರಿಷ್ಕರಣೆ ನನ್ನ ಆದ್ಯತೆಯ ವಿಚಾರವಲ್ಲ' ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಹಿಂದೆ ಹೇಳಿದ್ದರು.

ಆದರೆ, ಸೆಪ್ಟೆಂಬರ್ 8ರಂದು ರೋಹಿತ್ ಚಕ್ರತೀರ್ಥ ನೇತೃತ್ವದಲ್ಲಿ ಸಮಿತಿ ನೇಮಿಸಿ ಆದೇಶ ಹೊರಡಿಸಲಾಗಿತ್ತು. ಎಸ್. ಸುರೇಶ್ ಕುಮಾರ್ ಸಚಿವರಾಗಿದ್ದಾಗಲೇ ಈ ಸಮಿತಿ ನೇಮಿಸಿದ್ದರು. ಅದು ತನ್ನ ಕೆಲಸವನ್ನೂ ಆರಂಭಿಸಿತ್ತು. ಆದರೆ, ಈಗ ಅಧಿಕೃತ ಆದೇಶ ಹೊರಬಿದ್ದಿದೆ ಎಂಬ ಮಾಹಿತಿ ಲಭಿಸಿದೆ.

ಈ ಕುರಿತು ಪ್ರತಿಕ್ರಿಯಿಸಿದ ಬಿ.ಸಿ. ನಾಗೇಶ್, 'ನಾನು ಸಚಿವನಾದ ಬಳಿಕ ವಿವಿಧ ಸ್ಥಳಗಳಿಗೆ ಪ್ರವಾಸ ಹೋಗಿದ್ದಾಗಲೂ ಪಠ್ಯ ಪುಸ್ತಕಗಳಲ್ಲಿನ ಲೋಪ ಸರಿಪಡಿಸುವಂತೆ ಹಲವರು ಮನವಿ ಸಲ್ಲಿಸಿದ್ದರು. ಈಗ ಸಮಿತಿ ರಚಿಸಿದ್ದೇನೆ. ವರದಿ ಬಂದ ಬಳಿಕ ತೀರ್ಮಾನ ಕೈಗೊಳ್ಳುತ್ತೇವೆ' ಎಂದರು.

ಸೆ.8ರಂದು ಹೊರಡಿಸಿರುವ ಆದೇಶದ ಪ್ರಕಾರ, ಈ ಸಮಿತಿಯು 1ರಿಂದ 10ನೇ ತರಗತಿವರೆಗಿನ ಸಮಾಜ ವಿಜ್ಞಾನ, ಭಾಷಾ ವಿಷಯಗಳು ಮತ್ತು ಪರಿಸರ ವಿಜ್ಞಾನ ವಿಷಯಗಳಿಗೆ ಸಂಬಂಧಿಸಿದ ಪಠ್ಯ ಪುಸ್ತಕಗಳ ಪರಿಷ್ಕರಣೆ ಮಾಡಲಿದೆ.

ಸುದ್ದಿ 2 ನಿಮಿಷ

'ಬಿಎಸ್‌ಪಿಗೆ 25 ಸ್ಥಾನ ಖಚಿತ'

ಮೈಸೂರು: 'ಮುಂಬರುವ ವಿಧಾನ ಸಭಾ ಚುನಾವಣೆಯಲ್ಲಿ ಬಹುಜನ ಸಮಾಜ ಪಕ್ಷಕ್ಕೆ 25 ಸ್ಥಾನ ಗೆಲ್ಲುವ ಅವಕಾಶವಿದ್ದು, ಕಾರ್ಯಕರ್ತರು ಹೆಚ್ಚು ಸಂಘಟಿತರಾಗಬೇಕು' ಎಂದು ಬಿಎಸ್‌ಪಿ ರಾಜ್ಯ ಘಟಕದ ಅಧ್ಯಕ್ಷ ಎಂ.ಕೃಷ್ಣಮೂರ್ತಿ ಕರೆ ನೀಡಿದರು.

ನಗರದಲ್ಲಿ ಮಂಗಳವಾರ ನಡೆದ ಪಕ್ಷದ ಕಾರ್ಯಕರ್ತರ ಸಮಾವೇಶದಲ್ಲಿ ಮಾತನಾಡಿದ ಅವರು, 'ಬಿಎಸ್‌ಪಿ ಕಾರ್ಯಕರ್ತರು ಎಂದರೆ ಅಧಿಕಾರಕ್ಕಾಗಿ ಮಾರಿ ಕೊಂಡ ಶಾಸಕರಲ್ಲ. ಬಹುಜನ ಚಳವಳಿಯನ್ನು ನಂಬಿದವರು' ಎಂದು ಶಾಸಕ ಎನ್.ಮಹೇಶ್ ವಿರುದ್ಧ ಪರೋಕ್ಷ ವಾಗ್ದಾಳಿ ನಡೆಸಿದರು.

'ಬಹುಜನ ಚಳವಳಿಯು ಶಾಸಕರೊಬ್ಬರನ್ನು ಸೂಟು–ಬೂಟು ಹಾಕಿಸಿ ವಿಧಾನಸಭೆಗೆ ಕಳುಹಿಸಿತ್ತು. ಇದೀಗ ಅವರು ಅಧಿಕಾರಕ್ಕಾಗಿ ಸೂಟು ಬೂಟು ಕಳಚಿ ಚಡ್ಡಿ ತೊಟ್ಟು ಚಳವಳಿಗೇ ಸವಾಲು ಹಾಕುತ್ತಿದ್ದಾರೆ' ಎಂದು ವ್ಯಂಗ್ಯವಾಡಿದರು.

'ಪಕ್ಷಕ್ಕೆ ಸವಾಲೆಸೆದಿರುವ ವರಿಗೆ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಯಲ್ಲಿ ಹೆಚ್ಚು ಸ್ಥಾನ ಗೆಲ್ಲಿಸುವ ಮೂಲಕ ಕಾರ್ಯ ಕರ್ತರು ಪಾಠ ಕಲಿಸಬೇಕು' ಎಂದು ಹೇಳಿದರು.

ಡಿಪಿಎಆರ್‌ನಿಂದ ಕಣ್ಣಿಗೆ ಮಣ್ಣೆರೆಚುವ ತಂತ್ರ: ಡಿ.ಚಂದ್ರಶೇಖರಯ್ಯ ಆರೋಪ

ಬೆಂಗಳೂರು: 'ಮುಂಬಡ್ತಿಯಲ್ಲಿ ಪರಿಶಿಷ್ಟ ಜಾತಿ (ಎಸ್‌ಸಿ) ಮತ್ತು ಪರಿಶಿಷ್ಟ ವರ್ಗದ (ಎಸ್‌ಸಿ) ನೌಕರರಿಗೆ ಶೇ 15 ಮತ್ತು ಶೇ 3ರಷ್ಟು ಮೀಸಲಾತಿ ವಿಷಯದಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ಸೆ. 6ರಂದು ಹೊರಡಿಸಿರುವ ಸುತ್ತೋಲೆ ಪರಿಶಿಷ್ಟ ನೌಕರರ ಕಣ್ಣಿಗೆ ಮಣ್ಣೆರೆಚುವ ತಂತ್ರ' ಎಂದು ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಂಘದ ಅಧ್ಯಕ್ಷ ಡಿ. ಚಂದ್ರಶೇಖರಯ್ಯ ಆರೋಪಿಸಿದ್ದಾರೆ.

'ಸಮಾಜ ಕಲ್ಯಾಣ ಸಚಿವರಾಗಿದ್ದ ಬಿ. ಶ್ರೀರಾಮುಲು ಅವರು ಬಡ್ತಿ ಮೀಸಲಾತಿಯನ್ನು 1978ರ ಆದೇಶದಂತೆ, ರೋಸ್ಟರ್ ಬಿಂದು ಅಳವಡಿಸಿ ನೀಡಬೇಕೆಂದು ನಿರ್ಣಯ ಕೈಗೊಂಡಿದ್ದರೆ, ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲು ಇರುವ ಆದೇಶಗಳನ್ನು ನಮೂದಿಸಿ ಡಿಪಿಎಆರ್ ಸುತ್ತೋಲೆ ಹೊರಡಿಸಿದೆ' ಎಂದು ದೂರಿದ್ದಾರೆ.

'1978ರ ಆದೇಶ ಎಸ್‌ಸಿ, ಎಸ್‌ಟಿ ನೌಕರರಿಗೆ ಖಾಲಿ ಹುದ್ದೆ ಆಧಾರಿತ ಮೀಸಲಾತಿ ನೀಡುತ್ತಿದ್ದು, 33 ಹುದ್ದೆಗೆ 5+1 ಹುದ್ದೆ ನಿಗದಿಪಡಿಸಲಾಗಿದೆ. ರೋಸ್ಟರ್ ಬಿಂದು ಪ್ರಕಾರ 1,7,14,21,27 ಹಾಗೂ 2ನೇ ಬಿಂದು ಎಸ್‌ಟಿಗೆ ನೀಡಬೇಕು. ಈ ಸಂದರ್ಭದಲ್ಲಿ ಅರ್ಹ ಎಸ್‌ಸಿ, ಎಸ್‌ಟಿ ಇಲ್ಲದೇ ಇದ್ದಾಗ ಸಾಮಾನ್ಯ ವರ್ಗದವರಿಗೆ ನೀಡಿ, ಅಂಥ ಹುದ್ದೆಗಳನ್ನು ಬ್ಯಾಕ್‌ಲಾಗ್ ಎಂದು ಪರಿಗಣಿಸಬೇಕು. ಆದರೆ, ಉಡುಪಿ ಜಿಲ್ಲಾಧಿಕಾರಿಗಳಿಗೆ ನೀಡಿರುವ ಸ್ಪಷ್ಟೀಕರಣದಲ್ಲಿ ಅರ್ಹ ಎಸ್‌ಸಿ, ಎಸ್‌ಟಿ ಇದ್ದರೂ ರೋಸ್ಟರ್ ಬಿಂದುವಿನ ಹುದ್ದೆಗಳನ್ನು ಸಾಮಾನ್ಯ ವರ್ಗದವರಿಗೆ ನೀಡುವುದು ಹಾಗೂ ಅಂಥ ಹುದ್ದೆಗಳನ್ನು ಬ್ಯಾಕ್‌ಲಾಗ್ ಎಂದು ಪರಿಗಣಿಸಬಾರದು ಎಂದು ತಿಳಿಸಿರುವುದರಿಂದ ಮೀಸಲಾತಿ ಅವಕಾಶ ಕಿತ್ತುಕೊಂಡಂತೆ. ಶೇ 15ರ ಪ್ರಾತಿನಿಧ್ಯವನ್ನು ಲೆಕ್ಕ ಹಾಕುವಾಗ ಸಾಮಾನ್ಯ ಬಿಂದುವಿನಲ್ಲಿ, ಸಾಮಾನ್ಯ ಅರ್ಹತೆ, ಬ್ಯಾಕ್‌ಲಾಗ್ ಹಾಗೂ ನೇರ ನೇಮಕಾತಿಯಲ್ಲಿ ನೇಮಕಗೊಂಡವರನ್ನು ಶೇ 15 ಮತ್ತು 3ರ ಒಳಗೆ ಸೇರಿಸುವುದರಿಂದ ಪ್ರಾತಿನಿಧ್ಯ ಹೆಚ್ಚಾಗುತ್ತದೆ. ಅಂಥ ಸಂದರ್ಭದಲ್ಲಿ ಬಡ್ತಿಯಲ್ಲಿ ರೋಸ್ಟರ್ ಬಿಂದು ಪಾಲನೆ ಮಾಡುವ ಅಗತ್ಯ ಇಲ್ಲ ಎಂದು ಹೇಳುವುದು ಸಂವಿಧಾನದ 16 (4ಎ) ಮತ್ತು 16 (4ಬಿ) ಉಲ್ಲಂಘನೆಯಾಗುತ್ತದೆ' ಎಂದೂ ಅವರು ಅಭಿಪ್ರಾಯಪಟ್ಟಿದ್ದಾರೆ.

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಉಚಿತ

ಬೆಂಗಳೂರು: ವಿಜಯನಗರದ ಎನ್‌ಲೈಟ್ ಅಕಾಡೆಮಿಯು ಕೆಎಎಸ್, ಸಬ್ ಇನ್‌ಸ್ಪೆಕ್ಟರ್, ಎಫ್‌ಡಿಎ, ಪಿಡಿಒ, ಕಾನ್‌ಸ್ಟೆಬಲ್ ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆ ಎದುರಿಸುವವರಿಗಾಗಿ ಉಚಿತ ತರಬೇತಿ ಶಿಬಿರ ಹಮ್ಮಿಕೊಂಡಿದೆ. 4 ತಿಂಗಳ ಶಿಬಿರವು ಇದೇ 20ರಿಂದ ಪ್ರಾರಂಭವಾಗಲಿದೆ.

'ಗ್ರಾಮೀಣ ಭಾಗದ ಬಡ ಮತ್ತು ಮಧ್ಯಮ ವರ್ಗದ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಉಚಿತ ತರಬೇತಿ ಶಿಬಿರ ಆಯೋಜಿಸಿದ್ದೇವೆ. ಅಕಾಡೆಮಿಯಲ್ಲಿ ನುರಿತ ಬೋಧಕರಿದ್ದು, ವಿದ್ಯಾರ್ಥಿಗಳಿಗೆ ವಿಷಯವಾರು ಲಿಖಿತ ಪರೀಕ್ಷೆಗಳನ್ನು ನಡೆಸಲಿದ್ದಾರೆ. ಪ್ರಚಲಿತ ಘಟನೆಗೆ ಸಂಬಂಧಿಸಿದ ಕ್ವಿಜ್ ಕೂಡ ನಡೆಸಲಿದ್ದಾರೆ' ಎಂದು ಅಕಾಡೆಮಿಯ ಸ್ಥಾಪಕರಾದ ಸಿದ್ದಾರ್ಥ ಮತ್ತು ರವೀಂದ್ರ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗೆ ಸಂಪರ್ಕ ಸಂಖ್ಯೆ: 7892585422.

ಶಾಸಕ ಬಿ.ಎಸ್. ಯಡಿಯೂರಪ್ಪ ಅವರಿಗೆ 'ಶ್ರೀ ವೀರಭದ್ರೇಶ್ವರ ಪ್ರಶಸ್ತಿ' ಪ್ರದಾನ

'ವೀರಶೈವ ಲಿಂಗಾಯತರು ಒಗ್ಗಟ್ಟಾಗಿರಬೇಕು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವೀರಶೈವ ಲಿಂಗಾಯತ ಬಹಳ ದೊಡ್ಡ ಸಮಾಜ. ನಾವೆಲ್ಲಾ ಒಗ್ಗಟ್ಟಾಗಿ ಈ ನಾಡಿನ ಎಲ್ಲಾ ವರ್ಗದ ಜನರಿಗೆ ಮೇಲ್ಪಂಕ್ತಿ ಹಾಕಿಕೊಡಬೇಕು. ಅವರೆಲ್ಲರ ಶ್ರೇಯೋಭಿವೃದ್ಧಿಗೆ ಮುಂದಾಗಬೇಕು' ಎಂದು ಶಾಸಕ ಬಿ.ಎಸ್.ಯಡಿಯೂರಪ್ಪ ತಿಳಿಸಿದರು.

ವೀರಶೈವ ಲಿಂಗಾಯತ ಸಂಘಟನಾ ವೇದಿಕೆ ಹಮ್ಮಿಕೊಂಡಿದ್ದ ಶ್ರೀ ವೀರಭದ್ರೇಶ್ವರ ಜಯಂತ್ಯೋತ್ಸವ - 2021 ಕಾರ್ಯಕ್ರಮದಲ್ಲಿ 'ಶ್ರೀ ವೀರಭದ್ರೇಶ್ವರ ಪ್ರಶಸ್ತಿ' ಸ್ವೀಕರಿಸಿ ಮಂಗಳವಾರ ಮಾತನಾಡಿದರು.

'ಭಗವಂತ ನಮಗೆ ಎಲ್ಲವನ್ನೂ ಕರುಣಿಸಿದ್ದಾನೆ. ಎಲ್ಲ ರೀತಿಯ ಬುದ್ಧಿ, ಶಕ್ತಿಗಳು ನಮಗಿವೆ. ಅದನ್ನು ಶೋಷಿತ ಹಾಗೂ ದಲಿತರ ಅಭಿವೃದ್ಧಿಗಾಗಿ ಮೀಸಲಿಡಬೇಕು. ಆಗ ಈ ಸಮಾಜದಲ್ಲಿ ಜನಿಸಿದ್ದಕ್ಕೆ ಸಾರ್ಥಕವಾಗುತ್ತದೆ' ಎಂದರು.

'ಸಮಾಜದ ಹೆಣ್ಣುಮಕ್ಕಳು ವಿದ್ಯಾವಂತರಾಗಬೇಕು. ಸ್ವಾಭಿಮಾನಿಗಳಾಗಿ ಬದುಕಬೇಕು. ಗುಡಿ ಕೈಗಾರಿಕೆಗಳನ್ನು ತೆರೆದು ಒಂದಷ್ಟು ಮಂದಿಗೆ ಕೆಲಸ ಕೊಡುವಂತಾಗಬೇಕು. ಇದಕ್ಕೆ ಸರ್ಕಾರದಿಂದ ಅಗತ್ಯವಿರುವ ಎಲ್ಲ ನೆರವು ಕೊಡಿಸಲು ಶ್ರಮಿಸುತ್ತೇನೆ' ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪ್ರಸನ್ನ ರೇಣುಕ ವೀರಸೋಮೇಶ್ವರ ಸ್ವಾಮೀಜಿಯವರು ಬಿ.ಎಸ್.ಯಡಿಯೂರಪ್ಪ ಅವರಿಗೆ ಶ್ರೀ ವೀರಭದ್ರೇಶ್ವರ ಪ್ರಶಸ್ತಿ ಪ್ರದಾನ ಮಾಡಿದರು. ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಕರಿವೃಷಭ ದೇಶಿಕೇಂದ್ರ ಶಿವಯೋಗೀಶ್ವರ ಸ್ವಾಮೀಜಿ, ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ, ವೀರಭದ್ರ ಶಿವಾಚಾರ್ಯ ಸ್ವಾಮೀಜಿ, ವಸತಿ ಸಚಿವ ವಿ. ಸೋಮಣ್ಣ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಸಿ.ಸೋಮಶೇಖರ, ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಜೆ. ಮರಿಸ್ವಾಮಿ, ಕರ್ನಾಟಕ ವಿಚಾರ ವೇದಿಕೆ ಅಧ್ಯಕ್ಷ ಪಾಲನೇತ್ರ ಇದ್ದರು. ಪ್ರಜಾವಾಣಿ ಚಿತ್ರ

'ವೀರಭದ್ರ ಶಿವ ಸಂಸ್ಕೃತಿಯ ಸಂಕೇತ. ಅವರ ಹೆಸರಿನಲ್ಲಿ ನೀಡುತ್ತಿರುವ ಮೊದಲ ಪ್ರಶಸ್ತಿ ನನಗೆ ಸಿಕ್ಕಿರುವುದು ಪೂರ್ವಜನ್ಮದ ಫಲ. ಈ ಪ್ರಶಸ್ತಿ ಮುಂದಿನ ದಿನಗಳಲ್ಲಿ ಇನ್ನಷ್ಟು ಗಣ್ಯರಿಗೆ ಸಿಗಲಿ. ವೀರಭದ್ರನ ಸ್ಮರಣೆಯಿಂದ ದುಷ್ಟ ಶಕ್ತಿಗಳು ದೂರವಾಗಲಿ' ಎಂದು ಅವರು ಆಶಿಸಿದರು.

'ಮೋದಿ ನೇತೃತ್ವದಲ್ಲಿ ದೇಶದಲ್ಲಿ ಕ್ರಾಂತಿಕಾರಕ ಬದಲಾವಣೆಗಳಾಗಿವೆ. ನನ್ನ ಅವಧಿಯಲ್ಲಿ ಕರ್ನಾಟಕದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದ್ದೇನೆ. ಮತ್ತೊಬ್ಬರಿಗೆ ಅವಕಾಶ ಸಿಗಲಿ ಎಂಬ ಉದ್ದೇಶದಿಂದ ಸಂತೋಷದಿಂದಲೇ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೇನೆ. ನಮ್ಮೆಲ್ಲರ ಅಪೇಕ್ಷೆಯಂತೆ ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ ಆಗಿದ್ದಾರೆ. ನನ್ನಂತೆ ಅವರಿಗೂ ಎಲ್ಲಾ ಸಹಕಾರ ನೀಡಬೇಕು. ಆ ಮೂಲಕ ರಾಜ್ಯದ ಅಭಿವೃದ್ಧಿಗೆ ಕೈಜೋಡಿಸಬೇಕು' ಎಂದು ಮನವಿ ಮಾಡಿದರು.

ರಂಭಾಪುರಿ ಮಠದ ಪ್ರಸನ್ನ ರೇಣುಕ ವೀರ ಸೋಮೇಶ್ವರ ಸ್ವಾಮೀಜಿ ಮಾತನಾಡಿ, 'ಶಿವ ಸಂಸ್ಕೃತಿಯ ಮೂಲ ವ್ಯಕ್ತಿ ವೀರಭದ್ರ. ವೀರಶೈವರಷ್ಟೇ ಅಲ್ಲದೆ ಇತರ ಸಮುದಾಯದವರೂ ವೀರಭದ್ರೇಶ್ವರ ಸ್ವಾಮಿಯನ್ನು ಆರಾಧಿಸುತ್ತಾರೆ. ಸಹಸ್ರಾರು ಶಾಸನಗಳಲ್ಲಿ ವೀರಭದ್ರ ಸ್ವಾಮಿಯ ಮಹಿಮೆಯನ್ನು ಕಾಣಬಹುದು' ಎಂದು ಹೇಳಿದರು.

ಪ್ರತಿಭಟನೆ... ಪೌರಕಾರ್ಮಿಕರ ಕೆಲಸವನ್ನು ಕಾಯಂಗೊಳಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ಪೌರ ಕಾರ್ಮಿಕ ಮತ್ತು ಸಫಾಯಿ ಕರ್ಮಚಾರಿ ವರ್ಕರ್ಸ್ ಯೂನಿಯನ್ ಸದಸ್ಯರು ಸಫಾಯಿ ಕರ್ಮಚಾರಿಗಳ ನಾಯಕ ಐಪಿಡಿ ಸಾಲಪ್ಪ ಅವರ ಪುಣ್ಯಸ್ಮರಣೆಯ ದಿನವಾದ ಮಂಗಳವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು -ಪ್ರಜಾವಾಣಿ ಚಿತ್ರ

ಲಸಿಕೆ ಪಡೆಯಲು ಆರೋಗ್ಯ ಇಲಾಖೆ ಮನವಿ

'ಎರಡನೇ ಡೋಸ್‌ನಿಂದ ಸಂಪೂರ್ಣ ಸುರಕ್ಷೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೊರೊನಾ ಸೋಂಕಿನಿಂದ ಸಂಪೂರ್ಣ ಸುರಕ್ಷತೆ ಪಡೆಯಲು 18 ವರ್ಷದ ಮೇಲಿನವರೆಲ್ಲರೂ ಕೋವಿಡ್ ಲಸಿಕೆಯ ಎರಡೂ ಡೋಸ್ ಪಡೆಯುವುದು ಅವಶ್ಯಕ' ಎಂದು ಆರೋಗ್ಯ ಇಲಾಖೆ ತಿಳಿಸಿದೆ.

'ಸಂಭಾವ್ಯ ಕೋವಿಡ್ ಮೂರನೇ ಅಲೆಯ ಮುನ್ನೆಚ್ಚರಿಕಾ ಕ್ರಮವಾಗಿ ಅರ್ಹ ಫಲಾನುಭವಿಗಳು ಆದಷ್ಟು ಬೇಗ ಲಸಿಕೆ ಹಾಕಿಸಿಕೊಳ್ಳಬೇಕು. ಎರಡನೇ ಡೋಸ್ ಪಡೆಯದಿದ್ದರೆ ರೋಗನಿರೋಧಕ ಶಕ್ತಿ ಅಷ್ಟಾಗಿ ವೃದ್ಧಿಯಾಗುವುದಿಲ್ಲ. ಹಾಗಾಗಿ, ಯಾವುದೇ ಕಾರಣಕ್ಕೂ ಎರಡನೇ ಡೋಸ್ ಲಸಿಕೆ ಹಾಕಿಸಿಕೊಳ್ಳದೆ ಇರಬಾರದು' ಎಂದು ಇಲಾಖೆ ತಿಳಿಸಿದೆ.

'ಸದ್ಯ ದೇಶದಲ್ಲಿ 'ಕೋವ್ಯಾಕ್ಸಿನ್', 'ಕೋವಿಶೀಲ್ಡ್' ಹಾಗೂ 'ಸ್ಪುಟ್ನಿಕ್-ವಿ' ಲಸಿಕೆ ಲಭ್ಯ. ಈ ಮೂರು ಲಸಿಕೆಗಳು ಎರಡು ಡೋಸ್‌ಗಳನ್ನು ಹೊಂದಿವೆ. ಮೊದಲ ಎರಡು ಲಸಿಕೆಗಳು ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಲಭ್ಯ ಇವೆ. 'ಸ್ಪುಟ್ನಿಕ್-ವಿ' ಲಸಿಕೆ ಆಯ್ದ ಖಾಸಗಿ ಕೇಂದ್ರಗಳಲ್ಲಿ ಮಾತ್ರ ದೊರೆಯುತ್ತವೆ. ಎರಡೂ ಡೋಸ್‌ಗಳನ್ನು ಪಡೆದಲ್ಲಿ ತೀವ್ರ ಅನಾರೋಗ್ಯ ಸಮಸ್ಯೆಯನ್ನು ತಡೆಯಲು ಸಾಧ್ಯ' ಎಂದು ಇಲಾಖೆ ಹೇಳಿದೆ.

'ಕೋವಿಡ್ ಲಸಿಕೆ ಪಡೆದ ಬಳಿಕ ಸೋಂಕು ತಗಲುವುದೇ ಇಲ್ಲ ಎಂದು ಹೇಳಲಾಗದು. ಆದರೆ, ಸೋಂಕಿನ ಪರಿಣಾಮದ ತೀವ್ರತೆ ಕಡಿಮೆ ಇರುತ್ತದೆ. ಲಸಿಕೆ ಪಡೆದ ಬಳಿಕವೂ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸಬೇಕು' ಎಂದು ಪ್ರಕಟಣೆ ತಿಳಿಸಿದೆ.

ರಾಜ್ಯದಲ್ಲಿ ಈವರೆಗೆ ಲಸಿಕೆಯ 4.80 ಕೋಟಿಗೂ ಅಧಿಕ ಡೋಸ್‌ಗಳನ್ನು ವಿತರಿಸಲಾಗಿದೆ. 3.54 ಕೋಟಿ ಮಂದಿ ಈವರೆಗೆ ಮೊದಲ ಡೋಸ್ ಹಾಗೂ 1.25 ಕೋಟಿ ಮಂದಿ ಎರಡನೇ ಡೋಸ್ ಪಡೆದುಕೊಂಡಿದ್ದಾರೆ. ಸದ್ಯ 5,175 ಸರ್ಕಾರಿ ಕೇಂದ್ರಗಳು ಹಾಗೂ 409 ಖಾಸಗಿ ಆಸ್ಪತ್ರೆಗಳಲ್ಲಿ ಲಸಿಕೆ ವಿತರಿಸಲಾಗುತ್ತಿದೆ.

ಸಾಂದರ್ಭಿಕ ಚಿತ್ರ

ಮುಖ್ಯಾಂಶಗಳು

- ಎರಡನೇ ಡೋಸ್ ಪಡೆಯದಿದ್ದರೆ ರೋಗ ನಿರೋಧಕ ಶಕ್ತಿ ವೃದ್ಧಿಸದು
- ಸೋಂಕಿನ ತೀವ್ರತೆ ಕಡಿಮೆಗೊಳಿಸಲು ಲಸಿಕೆ ಪರಿಣಾಮಕಾರಿ

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,41,870 ▲ ಒಟ್ಟು ಸೋಂಕಿತರು

7,136 ▼	12,18,673 ▲	16,060 ▲
ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	231 ▲
ಗುಣಮುಖ	302 ▼
ಸಾವು	4 ▲

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್ ಅಂಕಿ–ಅಂಶ
ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	22.64 ಕೋಟಿ ▲	3.33 ಕೋಟಿ ▲
ಸಕ್ರಿಯ ಪ್ರಕರಣ	1.86 ಕೋಟಿ ▼	3.34 ಲಕ್ಷ ▼
ಗುಣಮುಖ	20.31 ಕೋಟಿ ▲	3.44 ಕೋಟಿ ▲
ಸಾವು	46.57 ಲಕ್ಷ ▲	4.43 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	4.47 ಲಕ್ಷ ▲	27,425 ▲
ಗುಣಮುಖ	5.95 ಲಕ್ಷ ▲	37,767 ▼
ಸಾವು	6,980 ▲	280 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): ಅಮೆರಿಕ 1.09 ಲಕ್ಷ ▲; ಇರಾನ್ 22,541; ಬ್ರಿಟನ್ 30,699 ▲

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): ಅಮೆರಿಕ 93.96 ▲; ಬ್ರಿಟನ್ 13.04 ▲; ಇರಾನ್ 6.06 ▼

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು): ಮಹಾರಾಷ್ಟ್ರ 1.38 ಲಕ್ಷ; ತಮಿಳುನಾಡು 35,217 ▲; ದೆಹಲಿ 25,083

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): ಮಹಾರಾಷ್ಟ್ರ 65.04 ▲; ಕೇರಳ 44.06 ▲; ತಮಿಳುನಾಡು 26.37 ▲

ಪ್ರಜಾವಾಣಿ ಗ್ರಾಫಿಕ್ಸ್

ಕೌಟುಂಬಿಕ ಕಲಹ: ಹಾಸ್ಯ ನಟ ರಾಜು ತಾಳಿಕೋಟೆ ಮೇಲೆ ಹಲ್ಲೆ

ವಿಜಯಪುರ: ಹಾಸ್ಯ ನಟ, ರಂಗಕರ್ಮಿ ರಾಜು ತಾಳಿಕೋಟೆ ಅವರ ಮೇಲೆ ಸಂಬಂಧಿಯೊಬ್ಬರು ಹಲ್ಲೆ ನಡೆಸಿದ್ದು, ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ.

ನಗರದ ಯೋಗಾಪುರ ಆಶ್ರಯ ಕಾಲೊನಿಯಲ್ಲಿ ಸೋಮವಾರ ಹಲ್ಲೆ ನಡೆದಿದೆ. ಎಸ್.ಕೆ ಮೋದಿ ಎಂಬಾತ ಪಿಸ್ತೂಲ್ ಹಣೆಗಿಟ್ಟು ಹಲ್ಲೆ ಮಾಡಿ, ಜೀವ ಬೆದರಿಕೆ ಹಾಕಿದ್ದಾನೆ ಎಂದು ರಾಜು ತಾಳಿಕೋಟೆ ಆರೋಪಿಸಿದ್ದಾರೆ.

ಪ್ರತಿ ದೂರು ದಾಖಲು: ರಾಜು ತಾಳಿಕೋಟೆ ಅವರು ಅಳಿಯ ಫಯಾಜ್ ಕರಜಗಿ ಅವರ ಪತ್ನಿ ಸನಾ ಕರಜಗಿ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಿ ವಿಜಯಪುರ ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರತಿದೂರು ದಾಖಲಾಗಿದೆ.

ಎನ್.ಮಹೇಶ್ ವಿರುದ್ಧ ಬಿಎಸ್‌ಪಿ ಮುಖಂಡರ ವಾಗ್ದಾಳಿ

'ಪಕ್ಷಕ್ಕೆ ದ್ರೋಹ ಬಗೆದವರು ಅಂಬೇಡ್ಕರ್‌ವಾದಿಗಳಲ್ಲ'

ಪ್ರಜಾವಾಣಿ ವಾರ್ತೆ

ಮೈಸೂರು: 'ಅಂಬೇಡ್ಕರ್ ವಾದದಲ್ಲಿ ನಂಬಿಕೆ ಇಟ್ಟವರು ಪಕ್ಷಕ್ಕೆ ದ್ರೋಹ ಮಾಡುವುದಿಲ್ಲ. ರಾಜಕೀಯ ನೆಲೆ ನೀಡಿದ ಪಕ್ಷವನ್ನು ಅಧಿಕಾರದಾಸೆಗೆ ತೊರೆದವರನ್ನು ಮತದಾರರು ಕ್ಷಮಿಸುವುದಿಲ್ಲ' ಎಂದು ಬಹುಜನ ಸಮಾಜ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಡಾ.ಅಶೋಕ್ ಸಿದ್ಧಾರ್ಥ ವಾಗ್ದಾಳಿ ನಡೆಸಿದರು.

ನಗರದಲ್ಲಿ ಮಂಗಳವಾರ ನಡೆದ ಪಕ್ಷದ ಕಾರ್ಯಕರ್ತರ 'ಅಧಿಕಾರದೆಡೆಗೆ ಬಹುಜನರ ನಡಿಗೆ' ಸಮಾವೇಶದಲ್ಲಿ ಮಾತನಾಡಿದ ಅವರು, 'ಸ್ವಾತಂತ್ರ್ಯ ನಂತರವೂ ದಮನಿತರಿಗೆ ರಾಜಕೀಯ ಸ್ವಾತಂತ್ರ್ಯವನ್ನು ಬಿಜೆಪಿ ಮತ್ತು ಕಾಂಗ್ರೆಸ್ ಇಲ್ಲವಾಗಿಸಿವೆ. ಹಣಬಲದಿಂದ ಮತಗಳನ್ನಷ್ಟೇ ಅಲ್ಲ ನಾಯಕರನ್ನೂ ಖರೀದಿಸುತ್ತಿವೆ' ಎಂದರು.

ದಕ್ಷಿಣ ಭಾರತದ ಉಸ್ತುವಾರಿ ರಾಮ್‌ಜಿ ಗೌತಮ್ ಮಾತನಾಡಿ, 'ಬಹುಸಂಖ್ಯಾತ ಸಮಾಜವು ಒಗ್ಗಟ್ಟಾಗಿ ಬಿಎಸ್‌ಪಿಯನ್ನು ಬೆಂಬಲಿಸಿದರೆ ಚರಿತ್ರೆ ನಿರ್ಮಾಣವಾಗಲಿದೆ. ಸಮಾನತೆ ಹಾಗೂ ಬಹುಜನರ ಹಕ್ಕುಗಳಿಗೆ ಹೋರಾಡಿದ ಅಂಬೇಡ್ಕರ್, ಪೆರಿಯಾರ್, ನಾಲ್ವಡಿ ಕೃಷ್ಣರಾಜ ಒಡೆಯರ್, ನಾರಾಯಣ ಗುರು ಅವರ ಸಿದ್ಧಾಂತಗಳಲ್ಲಿ ಪಕ್ಷದ ಕಾರ್ಯಕರ್ತರು ನಂಬಿಕೆ ಇಟ್ಟಿದ್ದಾರೆ. ಅವರನ್ನು ಬಿಜೆಪಿ ಖರೀದಿಸಲು ಆಗುವುದಿಲ್ಲ' ಎಂದರು.

ಮಾಜಿ ಮೇಯರ್ ಪುರುಷೋತ್ತಮ್ ಹಾಗೂ ಬೆಂಬಲಿಗರನ್ನು ಬಿಎಸ್‌ಪಿ ಬಾವುಟ ನೀಡಿ ಪಕ್ಷಕ್ಕೆ ಮುಖಂಡರು ಬರಮಾಡಿಕೊಂಡರು. ದಕ್ಷಿಣ ಪದವೀಧರ ಕ್ಷೇತ್ರದ ಅಭ್ಯರ್ಥಿಯಾಗಿ ಡಾ.ಬಿ.ಎಚ್.ಚನ್ನಕೇಶವ ಮೂರ್ತಿ ಅವರ ಹೆಸರನ್ನು ಘೋಷಿಸಲಾಯಿತು.

ಪಕ್ಷದ ರಾಜ್ಯ ಉಸ್ತುವಾರಿಗಳಾದ ಸುರೇಂದ್ರ ಸಿಂಗ್ ಕಲೋರಿಯಾ, ಮಾರಸಂದ್ರ ಮುನಿಯಪ್ಪ, ಎಂ.ಗೋಪಿನಾಥ್, ರಾಜ್ಯಾಧ್ಯಕ್ಷ ಎಂ.ಕೃಷ್ಣಮೂರ್ತಿ, ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ನಾಗೇಂದ್ರ ಅರಕಲವಾಡಿ, ಗಂಗಾಧರ ಬಹುಜನ, ಕಾರ್ಯದರ್ಶಿ ಶಿವ ಮಹದೇವ್, ಜಾಕೀರ್ ಹುಸೇನ್ ಮೈಸೂರು, ಚಾಮರಾಜನಗರದ ವಿವಿಧ ಮುಖಂಡರು ಇದ್ದರು.

ಮೈಸೂರಿನ ಕುವೆಂಪುನಗರದ ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪದಲ್ಲಿ ಮಂಗಳವಾರ ನಡೆದ ಬಿಎಸ್‌ಪಿ ಕಾರ್ಯಕರ್ತರ ಸಮಾವೇಶದಲ್ಲಿ ಮಾಜಿ ಮೇಯರ್ ಪುರುಷೋತ್ತಮ್ ಹಾಗೂ ಬೆಂಬಲಿಗರನ್ನು ಪಕ್ಷದ ಬಾವುಟ ನೀಡಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಡಾ.ಅಶೋಕ್ ಸಿದ್ಧಾರ್ಥ ಸೇರ್ಪಡೆ ಮಾಡಿಕೊಂಡರು.

ವಾಂತಿ– ಭೇದಿ: 70ಕ್ಕೂ ಹೆಚ್ಚು ಮಂದಿಗೆ ಚಿಕಿತ್ಸೆ

ಸುರಪುರ (ಯಾದಗಿರಿ ಜಿಲ್ಲೆ): ಇಲ್ಲಿನ ಮಾಚಗುಂಡಾಳ ಗ್ರಾಮದಲ್ಲಿ ಮಂಗಳವಾರ ನೂರಕ್ಕೂ ಹೆಚ್ಚು ಜನರಲ್ಲಿ ವಾಂತಿ, ಭೇದಿ ಕಾಣಿಸಿಕೊಂಡಿದ್ದು, 70ಕ್ಕೂ ಹೆಚ್ಚು ಮಂದಿ ಆಸ್ಪತ್ರೆಗೆ ದಾಖಲಾಗಿದ್ದಾರೆ.

70 ಜನರಿಗೆ ಸರ್ಕಾರಿ ಆಸ್ಪತ್ರೆಯಲ್ಲಿ ಮತ್ತು ಉಳಿದವರು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರೆದಿದೆ.

ಸುದ್ದಿ ತಿಳಿದು ಗ್ರಾಮಕ್ಕೆ ಭೇಟಿ ನೀಡಿದ ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಆರ್.ವಿ. ನಾಯಕ ಅವರು, 'ಗ್ರಾಮದ ಬಾವಿ ಹಾಗೂ ಟ್ಯಾಂಕ್‌ಗಳಲ್ಲಿನ ನೀರು ಪರಿಶೀಲಿಸಲಾಗಿದ್ದು, ಕಲುಷಿತ ನೀರು ಸೇವನೆಯಿಂದ ವಾಂತಿ, ಭೇದಿ ಸಂಭವಿಸಿರಬಹುದು' ಎಂದು ತಿಳಿಸಿದ್ದಾರೆ.

ಬಿಬಿಎಂಪಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಗೋವಿಂದರಾಜು ಸೂಚನೆ

ಮರಗಳಲ್ಲಿ ಜಾಹೀರಾತು ಫಲಕ: ತೆರವಿಗೆ ವಾರದ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮರಗಳಲ್ಲಿ ಅಳವಡಿಸಿರುವ ಜಾಹೀರಾತುಗಳನ್ನು ತೆರವುಗೊಳಿಸುವಂತೆ ಬಿಬಿಎಂಪಿಯ ಉಪ ಅರಣ್ಯ ಸಂರಕ್ಷಣಾಧಿಕಾರಿ ಗೋವಿಂದರಾಜು ಸೂಚಿಸಿದ್ದಾರೆ. ಇದಕ್ಕೆ ಅವರು ಒಂದು ವಾರದ ಗಡುವು ನೀಡಿದ್ದಾರೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ರಸ್ತೆ ಬದಿಯ ಮರಗಳಿಗೆ ವರ್ತಕರು, ಅಂಗಡಿಗಳ ಮಾಲೀಕರು, ಜಾಹೀರಾತುಗಳನ್ನು ಅಂಟಿಸುತ್ತಿದ್ದಾರೆ. ಜಾಹೀರಾತು ಸಂಸ್ಥೆಗಳು ಜಾಹೀರಾತು ಫಲಕಗಳನ್ನೂ ಮರಗಳಲ್ಲಿ ಅಳವಡಿಸುತ್ತಿವೆ. ಕೇಬಲ್ ಆಪರೇಟರ್‌ಗಳು ಕೇಬಲ್‌ಗಳನ್ನು ನೇತು ಹಾಕುತ್ತಿದ್ದಾರೆ. ಜಾಹೀರಾತು ಅಳವಡಿಸಲು ಮರಗಳಿಗೆ ಮೊಳೆಗಳು ಮತ್ತು ಪಿನ್‌ಗಳನ್ನು ಹೊಡೆಯುತ್ತಿದ್ದಾರೆ. ಕೆಲವರು ವಿದ್ಯುತ್ ದೀಪಗಳನ್ನು ಮರಗಳಿಗೆ ತೂಗುಹಾಕುತ್ತಿದ್ದಾರೆ. ಕಟ್ಟಡ ನಿರ್ಮಾಣ ಹಂತದಲ್ಲಿ ಮರಗಳಿಗೆ ಕಬ್ಬಿಣದ ರಾಡುಗಳನ್ನು ಹೊಡೆಯುತ್ತಿರುವುದೂ ಕೆಲವೆಡೆ ಕಂಡುಬಂದಿದೆ. ಇದರಿಂದ ಮರಗಳ ಬೆಳವಣಿಗೆ ಕುಂಠಿತವಾಗುತ್ತದೆ ಎಂದು ಅವರು ತಿಳಿಸಿದ್ದಾರೆ.

'ಮರಗಳಿಗೆ ಈ ರೀತಿ ಹಾನಿ ಉಂಟುಮಾಡುವುದು 1976ರ ಕರ್ನಾಟಕ ಮರ ಸಂರಕ್ಷಣಾ ಕಾಯ್ದೆಯ ಕಲಂ 8ರ ಪ್ರಕಾರ ಶಿಕ್ಷಾರ್ಹ ಅಪರಾಧ. ಮರಗಳಲ್ಲಿ ಅಕ್ರಮವಾಗಿ ಅಳವಡಿಸಿರುವ ಎಲ್ಲ ವಿಧವಾದ ಜಾಹೀರಾತು ಫಲಕಗಳು ಮತ್ತು ಇತರೆ ವಸ್ತುಗಳನ್ನು ಅಳವಡಿಸಿದವರೇ ತೆರವುಗೊಳಿಸಬೇಕು' ಎಂದು ಅವರು ಸ್ಪಷ್ಟಪಡಿಸಿದ್ದಾರೆ.

'ಬಿಬಿಎಂಪಿ ವ್ಯಾಪ್ತಿಯಲ್ಲಿ ಮಳೆಗಾಲದಲ್ಲಿ ಸಾರ್ವಜನಿಕ ರಸ್ತೆ ಬದಿಗಳಲ್ಲಿ ಒಣಗಿರುವ ಮರಗಳು ಮತ್ತು ರೆಂಬೆ-ಕೊಂಬೆಗಳನ್ನು ತೆರವುಗೊಳಿಸಬೇಕಿದೆ. ಈ ಕಾರ್ಯಕ್ಕೆ ನಾಗರಿಕರ ಸಹಕಾರವೂ ಅಗತ್ಯ. ಅಪಾಯಕಾರಿ ಸ್ಥಿತಿಯಲ್ಲಿರುವ ರೆಂಬೆ ಕೊಂಬೆಗಳ ಬಗ್ಗೆ ಸಾರ್ವಜನಿಕರು ಆಯಾ ವಲಯದ ಅರಣ್ಯಾಧಿಕಾರಿಗಳ ಗಮನಕ್ಕೆ ತರಬಹುದು' ಎಂದು ಅವರು ತಿಳಿಸಿದ್ದಾರೆ.

ಮರಗಳಲ್ಲಿ ಜಾಹೀರಾತು ಫಲಕಗಳನ್ನು ಅಂಟಿಸಿರುವುದು

ಗೆಜೆಟೆಡ್ ಪ್ರೊಬೇಷನರ್ ನೇಮಕಾತಿ: ಕಾನೂನು ಸಚಿವ ಮಾಧುಸ್ವಾಮಿ ಭರವಸೆ

‘ತೊಡಕುಗಳ ಶೀಘ್ರ ನಿವಾರಣೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೆಜೆಟೆಡ್ ಪ್ರೊಬೇಷನರ್ ಹುದ್ದೆಗಳ ಭರ್ತಿಗೆ (2011 ರ ಬ್ಯಾಚ್) ಸಂಬಂಧಿಸಿದಂತೆ ಇರುವ ತೊಡಕುಗಳ ನಿವಾರಣೆಗೆ ಇನ್ನು 15– 20 ದಿನಗಳಲ್ಲಿ ಸೂಕ್ತ ತೀರ್ಮಾನಕ್ಕೆ ಬರಲಾಗುವುದು ಎಂದು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ವಿಧಾನಸಭೆಯಲ್ಲಿ ಮಂಗಳವಾರ ತಿಳಿಸಿದರು.

ಬಿಜೆಪಿಯ ಎಂ.ಪಿ.ಕುಮಾರಸ್ವಾಮಿ ಅವರ ಗಮನ ಸೆಳೆಯುವ ಸೂಚನೆಗೆ ಉತ್ತರ ನೀಡಿದ ಮಾಧುಸ್ವಾಮಿ, ‘ಕಳೆದ ಅಧಿವೇಶನದಲ್ಲಿ ಪಕ್ಷ ಬೇಧ ಮರೆತು ಎಲ್ಲ ಸದಸ್ಯರೂ 362 ಅಭ್ಯರ್ಥಿಗಳ ನೇಮಕ ಮಾಡಲು ಒತ್ತಾಯ ಮಾಡಿದ್ದರು. ಅದಕ್ಕೆ ಇರುವ ಎಲ್ಲ ತೊಡಕುಗಳ ನಿವಾರಿಸುವ ಕೆಲಸ ಮಾಡುತ್ತಿದ್ದೇವೆ. ಅದು ಸುಲಭವೂ ಅಲ್ಲ’ ಎಂದು ಹೇಳಿದರು.

ಸದನ ತೆಗೆದುಕೊಂಡ ನಿರ್ಣಯವನ್ನು ಸುಪ್ರೀಂಕೋರ್ಟ್ ಮಾನ್ಯ ಮಾಡುವುದಿಲ್ಲ. ಹೀಗಾಗಿ ಸೆಷನ್ಸ್ ನ್ಯಾಯಾಲಯದ ಹಂತದಲ್ಲಿ ಪ್ರಕರಣ ಕೈಬಿಡಲು ಕೋರಿಕೆ ಸಲ್ಲಿಸಬೇಕೇ ಅಥವಾ ಪುನರ್‌ಪರಿಶೀಲನೆ ಅರ್ಜಿ ಸಲ್ಲಿಸಬೇಕೇ ಎಂಬ ಚರ್ಚೆ ನಡೆದಿದೆ. ಎಚ್ಚರದಿಂದ ಹೆಜ್ಜೆ ಇಡಲು ತೀರ್ಮಾನಿಸಿದ್ದೇವೆ. ಕಾನೂನು ಪರಿಣಿತರ ಜತೆ ಈಗಾಗಲೇ ಮೂರು ಬಾರಿ ಸಭೆ ನಡೆಸಿದ್ದು, ಮುಂದೆಯೂ ಸಭೆ ನಡೆಸಿ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಲಾಗುವುದು’ ಎಂದು ಮಾಧುಸ್ವಾಮಿ ತಿಳಿಸಿದರು.

ಎಂ.ಪಿ.ಕುಮಾರಸ್ವಾಮಿ, ‘ಆಯ್ಕೆಯಾದ ಅಭ್ಯರ್ಥಿಗಳ ವಯಸ್ಸು ಮೀರುತ್ತಿದೆ. ಸರ್ಕಾರ 362 ಮಂದಿಯ ಭವಿಷ್ಯವನ್ನು ಬೇಗ ನಿರ್ಧರಿಸಬೇಕು’ ಎಂದು ಆಗ್ರಹಿಸಿದರು.

ಕಾಂಗ್ರೆಸ್‌ನ ಎಚ್.ಕೆ.ಪಾಟೀಲ ಮಾತನಾಡಿ, ‘ಸಚಿವರ ಮಾತಿನಲ್ಲಿ ಅಸಹಾಯಕತೆ ಕಂಡು ಬರುತ್ತಿದೆ. ಕಳೆದ ಅಧಿವೇಶನದಲ್ಲಿ ನೀವು ನೀಡಿದ ಭರವಸೆ ಕೇಳಿ ಆದೇಶ ಬೇಗನೆ ಹೊರ ಬೀಳಬಹುದು ಎಂದು ಕಾಯುತ್ತಿದ್ದೆವು. ಆ ರೀತಿ ಆಗಲಿಲ್ಲ. ಕೆಪಿಎಸ್‌ಸಿ ಸದಸ್ಯರನ್ನು ಆರೋಪ ಮುಕ್ತ ಮಾಡಿದ್ದಿರಿ, ಇನ್ನು ನಿಮಗಿರುವ ಅಡ್ಡಿಗಳೇನು’ ಎಂದು ಪ್ರಶ್ನಿಸಿದರು.

‘ರೇವಣ್ಣನ ಸ್ಟೈಲ್ ಗೊತ್ತಿದೆ’

‘ಯಾವುದೇ ಸರ್ಕಾರ ಇದ್ದರೂ ಗದ್ದಲ ಎಬ್ಬಿಸಿ ಕೆಲಸ ಮಾಡಿಸಿಕೊಳ್ಳುವ ಸ್ಟೈಲ್ ಎಚ್.ಡಿ.ರೇವಣ್ಣ ಅವರಿಗೆ ಗೊತ್ತಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಲೇವಡಿ ಮಾಡಿದರು.

ಹೊಳೆನರಸೀಪುರ ಪುರಸಭೆ ಕೈಗೊಂಡಿರುವ ಮೂಲಸೌಕರ್ಯಗಳ ಅಭಿವೃದ್ಧಿಗೆ ಹಣ ಬಿಡುಗಡೆ ಮಾಡಿಲ್ಲ ಎಂದು ತಮ್ಮ ಎಂದಿನ ಶೈಲಿಯಲ್ಲಿ ವಿಷಯ ಪ್ರಸ್ತಾಪಿಸಿದ ರೇವಣ್ಣ, ‘ಸರ್ಕಾರ ರಾಜಕೀಯ ದ್ವೇಷ ಮಾಡುತ್ತಿದೆ. ಅದನ್ನು ಎದುರಿಸಲು ತಯಾರಿದ್ದೇನೆ’ ಎಂದು ಏರಿದ ಧ್ವನಿಯಲ್ಲಿ ಮಾತನಾಡಿದರು.

ರೇವಣ್ಣ ಅವರ ಅಬ್ಬರಕ್ಕೆ ನಗುತ್ತಲೇ ತಿರುಗೇಟು ನೀಡಿದ ಬೊಮ್ಮಾಯಿ, ‘ಯಾವುದೇ ಸರ್ಕಾರ ಬಂದರೂ ರೇವಣ್ಣ ಅವರ ಕ್ಷೇತ್ರದಲ್ಲಿ ಕಾಮಗಾರಿಗಳು ನಿಂತಿಲ್ಲ. ನಿಲ್ಲುವುದೂ ಇಲ್ಲ. ಹೇಗೆ ಕೆಲಸ ಮಾಡಿಸಿಕೊಳ್ಳಬೇಕು ಎಂಬುದು ಅವರಿಗೆ ಗೊತ್ತಿದೆ. ಇವರು ಪ್ರಸ್ತಾಪಿಸಿದ ಎಲ್ಲ ಕಾಮಗಾರಿಗಳಿಗೂ ಹಣ ಮಂಜೂರಾಗಿದೆ. ಕೋವಿಡ್ ಬಂದಿದ್ದರಿಂದ ಹಣ ಬಿಡುಗಡೆ ತಡವಾಗಿದೆ ಅಷ್ಟೇ. ಗದ್ದಲ ಎಬ್ಬಿಸಿ ಹಣ ಪಡೆದುಕೊಳ್ಳುವುದರ ಜತೆಗೆ ರಾಜಕೀಯ ಲಾಭ ಪಡೆಯಲು ಯತ್ನಿಸುತ್ತಾರೆ. ಇವೆರಡೂ ಒಟ್ಟಿಗೆ ನಡೆಯುವುದಿಲ್ಲ. ರಾಜಕೀಯ ದ್ವೇಷ ಮಾಡುತ್ತೇವೆ ಎನ್ನುವುದು ಸರಿಯಲ್ಲ’ ಎಂದರು.

ವಾಲ್ಮೀಕಿ ಆಶ್ರಮ ಶಾಲೆ ಶಿಕ್ಷಕರಿಗೆ ವೇತನ ಇಲ್ಲ!

ವಾಲ್ಮೀಕಿ ಆಶ್ರಮ ಶಾಲೆಗಳ ಗೌರವ ಶಿಕ್ಷಕರಿಗೆ ಹಲವು ತಿಂಗಳಿಂದ ಸರ್ಕಾರ ವೇತನವನ್ನು ಪಾವತಿಸಿಲ್ಲ. ಅತ್ಯಂತ ದಯನೀಯ ಸ್ಥಿತಿಯಲ್ಲಿ ಅವರು ದಿನ ಕಳೆಯುತ್ತಿದ್ದಾರೆ ಎಂದು ಬಿಜೆಪಿಯ ಉಮಾನಾಥ ಕೋಟ್ಯಾನ್ ಸದನದ ಗಮನ ಸೆಳೆದರು.

2005–06 ರಲ್ಲಿ ಗೌರವ ಶಿಕ್ಷಕರಾಗಿ ನೇಮಿಸಿಕೊಂಡಾಗ ₹6 ಸಾವಿರ ಸಂಬಳ ಇತ್ತು. ಈಗ ಅವರ ಸಂಬಳ ₹7 ಸಾವಿರ ಮಾತ್ರ. ಇವರಿಗೆ ಯಾವುದೇ ಸೌಲಭ್ಯಗಳು ಇಲ್ಲ. ವೇತನವನ್ನೂ ಹೆಚ್ಚು ಮಾಡಿಲ್ಲ. 440 ಶಿಕ್ಷಕರ ನೇಮಕ ಮಾಡಿಕೊಳ್ಳುವಾಗ ಇವರಿಗೆ ಆದ್ಯತೆ ನೀಡಬೇಕು ಎಂದು ಅವರು ಒತ್ತಾಯಿಸಿದರು.

ಇದಕ್ಕೆ ಉತ್ತರಿಸಿದ ಸಚಿವ ಬಿ.ಶ್ರೀರಾಮುಲು, 440 ಶಿಕ್ಷಕರ ನೇಮಕದ ಸಂದರ್ಭದಲ್ಲಿ ಇವರಿಗೆ ಕೃಪಾಂಕ ನೀಡಲಾಗುವುದು. ಅಲ್ಲದೆ, ಇವರ ಗೌರವ ಧನ ಹೆಚ್ಚಿಸಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಭರವಸೆ ನೀಡಿದರು.

‘ಜಯನಗರ ಟೆಂಡರ್ ಶ್ಯೂರ್ ರಸ್ತೆ ಬೇಗ ಪೂರ್ಣ’

ಜಯನಗರದ ಟೆಂಡರ್ ಶ್ಯೂರ್ ರಸ್ತೆಯ ಕಾಮಗಾರಿಯನ್ನು ಆದಷ್ಟು ಬೇಗನೆ ಪೂರ್ಣಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

ಕಾಂಗ್ರೆಸ್‌ನ ಸೌಮ್ಯಾರೆಡ್ಡಿ ಅವರ ಗಮನಸೆಳೆಯುವ ಸೂಚನೆಗೆ ಉತ್ತರಿಸಿ, ಹೆಚ್ಚುವರಿ ಡಕ್ಟ್‌ಗಳನ್ನು ನಿರ್ಮಿಸಬೇಕಾದ ಕಾರಣ ಹೆಚ್ಚುವರಿ ಕೆಲಸ ಬಂದಿದೆ. ಈ ಯೋಜನೆಗೆ ಹೆಚ್ಚುವರಿಯಾಗಿ ₹11.89 ಕೋಟಿ ಬೇಕಾಗಿದೆ. ಬಿಬಿಎಂಪಿ ವತಿಯಿಂದ ಆ ಹಣವನ್ನು ಭರಿಸಲಾಗುವುದು ಎಂದು ತಿಳಿಸಿದರು.

‘ಗುರು ರಾಘವೇಂದ್ರ ಬ್ಯಾಂಕ್: ಸಿಬಿಐ ತನಿಖೆಗೆ ಅಭ್ಯಂತರವಿಲ್ಲ’

ಬೆಂಗಳೂರು: ’ಬಸವನಗುಡಿಯ ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ವಂಚನೆಯ ಪ್ರಕರಣವನ್ನು ಸಿಬಿಐಗೆ ವಹಿಸಲು ಯಾವುದೇ ಅಭ್ಯಂತರವಿಲ್ಲ. ಈ ಸಂಬಂಧ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಅಧಿಕಾರಿಗಳೊಂದಿಗೆ ಚರ್ಚಿಸಿ, ತಜ್ಞರ ಸಮಿತಿ ರಚನೆಗೂ ಕ್ರಮ ಕೈಗೊಳ್ಳಲಾಗುವುದು’ ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಹೇಳಿದರು.

ವಿಧಾನಪರಿಷತ್ತಿನಲ್ಲಿ ಕಾಂಗ್ರೆಸ್‌ನ ಯು.ಬಿ. ವೆಂಕಟೇಶ್ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಚಿವರು, ‘ಪ್ರಕರಣದ ಕುರಿತು ಈಗಾಗಲೇ ಸಿಐಡಿ ತನಿಖೆ ನಡೆಯುತ್ತಿದೆ. ಹೈಕೋರ್ಟ್ ಮತ್ತು ಆರ್‌ಬಿಐ ಮೇಲ್ವಿಚಾರಣೆ ನಡೆಸುತ್ತಿವೆ. ಬ್ಯಾಂಕಿನಲ್ಲಿ ಹಣ ದುರುಪಯೋಗಕ್ಕೆ ಕಾರಣರಾದ ಸಿಬ್ಬಂದಿ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ’ ಎಂದೂ ಮಾಹಿತಿ ನೀಡಿದರು.

‘2014ರಿಂದ 2018–19ರವರೆಗೆ ಪುನರ್ ಲೆಕ್ಕಪರಿಶೋಧನಗೆ ಆದೇಶಿಸಲಾಗಿದೆ. 2019–20ನೇ ಸಾಲಿನ ಲೆಕ್ಕ ಪರಿಶೋಧನೆ ಪೂರ್ಣಗೊಂಡಿದ್ದು, ಬ್ಯಾಂಕ್ ₹1,923 ಕೋಟಿ ನಷ್ಟ ಹೊಂದಿದೆ. ಏಳು ವರ್ಷಗಳ ಪುನರ್ ಲೆಕ್ಕ ಪರಿಶೋಧನೆ ಕಾರ್ಯ ಪೂರ್ಣಗೊಂಡ ನಂತರ ವಾಸ್ತವಿಕ ಅಂಶಗಳು ಬೆಳಕಿಗೆ ಬರಲಿವೆ’ ಎಂದರು.

‘ಬ್ಯಾಂಕಿನ ಲೆಕ್ಕಪರಿಶೋಧಕರನ್ನು ಕಪ್ಪು ಪಟ್ಟಿಗೆ ಸೇರಿಸಿ, ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗಿದೆ. ವಂಚನೆ ಪ್ರಕರಣದಲ್ಲಿ ಭಾಗಿಯಾದವರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಪ್ರಕ್ರಿಯೆಯೂ ನಡೆಯುತ್ತಿದೆ‘ ಎಂದರು.

ಬಂಧನ ಏಕಿಲ್ಲ: ‘46 ಸಾವಿರ ಠೇವಣಿದಾರರನ್ನು ವಂಚಿಸಲಾಗಿದೆ. ಜಾಸ್ತಿ ಬಡ್ಡಿ ಸಿಗುತ್ತದೆ ಎಂಬ ಕಾರಣಕ್ಕೆ ಬೇರೆ ಬೇರೆ ಸಹಕಾರ ಬ್ಯಾಂಕ್‌ನವರೂ ಈ ಬ್ಯಾಂಕ್‌ನಲ್ಲಿ ಠೇವಣಿ ಇಟ್ಟಿದ್ದಾರೆ. ಕೇವಲ 24 ಜನರಿಗೆ ₹1,500 ಕೋಟಿಗೂ ಹೆಚ್ಚು ಸಾಲ ವಿತರಿಸಲಾಗಿದೆ. ಆದರೆ, ಈ ಬಗ್ಗೆ ಬ್ಯಾಂಕ್‌ನಲ್ಲಿ ದಾಖಲೆಗಳೇ ಇಲ್ಲ ಎನ್ನುತ್ತಿದ್ದಾರೆ. ಈ ಹಗರಣದಲ್ಲಿ ಸರ್ಕಾರದ ಪಾತ್ರವೂ ಇರಬಹುದು ಎಂಬ ಅನುಮಾನ ಮೂಡುತ್ತಿದೆ‘ ಎಂದು ಯು.ಬಿ. ವೆಂಕಟೇಶ್ ಹೇಳಿದರು.

‘ತಪ್ಪಿತಸ್ಥ ಲೆಕ್ಕಪರಿಶೋಧಕರನ್ನು ಕೇವಲ ಕಪ್ಪು ಪಟ್ಟಿಗೆ ಸೇರಿಸಿ ಸುಮ್ಮನಾಗಿದ್ದಾರೆ. ಅವರನ್ನು ಈವರೆಗೆ ಏಕೆ ಬಂಧಿಸಿಲ್ಲ’ ಎಂದು ಪ್ರಶ್ನಿಸಿದರು.

‘ತನಿಖೆಯ ಪ್ರಗತಿ ಮತ್ತು ಬ್ಯಾಂಕಿನ ಸ್ಥಿತಿ–ಗತಿ ಕುರಿತು ಠೇವಣಿದಾರರಿಗೆ ನಿಯಮಿತವಾಗಿ ಮಾಹಿತಿ ನೀಡಬೇಕು, ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕು’ ಎಂದೂ ಅವರು ಒತ್ತಾಯಿಸಿದರು.

ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ

ವರ್ಷಾಂತ್ಯಕ್ಕೆ 3 ಲಕ್ಷ ಎಲ್‌ಇಡಿ ಬೀದಿದೀಪ ಅಳವಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಈ ವರ್ಷದ ಅಂತ್ಯದೊಳಗೆ 3 ಲಕ್ಷ ಎಲ್‌ಇಡಿ ಬೀದಿದೀಪ ಅಳವಡಿಕೆ ಕಾರ್ಯ ಪೂರ್ಣಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ವಿಧಾನಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಜೆಡಿಎಸ್‌ನ ಆರ್. ಮಂಜುನಾಥ್ ಅವರ ಪ್ರಶ್ನೆಗೆ ಮಂಗಳವಾರ ಉತ್ತರಿಸಿದ ಅವರು, ‘ಬೀದಿ ದೀಪ ಅಳವಡಿಕೆ ಪ್ರಕ್ರಿಯೆ ಪ್ರಾರಂಭವಾಗಿ ಎರಡು ವರ್ಷಗಳು ಆಗಿವೆ. ನಿರೀಕ್ಷಿತ ಪ್ರಮಾಣದಲ್ಲಿ ಯೋಜನೆಯಲ್ಲಿ ಪ್ರಗತಿ ಆಗಿಲ್ಲ. ಇದರಿಂದಾಗಿ ನಗರದಲ್ಲಿ ಸಾಕಷ್ಟು ಕತ್ತಲು ಪ್ರದೇಶಗಳು ನಿರ್ಮಾಣವಾಗಿವೆ’ ಎಂದು ಹೇಳಿದರು.

‘ನಗರದಲ್ಲಿ ಈಗಿರುವ ಸೋಡಿಯಂ ದೀಪಗಳ ಬದಲು ಎಲ್‌ಇಡಿ ಬೀದಿದೀಪಗಳನ್ನು ಅಳವಡಿಸಲು ಶಾಪೂರ್ಜಿ ಪಲ್ಲೋಂಜಿ, ಎಸ್‌ಎಂಎಸ್ ಇನ್‌ಫ್ರಾಸ್ಟ್ರಕ್ಚರ್ ಮತ್ತು ಸಮುದ್ರ ಎಲೆಕ್ಟ್ರಾನಿಕ್ ಸಿಸ್ಟಮ್ ಪ್ರೈವೇಟ್ ಲಿಮಿಟೆಡ್‌ಗಳ ಒಕ್ಕೂಟಕ್ಕೆ (ಎಸ್ಕೊ) ಗುತ್ತಿಗೆ ನೀಡಲಾಗಿದೆ. ಐದು ಹಂತಗಳಲ್ಲಿ 30 ತಿಂಗಳ ಅವಧಿಯಲ್ಲಿ 4.85 ಲಕ್ಷ ಬೀದಿದೀಪ ಅಳವಡಿಸಬೇಕಿದೆ. ಮೊದಲ ಹಂತದಲ್ಲಿ 1 ಲಕ್ಷ ಬೀದಿದೀಪಗಳನ್ನು ಅಳವಡಿಸಲು ರಾಜರಾಜೇಶ್ವರಿನಗರ, ದಾಸರಹಳ್ಳಿ ವಲಯ, ಬೊಮ್ಮನಹಳ್ಳಿ ವಲಯಗಳ ಮೂರು ವಾರ್ಡ್‌ಗಳು ಹಾಗೂ ಪೂರ್ವ ವಲಯದ ಒಂದು ವಾರ್ಡ್ ಆಯ್ಕೆ ಮಾಡಲಾಗಿದೆ. ಮೊದಲ ಹಂತದಲ್ಲಿ ಜಂಟಿಸಮೀಕ್ಷೆಕಾರ್ಯಪೂರ್ಣಗೊಂಡು, ಬೇಸ್‌ಲೈನ್ ಸರ್ವೆ ಕಾರ್ಯಗಳು ಬಹುತೇಕ ಮುಗಿದಿವೆ’ ಎಂದರು.

ಆರ್.ಮಂಜುನಾಥ್, ‘ಒಪ್ಪಂದ ಮಾಡಿಕೊಂಡು 30 ತಿಂಗಳುಗಳು ಕಳೆದಿವೆ. ಆದರೆ, ಯೋಜನೆಗೆ ಚಾಲನೆ ಸಿಕ್ಕಿಲ್ಲ. ಇದರಿಂದಾಗಿ, ಸರ್ಕಾರದ ಬೊಕ್ಕಸಕ್ಕೆ ಪ್ರತಿ ತಿಂಗಳು ₹21.50 ಕೋಟಿಯಂತೆ ಒಟ್ಟು ₹642 ಕೋಟಿ ನಷ್ಟ ಉಂಟಾಗಿದೆ. ಜತೆಗೆ, ಬೀದಿದೀಪಗಳ ವಿದ್ಯುತ್ ಶುಲ್ಕ ₹128 ಕೋಟಿಯನ್ನು ಬಿಬಿಎಂಪಿ ಪಾವತಿಸುತ್ತಿದೆ. ಗುತ್ತಿಗೆದಾರರವಿಳಂಬನೀತಿಯಿಂದಪಾಲಿಕೆಗೆಹೊರೆಯಾಗಿದೆ’ ಎಂದು ಗಮನ ಸೆಳೆದರು. ‘ನನ್ನ ಕ್ಷೇತ್ರದ ಕೈಗಾರಿಕೆಗಳಲ್ಲಿ 7 ಲಕ್ಷ ಮಂದಿ ದುಡಿಯುತ್ತಿದ್ದಾರೆ. 2 ವರ್ಷಗಳಿಂದ ಬೀದಿದೀಪಗಳನ್ನು ಅಳವಡಿಸಿಲ್ಲ. ಇದರಿಂದಾಗಿ, ನೌಕರರಿಗೆ ಮನೆಗೆ ತೆರಳಲು ಸಮಸ್ಯೆ ಆಗುತ್ತಿದೆ’ ಎಂದರು.

‘ಗುತ್ತಿಗೆದಾರ ಕಂಪನಿ ಯೋಜನೆ ಅನುಷ್ಠಾನ ವಿಳಂಬ ಮಾಡಿದರೆ ದಂಡ ಹಾಕಲು ಅವಕಾಶ ಇದೆಯೇ’ ಎಂದು ಮಂಜುನಾಥ್ ಪ್ರಶ್ನಿಸಿದರು. ಉತ್ತರಿಸಿದ ಬಸವರಾಜ ಬೊಮ್ಮಾಯಿ, ‘ಯೋಜನೆಯ ಪ್ರತಿ ವಾರದ ವಿಳಂಬಕ್ಕೆ ₹1 ಲಕ್ಷ ದಂಡ ವಿಧಿಸಲು ಅವಕಾಶ ಇದೆ. ಜತೆಗೆ, ಗುತ್ತಿಗೆದಾರರನ್ನು ಬದಲಿಸಲು ಹಿಂಜರಿಯುವುದಿಲ್ಲ’ ಎಂದು ಸ್ಪಷ್ಟಪಡಿಸಿದರು.

ಕಾಂಗ್ರೆಸ್‌ನ ರಾಮಲಿಂಗಾ ರೆಡ್ಡಿ, ‘3 ವರ್ಷಗಳಿಂದ ಜಾಗತಿಕ ಟೆಂಡರ್ ಪ್ರಕ್ರಿಯೆ ನಡೆಯುತ್ತಿದೆ. ಗುತ್ತಿಗೆದಾರ ಕಂಪನಿ ಎಲ್‌ಇಡಿ ದೀಪಗಳನ್ನು ಅಳವಡಿಸಿಲ್ಲ. ಬೇರೆ ಬೀದಿದೀಪಗಳನ್ನು ಪಾಲಿಕೆ ಹಾಕುತ್ತಿಲ್ಲ’ ಎಂದರು. ‘ಬಸವನಗುಡಿ ಕ್ಷೇತ್ರದಲ್ಲೂ ಇದೇ ಸಮಸ್ಯೆ ಆಗಿದೆ’ ಎಂದು ಬಿಜೆಪಿಯ ಎಲ್.ಎ.ರವಿಸುಬ್ರಹ್ಮಣ್ಯ ಹೇಳಿದರು.

ಬಿಜೆಪಿಯ ಅರವಿಂದ ಲಿಂಬಾವಳಿ, ‘ನಗರದ ಹೊರವಲಯದಲ್ಲಿ 14 ಕ್ಷೇತ್ರಗಳು ಇವೆ. ಇಲ್ಲಿನ 110 ಹಳ್ಳಿಗಳಲ್ಲಿ ರಸ್ತೆಗಳು ಹದಗೆಟ್ಟಿವೆ. ಜತೆಗೆ, ಬೀದಿದೀಪ ಇಲ್ಲದೆ ಸಾಕಷ್ಟು ಮಂದಿ ಬಿದ್ದು ಗಾಯಗೊಂಡಿದ್ದಾರೆ’ ಎಂದು ಗಮನ ಸೆಳೆದರು.

ವಿಧಾನ ಪರಿಷತ್ತಿನಲ್ಲಿ ಮಂಗಳವಾರ ಸಹಕಾರ ಸಚಿವ ಎಸ್‌.ಟಿ.ಸೋಮಶೇಖರ್ ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಸಚಿವರಾದ ಬಿ.ಸಿ.ಪಾಟೀಲ, ಬೈರತಿ ಬಸವರಾಜ್, ಕೆ.ಸಿ.ನಾರಾಯಣಗೌಡ ಇದ್ದಾರೆ

ಎತ್ತಿನಹೊಳೆ ಯೋಜನೆ: ಸಚಿವ ಮಾಧುಸ್ವಾಮಿ ಉತ್ತರ

ಕೊರಟಗೆರೆ ರೈತರಿಗೆ ₹32 ಲಕ್ಷ ಪರಿಹಾರ ನೀಡಲು ಅಸಾಧ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎತ್ತಿನಹೊಳೆ ಯೋಜನೆಯ ಬೈರಗೊಂಡ್ಲು ಜಲಾಶಯ ನಿರ್ಮಾಣಕ್ಕೆ ಜಮೀನು ಬಿಟ್ಟುಕೊಡುವ ಕೊರಟಗೆರೆ ಕ್ಷೇತ್ರದ ಭೂಮಾಲೀಕರಿಗೆ ಎಕರೆಗೆ ₹32 ಲಕ್ಷ ಪರಿಹಾರ ನೀಡಲು ಸಾಧ್ಯವೇ ಇಲ್ಲ ಎಂದು ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಸ್ಪಷ್ಟಪಡಿಸಿದರು.

ವಿಧಾನಸಭೆಯಲ್ಲಿ ಮಂಗಳವಾರ ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್‌ನ ಜಿ.ಪರಮೇಶ್ವರ ಅವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಮಾಧುಸ್ವಾಮಿ, ‘ದೊಡ್ಡಬಳ್ಳಾಪುರ ತಾಲ್ಲೂಕಿನ ಭೂಮಾಲೀಕರಿಗೆ ನೀಡುವಷ್ಟೇ ಪರಿಹಾರವನ್ನು ನಮಗೂ ನೀಡಬೇಕು ಎಂದು ಕೊರಟಗೆರೆಯ ಜನರು ಒತ್ತಾಯ ಮಾಡುತ್ತಿದ್ದಾರೆ. ದೊಡ್ಡಬಳ್ಳಾಪುರದಲ್ಲಿ ಮಾರ್ಗಸೂಚಿ ದರ ಹೆಚ್ಚು ಇದೆ. ಕೊರಟಗೆರೆಯಲ್ಲಿ ಮಾರ್ಗಸೂಚಿ ದರ ಎಕರೆಗೆ ₹8 ಲಕ್ಷ ಇದೆ. ದೊಡ್ಡಬಳ್ಳಾಪುರದವರಿಗೆ ಕೊಟ್ಟಷ್ಟೇ ಪರಿಹಾರ ಕೊಟ್ಟರೆ ಎಕರೆಗೆ ₹32 ಲಕ್ಷ ಕೊಡಬೇಕಾಗುತ್ತದೆ. ಅಷ್ಟು ಪರಿಹಾರ ಕೊಡಲು ಸಾಧ್ಯವಿಲ್ಲ’ ಎಂದು ಹೇಳಿದರು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಜಿ. ಪರಮೇಶ್ವರ, ‘2012ರಲ್ಲಿ ಯೋಜನಾ ಮೊತ್ತ ₹12,912 ಕೋಟಿ ಇತ್ತು. ಈಗ ಯೋಜನಾ ಮೊತ್ತ ₹23,251.66 ಕೋಟಿಗೆ ಹಿಗ್ಗಿದೆ. ಏಕರೂಪದ ಭೂ ಪರಿಹಾರ ನೀಡಿದರೆ ₹319 ಕೋಟಿ ಹೆಚ್ಚುವರಿ ವೆಚ್ಚ ಆಗಲಿದೆ’ ಎಂದರು. ‘ಇದಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲ. ನೀವು ಸಹ ಸಚಿವ ಸಂಪುಟ ಉಪಸಮಿತಿಗೆ ಅಧ್ಯಕ್ಷರಾಗಿದ್ದೀರಿ. ನಿಮ್ಮ ಕಾಲದಲ್ಲೇ ಮೊತ್ತವನ್ನು ನಿಗದಿ ಮಾಡಬಹುದಿತ್ತಲ್ಲ’ ಎಂದು ಮಾಧುಸ್ವಾಮಿ ತಿರುಗೇಟು ನೀಡಿದರು. ಈ ವೇಳೆ ಪರಮೇಶ್ವರ– ಮಾಧುಸ್ವಾಮಿ ನಡುವೆ ವಾಕ್ಸಮರ ನಡೆಯಿತು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಧ್ಯಪ್ರವೇಶಿಸಿ, ‘ಯೋಜನೆಯ ಭೂಸ್ವಾಧೀನ ಪ್ರಕ್ರಿಯೆಯಲ್ಲಿರುವ ಅಡೆತಡೆಗಳನ್ನು ನಿವಾರಿಸಲು ಸದ್ಯದಲ್ಲಿಯೇ ಸಭೆ ನಡೆಸುತ್ತೇನೆ’ ಎಂದು ಭರವಸೆ ನೀಡಿದರು.

ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ, ‘ಭೂಸ್ವಾಧೀನ ಮಾಡುವಾಗ ಏಕರೂಪ ದರ ನೀಡಬೇಕು ಎಂದು ಭೂಮಾಲೀಕರು ಒತ್ತಾಯಿಸಿದ್ದರಿಂದ ಕಾಮಗಾರಿಗೆ ಅಡೆತಡೆ ಉಂಟಾಗಿದೆ. ಇತ್ತೀಚೆಗೆ ಎತ್ತಿನಹೊಳೆ ಯೋಜನಾ ಪ್ರದೇಶಕ್ಕೆ ಭೇಟಿಕೊಟ್ಟು, ಭೂಸ್ವಾಧೀನವೂ ಸೇರಿದಂತೆ ಯೋಜನೆಯ ಅಡ್ಡಿ ಆತಂಕಗಳನ್ನು ನಿವಾರಿಸಲು ಅಗತ್ಯ ಕ್ರಮ ಕೈಗೊಂಡಿದ್ದೇನೆ. ನೀರು ಪೂರೈಕೆ ನಾಲೆ ನಿರ್ಮಾಣಕ್ಕೆ ಭೂಸ್ವಾಧೀನ ಆಗಬೇಕಿತ್ತು. ಆದರೆ, ಹಾಸನ ಜಿಲ್ಲಾಧಿಕಾರಿ ಕ್ರಮ ಕೈಗೊಂಡಿರಲಿಲ್ಲ. ಶಿಸ್ತುಕ್ರಮ ಕೈಗೊಳ್ಳುವ ಎಚ್ಚರಿಕೆ ನೀಡಿದೆ. ಇದೀಗ ಭೂಸ್ವಾಧೀನ ಪ್ರಕ್ರಿಯೆ ವೇಗ ಪಡೆದುಕೊಂಡಿದೆ. 10–15 ದಿನಗಳಲ್ಲಿ ಪ್ರಕ್ರಿಯೆ ಪೂರ್ಣಗೊಳ್ಳಲಿದೆ’ ಎಂದರು.

‘ಬೈರಗೊಂಡ್ಲು ಜಲಾಶಯದ ಸಂಗ್ರಹಣಾ ಸಾಮರ್ಥ್ಯವನ್ನು 1.50 ಟಿಎಂಸಿ ಅಡಿಯಿಂದ 2 ಟಿಎಂಸಿ ಅಡಿಗೆ ಸೀಮಿತಗೊಳಿಸಲು ಪರ್ಯಾಯ ಪ್ರಸ್ತಾವನೆ ಸಿದ್ಧಪಡಿಸಲಾಗಿದ್ದು, ಅದಕ್ಕೆ ನಿಗಮದ ಅಂದಾಜು ಪರಿಶೀಲನಾ ಸಮಿತಿಯಿಂದ ಒಪ್ಪಿಗೆ ಪಡೆಯಲಾಗಿದೆ. ಎತ್ತಿನಹೊಳೆ ಯೋಜನೆಯನ್ನು ಅನುದಾನದ ಲಭ್ಯತೆಯ ಆಧಾರದಲ್ಲಿ 2023ರ ಅಂತ್ಯಕ್ಕೆ ಪೂರ್ಣಗೊಳಿಸಲು ಯೋಜಿಸಲಾಗಿದೆ’ ಎಂದು ಹೇಳಿದರು.

ಅಂಕಿ-ಅಂಶಗಳು

5.78 ಟಿಎಂಸಿ ಅಡಿ — ಬೈರಗೊಂಡ್ಲು ಜಲಾಶಯದಲ್ಲಿ ನೀರು ಶೇಖರಣೆಗೆ ಪ್ರಸ್ತಾವ

7 ಜಲಾಶಯದಿಂದ ಗ್ರಾಮಗಳು ಮುಳುಗಡೆ

2681 ಎಕರೆ — ಜಲಾಶಯಕ್ಕೆ ಕೊರಟಗೆರೆ ತಾಲ್ಲೂಕಿನಲ್ಲಿ ಭೂಸ್ವಾಧೀನ

2797 ಎಕರೆ — ಜಲಾಶಯಕ್ಕೆ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಭೂಸ್ವಾಧೀನ

2 ಟಿಎಂಸಿ ಅಡಿ — ಬೈರಗೊಂಡ್ಲು ಜಲಾಶಯದ ಸಂಗ್ರಹಣಾ ಸಾಮರ್ಥ್ಯ ಸೀಮಿತಕ್ಕೆ ಪ್ರಸ್ತಾವ

3 ಗ್ರಾಮಗಳು ಸಂಪೂರ್ಣ ಮುಳುಗಡೆ

1200 ಎಕರೆ — ಭೂ ಪ್ರದೇಶ ಮುಳುಗಡೆ

ಬರಪೀಡಿತ ಜಿಲ್ಲೆಗಳಿಗೆ ಎರಡನೇ ಹಂತದಲ್ಲಿ ಹಂಚಿಕೆಯಾಗಿದ್ದ ಸಂಸ್ಕರಿಸಿದ ಕೊಳಚೆ ನೀರು

ಕೋಲಾರ, ಚಿಕ್ಕಬಳ್ಳಾಪುರಕ್ಕೆ ನಿಗದಿತ ನೀರಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬರಪೀಡಿತ ಜಿಲ್ಲೆಗಳಿಗೆ ಎರಡನೇ ಹಂತದಲ್ಲಿ ಸಂಸ್ಕರಿಸಿದ 40 ಕೋಟಿ ಲೀಟರ್ ನೀಡಲು ಸಾಧ್ಯವಿಲ್ಲ ಎಂಬುದಾಗಿ ಜಲಮಂಡಳಿ ತಿಳಿಸಿದೆ’ ಎಂದು ಸಣ್ಣ ನೀರಾವರಿ ಸಚಿವ ಜೆ.ಸಿ. ಮಾಧುಸ್ವಾಮಿ ಹೇಳಿದರು. ಇದಕ್ಕೆ ಕಾಂಗ್ರೆಸ್‌ನ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ವಿಧಾನಸಭೆಯಲ್ಲಿ ಮಂಗಳವಾರ ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್‌ನ ವಿ.ಮುನಿಯಪ್ಪ ಪ್ರಶ್ನೆಗೆ ಸಣ್ಣ ನೀರಾವರಿ ಸಚಿವ ಜೆ.ಸಿ.ಮಾಧುಸ್ವಾಮಿ, ‘ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ 40 ಕೋಟಿ ಲೀಟರ್ ಸಂಸ್ಕರಿಸಿದ ಕೊಳಚೆ ನೀರನ್ನು ಒದಗಿಸುವುದಾಗಿ ಜಲಮಂಡಳಿ ತಿಳಿಸಿತ್ತು. ಈಗ 30 ಕೋಟಿ ಲೀಟರ್‌ನಷ್ಟು ಸಂಸ್ಕರಿಸಿದ ನೀರು ಒದಗಿಸುತ್ತಿದೆ’ ಎಂದು ಹೇಳಿದರು.

ಕಾಂಗ್ರೆಸ್‌ನ ಕೆ.ಆರ್.ರಮೇಶ್ ಕುಮಾರ್, ‘ಇದು ₹1350 ಕೋಟಿಯ ಯೋಜನೆ. ವಿಸ್ತೃತ ಯೋಜನಾ ವರದಿ ತಯಾರಿಸುವಾಗ ಈ ವಿಷಯವನ್ನು ಜಲಮಂಡಳಿ ತಿಳಿಸಬೇಕಿತ್ತು ಅಲ್ಲವೇ. ಈಗ ಕೈಚೆಲ್ಲುತ್ತಿರುವುದು ಏಕೆ’ ಎಂದು ಪ್ರಶ್ನಿಸಿದರು.

‘ಮುಖ್ಯಮಂತ್ರಿಯವರೇ, ಜಲಮಂಡಳಿಯದ್ದು ಆಕ್ಟೋಪಸ್ ಹಿಡಿತ. ಇದರಿಂದಾಗಿ ಸಮಸ್ಯೆ ಆಗುತ್ತಿದೆ. ಈ ಬಗ್ಗೆ ನೀವು ಎಚ್ಚರಿಕೆಯಿಂದ ಕ್ರಮ ಕೈಗೊಂಡು ಲೋಪ ಸರಿಪಡಿಸಬೇಕು’ ಎಂದು ರಮೇಶ್ ಕುಮಾರ್ ಕಿವಿಮಾತು ಹೇಳಿದರು.

ಜೆ.ಸಿ.ಮಾಧುಸ್ವಾಮಿ, ‘ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳ ನಿರ್ಮಾಣದ ಬಗ್ಗೆ ಇಸ್ರೇಲ್ ತಜ್ಞರ ನೆರವು ಕೇಳಲಾಗಿದೆ. ಭಾರಿ ವೆಚ್ಚ ಮಾಡಿ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳ ಸ್ಥಾಪನೆ ಮಾಡುವ ಅಗತ್ಯ ಇಲ್ಲ ಎಂದು ಅಲ್ಲಿನ ತಜ್ಞರು ಸಲಹೆ ನೀಡಿದ್ದಾರೆ’ ಎಂದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ‘ಜಲಮಂಡಳಿ ಅಧಿಕಾರಿಗಳ ಧೋರಣೆಯನ್ನು ಒಪ್ಪಲು ಸಾಧ್ಯವಿಲ್ಲ. ಈ ಬಗ್ಗೆ ಜಲಮಂಡಳಿ ಅಧಿಕಾರಿಗಳ ಸಭೆ ನಡೆಸಿ ಎಚ್ಚರಿಕೆ ನೀಡುತ್ತೇನೆ’ ಎಂದರು.

ವಿ.ಮುನಿಯಪ್ಪ, ‘ಬರಪೀಡಿತ ಜಿಲ್ಲೆಗಳಿಗೆ ಕೊಳಚೆ ನೀರು ಹರಿಸುವ ಯೋಜನೆಯಲ್ಲಿ ಅವ್ಯವಹಾರ ನಡೆದಿದೆ. ಈ ಬಗ್ಗೆ ಸಮಗ್ರ ತನಿಖೆ ನಡೆಸಬೇಕು’ ಎಂದು ಒತ್ತಾಯಿಸಿದರು. ಈ ಬಗ್ಗೆ ತನಿಖೆ ನಡೆಸಲು ಸಿದ್ಧ ಎಂದು ಜೆ.ಸಿ. ಮಾಧುಸ್ವಾಮಿ ಭರವಸೆ ನೀಡಿದರು.

ಕಾಂಗ್ರೆಸ್‌ನ ಎಚ್.ಎನ್.ಶಿವಶಂಕರ ರೆಡ್ಡಿ, ‘ಸಂಸ್ಕರಿಸಿದ ತ್ಯಾಜ್ಯ ನೀರು ನಮ್ಮ ಜಿಲ್ಲೆಗೆ ನಿರೀಕ್ಷಿತ ಪ್ರಮಾಣದಲ್ಲಿ ಬರುತ್ತಿಲ್ಲ. ಬೆಂಗಳೂರಿನ ಮಳೆ ನೀರನ್ನು ಸಂಸ್ಕರಿಸಿದ ತ್ಯಾಜ್ಯ ನೀರಿನ ಜತೆಗೆ ಹರಿಸಿದರೆ ಅನುಕೂಲವಾಗುತ್ತದೆ’ ಎಂದರು.

ಮಾಧುಸ್ವಾಮಿ ಪ್ರತಿಕ್ರಿಯಿಸಿ, ‘ಎನ್‌ಜಿಟಿ ಮಾರ್ಗಸೂಚಿ ಪ್ರಕಾರ ಸಂಸ್ಕರಿಸಿದ ನೀರಿನೊಂದಿಗೆ ಮಳೆ ನೀರು ಹರಿಸಲು ಸಾಧ್ಯವಿಲ್ಲ. ಎರಡನೇ ಹಂತದ ಸಂಸ್ಕರಿಸಿದ ನೀರನ್ನು ಕುಡಿಯಲು ಬಳಸುವಂತಿಲ್ಲ’ ಎಂದರು.

ಜೆಡಿಎಸ್‌ನ ಶ್ರೀನಿವಾಸ ಗೌಡ, ‘ಎರಡನೇ ಹಂತದಲ್ಲಿ ಸಂಸ್ಕರಿಸಿದ ಕೊಳಚೆ ನೀರನ್ನು ನಾನು ಈ ಹಿಂದೆ ಕುಡಿದಿದ್ದೇನೆ. ಈಗಲೂ ಈ ನೀರನ್ನು ಕುಡಿಯಲು ಸಿದ್ಧನಿದ್ದೇನೆ’ ಎಂದರು. ‘ಇದಕ್ಕೆ ಎನ್‌ಜಿಟಿ ಒಪ್ಪುವುದಿಲ್ಲ’ ಎಂದು ಮಾಧುಸ್ವಾಮಿ ಸ್ಪಷ್ಟಪಡಿಸಿದರು.

ಮೈ ಷುಗರ್, ಮೈಸೂರು ಲ್ಯಾಂಪ್ಸ್ ಖಾಸಗೀಕರಣ: ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರವು ಬೇರೆ ಬೇರೆ ಉದ್ದೇಶ ಮತ್ತು ಹೆಸರಿನಲ್ಲಿ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳನ್ನು ಖಾಸಗಿಯವರಿಗೆ ನೀಡುವ ಹುನ್ನಾರ ಹೊಂದಿದೆ ಎಂದು ವಿಧಾನಪರಿಷತ್ತಿನಲ್ಲಿ ಕಾಂಗ್ರೆಸ್, ಜೆಡಿಎಸ್ ಸದಸ್ಯರು ಸರ್ಕಾರವನ್ನು ಮಂಗಳವಾರ ತರಾಟೆಗೆ ತೆಗೆದುಕೊಂಡರು.

ಜೆಡಿಎಸ್‌ನ ಮರಿತಿಬ್ಬೇಗೌಡ, ‘ಮೈ ಷುಗರ್ ಕಾರ್ಖಾನೆಯನ್ನು ಖಾಸಗಿಯವರಿಗೆ ಗುತ್ತಿಗೆ ನೀಡುವ ಕುರಿತು ಪರಿಶೀಲಿಸಲಾಗುತ್ತಿದೆ ಎಂದು ಸರ್ಕಾರ ಹೇಳಿದೆ. ಅದು ಸರ್ಕಾರಿ ಸ್ವಾಮ್ಯದಲ್ಲಿಯೇ ನಡೆಯಬೇಕು. ಖಾಸಗಿಯವರಿಗೆ ವಹಿಸಿದರೆ ಈ ಭಾಗದ ರೈತರು ಮತ್ತು ಕಾರ್ಮಿಕರಿಗೆ ಅನ್ಯಾಯವಾಗಲಿದೆ’ ಎಂದರು.

‘ಹಿಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರು ಕಾರ್ಖಾನೆಯನ್ನು ಖಾಸಗಿಯವರಿಗೆ ಗುತ್ತಿಗೆ ಕೊಡುವುದಿಲ್ಲ ಎಂದಿದ್ದರು. ಈಗ ಮತ್ತೆ ಕಂಪನಿಯನ್ನು ಖಾಸಗಿಯವರಿಗೆ ಭೋಗ್ಯಕ್ಕೆ ಕೊಡುವ ಪ್ರಯತ್ನಗಳು ನಡೆಯುತ್ತಿವೆ’ ಎಂದು ದೂರಿದರು.

ವಿಧಾನ ಪರಿಷತ್ತಿನಲ್ಲಿ ಸಚಿವ ಮುರುಗೇಶ ನಿರಾಣಿ ಮಾತನಾಡಿದರು

ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಸಚಿವ ಶಂಕರಪಾಟೀಲ ಮುನೇನಕೊಪ್ಪ ಪರವಾಗಿ ಉತ್ತರಿಸಿದ ಬೃಹತ್ ಕೈಗಾರಿಕಾ ಸಚಿವ ಮುರುಗೇಶ ನಿರಾಣಿ, ‘ಕಾರ್ಖಾನೆಯ ಅಭಿವೃದ್ಧಿಗೆ ಈ ಹಿಂದಿನ ಬಿಜೆಪಿ ಸರ್ಕಾರವು ₹250 ಕೋಟಿ, ಕಾಂಗ್ರೆಸ್–ಜೆಡಿಎಸ್ ನೇತೃತ್ವದ ಸಮ್ಮಿಶ್ರ ಸರ್ಕಾರವು ₹300 ಕೋಟಿ ನೀಡಿತ್ತು. ಆದರೂ, ಕಾರ್ಖಾನೆಯು ಈಗಲೂ ₹450 ಕೋಟಿ ನಷ್ಟದಲ್ಲಿದೆ’ ಎಂದರು.

> ಮೈ ಷುಗರ್ ಕಾರ್ಖಾನೆಯನ್ನು ಪಡೆಯುವ ಸಲುವಾಗಿ ಇಲ್ಲಿ ಸಮರ್ಥನೆ ಮಾಡಿಕೊಳ್ಳುತ್ತಿಲ್ಲ. ಮೈ ಷುಗರ್ ಕಾರ್ಖಾನೆ ಬಿಡ್‌ನಲ್ಲಿ ಪಾಲ್ಗೊಳ್ಳುವುದಿಲ್ಲ
>
> **ಮುರುಗೇಶ ನಿರಾಣಿ,** ಬೃಹತ್ ಕೈಗಾರಿಕಾ ಸಚಿವ

‘ಈ ಹಿಂದೆಯೂ ಕೆಲವು ಕಾರ್ಖಾನೆಗಳನ್ನು ಖಾಸಗಿಯವರಿಗೆ 30ರಿಂದ 40 ವರ್ಷದವರೆಗೆ ಭೋಗ್ಯಕ್ಕೆ ನೀಡಿದ ಉದಾಹರಣೆಗಳು ಇವೆ. ಅಂತಹ ಕಾರ್ಖಾನೆಗಳು ನಷ್ಟದಿಂದ ಹೊರ ಬಂದಿವೆ. ಕಬ್ಬು ಬೆಳೆಗಾರರು ಮತ್ತು ಕಾರ್ಮಿಕರಿಗೂ ಅನುಕೂಲವಾಗಿದೆ’ ಎಂದು ಸಮರ್ಥಿಸಿಕೊಂಡರು.

‘ಮೈ ಷುಗರ್ ಕಾರ್ಖಾನೆ ಕುರಿತು ಸಭೆ ನಡೆಸಿ ನಂತರ ತೀರ್ಮಾನ ಕೈಗೊಳ್ಳಲಾಗುವುದು ಎಂದು ಯಡಿಯೂರಪ್ಪ ಹೇಳಿದ್ದರು. ಖಾಸಗಿಯವರಿಗೆ ಗುತ್ತಿಗೆ ನೀಡುವುದಿಲ್ಲ ಎಂದು ಅವರು ಹೇಳಿರಲಿಲ್ಲ’ ಎಂದೂ ನಿರಾಣಿ ಸ್ಪಷ್ಟಪಡಿಸಿದರು.

ಖಾಸಗಿ ಆಸ್ತಿಯಾಗಿಸುವ ಹುನ್ನಾರ: ಬೆಂಗಳೂರಿನ ಮಲ್ಲೇಶ್ವರದಲ್ಲಿರುವ ದಿ ಮೈಸೂರು ಲ್ಯಾಂಪ್ ವರ್ಕ್ಸ್ ಕಂಪನಿಯನ್ನು ಖಾಸಗಿ ಆಸ್ತಿಯಾಗಿಸುವ ಹುನ್ನಾರ ನಡೆಯುತ್ತಿದೆ ಎಂದು ಜೆಡಿಎಸ್‌ನ ಕಾಂತರಾಜ್ ದೂರಿದರು.

‘ಬೆಂಗಳೂರಿನ ಹೃದಯದ ಭಾಗದಲ್ಲಿ 22 ಎಕರೆ ಪ್ರದೇಶದಲ್ಲಿರುವ ಕಂಪನಿಯ ಜಾಗದಲ್ಲಿ ‘ಬೆಂಗಳೂರು ಎಕ್ಸ್‌ಪಿರಿಯನ್ಸ್ ಪ್ರಾಜೆಕ್ಟ್’ ಯೋಜನೆಯನ್ನು ಅನುಷ್ಠಾನಗೊಳಿಸಲು ಬೆಂಗಳೂರು ಹೆರಿಟೇಜ್ ಆ್ಯಂಡ್ ಎನ್ವಿರಾನ್ಮೆಂಟ್ ಟ್ರಸ್ಟ್ ಹೆಸರಿನಲ್ಲಿ ನೋಂದಣಿ ಮಾಡಿಸಲಾಗಿದೆ. ಮುಂದೆ, ಈ ಸರ್ಕಾರಿ ಜಾಗವನ್ನು ಖಾಸಗಿ ಆಸ್ತಿಯನ್ನಾಗಿಸಿ ಮಾರಿಕೊಳ್ಳುವ ತಂತ್ರ ಇದ್ದಂತಿದೆ‘ ಎಂದು ಹೇಳಿದರು.

‘ಟ್ರಸ್ಟ್ ಮಾಡಿದರೆ ಅದು ಮಾಹಿತಿ ಹಕ್ಕು ಕಾಯ್ದೆಯಡಿ ಬರುವುದಿಲ್ಲ. ಈ ಜಾಗಕ್ಕೆ ಬಾಡಿಗೆಯೂ ಬರುವುದಿಲ್ಲ‘ ಎಂದರು.

ಸಚಿವ ಮುರುಗೇಶ ನಿರಾಣಿ, ‘ಸರ್ಕಾರದ ಮುಖ್ಯ ಕಾರ್ಯದರ್ಶಿ ಟ್ರಸ್ಟ್‌ನ ಮುಖ್ಯಸ್ಥರಾಗಿದ್ದು, ಐವರು ಐಎಎಸ್ ಅಧಿಕಾರಿಗಳು ಸದಸ್ಯರಾಗಿರುತ್ತಾರೆ. ಟ್ರಸ್ಟ್ ಸರ್ಕಾರದ್ದೇ ಆಗಿರುವುದರಿಂದ ಖಾಸಗೀಕರಣದ ಪ್ರಶ್ನೆಯೇ ಉದ್ಭವಿಸುವುದಿಲ್ಲ’ ಎಂದು ಸ್ಪಷ್ಟಪಡಿಸಿದರು.

‘ಕರ್ನಾಟಕದ ಸಂಸ್ಕೃತಿಯನ್ನು ಬಿಂಬಿಸುವ, ಆಹಾರ ಪದ್ಧತಿಯನ್ನು ಪರಿಚಯಿಸುವ ಕೇಂದ್ರವು ಈ ಜಾಗದಲ್ಲಿ ತಲೆ ಎತ್ತಲಿದೆ. ಇದನ್ನು ಸಾಮಾಜಿಕ ಹೊಣೆಗಾರಿಕೆ ನಿಧಿಯಡಿ (ಸಿಎಸ್‌ಆರ್) ಅಭಿವೃದ್ಧಿ ಪಡಿಸುವ ಉದ್ದೇಶವಿರುವುದರಿಂದ ಟ್ರಸ್ಟ್ ಎಂದು ಮಾಡಲಾಗಿದೆ’ ಎಂದೂ ನಿರಾಣಿ ಹೇಳಿದರು.

ಪ್ರವಾಹ: ಸಂತ್ರಸ್ತರಿಗೆ ಶಾಶ್ವತ ಪುನರ್ವಸತಿ

ಬೆಂಗಳೂರು: ‘ಘಟಪ್ರಭಾ ನದಿಯ ಪ್ರವಾಹದಿಂದ ಹಾನಿಗೆ ಒಳಗಾಗುವ ಮುಧೋಳ ತಾಲ್ಲೂಕಿನ ಗ್ರಾಮಗಳು ಮತ್ತು ಪಟ್ಟಣದ ಜನವಸತಿ ಪ್ರದೇಶಗಳ ಸಂತ್ರಸ್ತ ಕುಟುಂಬಗಳಿಗೆ ಶಾಶ್ವತ ಪುನರ್ವಸತಿ ಹಾಗೂ ಪರಿಹಾರ ಕಲ್ಪಿಸಲು ಸರ್ಕಾರ ಬದ್ಧ’ ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಆರ್. ಅಶೋಕ

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್ಸಿನ ಆರ್.ಬಿ. ತಿಮ್ಮಾಪೂರ ಅವರು ಪ್ರಸ್ತಾಪಿಸಿದ ವಿಷಯಕ್ಕೆ ಉತ್ತರಿಸಿದ ಸಚಿವರು, ‘ಪ್ರವಾಹಬಾಧಿತ ಹಾಗೂ ಮುಳುಗಡೆ ಪ್ರದೇಶಗಳ ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸಲು ಸರ್ಕಾರ ಮನೆಗಳನ್ನು ಕಟ್ಟಿಸುತ್ತದೆ. ಆದರೆ, ಹಳೆಯ ಜಾಗದ ಬಗ್ಗೆ ಭಾವನಾತ್ಮಕ ಸಂಬಂಧಗಳಿರುವುದರಿಂದ ಅನೇಕರು ಸ್ಥಳಾಂತರಕ್ಕೆ ಸಿದ್ಧರಿಲ್ಲ. ಸ್ಥಳಾಂತರಕ್ಕೆ ಒಪ್ಪಿಕೊಳ್ಳುವ ಕುಟುಂಬಗಳಿಗೆಪುನರ್ವಸತಿಕಲ್ಪಿಸಲುಜಿಲ್ಲಾಧಿಕಾರಿಗೆ ಸೂಚನೆ ನೀಡಲಾಗುವುದು’ ಎಂದು ಭರವಸೆ ನೀಡಿದರು.

‘ನದಿಪಾತ್ರದ ಜನರಿಗೆ ಕನಿಷ್ಠ ಒಂದೆರಡು ಗಂಟೆ ಮುಂಚಿತವಾಗಿ 6ರಿಂದ 7 ಕಿ.ಮೀ ವ್ಯಾಪ್ತಿಯವರೆಗೆ ಪ್ರವಾಹದ ಮುನ್ಸೂಚನೆ ನೀಡುವ ಸೈರನ್‌ಗಳನ್ನು ಈಗಾಗಲೇ ಕರಾವಳಿ ಪ್ರದೇಶಗಳಲ್ಲಿ ಅಳವಡಿಸಲಾಗಿದೆ. ಅಂಥದ್ದೇ 35 ಸೈರನ್‌ಗಳನ್ನು ಬಾಗಲಕೋಟೆ ಜಿಲ್ಲೆಯಲ್ಲಿ ಅಳವಡಿಸಲು ತೀರ್ಮಾನಿಸಲಾಗಿದೆ. ಮುಧೋಳ ತಾಲ್ಲೂಕಿನಲ್ಲಿ 8 ಸೈರನ್‌ಗಳು ಬರಲಿವೆ. ಜೊತೆ, ತಾಲ್ಲೂಕಿನ ಒಂಬತ್ತು ಗ್ರಾಮಗಳಲ್ಲಿ ನೀರಿನ ಮಟ್ಟ ಮಾಪನ ಉಪಕರಣಗಳನ್ನು ಅಳವಡಿಸಲಾಗುವುದು’ ಎಂದು ಅವರು ತಿಳಿಸಿದರು.

‘ಆಲಮಟ್ಟಿ ಜಲಾಶಯದಲ್ಲಿ ನೀರಿನ ಪ್ರಮಾಣ ಹೆಚ್ಚಿದಾಗ ಪ್ರವಾಹ ಉಂಟಾಗುತ್ತದೆಯೇ ಎಂಬ ಬಗ್ಗೆ ಅಧ್ಯಯನ ನಡೆಸಬೇಕು ಎಂಬ ಬೇಡಿಕೆಯಿದೆ. ಈ ವಿಚಾರವಾಗಿ ತಜ್ಞರ ಸಮಿತಿ ರಚಿಸಿ ಅಧ್ಯಯನ ನಡೆಸುವ ಬಗ್ಗೆ ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಜೊತೆಗೆ ಚರ್ಚಿಸುತ್ತೇನೆ’ ಎಂದರು.

‘ಘಟಪ್ರಭಾ ನದಿ ಪ್ರವಾಹದಿಂದ ಮುಧೋಳ ತಾಲ್ಲೂಕಿನಲ್ಲಿ 18 ಗ್ರಾಮಗಳು ಬಾಧಿತವಾಗಿದ್ದು, ಅಲ್ಲಿನ 859 ಕುಟುಂಬಗಳ 3,703 ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ. 18 ಕಾಳಜಿ ಕೇಂದ್ರಗಳನ್ನು ಆರಂಭಿಸಿ ಜುಲೈ 24ರಿಂದ ಆಗಸ್ಟ್ 4ರವರೆಗೆ 2,465 ಜನರಿಗೆ ತಾತ್ಕಾಲಿಕ ವಸತಿ ಸೌಲಭ್ಯ ಕಲ್ಪಿಸಲಾಗಿತ್ತು. 9 ಜಾನುವಾರು ಶಿಬಿರಗಳಲ್ಲಿ 2,147 ಜಾನುವಾರುಗಳಿಗೆ ಆಶ್ರಯ ನೀಡಿ, 187.28 ಟನ್ ಮೇವು ಪೂರೈಸಲಾಗಿತ್ತು. ಜಾನುವಾರು ಜೀವಹಾನಿಗೆ ₹ 36 ಸಾವಿರ ಪರಿಹಾರ ನೀಡಲಾಗಿದೆ. ಮನೆ ಹಾನಿಯಾದ 1,237 ಕುಟುಂಬಗಳಿಗೆ ತಲಾ ₹ 10 ಸಾವಿರದಂತೆ ₹ 123.70 ಲಕ್ಷ ಪರಿಹಾರ ನೀಡಲಾಗಿದೆ. ತಾಲ್ಲೂಕಿನಲ್ಲಿ 7,190 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದ್ದು, 2,024 ರೈತರಿಗೆ ₹ 2.80 ಕೋಟಿ ಇನ್‌ಪುಟ್ ಸಬ್ಸಿಡಿ ನೀಡಲಾಗಿದೆ’ ಎಂದು ಸಚಿವರು ಮಾಹಿತಿ ನೀಡಿದರು.

ಇದೇ ವಿಷಯದ ಕುರಿತು ವಿರೋಧ ಪಕ್ಷದ ನಾಯಕ ಎಸ್.ಆರ್. ಪಾಟೀಲ, ಬಿಜೆಪಿ ಸದಸ್ಯ ಹಣಮಂತ ನಿರಾಣಿ ಕೂಡಾ ಮಾತನಾಡಿದರು.

ನ.7ಕ್ಕೆ ಬೈಪಾಡಿತ್ತಾಯ ದಂಪತಿಗೆ ಯಕ್ಷಾಭಿನಂದನೆ

ಬೆಂಗಳೂರು: ಐದು ದಶಕಗಳಿಂದ ಯಕ್ಷಗಾನ ಕ್ಷೇತ್ರದಲ್ಲಿ ಸಕ್ರಿಯರಾಗಿರುವ ಹರಿನಾರಾಯಣ ಬೈಪಾಡಿತ್ತಾಯ ಹಾಗೂ ಲೀಲಾವತಿ ಬೈಪಾಡಿತ್ತಾಯ ಅವರಿಗೆ 75 ವರ್ಷಗಳು ತುಂಬಿದ ಪ್ರಯುಕ್ತ ಅವರ ಅಭಿಮಾನಿಗಳು ಹಾಗೂ ಶಿಷ್ಯ ವೃಂದದವರು ನ.7ರಂದು ಮೂಡುಬಿದಿರೆಯ ಆಲಂಗಾರಿನ ಮಹಾಗಣಪತಿ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಅಮೃತ ಮಹೋತ್ಸವ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ.

‘ಶ್ರೀ ಹರಿಲೀಲಾ-75- ಯಕ್ಷಾಭಿನಂದನಂ, ಶಿಷ್ಯಾಭಿವಂದನಂ ಹಾಗೂ ಯಕ್ಷನಾದೋತ್ಸವಂ’ ಕಾರ್ಯಕ್ರಮ ಆಯೋಜಿಸಲಾಗಿದೆ. ಪೂರ್ವರಂಗ ಪ್ರದರ್ಶನ, ಪಾರಂಪರಿಕ ಯಕ್ಷಗಾನೀಯ ಹಾಡುಗಳು, ಸಭಾ ಕಾರ್ಯಕ್ರಮ, ಗುರು ದಂಪತಿಗೆ ಅಭಿನಂದನೆ, ಅಭಿನಂದನಾ ಗ್ರಂಥ ಬಿಡುಗಡೆ, ಲೀಲಾವತಿ ಬೈಪಾಡಿತ್ತಾಯ ಅವರ ಆತ್ಮಕಥನ ಬಿಡುಗಡೆ, ಪರಂಪರೆಯ ಯಕ್ಷಗಾನ ಪ್ರದರ್ಶನ ಸೇರಿದಂತೆ ವಿವಿಧ ಕಾರ್ಯಕ್ರಮಗಳು ಇಡೀ ದಿನ ನಡೆಯಲಿವೆ. ಬೆಂಗಳೂರಿನ ಡಿಜಿ ಯಕ್ಷ ಫೌಂಡೇಷನ್ ಬೈಪಾಡಿತ್ತಾಯ ದಂಪತಿ ಹೆಸರಿನಲ್ಲಿ ಹಿರಿಯ ಕಲಾವಿದರೊಬ್ಬರಿಗೆ ‘ಯಕ್ಷನಾದ ಪುರಸ್ಕಾರ’ ಪ್ರದಾನ ಮಾಡಲಿದೆ.

ಮೂಡುಬಿದಿರೆ ಆಳ್ವಾಸ್ ಶಿಕ್ಷಣ ಸಮೂಹ ಸಂಸ್ಥೆಗಳ ಅಧ್ಯಕ್ಷ ಎಂ. ಮೋಹನ್ ಆಳ್ವ ಅವರ ಗೌರವಾಧ್ಯಕ್ಷತೆಯಲ್ಲಿ ಅಭಿನಂದನಾ ಸಮಿತಿ ರಚಿಸಲಾಗಿದೆ. ಅಧ್ಯಕ್ಷರಾಗಿ ಚಂದ್ರಶೇಖರ ಭಟ್ ಕೊಂಕಣಾಜೆ, ಕಾರ್ಯದರ್ಶಿಯಾಗಿ ಆನಂದ ಗುಡಿಗಾರ ಕೆರ್ವಾಶೆ, ಕೋಶಾಧಿಕಾರಿಯಾಗಿ ಅವಿನಾಶ್ ಬೈಪಾಡಿತ್ತಾಯ, ಸಹ ಕಾರ್ಯದರ್ಶಿಗಳಾಗಿ ಗಿರೀಶ್ ಭಟ್ ಕಿನಿಲಕೋಡಿ, ಗುರುಪ್ರಸಾದ್ ಬೊಳಿಂಜಡ್ಕ ಹಾಗೂ ಗಿರೀಶ್ ರೈ ಕಕ್ಕೆಪದವು ಅವರನ್ನು ಆಯ್ಕೆ ಮಾಡಲಾಗಿದೆ.

ವಿಮಾನ ನಿಲ್ದಾಣ ಖಾಸಗಿ ನಿರ್ವಹಣೆ ಪ್ರಶ್ನಿಸಿದ್ದ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ನಿರ್ವಹಣೆ ಹೊಣೆಯನ್ನು ಅದಾನಿ ಎಂಟರ್ ಪ್ರೈಸಸ್‌ಗೆ ಹಸ್ತಾಂತರ ನಿರ್ಣಯ ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ವಿಮಾನ ನಿಲ್ದಾಣ ಪ್ರಾಧಿಕಾರ ಉದ್ಯೋಗಿಗಳ ಸಂಘ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ಪೂರ್ಣಗೊಳಿಸಿ ಕಾಯ್ದಿರಿಸಿದ್ದ ತೀರ್ಪನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮ ನೇತೃತ್ವದ ವಿಭಾಗೀಯ ಪೀಠ ಮಂಗಳವಾರ ಪ್ರಕಟಿಸಿತು.



ಕೇರಳದ ತಿರುವನಂತಪುರ ವಿಮಾನ ನಿಲ್ದಾಣ ನಿರ್ವಹಣೆ ಹೊಣೆಯನ್ನು ಖಾಸಗಿ ಕಂಪನಿಗೆ ವಹಿಸಲಾಗಿದೆ. ಆ ನಿರ್ಣಯವನ್ನು ಅಲ್ಲಿನ ಹೈಕೋರ್ಟ್ ಎತ್ತಿ ಹಿಡಿದಿದೆ. ಕೇಂದ್ರದ ನಿರ್ಧಾರದಲ್ಲಿ ನ್ಯಾಯಾಲಯ ಮಧ್ಯ ಪ್ರವೇಶಿಸುವ ಅಗತ್ಯವಿಲ್ಲ ಎಂದು ತಿಳಿಸಿದ ಪೀಠ, ಅರ್ಜಿ ವಜಾಗೊಳಿಸಿತು.

ಮಂಗಳೂರು ವಿಮಾನ ನಿಲ್ದಾಣ ಕಾರ್ಯಚರಣೆ, ನಿರ್ವಹಣೆ ಮತ್ತು ಅಭಿವೃದ್ಧಿಯನ್ನು ಖಾಸಗಿ ಸಹಭಾಗಿತ್ವದಲ್ಲಿ ನಿರ್ವಹಿಸಲು ಕೇಂದ್ರ ಸಚಿವ ಸಂಪುಟ 2018ರಲ್ಲಿ ನಿರ್ಣಯ ಕೈಗೊಂಡಿತ್ತು. ಅದನ್ನು ಆಧರಿಸಿ ಬಿಡ್ಡಿಂಗ್ ಪ್ರಕ್ರಿಯೆ ನಡೆಸಲಾಗಿತ್ತು. ಬಿಡ್ಡಿಂಗ್‌ನಲ್ಲಿ ಭಾಗವಹಿಸಿದ್ದ ಅದಾನಿ ಎಂಟರ್ ಪ್ರೈಸಸ್ ನಿರ್ವಹಣೆ ಗುತ್ತಿಗೆ ಪಡೆದುಕೊಂಡಿದೆ.

ಇದರಿಂದ ಬರುವ ಆದಾಯ ಎಷ್ಟು ಎಂಬುದನ್ನು ಹೇಳಿಲ್ಲ. ಏಕ ಪಕ್ಷೀಯ ಒಪ್ಪಂದ ಮಾಡಿಕೊಳ್ಳಲಾಗಿದೆ. ಕೇಂದ್ರ ಸರ್ಕಾರದ ಈ ನಿರ್ಣಯ ರದ್ದುಪಡಿಸಬೇಕು ಎಂದು ಅರ್ಜಿದಾರರು ಕೋರಿದ್ದರು.

‘ಇದು ಕೇಂದ್ರ ಸರ್ಕಾರದ ನೀತಿ–ನಿರೂಪಣೆಗೆ ಸಂಬಂಧಿಸಿದ ವಿಷಯ. ಎಲ್ಲಾ ರೀತಿಯ ವಿಚಾರಗಳನ್ನು ಪರಿಶೀಲಿಸಿಯೇ ನಿರ್ಣಯ ಕೈಗೊಳ್ಳಲಾಗಿದೆ. ಈ ಹಂತದಲ್ಲಿ ನ್ಯಾಯಾಲಯ ಮಧ್ಯ ಪ್ರವೇಶ ಮಾಡಬಾರದು’ ಎಂದು ಕೇಂದ್ರ ಸರ್ಕಾರದ ಪರ ವಕೀಲರು ಕೋರಿದರು.

ನಿಫಾ ಶಂಕೆ: ಆಸ್ಪತ್ರೆಗೆ ದಾಖಲು

ಪ್ರಜಾವಾಣಿ ವಾರ್ತೆ

ಮಂಗಳೂರು: ನಿಫಾ ಸೋಂಕಿನ ಶಂಕೆಯಲ್ಲಿ ಗೋವಾದ ವ್ಯಕ್ತಿಯೊಬ್ಬರು ಇಲ್ಲಿನ ವೆನ್ಲಾಕ್ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಗೋವಾದಲ್ಲಿ ಆರ್‌ಟಿಪಿಸಿಆರ್ ಕಿಟ್ ತಯಾರಿಸುವ ಪ್ರಯೋಗಾಲಯದಲ್ಲಿ ಮೈಕ್ರೊ ಬಯಾಲಜಿಸ್ಟ್ ಆಗಿರುವ ಕಾರವಾರದ ವ್ಯಕ್ತಿ, ಹಬ್ಬಕ್ಕೆ ಬೈಕ್‌ನಲ್ಲಿ ಊರಿಗೆ ಬರುವಾಗ ಮಳೆಯಲ್ಲಿ ನೆನೆದಿದ್ದರು. ಮರುದಿನ ಜ್ವರ ಬಂದಿದ್ದು, ತಲೆನೋವು, ಹೃದಯ ಬಡಿತದಲ್ಲಿ ಏರಿಳಿತ ಕಂಡ ಅವರು ರೋಗಲಕ್ಷಣಗಳ ಬಗ್ಗೆ ಗೂಗಲ್‌ನಲ್ಲಿ ಹುಡುಕಾಟ ಮಾಡಿದ್ದಾರೆ. ಜ್ವರದ ಲಕ್ಷಣ ಆಧರಿಸಿ, ನಿಫಾ ಎಂದು ಶಂಕಿಸಿ, ಮುನ್ನೆಚ್ಚರಿಕೆಯಾಗಿ, ಆಸ್ಪತ್ರೆಗೆ ದಾಖಲಾಗಿದ್ದಾರೆ.

'ವೆನ್ಲಾಕ್ ಆಸ್ಪತ್ರೆಗೆ ದಾಖಲಾಗಿರುವ ವ್ಯಕ್ತಿಯಲ್ಲಿ ನಿಫಾ ಸೋಂಕಿನ ಲಕ್ಷಣ ಇಲ್ಲ. ಆದರೂ, ನಿರ್ಲಕ್ಷ್ಯ ಮಾಡಬಾರದೆಂದು, ಗಂಟಲು ದ್ರವ, ರಕ್ತ, ಮೂತ್ರದ ಮಾದರಿಯನ್ನು ಪರೀಕ್ಷೆಗಾಗಿ ಪುಣೆಗೆ ಕಳುಹಿಸಲಾಗಿದೆ. ವ್ಯಕ್ತಿಯ ಕುಟುಂಬಸ್ಥರನ್ನು ಕ್ವಾರಂಟೈನ್ ಮಾಡಲಾಗಿದ್ದು, ಸಂಪರ್ಕಿತರನ್ನು ಪತ್ತೆ ಹಚ್ಚಲಾಗಿದೆ' ಎಂದು ಜಿಲ್ಲಾಧಿಕಾರಿ ಡಾ. ರಾಜೇಂದ್ರ ಕೆ.ವಿ. ತಿಳಿಸಿದ್ದಾರೆ.

ನಗರ ಭೂ ಸಾರಿಗೆ ನಿರ್ದೇಶನಾಲಯ,
ನಗರಾಭಿವೃದ್ಧಿ ಇಲಾಖೆ
ಬಿಎಂಟಿಸಿ, ಟಿಟಿಎಂಸಿ, 'ಬಿ' ಬ್ಲಾಕ್ (ಬಸ್ ಸ್ಟ್ಯಾಂಡ್ ಮೇಲ್ಭಾಗ), 4ನೇ ಮಹಡಿ, ಕೆ.ಹೆಚ್ ರಸ್ತೆ, ಬೆಂಗಳೂರು–560 027. ದೂ: 080–22226627 / 6628, ಫ್ಯಾಕ್ಸ್: 080–22226630, ಇ–ಮೇಲ್: dultbangalore@gmail.com
NO. DULT-NMTOPBSN/3/2020 ದಿನಾಂಕ: 14.09.2021

ಅಧಿಸೂಚನೆ

ಕರ್ನಾಟಕ ಸರ್ಕಾರದ ನಗರ ಭೂ ಸಾರಿಗೆ ನಿರ್ದೇಶನಾಲಯ(DULT)ವು ಸಾರ್ವಜನಿಕ ಬೈಸಿಕಲ್ ಹಂಚಿಕೆ (PBS) ವ್ಯವಸ್ಥೆ ಅಥವಾ ಮೈಕ್ರೋ ಮೊಬಿಲಿಟಿ ಹಂಚಿಕೆ ವ್ಯವಸ್ಥೆ (SMMS) ಯನ್ನು ಬೆಂಗಳೂರು ನಗರದಲ್ಲಿ ಸಾರ್ವಜನಿಕ ಸಾರಿಗೆಗೆ ಮೊದಲನೇ ಮತ್ತು ಕೊನೆಯ ಮೈಲು ಸಂಪರ್ಕ ಕ್ರಮವಾಗಿ ಅಥವಾ ಅಲ್ಪ ದೂರ ಪ್ರಯಾಣಕ್ಕಾಗಿ ಒದಗಿಸಿಕೊಡಲು ಆಸಕ್ತಿಯುಳ್ಳ ಆಪರೇಟರ್‌ಗಳಿಗೆ ಪರ್ಮಿಟ್ ನೀಡಲು ಆನ್‌ಲೈನ್ ವ್ಯವಸ್ಥೆಯನ್ನು ಜಾರಿಗೆ ತಂದಿದೆ. ಸದರಿ ಯೋಜನೆ ಮತ್ತು ಪರ್ಮಿಟ್‌ಗಳಿಗೆ ಅರ್ಜಿ ಸಲ್ಲಿಸುವ ವಿಧಾನದ ಕುರಿತು ಹೆಚ್ಚಿನ ವಿವರಗಳು. www.urbantransport.kar.gov.in ವೆಬ್‌ಸೈಟ್ ನಲ್ಲಿ ಲಭ್ಯವಿರುತ್ತದೆ.

ವಾಸಾಸಂಇ/ಬೆಂನ/ಜಿಎ/1512/2021–22 ಸಹಿ/– ಜಂಟಿ ನಿರ್ದೇಶಕರು (ಆಡಳಿತ)

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೃಷಿ ವಿಶ್ವವಿದ್ಯಾಲಯ, ಧಾರವಾಡ
ಸರಕು ಖರೀದಿ ಅಧಿಕಾರಿಗಳ ಕಛೇರಿ, ಕೃಷಿ ನಗರ, ಧಾರವಾಡ–580 005
ಮಿಂಚಂಚೆ : spo@uasd.in
ನಂ. ಎಸ್‌ಪಿಒ/ಇಒ/25/802/ ಟೆಂಡರ–ಇಪ್ರೋಕ್–02/2021–22 ದಿನಾಂಕ : 11.09.2021

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರಮೆಂಟ್ ಮೂಲಕ)

ಕೃಷಿ ವಿಶ್ವವಿದ್ಯಾಲಯ, ಧಾರವಾಡದಲ್ಲಿ ವೈಜ್ಞಾನಿಕ ಉಪಕರಣಗಳು, ಪಿಠೋಪಕರಣಗಳು, ಕೃಷಿ ಸಲಕರಣೆಗಳು ಹಾಗೂ ಇನ್ನಿತರ ಸಾಮಗ್ರಿಗಳ ಖರೀದಿಗಾಗಿ ಟೆಂಡರನ್ನು ಆಹ್ವಾನಿಸಿದ್ದು ನೋಂದಾಯಿತ ಸರಬರಾಜುದಾರರು ಟೆಂಡರಿನಲ್ಲಿ ಭಾಗವಹಿಸಲು ಮುಂದೆ ಹೇಳಿದ ವೆಬ್‌ಸೈಟನ್ನು ಆನ್‌ಲೈನ ಮುಖಾಂತರ ಸಂಪರ್ಕಿಸುವುದು www.eproc.karnataka.gov.in

ಟೆಂಡರ್ ವೇಳಾಪಟ್ಟಿ

ಟೆಂಡರ್ ವಿಚಾರಣೆ / ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ	:	17.09.2021 (ಶುಕ್ರವಾರ) 16.00 ಗಂಟೆಯವರೆಗೆ
ಪ್ರಿ ಬಿಡ್ ಮೀಟಿಂಗ್ ದಿನಾಂಕ ಮತ್ತು ಸಮಯ ಸ್ಥಳ ಆಸ್ತಿ ಅಧಿಕಾರಿಗಳ ಕಛೇರಿ, ಕೃ.ವಿ.ವಿ ಧಾರವಾಡ	:	20.09.2021 (ಸೋಮವಾರ) 12.00 ಗಂಟೆ
ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ	:	28.09.2021 (ಮಂಗಳವಾರ) 16.00 ಗಂಟೆಯವರೆಗೆ
ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ (ಐಟಂ. ನಂ. 32, 33, ಹಾಗೂ 34)	:	29.09.2021 (ಬುಧವಾರ) 16.10 ಗಂಟೆ
ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	:	30.09.2021 (ಗುರುವಾರ) 16.15 ಗಂಟೆ

ಟೆಂಡರಿನಲ್ಲಿ ಭಾಗವಹಿಸಲಿಚ್ಛಿಸುವ ಸರಬರಾಜುದಾರರು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಬೆಂಗಳೂರು, ಇವರಲ್ಲಿ ನೋಂದಣಿ ಮಾಡಿಕೊಂಡಿರಬೇಕು. ನೋಂದಣಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 080–46010000. ಭಾಗವಹಿಸುವ ಸರಬರಾಜುದಾರರು ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಬಿಡ್‌ಗಳನ್ನು ಸಲ್ಲಿಸುವುದು. ಹೆಚ್ಚಿನ ವಿವರಗಳಿಗಾಗಿ 0836–2444438 ದೂರವಾಣಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು. ಬಿಡ್‌ದಾರರು ಟೆಂಡರಿನ ಒಟ್ಟಾರೆ ಅವಧಿಯಲ್ಲಿ ಆನ್‌ಲೈನ್ ಮೂಲಕ www.eproc.karnataka.gov.in ನಲ್ಲಿ ನೀಡಲಾಗುವ ತಿದ್ದುಪಡಿ / ಸೇರ್ಪಡೆ (ಇದ್ದಲ್ಲಿ) ತಪ್ಪದೇ ಗಮನಿಸುವುದು.

ವಾಸಾಇ/ಧಾ/493/2021–22/ದೇಶಪಾಂಡೆಪಬ್ಲಿಸಿಟಿ ಸಹಿ/– ಆಸ್ತಿ ಅಧಿಕಾರಿಗಳು

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ– 571 401
(Autonomous Medical Institution, Government of Karnataka)
Phone: 08232-231003, 222086, 231197, 224040,
Fax: 08232-231001
E-Mail Address: mimsmandyaoffice@gmail.com , mimsmandya@gmail.com

ಮರು ಇ–ಟೆಂಡರ್ ಪ್ರಕಟಣೆ – (ದ್ವಿಲಕೋಟೆ ಪದ್ಧತಿ)

ಸಂಖ್ಯೆ:ಮಿಮ್ಸ್/ಸರಬ/ವೈ.ಶಾ/ರಿ.ಇ–ಟೆಂ/05/2019–20, ದಿ:09.09.2021

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ವೈದ್ಯಶಾಸ್ತ್ರ ವಿಭಾಕ್ಕೆ ಅವಶ್ಯವಿರುವ Echo cardiography Machine ನ್ನು ಸರಬರಾಜು ಮಾಡಲು ಉತ್ಪಾದಕರವರಿಂದ/ ನೊಂದಾಯಿಸಲ್ಪಟ್ಟ ಅಧಿಕೃತ ಮಾರಾಟಗಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಮರು ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೊತ್ತ **ರೂ.35.00 ಲಕ್ಷಗಳು (ಎಲ್ಲಾ ತೆರಿಗೆ ಇತ್ಯಾದಿಗಳು ಸೇರಿ)**. ಮರು ಇ–ಟೆಂಡರ್ ಅರ್ಜಿ ಸಲ್ಲಿಸುವ ಪ್ರಾರಂಭದ **ದಿನಾಂಕ: 13.09.2021,** ಭರ್ತಿ ಮಾಡಿದ ಟೆಂಡರ್ ಅರ್ಜಿ ಸಲ್ಲಿಸಲು ಅಂತಿಮ **ದಿನಾಂಕ:28.09.2021 ರ ಸಂಜೆ 5.30 ಗಂಟೆ.** ಟೆಂಡರ್ ಪ್ರಕ್ರಿಯೆ ದಿನಾಂಕ ಮತ್ತಿತ್ತರ ವಿವರಗಳನ್ನು ಜಿಒಕೆ ಇ–ಪ್ರ್ರೊಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಮ್ ಮುಖಾಂತರ www.eproc.karnataka.gov.in ವೆಬ್ ಸೈಟ್‌ನಲ್ಲಿ ವೀಕ್ಷಿಸಬಹುದು. ಟೆಂಡರಿನ ಬಗ್ಗೆ ಹೆಚ್ಚಿನ ಮಾಹಿತಿ ಅಥವಾ ಸ್ಪಷ್ಟೀಕರಣಕ್ಕಾಗಿ ಕೆಲಸದ ವೇಳೆಯಲ್ಲಿ (ರಜಾ ದಿನಗಳನ್ನು ಹೊರತುಪಡಿಸಿ) ನಿರ್ದೇಶಕರವರ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/–ಮುಖ್ಯ ಆಡಳಿತಾಧಿಕಾರಿಗಳು,
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ.
DIPR/AD-MDY/MCA/335/2021-22

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
"ಸಂಪರ್ಕ ಸೌಧ", ನಂ.8, ಡಾ|| ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು–560010. ಟೆಲಿಫ್ಯಾಕ್ಸ್: 080–22024000
ವೆಬ್‌ಸೈಟ್: www.krdcl.in
ಸಂ. ಕೆಆರ್‌ಡಿಸಿಎಲ್/ಇಎನ್‌ವಿ/ಟ್ರೀ ಟಿಆರ್‌ಪಿ/2021–22/09 ದಿನಾಂಕ : 13–09–2021

ಪ್ರಕಟಣೆ

1. ವಿವಿಧ ಗುರುತಿಸಿದ ಸ್ಥಳಗಳಲ್ಲಿ ಮರಗಳ ಸ್ಥಳಾಂತರ ಮತ್ತು ಕರ್ನಾಟಕ ರಾಜ್ಯದಲ್ಲಿ ಕೆಆರ್‌ಡಿಸಿಎಲ್ ನಿಂದ ನಡೆಸುವ ಅಭಿವೃದ್ಧಿ ಕಾರ್ಯಗಳಿಂದ ಸ್ಥಳಾಂತರಗೊಂಡ ಮರಗಳ ನಿರ್ವಹಣೆಗಾಗಿ ಮುಚ್ಚಿದ ಲಕೋಟೆಯಲ್ಲಿ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ.
2. ಆಸಕ್ತಿಯುಳ್ಳ ಸಂಸ್ಥೆಗಳು ಮುಚ್ಚಿದ ಲಕೋಟೆಯಲ್ಲಿನ ದರಪಟ್ಟಿಗಳನ್ನು ಕಾರ್ಯಪಾಲಕ ಅಭಿಯಂತರರು, ಯೋಜನಾ ಕಛೇರಿ, ಬೆಂಗಳೂರು ಉತ್ತರ, ಸಂಪರ್ಕ ಸೌಧ, 3ನೇ ಮಹಡಿ, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಡಾ.ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, 1ನೇ ಬ್ಲಾಕ್, ಬೆಂಗಳೂರು – 10 ಇಲ್ಲಿಗೆ ಸಲ್ಲಿಸಬೇಕು.
3. ಮುಚ್ಚಿದ ಲಕೋಟೆಯಲ್ಲಿನ ದರಪಟ್ಟಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **18–09–2021ರಂದು ಸಂಜೆ 3.30 ಗಂಟೆಯವರೆಗೆ.**
4. ಸಂಸ್ಥೆಯ ನಿಗದಿತ ಅರ್ಜಿಯಲ್ಲಿ ಎಲ್ಲಾ ದಾಖಲೆಗಳೊಂದಿಗೆ ಸಲ್ಲಿಸಬೇಕು.
5. ಮುಚ್ಚಿದ ಲಕೋಟೆಗಳ ದರಪಟ್ಟಿಗಳನ್ನು ದಿನಾಂಕ **18–09–2021ರಂದು ಸಂಜೆ 5.00 ಗಂಟೆಗೆ** ತೆರೆಯಲಾಗುವುದು.
6. ಸಂಸ್ಥೆಯ ಖಾಸಗಿ / ಅರೆ–ಸರ್ಕಾರಿ / ಸರ್ಕಾರಿ / ಸಂಸ್ಥೆಗಳಲ್ಲಿ ಇದೇ ಮಾದರಿಯ ಕಾಮಗಾರಿಗಳನ್ನು ಕಳೆದ 3 ವರ್ಷಗಳಲ್ಲಿ ಕಾರ್ಯಗತಗೊಳಿಸಿರಬೇಕು.
7. ಕೆಆರ್‌ಡಿಸಿಎಲ್ ಕನಿಷ್ಠ ಬೆಲೆಯ ಆಧಾರದ ಮೇಲೆ ಸಂಸ್ಥೆಗೆ ಕಾಮಗಾರಿಯನ್ನು ನೀಡಲಾಗುವುದು.
8. ದರಪಟ್ಟಿಗಳನ್ನು ಯಾವುದೇ ಕಾರಣಗಳನ್ನು ನೀಡದೆ ಪುರಸ್ಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆಆರ್‌ಡಿಸಿಎಲ್ ಕಾಯ್ದಿರಿಸುತ್ತದೆ.
9. ದರಪಟ್ಟಿಗಳನ್ನು ಸಲ್ಲಿಸಲು ಯಾವುದೇ ಸೇರ್ಪಡೆಗಳು / ಸ್ಪಷ್ಟೀಕರಣ / ಕಾರ್ಯಚಟುವಟಿಕೆಗಳ ವಿವರಗಳನ್ನು ಕೆಆರ್‌ಡಿಸಿಎಲ್ ಅಧಿಕೃತ ವೆಬ್‌ಸೈಟ್ www.krdcl.in ನಲ್ಲಿ ಮತ್ತು ಕೆಆರ್‌ಡಿಸಿಎಲ್ ಪ್ರಕಟಣಾ ಫಲಕದಲ್ಲಿ ಪ್ರಕಟಿಸಲಾಗುವುದು.
10. ದರಪಟ್ಟಿಗಳನ್ನು ನಿಗದಿತ ನಮೂನೆಯಲ್ಲಿ ಅನುಸೂಚಿ–ಎ ಮತ್ತು ಅನುಸೂಚಿ–ಬಿ ಗಳಲ್ಲಿ ಸಲ್ಲಿಸಬೇಕು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಯೋಜನಾ ಕಛೇರಿ, ಬೆಂಗಳೂರು ಉತ್ತರ,
ಕೆಆರ್‌ಡಿಸಿಎಲ್, ಬೆಂಗಳೂರು.
ವಾ.ಸ.ಇ/ಬೆಂ.ನಗರ/R.O.No.1490/2021-22

ಕೋವಿಡ್–19 ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು
ಕೆಆರ್‌ಎಸ್*	124.80	116.60	14,887	10,951
ಹಾರಂಗಿ	2,859	2,858.62	3,250	3,850
ಕಬಿನಿ	2,284	2,283.61	13,970	12,000
ಹೇಮಾವತಿ	2,922	2,916.36	9,960	5,222
ಲಿಂಗನಮಕ್ಕಿ	1,819	1,815.90	29,400	-
ಸೂಪಾ (ಮೀ)	564	556.68	21,854	2,829
ಮಾಣಿ	594.36	587.62	4,140	-
ತುಂಗಭದ್ರಾ	1,633	1,632.98	60,000	63,000
ಮಲಪ್ರಭಾ	2,079.50	2,079.50	4,019	4,194
ಘಟಪ್ರಭಾ	2,175	2,175	13,407	13,407
ಭದ್ರಾ	186	185.60	14,296	15,812
ಆಲಮಟ್ಟಿ (ಮೀ)	519.60	519.55	89,000	1,20,000
ನಾರಾಯಣಪುರ (ಮೀ)	492.25	491.93	95,800	1,14,360

* ನೆಲಮಟ್ಟದಿಂದ

ತುಂಗಭದ್ರಾ ನದಿಗೆ ನೀರು: ನದಿಪಾತ್ರದ ಜನರಿಗೆ ಮುನ್ನೆಚ್ಚರಿಕೆ

ಹುಬ್ಬಳ್ಳಿ: ತುಂಗಭದ್ರಾ ಜಲಾನಯನ ಪ್ರದೇಶದಲ್ಲಿ ಉತ್ತಮ ಮಳೆ ಆಗುತ್ತಿರುವುದರಿಂದ ಭಾರಿ ಪ್ರಮಾಣದಲ್ಲಿ ಹೊಸಪೇಟೆಯ ತುಂಗಭದ್ರಾ ಜಲಾಶಯಕ್ಕೆ ನೀರು ಹರಿದು ಬರುತ್ತಿದ್ದು, ಹತ್ತು ಕ್ರಸ್ಟ್‌ಗೇಟ್‌ಗಳಿಂದ ಮಂಗಳವಾರ ಸಂಜೆ ನದಿಗೆ 50 ಸಾವಿರ ಕ್ಯುಸೆಕ್ ನೀರು ಹರಿಸಲಾಗುತ್ತಿದೆ.

ನದಿ ಪಾತ್ರದಲ್ಲಿ ಜನರು ಎಚ್ಚರಿಕೆಯಿಂದಇರಲುಸೂಚಿಸಿದ್ದು,ತೆಪ್ಪ,ದೋಣಿ ಸಂಚಾರಕ್ಕೆ ನಿರ್ಬಂಧಕ್ಕೆ ಹೇರಲಾಗಿದೆ.

ಮೂರು ಕಿರುಸೇತುವೆ ಮುಳುಗಡೆ: ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ಮತ್ತು ನಿಪ್ಪಾಣಿ ತಾಲ್ಲೂಕುಗಳಲ್ಲಿ ಮಂಗಳವಾರ ಮಳೆಯ ಅಬ್ಬರ ತಗ್ಗಿದ್ದರೂ ಮಹಾರಾಷ್ಟ್ರದ ವಿವಿಧ ಜಲಾಶಯಗಳಿಂದ 79,126 ಕ್ಯುಸೆಕ್ ನೀರು ಕೃಷ್ಣಾ ಮತ್ತು ದೂಧಗಂಗಾ ನದಿಗಳಿಗೆ ಹರಿದು ಬರುತ್ತಿದ್ದು ತಾಲ್ಲೂಕಿನಲ್ಲಿ ನದಿಗಳ ಒಳಹರಿವು ಹೆಚ್ಚಳವಾಗಿದೆ. ಮೂರು ಕಿರು ಸೇತುವೆಗಳು ಮುಳುಗಡೆಯಾಗಿವೆ.

ಮಹಾರಾಷ್ಟ್ರ ಕೃಷ್ಣಾ ಕಣಿವೆಯಲ್ಲಿ ಸುರಿಯುತ್ತಿರುವ ಮಳೆಯಿಂದಾಗಿ, ಆಲಮಟ್ಟಿ ಜಲಾಶಯದ ಎಲ್ಲಾ 26 ಗೇಟ್ ಗಳನ್ನು ತೆರೆಯಲಾಗಿದ್ದು, 1.20 ಲಕ್ಷ ಕ್ಯುಸೆಕ್ ನೀರನ್ನು ನದಿ ಪಾತ್ರಕ್ಕೆ ಹರಿಸಲಾಗುತ್ತಿದೆ.

ಹೆಚ್ಚಿದ ಜಲಾಶಯಗಳ ಒಳಹರಿವು (ಶಿವಮೊಗ್ಗ ವರದಿ): ಜಿಲ್ಲೆಯ ಹಲವೆಡೆ ಮೂರು ದಿನಗಳಿಂದ ನಿರಂತರವಾಗಿ ಮಳೆ ಸುರಿಯುತ್ತಿದ್ದು, ಜಲಾಶಯಗಳ ನೀರಿನ ಮಟ್ಟ ಹೆಚ್ಚಳವಾಗಿದೆ.

ಹೊಸನಗರದಲ್ಲಿ 16.78 ಸೆಂ.ಮೀ, ತೀರ್ಥಹಳ್ಳಿಯಲ್ಲಿ 25.80 ಮಿ.ಮೀ, ಸಾಗರದಲ್ಲಿ 17 ಮಿ.ಮೀ, ಸೊರಬದಲ್ಲಿ 10 ಮಿ.ಮೀ, ಶಿವಮೊಗ್ಗದಲ್ಲಿ 9.60 ಮಿ.ಮೀ, ಶಿಕಾರಿಪುರದಲ್ಲಿ 7.40 ಮಿ.ಮೀ, ಭದ್ರಾವತಿಯಲ್ಲಿ 7.20 ಮಿ.ಮೀ ಮಳೆಯಾಗಿದೆ.

ಹಿನ್ನೀರು ಭಾಗದಲ್ಲಿ ನಿರಂತರವಾಗಿ ಮಳೆ ಸುರಿಯುತ್ತಿರುವುದರಿಂದ ಜಲಾಶಯಗಳಿಗೆ ಹೆಚ್ಚಿನ ಪ್ರಮಾಣದ ನೀರು ಹರಿದು ಬರುತ್ತಿದೆ. ಲಿಂಗನಮಕ್ಕಿ ಜಲಾಶಯಕ್ಕೆ 29,400 ಕ್ಯುಸೆಕ್ ನೀರು ಹರಿದುಬರುತ್ತಿದೆ. ಭದ್ರಾ ಜಲಾಶಯಕ್ಕೆ 14,296 ಕ್ಯುಸೆಕ್ ನೀರು ಹರಿದುಬರುತ್ತಿದ್ದು, 15,812 ಕ್ಯುಸೆಕ್ ನೀರನ್ನು ಹೊರಬಿಡಲಾಗುತ್ತಿದೆ. ತುಂಗಾ ಜಲಾಶಯಕ್ಕೆ 21,487 ಕ್ಯುಸೆಕ್ ನೀರು ಹರಿದುಬರುತ್ತಿದ್ದು, ಅಷ್ಟೇ ಪ್ರಮಾಣದ ನೀರನ್ನು ನದಿಗೆ ಹರಿಸಲಾಗುತ್ತಿದೆ.

ಜಲಸಂಪನ್ಮೂಲ ಇಲಾಖೆ
ಸಮಗ್ರ ಜಲಸಂಪನ್ಮೂಲ ನಿರ್ವಹಣಾ ಉನ್ನತ ಕೇಂದ್ರ (ACIWRM)
#1/1, 1ನೇ ಮಹಡಿ, ಕೆ.ಎಸ್.ಎಫ್.ಸಿ. ಭವನ, ತಿಮ್ಮಯ್ಯರಸ್ತೆ, ಬೆಂಗಳೂರು–560052.
ಸಂ.:ACIWRM/EIC/RTWQMS/2021-22/228 ದಿನಾಂಕ: 14.09.2021

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಜಲಸಂಪನ್ಮೂಲ ಇಲಾಖೆಯ, ಸಮಗ್ರ ಜಲಸಂಪನ್ಮೂಲ ನಿರ್ವಹಣಾ ಉನ್ನತ ಕೇಂದ್ರವು **"Supply, Installation, Commissioning & Maintenance of Four(4) numbers of Real Time Water Quality Monitoring Stations (RTWQMS) across Tungabhadra River and a Central Server with 5-year Comprehensive Maintenance Contract (CMC)** ಕಾಮಗಾರಿಗಾಗಿ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಗುತ್ತಿಗೆದಾರರು ಹೆಚ್ಚಿನ ವಿವರಗಳಿಗಾಗಿ ದಿನಾಂಕ: 15.09.2021ರ 13.00 ಗಂಟೆಯ ನಂತರ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಗೆ ಭೇಟಿ ನೀಡಿ ಮಾಹಿತಿ ಪಡೆಯಬಹುದು. ಟೆಂಡರ್‌ಗಳನ್ನು https://eproc.karnataka.gov.in ನಲ್ಲಿ ಎಲೆಕ್ಟ್ರಾನಿಕ್ ರೂಪದಲ್ಲಿ ಮಾತ್ರ ಸಲ್ಲಿಸಬಹುದಾಗಿದೆ. ವಿವರಗಳು www.waterresources.kar.nic.in ಮತ್ತು www.aciwrm.org ನಲ್ಲಿಯೂ ಲಭ್ಯವಿದೆ. ಯಾವುದೇ ಸ್ಪಷ್ಟೀಕರಣ/ಹೆಚ್ಚಿನ ಮಾಹಿತಿ ಅವಶ್ಯವಿದ್ದಲ್ಲಿ registrar@aciwrm.org ಗೆ ಇ–ಮೇಲ್ ಕಳುಹಿಸಿ ಪಡೆಯಬಹುದಾಗಿದೆ.

ಸಹಿ/– ನಿಬಂಧಕರು/ಪ್ರಧಾನ ಇಂಜಿನಿಯರ್
ಎಸಿಐಡಬ್ಲ್ಯೂಆರ್‌ಎಂ, ಬೆಂಗಳೂರು
DIPR/DDU/YC/1508/2021-22

ಲೋಕೋಪಯೋಗಿ ಇಲಾಖೆ
ಅಲ್ಪಾವಧಿ ಐಟಂವಾರು ಟೆಂಡರ್ ಅಧಿಸೂಚನೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
ಐ.ಎಫ್‌.ಟಿ ಸಂಖ್ಯೆ 8/2021–22 ದಿನಾಂಕ 13.09.2021

ಟೆಂಡರ್ ಅಧಿಸೂಚನೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಹುಣಸೂರು ಲೋಕೋಪಯೋಗಿ ವಿಶೇಷ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರಿಂದ ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿನ "ಇ–ಪ್ರೊಕ್ಯೂರ್‌ಮೆಂಟ್" ಮೂಲಕ ನೊಂದಾಯಿತ 4ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಟೆಂಡರನ್ನು "ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್" ನಲ್ಲಿನ ಷರತ್ತುಗಳಿಗನುಗುಣವಾಗಿ ಒಟ್ಟು–12 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ದಿ: 13.09.2021 ರಿಂದ ಇ–ಪ್ರೊಕ್ಯೂರ್‌ಮೆಂಟ್ ವೆಬ್ ಸೈಟ್ https://eproc.karnataka.gov.in ರಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರಿಗಿಟ್ಟ ಮೊತ್ತ ಗರಿಷ್ಠ ರೂ.49.10 ಲಕ್ಷಗಳು ಮತ್ತು ಕನಿಷ್ಠ ರೂ.0.62 ಲಕ್ಷಗಳು ಗರಿಷ್ಠ ಇ.ಎಂ.ಡಿ ರೂ.98,200/– ಮತ್ತು ಕನಿಷ್ಠ ರೂ.1,550/– ಗುತ್ತಿಗೆ ಕಾಲಾವಧಿ ಗರಿಷ್ಠ 5–ತಿಂಗಳು ಮತ್ತು ಕನಿಷ್ಠ 45–ದಿನಗಳು ಆಗಿರುತ್ತದೆ. ಹಾಗೂ ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸಲು ಕಡೆಯ ದಿ: 22.09.2021 (16.00 ಗಂಟೆಯವರೆಗೆ) ಎಂದು ನಿಗದಿಪಡಿಸಲಾಗಿದೆ. ಹಾಗೂ ಟೆಂಡರು ಪ್ರಕಟಣೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಲೋ.ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಶೇಷ ವಿಭಾಗ, ಹುಣಸೂರು
DIPR/DDMYS/MCA/504/2021-22

ಬೆಂಗಳೂರು ಮೆಟ್ರೋ ರೈಲ್ ನಿಗಮ ನಿಯಮಿತ
ನಮ್ಮ ಮೆಟ್ರೋ namma metro
(ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರ ಸಹಭಾಗಿತ್ವದ ಒಂದು ಉದ್ಯಮ)
ಇ–ಮೇಲ್ : bmrcl@dataone.in ವೆಬ್‌ಸೈಟ್: www.bmrc.co.in
ಟೆಂಡರ್ ಸಂಖ್ಯೆ: ಬಿಎಂಆರ್‌ಸಿಎಲ್/ಇಡಿ(ಸಿ&ಎಎಂ)/ಪಿಡಿ/ಸಲಹಾ ಸೇವೆಗಳು–ರೀಟೇಲ್/2021–22 ದಿನಾಂಕ: 13.09.2021

ತಿದ್ದುಪಡಿ

ಟೆಂಡರ್ ಸಂಖ್ಯೆ: ಬಿಎಂಆರ್‌ಸಿಎಲ್/ಇಡಿ(ಸಿ&ಎಎಂ)/ಪಿಡಿ/ಸಲಹಾ ಸೇವೆಗಳು–ರೀಟೇಲ್/2021–22 ದಿನಾಂಕ: 16.08.2021

ಬಿಎಂಆರ್‌ಸಿಎಲ್, **ಇವರು ಬೈಯ್ಯಪ್ಪನಹಳ್ಳಿ, ಇಂದಿರಾನಗರ, ಎಂ.ಜಿ. ರಸ್ತೆ, ಕೆಂಪೇಗೌಡ (ಮೆಜೆಸ್ಟಿಕ್) ಮತ್ತು ಯಲಚೇನಹಳ್ಳಿ ಮೆಟ್ರೋ ನಿಲ್ದಾಣಗಳಲ್ಲಿ ರೀಟೇಲ್, ಆಹಾರ ಮತ್ತು ಪಾನೀಯ ಮಳಿಗೆಗಳ ಮುಖಾಂತರ ನಾನ್–ಫೇರ್ ಬಾಕ್ಸ್ ಆದಾಯ ಹೆಚ್ಚಿಸಲು ಸಲಹಾ ಸೇವೆಗಳನ್ನು ನೀಡಲು** ಆಹ್ವಾನಿಸಲಾದ ಬಿಡ್‌ಗಳಿಗೆ ಸಂಬಂಧಿಸಿದಂತೆ ಬಿಡ್ ಪಡೆಯಲು ಹಾಗೂ ಸಲ್ಲಿಸಲು ಕೊನೆಯ ದಿನಾಂಕಗಳನ್ನು ಈ ಕೆಳಕಂಡಂತೆ ವಿಸ್ತರಿಸಲಾಗಿದೆ.

ಬದಲಾದ ವೇಳಾಪಟ್ಟಿ ವಿವರ: (1) ಕಚೇರಿ ಮತ್ತು ಆನ್‌ಲೈನ್ ಮುಖಾಂತರ ಟೆಂಡರ್ ದಸ್ತಾವೇಜುಗಳನ್ನು ಖರೀದಿಸಲು ಕೊನೆಯ **ದಿನಾಂಕ: 24.09.2021.**
(2) ಬಿಡ್ ಸಲ್ಲಿಸುವ **ದಿನಾಂಕ: 29.09.2021, ಬೆಳಿಗ್ಗೆ 11.00 ಗಂಟೆಯೊಳಗೆ.**
(3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 29.09.2021, ಬೆಳಿಗ್ಗೆ 11.30 ಗಂಟೆಗೆ.**
ಇತರೆ ಯಾವುದೇ ಬದಲಾವಣೆಗಳು/ಮಾಹಿತಿಗಳಿಗೆ ನಮ್ಮ ವೆಬ್‌ಸೈಟ್: www.bmrc.co.in ನಲ್ಲಿ ಟೆಂಡರ್ ಪೇಜ್ ಪರಿವೀಕ್ಷಿಸಿ.

ಸಹಿ/–
ಕಾರ್ಯನಿರ್ವಾಹಕ ನಿರ್ದೇಶಕರು (ಸಿ & ಎಎಂ)

ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಎಚ್‌. ಕಾಂತರಾಜು ಸ್ಪಷ್ಟನೆ

'ಜಾತಿ ಗಣತಿ ವರದಿ'ಗೆ ಸದಸ್ಯ ಕಾರ್ಯದರ್ಶಿ ಸಹಿ ಇದೆ

ಹುಬ್ಬಳ್ಳಿ: 'ಜಾತಿ ಜನಗಣತಿಗೆ ಸಂಬಂಧಿಸಿದಂತೆ ಹಂತಹಂತವಾಗಿ ಸಿದ್ಧಪಡಿಸಿದ ಎಲ್ಲಾ ವರದಿಗಳಿಗೆ ಸದಸ್ಯ ಕಾರ್ಯದರ್ಶಿ ಸಹಿ ಹಾಕಿದ್ದಾರೆ. ಅಂತಿಮ ವರದಿಗಷ್ಟೇ ಹಾಕಿಲ್ಲ. ಈಗಲಾದರೂ ಅದಕ್ಕೆ ಸಹಿ ಹಾಕಿ, ಸದನದಲ್ಲಿ ಮಂಡಿಸಿ ಜಾರಿಗೆ ತರಬೇಕು...'

'ಜಾತಿ ಜನಗಣತಿಯ ಗೊಂದಲ' ಕುರಿತು 'ಪ್ರಜಾವಾಣಿ' ಮಂಗಳವಾರ ಆಯೋಜಿಸಿದ್ದ ಬಹುಮಾಧ್ಯಮ ಸಂವಾದದಲ್ಲಿ, ವರದಿ ಕುರಿತು ಸದಸ್ಯ ಕಾರ್ಯದರ್ಶಿ ಸಹಿ ವಿಚಾರವಾಗಿ ನಡೆಯುತ್ತಿರುವ ಚರ್ಚೆಗೆ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಎಚ್‌. ಕಾಂತರಾಜು ಸ್ಪಷ್ಟನೆ ನೀಡಿದರು.

ರಾಜ್ಯ ಯೋಜನಾ ಮಂಡಳಿ ಉಪಾಧ್ಯಕ್ಷ ಬಿ.ಜೆ. ಪುಟ್ಟಸ್ವಾಮಿ, ಮಾಜಿ ಸಚಿವ ಕಾಂಗ್ರೆಸ್‌ನ ಡಾ.ಎಚ್‌.ಸಿ. ಮಹಾದೇವಪ್ಪ, ವಕೀಲೆ ಹಾಗೂ ಸಾಮಾಜಿಕ ಕಾರ್ಯಕರ್ತೆ ರಾಜಲಕ್ಷ್ಮಿ ಅಂಕಲಗಿ ಸಂವಾದದಲ್ಲಿ ಭಾಗವಹಿಸಿದ್ದರು. 'ಸಾಮಾಜಿಕ ನ್ಯಾಯ ಮತ್ತು ಸಮಸಮಾಜ ನಿರ್ಮಾಣಕ್ಕಾಗಿ ಜಾತಿ ಜನಗಣತಿ ವರದಿ ಜಾರಿಯಾಗಬೇಕು' ಎಂದು ಎಲ್ಲರೂ ಸಮಾನ ಅಭಿಪ್ರಾಯ ವ್ಯಕ್ತಪಡಿಸಿದರು.

'ಯಾರು ಮಾಡಿಸಿದರು ಎಂಬುದು ಮುಖ್ಯವಲ್ಲ'

'ಸಮೀಕ್ಷೆಯಿಂದ ಯಾರೂ ಹೊರಗುಳಿಯದಂತೆ ನೋಡಿಕೊಳ್ಳಲಾಗಿದೆ. ಗ್ರಾಮಾಂತರ ಪ್ರದೇಶದಲ್ಲಿ ಶೇ 98 ಹಾಗೂ ಬೆಂಗಳೂರಿನ ಶೇ 88ರಷ್ಟು ಭಾಗ ಸಮೀಕ್ಷೆಗೆ ಒಳಪಟ್ಟಿದೆ. ಸಂವಿಧಾನದ ಪೀಠಿಕೆಯ ಉದ್ದೇಶ ಈಡೇರಬೇಕಾದರೆ ಇಂತಹ ಸಮೀಕ್ಷೆ ನಡೆಯಬೇಕು. ಯಾವ ಸರ್ಕಾರ ಜಾತಿ ಜನಗಣತಿಯನ್ನು ಮಾಡಿಸಿತು ಎಂಬುದು ಇಲ್ಲಿ ಮುಖ್ಯವಲ್ಲ. ಇದು ಸಂವಿಧಾನದ ಆಜ್ಞಾಪನವಾಗಿದೆ. ಹಿಂದಿನ ಮಂಡಲ್ ಆಯೋಗವನ್ನು ನೇಮಿಸಿದ್ದು ಮೊರಾರ್ಜಿ ದೇಸಾಯಿ ಸರ್ಕಾರ. ನಂತರ ಇಂದಿರಾ ಗಾಂಧಿ ಸರ್ಕಾರ ವರದಿ ಸ್ವೀಕರಿಸಿತು. ಅಂತಿಮವಾಗಿ ವಿ.ಪಿ. ಸಿಂಗ್ ಸರ್ಕಾರ ಜಾರಿಗೆ ತಂದಿತು'.

ಎಚ್‌. ಕಾಂತರಾಜು, ಮಾಜಿ ಅಧ್ಯಕ್ಷ, ರಾಜ್ಯ ಹಿಂದುಳಿದ ವರ್ಗಗಳ ಆಯೋಗ

'ಪಟ್ಟಭದ್ರರ ಹುನ್ನಾರ'



'ಸಂವಿಧಾನ ಮತ್ತು ಸಾಮಾಜಿಕ ನ್ಯಾಯದ ವಿರುದ್ಧ ನಿಲುವು ತಳೆದಿರುವ ಪಟ್ಟಭದ್ರ ಶಕ್ತಿಗಳು ಜಾತಿ ಜನಗಣತಿ ವರದಿ ಜಾರಿಯಾಗದಂತೆ ಹುನ್ನಾರ ಮಾಡುತ್ತಿವೆ. ಜಾತಿಯನ್ನು ವೈಭವೀಕರಿಸಿ ಸಭೆ– ಸಮಾವೇಶ ಮಾಡುವವರೇ ವರದಿಯನ್ನು ವಿರೋಧಿಸುತ್ತಿದ್ದಾರೆ. ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ಜನರನ್ನು ಮೇಲೆತ್ತಲು ಜಾತಿ ಜನಗಣತಿ ಅಗತ್ಯ. ಸಂವಿಧಾನದಲ್ಲಿ ಇದನ್ನು ಒತ್ತಿ ಹೇಳಿದ್ದಾರೆ. ರಾಜಕೀಯ ಪಕ್ಷಗಳು ವರದಿ ಕುರಿತು ಸಹಮತಕ್ಕೆ ಬರಬೇಕು. ಕಾರ್ಯದರ್ಶಿ ಸಹಿ ಹಾಕಿಲ್ಲ ಎಂದು ಕುಂಟುನೆಪ ಹೇಳದೆ, ವರದಿ ಜಾರಿಗೆ ರಾಜ್ಯ ಸರ್ಕಾರ ಮುಂದಾಗಬೇಕು'.

ಡಾ.ಎಚ್‌.ಸಿ. ಮಹಾದೇವಪ್ಪ, ಕಾಂಗ್ರೆಸ್ ಮುಖಂಡ

ಪ್ರಜಾವಾಣಿ ಸಂವಾದ

'ಸಹಿ ಹಾಕದಿದ್ದರೆ ಕಾನೂನು ಕ್ರಮ ಕೈಗೊಳ್ಳಿ'

'ವರದಿಗೆ ಸಹಿ ಮಾಡುವುದು ಸದಸ್ಯ ಕಾರ್ಯದರ್ಶಿ ಕರ್ತವ್ಯ. ಆತ ಸರ್ಕಾರದ ಸಂಬಳ ತೆಗೆದುಕೊಂಡಿಲ್ಲವೇ? ಸಹಿ ಹಾಕದಿದ್ದರೆ ಕಾರ್ಯದರ್ಶಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಆದರೆ, ಮಧ್ಯದಲ್ಲಿ ಕಾರ್ಯದರ್ಶಿಯನ್ನು ಏಕೆ ವರ್ಗಾವಣೆ ಮಾಡಲಾಯಿತು? ಇದರ ಹಿಂದಿನ ಸಂಚು ಏನು? ಎಂಬುದು ಮುಖ್ಯವಾಗುತ್ತದೆ. 'ಜಾತಿ ಜನಗಣತಿ' ಸಿದ್ದರಾಮಯ್ಯ ವರದಿಯಲ್ಲ. ಸಂವಿಧಾನ ಪ್ರೇರಿತ ಆಯೋಗದ ವರದಿ. ಈಗ ಎಬ್ಬಿಸಿರುವ ಗೊಂದಲಗಳ ಹಿಂದೆ, ಹಿಂದುಳಿದವರನ್ನು ಶಾಶ್ವತವಾಗಿ ಭಿಕ್ಷುಕರನ್ನಾಗಿರುವ ಹುನ್ನಾರ ಅಡಗಿದೆ. ಉಳ್ಳವರಂತೆ ಇಲ್ಲದವರೂ ಹೋರಾಟಕ್ಕೆ ತಯಾರಾಗಬೇಕು'.

ಬಿ.ಜೆ. ಪುಟ್ಟಸ್ವಾಮಿ, ಉಪಾಧ್ಯಕ್ಷ, ರಾಜ್ಯ ಯೋಜನಾ ಮಂಡಳಿ

'ಜನರಿಗೆ ಮಾಡುವ ಮೋಸ'

'ವರದಿಗೆ ಕಾರ್ಯದರ್ಶಿ ಸಹಿ ಮಾಡಿಲ್ಲ ಎನ್ನುವುದು ಜನರಿಗೆ ಮಾಡುವ ಮೋಸ. ನ್ಯೂನತೆಗಳಿದ್ದರೆ ಸರಿಪಡಿಸುವ ಪ್ರಕ್ರಿಯೆಗೆ ಕೈ ಹಾಕಬೇಕೇ ಹೊರತು ತಿರಸ್ಕರಿಸಬಾರದು. ರಾಜಕೀಯ ಚಿತ್ರಣ ಬದಲಾಗುತ್ತದೆಂದು ಯಾರೂ ಆ ಕೆಲಸಕ್ಕೆ ಕೈ ಹಾಕುತ್ತಿಲ್ಲ. 1947ರಲ್ಲಿ ಒಬಿಸಿಯಲ್ಲಿ 2,400 ಇದ್ದ ಜಾತಿಗಳು 2006ರ ಹೊತ್ತಿಗೆ 5,013ಕ್ಕೆ ಏರಿದವು. ಸದ್ಯ 6 ಸಾವಿರ ಜಾತಿಗಳಿವೆ. ಈ ಬದಲಾವಣೆ ಕುರಿತು ಅಧ್ಯಯನವಾಗಬೇಕು. 1931ರಲ್ಲಿ ಜನಸಂಖ್ಯೆ 30 ಕೋಟಿ ಇದ್ದಾಗ ಜಾತಿ ಜನಗಣತಿಯಾಗಿದ್ದೇ, ಇಂದಿನ 135 ಕೋಟಿ ಜನಸಂಖ್ಯೆಗೆ ಅನ್ವಯಿಸುವುದು ಎಷ್ಟು ಸರಿ?'.

ರಾಜಲಕ್ಷ್ಮಿ ಅಂಕಲಗಿ, ವಕೀಲೆ ಹಾಗೂ ಸಾಮಾಜಿಕ ಕಾರ್ಯಕರ್ತೆ

ಅತ್ಯಾಚಾರ: ಅಪರಾಧಿಗೆ 20 ವರ್ಷ ಕಠಿಣ ಶಿಕ್ಷೆ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ಪ್ರೀತಿಸುವ ನೆಪದಲ್ಲಿ ಬಾಲಕಿಯ ಮೇಲೆ ಅತ್ಯಾಚಾರ ಎಸಗಿದ್ದ ನಗರದ ನಿವಾಸಿ ಚಂದ್ರು ಅಲಿಯಾಸ್ ಚಂದ್ರಶೇಖರ್‌ಗೆ (21) 20 ವರ್ಷ ಕಠಿಣ ಶಿಕ್ಷೆ ಹಾಗೂ ಆತನಿಗೆ ಸಹಕರಿಸಿದ್ದ ಮಹದೇವಮ್ಮ ಎಂಬ ಮಹಿಳೆಗೆ 5 ವರ್ಷ ಶಿಕ್ಷೆ ವಿಧಿಸಿ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಮಂಗಳವಾರ ಆದೇಶಿಸಿದೆ.

ವಿವರ: 2018ರ ಜುಲೈ 11ರಂದು ಶಾಲೆಗೆ ಖಾಸಗಿ ಬಸ್‌ನಲ್ಲಿ ಹೊರಟಿದ್ದ ಬಾಲಕಿಯನ್ನು ಓಲೈಸಿ, ತಾಲ್ಲೂಕಿನ ಗ್ರಾಮವೊಂದರಲ್ಲಿದ್ದ ಮಹದೇವಮ್ಮ ಅವರ ಮನೆಗೆ ಕರೆತಂದು, 16ರವರೆಗೆ ಅಲ್ಲಿಯೇ ಇರಿಸಿ ಲೈಂಗಿಕ ದೌರ್ಜನ್ಯ ಎಸಗಿದ್ದ.

ಬಾಲಕಿಯ ತಾಯಿ ನೀಡಿದ ದೂರನ್ನು ಆಧರಿಸಿ ಪಟ್ಟಣದ ಠಾಣೆಯ ಅಂದಿನ ಇನ್‌ಸ್ಪೆಕ್ಟರ್ ಮಹದೇವಯ್ಯ, ಇಬ್ಬರ ವಿರುದ್ಧ ಪೋಕ್ಸೊ, ಐಪಿಸಿ ಸೆಕ್ಷನ್‌ಗಳಡಿ ಪ್ರಕರಣ ದಾಖಲಿಸಿ ಆರೋಪ ಪಟ್ಟಿ ಸಲ್ಲಿಸಿದ್ದರು.

ಮುಖ್ಯಾಂಶಗಳು
- 2018ರ ಜುಲೈನಲ್ಲಿ ನಡೆದಿದ್ದ ಪ್ರಕರಣ
- ಮನೆಯಲ್ಲಿ ಇರಿಸಿಕೊಂಡು ಲೈಂಗಿಕ ದೌರ್ಜನ್ಯ
- ಬಾಲಕಿ ತಾಯಿ ದೂರಿನನ್ವಯ ಪ್ರಕರಣ ದಾಖಲು

ಶಿಕ್ಷೆಗೆ ಗುರಿಯಾಗಿರುವ ಮಹದೇವಮ್ಮ, ಚಂದ್ರಶೇಖರ್

ಆರೋಪಗಳು ಸಾಬೀತಾದ್ದರಿಂದ ಚಂದ್ರಶೇಖರ್‌ಗೆ ಕಠಿಣ ಶಿಕ್ಷೆಯೊಂದಿಗೆ ₹ 6.25 ಲಕ್ಷ ದಂಡ ಹಾಗೂ ಮಹದೇವಮ್ಮಗೆ ಶಿಕ್ಷೆಯೊಂದಿಗೆ ₹2 ಲಕ್ಷ ದಂಡ ವಿಧಿಸಿ ನ್ಯಾಯಾಧೀಶ ಸದಾಶಿವ ಎಸ್‌.ಸುಲ್ತಾನ್ ಪುರಿ ಆದೇಶ ಹೊರಡಿಸಿದರು.

ಸಂತ್ರಸ್ತ ಬಾಲಕಿಗೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ₹7.50 ಲಕ್ಷವನ್ನು ಪರಿಹಾರ ನೀಡಬೇಕು ಎಂದೂ ನ್ಯಾಯಾಧೀಶರು ತಿಳಿಸಿದ್ದಾರೆ. ಪ್ರಾಸಿಕ್ಯೂಷನ್ ಪರವಾಗಿ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಕೆ.ಯೋಗೇಶ್ ವಾದ ಮಂಡಿಸಿದ್ದರು.

ಬಾಲಕಿ ಮೇಲೆ ಅತ್ಯಾಚಾರ; ದೂರು ದಾಖಲು

ಕೊಪ್ಪ (ಮಂಡ್ಯ ಜಿಲ್ಲೆ): ಕೊಪ್ಪ ಪೊಲೀಸ್ ಠಾಣೆ ವ್ಯಾಪ್ತಿಯ ಗ್ರಾಮವೊಂದರಲ್ಲಿ 6 ವರ್ಷದ ಬಾಲಕಿ ಮೇಲೆ ಯುವಕನೊಬ್ಬ ಅತ್ಯಾಚಾರ ಎಸಗಿರುವ ಘಟನೆ ಬೆಳಕಿಗೆ ಬಂದಿದೆ. ಮಂಗಳವಾರ ಪ್ರಕರಣ ದಾಖಲಾಗಿದ್ದು ಆರೋಪಿಯನ್ನು ಬಂಧಿಸಲಾಗಿದೆ.

4 ತಿಂಗಳ ಹಿಂದೆ ಆರೋಪಿಯು ಬಾಲಕಿಗೆ ತಿಂಡಿ, ಚಾಕೊಲೆಟ್, ಮೊಬೈಲ್ ಫೋನ್ ಕೊಡಿಸುವ ಆಸೆ ತೋರಿಸಿ ನಿಗೂಢ ಸ್ಥಳಕ್ಕೆ ಕರೆದೊಯ್ದು ಅತ್ಯಾಚಾರ ಎಸಗಿದ್ದ. ಆರೋಪಿ ಬೆದರಿಸಿದ್ದರಿಂದ ಬಾಲಕಿ ಮನೆಯವರಿಗೆ ವಿಷಯ ತಿಳಿಸಿರಲಿಲ್ಲ.

'ಈಚೆಗೆ ಗಣೇಶ ಮೂರ್ತಿಯನ್ನು ವಿಸರ್ಜಿಸುವ ಸಂದರ್ಭದಲ್ಲಿ ಆರೋಪಿ ಮತ್ತೆ ಬಾಲಕಿಗೆ ತೊಂದರೆ ನೀಡಿದ್ದ. ಆಕೆ ಮನೆಗೆ ಬಂದು ಅಳುತ್ತಿದ್ದಾಗ ವಿಷಯ ಗೊತ್ತಾಗಿ ಪೋಷಕರು ಕೊಪ್ಪ ಠಾಣೆಯಲ್ಲಿ ದೂರು ದಾಖಲಿಸಿದರು. ಬಾಲಕಿ ಪೊಲೀಸ್ ಅಧಿಕಾರಿಗಳ ಮುಂದೆ ಹೇಳಿಕೆ ನೀಡಿದ್ದಾಳೆ.

19 ಮಂದಿಯಲ್ಲಿ ಡೆಲ್ಟಾ ವೈರಸ್ ಪತ್ತೆ

ಮಡಿಕೇರಿ: ಹೊರರಾಜ್ಯ ಮತ್ತು ವಿದೇಶದಿಂದ ಬಂದಿರುವ ಜಿಲ್ಲೆಯ 19 ಮಂದಿಯಲ್ಲಿ ಕೋವಿಡ್ ಡೆಲ್ಟಾ ವೈರಸ್ ಪತ್ತೆಯಾಗಿದೆ. ಒಟ್ಟು 67 ಮಂದಿಯಿಂದ ಮಾದರಿ ಸಂಗ್ರಹಿಸಿ ನಿಮ್ಹಾನ್ಸ್ ಪ್ರಯೋಗಾಲಯಕ್ಕೆ ಕಳಿಸಲಾಗಿತ್ತು.

ಸೋಂಕಿತರ ಮಾಹಿತಿಯನ್ನು ಆಧರಿಸಿ ಆರೋಗ್ಯ ಇಲಾಖೆ ಸಿಬ್ಬಂದಿಯು ಅವರ ಸಂಪರ್ಕಿತರ ಪತ್ತೆಗೆ ಮುಂದಾಗಿದ್ದಾರೆ. 'ಸೋಂಕಿತರ ಮೇಲೆ ನಿಗಾ ಇರಿಸಿ ಚಿಕಿತ್ಸೆ ಕೊಡಲಾಗುವುದು' ಎಂದು ಕೊಡಗು ಜಿಲ್ಲಾ ಆರೋಗ್ಯಾಧಿಕಾರಿ ಡಾ. ವೆಂಕಟೇಶ್ ಮಾಹಿತಿ ನೀಡಿದ್ದಾರೆ.

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು
ಸರಕು ಖರೀದಿ ಅಧಿಕಾರಿಗಳ ಕಾರ್ಯಾಲಯ, ಕೃವಿವಿ, ರಾಯಚೂರು
ಮಿಂಚಂಚೆ: spo@uasraichur.edu.in ದೂರವಾಣಿಸಂಖ್ಯೆ: 08532 220165
ಇ–ಟೆಂಡರ್ ಪ್ರಕಟಣೆ ಸಂಖ್ಯೆ: SPO/UASR/E-Proc-04/2021-22 Dt: 13-09-2021

:: ಟೆಂಡರ್ ಪ್ರಕಟಣೆ ::

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿಗೆ ಸಂಬಂಧಪಟ್ಟಂತೆ ವೈಜ್ಞಾನಿಕ ಮತ್ತು ಇನ್ನಿತರ ವಸ್ತುಗಳ ಖರೀದಿಗಾಗಿ ಟೆಂಡರನ್ನು ಕರೆಯಲಾಗಿದ್ದು, ಆಸಕ್ತ ಸರಬರಾಜುದಾರರು ಆನ್‌ಲೈನ್ ಮುಖಾಂತರ ಅಂದರೆ www.eproc.karnataka.gov.in ಜಾಲತಾಣದಲ್ಲಿ (ಬೇಡಿಕೆ ಸಂಖ್ಯೆ: UAS/2019-20/IND3871 to 3880 & 3915 to 3918) ಭಾಗವಹಿಸಬಹುದು. ಈ ಟೆಂಡರ್‌ಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಭರ್ತಿಮಾಡಿ ಸಲ್ಲಿಸುವ ಕಡೆ ದಿನಾಂಕ: 28–09–2021 ಆಗಿರುತ್ತದೆ.

ಸಹಿ/– ಸರಕು ಖರೀದಿ ಅಧಿಕಾರಿಗಳು,
ಕೃವಿವಿ., ರಾಯಚೂರು.
ವಾ.ಸಾ.ಸಂ.ಇ/ರಾಯಚೂರು/333/ಎಂ.ಸಿ.&ಎ/2021–22

ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ
ದೂರವಾಣಿ : 08472–278675, ಫ್ಯಾಕ್ಸ್ : 08472–260776,
ಇ–ಮೇಲ್ : itstaff_ulb_gulbarga@yahoo.com
No: KMP/EE/TS-01/MGNVY/2021-22 ದಿನಾಂಕ: 09–09–2021

:: ಇ–ಪ್ರೊಕ್ಯುರ್‌ಮೆಂಟ ಟೆಂಡರ ಪ್ರಕಟಣೆ ::

1) ಕಾಮಗಾರಿಯ ವಿವರ: **Foundation Training for IAS Civil Service Pre-Examination Coaching for the aspirants of Kalaburagi,** 2) ಲೆಕ್ಕ ಶೀರ್ಷಿಕೆ : 2019–20 ರಿಂದ 2023–24ರ ಸಾಲಿನ ಮಹಾತ್ಮಗಾಂಧಿ ನಗರ ವಿಕಾಸ ಯೋಜನೆ 24.10% ಅನುದಾನ, 3) ಟೆಂಡರಿಗಿಟ್ಟ ಮೊತ್ತ: **65,00,000.00/-** 4) ಗುತ್ತಿಗೆದಾರರ ಅರ್ಹತೆ : **As Per e-portal,** 5) ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ : **29–09–2021 ರಂದು ಸಾಯಂಕಾಲ 4:30 ಗಂಟೆಗೆ,** 6) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **30–09–2021 ರಂದು ಸಾಯಂಕಾಲ 4:35 ಗಂಟೆಗೆ,** 7) ಆರ್ಥಿಕ ಬಿಡ್ ತೆರೆಯುವ ದಿನಾಂಕ : **01–10–2021 ರಂದು ಬೆಳಿಗ್ಗೆ 11:00 ಗಂಟೆಗೆ,** 8) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ : ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ. ದೂ. ಸಂ. 9448140095, 9) ಅಂತರಜಾಲ ತಾಣದ ವಿಳಾಸ : www.eproc.karnataka.gov.in

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/599/ಎಂ.ಸಿ&ಎ/2021–22

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಉದ್ಯಮ)
ಗ್ರಾಮೀಣಾಭಿವೃದ್ಧಿ ಭವನ, 4 ಮತ್ತು 5ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು – 560 009
ಸಂ: ಕೆಆರ್‌ಐಡಿಎಲ್/ಡಬ್ಲ್ಯೂಕೆಎಸ್/ಸ್ಟೀಲ್/ಟೆಂಡರ್/2021–22 ದಿನಾಂಕ: 13.09.2021

ಟೆಂಡರ್ ಪ್ರಕಟಣೆ

ಕರ್ನಾಟಕದಾದ್ಯಂತ ಕೆಆರ್‌ಐಡಿಎಲ್ (ಕೆಎಲ್‌ಎಸಿ) ಐಎಸ್ 1786 ಎಫ್‌ಇ 500ರಂತೆ ಟಿಎಂಟಿ ಸ್ಟೀಲ್ ಬಾರ್‌ಗಳನ್ನು ಸರಬರಾಜು ಮಾಡಲು ಕೊನೆಯ 3 ಹಣಕಾಸು ವರ್ಷಗಳ ಯಾವುದೇ 2 ವರ್ಷಗಳಲ್ಲಿ ಕೆಳಕಂಡ ಕೋಷ್ಟಕದಲ್ಲಿರುವಷ್ಟು ವಾರ್ಷಿಕ ವಹಿವಾಟು ಹೊಂದಿರುವ ತಯಾರಕರು/ಪ್ರಾಥಮಿಕ ತಯಾರಕದಾರರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸಂಸ್ಥೆಯ ಕೊನೆಯ 3 ಹಣಕಾಸು ವರ್ಷಗಳಲ್ಲಿ ಅದೇ ರೀತಿಯ ಸರಬರಾಜು ಅಂದರೆ 1000 ಮೆ.ಟ.ನ್ನು ಸರ್ಕಾರಿ ಇಲಾಖೆಗಳು/ಅರೆ ಸರ್ಕಾರಿ ಇಲಾಖೆಗಳು/ಸಾರ್ವಜನಿಕ ವಲಯಕ್ಕೆ ಸರಬರಾಜು ಮಾಡಿದ್ದು, ತೃಪ್ತಿಕರ ಎನಿಸಿರಬೇಕು. ಆಸಕ್ತಿಯುಳ್ಳ ತಯಾರಕರು ಇ–ಆಡಳಿತ ಕಾರ್ಯದರ್ಶಿಗಳ ಮೂಲಕ ಟೆಂಡರನ್ನು ಪರಿವೀಕ್ಷಿಸಬಹುದು, ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಅರ್ಜಿ ಸಲ್ಲಿಸಬಹುದು. ವೆಬ್‌ಸೈಟ್: www.eproc.karnataka.gov.in ಸಂಪರ್ಕಿಸಿ: 080–22371090/25501216.

ಕ್ರ. ಸಂ.	ಟೆಂಡರ್ ವಿವರ	ಪ್ರಮಾಣ (ಮೆ.ಟ.ಗಳಲ್ಲಿ)	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ (ರೂ. ಲಕ್ಷಗಳಲ್ಲಿ)	ಹೊಂದಿರಬೇಕಾದ ಸಂಸ್ಥೆಯ ವಾರ್ಷಿಕ ವಹಿವಾಟು (ರೂ. ಲಕ್ಷಗಳಲ್ಲಿ)
1	ಟೆಂಡರ್ ಪಾರ್ಟ್–I: ಬೆಂಗಳೂರು ಮತ್ತು ಬಿಬಿಎಂಪಿ ವಲಯ	601	378.63	5.68	1220.00
2	ಟೆಂಡರ್ ಪಾರ್ಟ್–II: ಸೆಂಟ್ರಲ್ (ಚಿತ್ರದುರ್ಗ) ವಲಯ	880	554.40	8.32	1780.00
3	ಟೆಂಡರ್ ಪಾರ್ಟ್–III: ಮೈಸೂರು ವಲಯ	719	452.97	6.80	1450.00
4	ಟೆಂಡರ್ ಪಾರ್ಟ್–IV: ಬೆಳಗಾವಿ ವಲಯ	815	513.45	7.71	1650.00
5	ಟೆಂಡರ್ ಪಾರ್ಟ್–V: ಕಲಬುರಗಿ ವಲಯ	485	513.45	7.71	1650.00

ಸರಬರಾಜಿನ ಅವಧಿ: ಸರಬರಾಜು ಆದೇಶದ ದಿನಾಂಕದಿಂದ **3 ತಿಂಗಳು.** ವಿಚಾರಣೆಗಾಗಿ ಕಡೆಯ ದಿನಾಂಕ ಮತ್ತು ಸಮಯ: **16.10.2021 ರಂದು ಮಧ್ಯಾಹ್ನ 2.00 ಗಂಟೆವರೆಗೆ.** ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **16.10.2021, ಸಂಜೆ 4.00 ಗಂಟೆವರೆಗೆ.** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **18.10.2021, ಸಂಜೆ 4.00 ಗಂಟೆಗೆ.** ಹಣಕಾಸು ಬಿಡ್ ತೆರೆಯುವ ದಿನಾಂಕ: **21.10.2021, ಸಂಜೆ 4.00 ಗಂಟೆಗೆ.**

ಹೆಚ್ಚಿನ ವಿವರಗಳಿಗೆ ದಯವಿಟ್ಟು ಸಂಪರ್ಕಿಸಿ: ಮುಖ್ಯ ಅಭಿಯಂತರರು, (ಬಿಬಿಎಂಪಿ) ಕೆಆರ್‌ಐಡಿಎಲ್, ಬೆಂಗಳೂರು–09.
ದೂ.ಸಂಖ್ಯೆ: 080–28015604 ಮಾಹಿತಿಗಾಗಿ ದಯವಿಟ್ಟು ಇಲ್ಲಿಗೆ ಲಾಗ್ ಆನ್ ಆಗಿ: www.kridl.org.in

ವಾಸಾಸಂಇ/ಉನಿ.ನ/1504/ಎಂಸಿಎ/2021–22 ಸಹಿ/– ಮುಖ್ಯ ಅಭಿಯಂತರರು (ಬಿಬಿಎಂಪಿ)

ಫೇಸ್‌ಬುಕ್ ಕನ್ನಡಕ...

ರೇಬ್ಯಾನ್ ಕಂಪನಿ ಮತ್ತು ಸೋಶಿಯಲ್ ಮೀಡಿಯಾ ಜಗತ್ತಿನ ದಿಗ್ಗಜ ಫೇಸ್‌ಬುಕ್ ಒಟ್ಟಿಗೇ ಸೇರಿ ಹೊಸ ಸಾಧ್ಯತೆಯೊಂದನ್ನು ಜಗತ್ತಿಗೆ ಪರಿಚಯಿಸಿದ್ದಾರೆ. ಅದೇ ಫೇಸ್‌ಬುಕ್ ಕನ್ನಡಕಗಳು. ಇದಕ್ಕೆ ಈ ಸಂಸ್ಥೆಗಳು ಇಟ್ಟಿರುವ ಹೆಸರು – 'ರೇಬ್ಯಾನ್ ಸ್ಟೋರಿಸ್'.

ಲೇಖನಕ್ಕೆ prajavani.net ನೋಡಿ

ಎಲಾನ್ ಮಸ್ಕ್ ಎಂಬ ಕನಸುಗಾರ ಉದ್ಯಮಿಯು ಸ್ಪೇಸ್-ಎಕ್ಸ್ ಎಂಬ ಸಂಸ್ಥೆಯ ಮೂಲಕ ಹಮ್ಮಿಕೊಂಡಿರುವ ಸ್ಟಾರ್ಲಿಂಕ್ ಯೋಜನೆ ಸಾಕಾರವಾದರೆ ಇನ್ನೀಗ ಉಪಗ್ರಹಗಳ ಮೂಲಕ ಆಕಾಶಮಾರ್ಗವಾಗಿಯೂ ನೆಟ್ಟು ಬರಲಿದೆ...

ಆಕಾಶಮಾರ್ಗದಲ್ಲಿ ನೆಟ್...

ಶರತ್ ಭಟ್ ಸೇರಾಜೆ

'ಮನುಷ್ಯನ ಬಾಳುವೆಗೆ ಅಗತ್ಯವಾಗಿ ಬೇಕಾದದ್ದು ಏನು?' ಅಂತ ಯಾರಾದರೂ ಹಳಬರನ್ನು ಕೇಳಿದರೆ, 'ರೋಟಿ, ಕಪ್‌ಡಾ, ಮಕಾನುಗಳು' ಎನ್ನುತ್ತಿದ್ದರೇನೋ? ಆ ಪಟ್ಟಿಯಲ್ಲಿ ಅಶನ, ವಸನ, ವಸತಿಗಳ ಕೆಳಗಿನ ಜಾಗಕ್ಕೆ ಅಂತರ್ಜಾಲವೂ ಮೆತ್ತಗೆ ನುಸುಳಿದ್ದು ಹೊಸ ವೃತ್ತಾಂತವೇನಲ್ಲ. ತಾಮ್ರದ ತಂತಿಗಳಲ್ಲಿ ಜಾರಿ ಅದು ಬರುತ್ತಿತ್ತು, ಕೇಬಲ್ ಟಿವಿಯವರ ತಂತುಗಳಲ್ಲಿ ಸೂಸೂಕರಿಸುತ್ತ ಹಾದಿಗೊಂಡು, ಡಿಎಸ್‌ಎಲ್ಲಿನಲ್ಲಿ ಮಂದಗಮನೆಯಾಗಿ, ಮೊಬೈಲಿನಲ್ಲಿ ಡಾಟಾ ಪ್ಯಾಕಾಗಿ ಹಾಯಾಗಿ ತೇಲಿ, ಆಪ್ಟಿಕಲ್ ಫೈಬರಿನಲ್ಲಿ ಬರಬರ ಭರದಲಿ ನುಗ್ಗಿ ಎಲ್ಲ ಮನೆ ಮನೆಗಳಲ್ಲಿ ಇಂಟರ್ನೆಟ್ಟು ಪ್ರತ್ಯಕ್ಷವಾಗುತ್ತಲಿದೆ. ಈ ಅಂತರ್ಜಾಲವೆಂಬ ನುಸುಳುಕೋರಶಕ್ತಿಯು ಯಾವ್ಯಾವ ಇಕ್ಕಟ್ಟಾದ ಸಂದಿ, ಓಣಿಗಳಲ್ಲೆಲ್ಲ ತೂರಿ, ಯಾವ ಉಚ್ಚಬಿಂದುಗಳನ್ನು ಏರಿ ತಾಕಿ, ನಮ್ಮ ಮನೆಗೆ ಬಂದೀತು ಅನ್ನುವುದು ಮಾತ್ರ ಹೊಸ ವಿಷಯ. ಎಲಾನ್ ಮಸ್ಕ್ ಎಂಬ ಕನಸುಗಾರ ಉದ್ಯಮಿಯು ಸ್ಪೇಸ್-ಎಕ್ಸ್ ಎಂಬ ಸಂಸ್ಥೆಯ ಮೂಲಕ ಹಮ್ಮಿಕೊಂಡಿರುವ ಸ್ಟಾರ್ಲಿಂಕ್ ಯೋಜನೆ ಸಾಕಾರವಾದರೆ ಇನ್ನೀಗ ಉಪಗ್ರಹಗಳ ಮೂಲಕ ಆಕಾಶಮಾರ್ಗವಾಗಿಯೂ ನೆಟ್ಟು ಬರಲಿದೆ!

ಹಾಗೆ ನೋಡಿದರೆ, ಉಪಗ್ರಹಗಳಿಂದ ಇಂಟರ್ನೆಟ್ಟು ಬರುವುದು ಹೊಸ ವಿಚಾರವೇನಲ್ಲ. ಟಿವಿ, ರೇಡಿಯೊ ಸೇವೆಗಳನ್ನು ಕೊಡುವ ಉಪಗ್ರಹಗಳಂತೆ ನೆಟ್ಟನ್ನೂ ಕೊಡಬಲ್ಲ ಸಂಪರ್ಕ ಉಪಗ್ರಹಗಳಿವೆ. ಇವು ಸುಮಾರು 35,786 ಕಿ.ಮೀ. ಎತ್ತರಕ್ಕೆ ಹೋಗಿ ಚಲಿಸುತ್ತವೆ; ಇವು ಭೂಮಿ ತಿರುಗಿದ ಹಾಗೇ ತಿರುಗಿ, ಅದರ ಜೊತೆ ಜೊತೆಗೇ ಹೆಜ್ಜೆ ಹಾಕುವುದರಿಂದ ಅವು ಒಂದೇ ಕಡೆ ನಿಶ್ಚಲವಾಗಿ ನಿಂತಿವೆಯೇನೋ ಅನ್ನಿಸುತ್ತವೆ. ಹೀಗಾಗಿ ಅವುಗಳ ವೃತ್ತಾಕಾರದ ಪಥಕ್ಕೆ ಭೂಸ್ಥಾಯಿ ಕಕ್ಷೆ (Geostationary orbit) ಅಂತ ಹೆಸರು. ಹೀಗಾಗಿ ಹವಾಮಾನ ವೈಪರೀತ್ಯವಾದರೆ, 'ಅಯ್ಯೋ ಸಿಗ್ನಲ್ ಹೋಯ್ತಾ' ಎಂಬಂತಾಗುತ್ತದೆ, ಸಿಗ್ನಲ್ಲುಗಳು ಅಷ್ಟೊಂದು ದೂರ ಹೋಗಿ ಬರಬೇಕಾದ್ದರಿಂದ ನೆಟ್ಟು ಬೆಟ್ಟ ಹತ್ತಹೊರಟವನಂತೆ ಏದುಸಿರು ಬಿಡುತ್ತ ನಿಧಾನವಾಗುತ್ತದೆ, ಬ್ಯಾಂಡ್‌ವಿಡ್ತ್ (Bandwidth) ಹೆಚ್ಚು ಇರುವುದಿಲ್ಲ, ಮತ್ತು ಅಂತರ್ಜಾಲ ದುಬಾರಿಯೂ ಆಗುತ್ತದೆ. ಈ ತೊಡಕುಗಳನ್ನೆಲ್ಲ ಬಿಡಿಸಬೇಕು, ಪೇಟೆಗಳಿಂದ ದೂರವೋ, ಕಾಡಲ್ಲೋ, ಗುಡ್ಡದಲ್ಲೋ, ಹಡಗಿನಲ್ಲೋ ಇರುವವರಿಗೂ ನೆಟ್ಟು ಸಿಗಬೇಕು, ಕಡಮೆ ಬೆಲೆಗೂ ಅದು ದಕ್ಕಬೇಕು ಎಂಬುದು ಸ್ಪೇಸ್-ಎಕ್ಸ್ ಸಂಸ್ಥೆಯ ಹೆಗ್ಗುರಿ. ಆ ನಿಟ್ಟಿನಲ್ಲಿ ಅದು ಈಗ ಇಟ್ಟಿರುವುದು ಅಂಬೆಗಾಲನ್ನು ಮಾತ್ರ. ಸ್ಟಾರ್ಲಿಂಕಿನ ಕಥೆಯ ಮೊದಲ ಪುಟವು 2019ರಲ್ಲಿ 'ಫಾಲ್ಕನ್ 9' ಎಂಬ ಉಡಾವಣಾ ವಾಹನಗಳ ಮೂಲಕ 60 ಉಪಗ್ರಹಗಳನ್ನು ಗಗನಕ್ಕೇರಿಸಿದಲ್ಲಿಂದ ಶುರುವಾಗುತ್ತದೆ. ಈಗ ಆ ಕಥೆ ಸುಮಾರು 1,800 ಪುಟ್ಟ ಉಪಗ್ರಹಗಳನ್ನು ಹಾರಿಸಿ, 'ನೆಲಕ್ಕಂಟಿ ಬಿದ್ದ ಆಕಾಶಯಾನದ ಕನಸನ್ನು' ನನಸಾಗಿಸಿದ ಐವತ್ತನೇ ಪುಟಕ್ಕೆ ಬಂದು ನಿಂತಿದೆ. ಇನ್ನೊಂದಷ್ಟು ವರ್ಷಗಳಲ್ಲಿ ಕೊನೆಯ ಪುಟದ ಆಸುಪಾಸಿಗೆ ಬರುವಾಗ ಸುಮಾರು 42,000 ಉಪಗ್ರಹಗಳ ಬೃಹಜ್ಜಾಲವನ್ನು ಬಾನಂಗಳದಲ್ಲಿ ನಿಲ್ಲಿಸಿ, 'ಒಂದನೊಂದಕೆ ಕೂಡಿಸಾಡಿಸುವ, ಕುಣಿಸುವ ಚಮತ್ಕಾರ' ಮೆರೆಯಬೇಕು ಎಂಬುದು ಎಲಾನ್ ಮಸ್ಕ್ ಮಹಾಶಯನ ಆಶಯ! ಎಲ್ಲ ದೇಶಗಳ ಸರ್ಕಾರೀ ಸಂಸ್ಥೆಗಳು ಸೇರಿ ಇದುವರೆಗೆ ಉಡಾಯಿಸಿರುವ ಉಪಗ್ರಹಗಳಲ್ಲಿ ಈಗ ಜೀವಂತ ಇರುವುದು ಬರೀ 4,084 ಉಪಗ್ರಹಗಳು ಎಂಬ ಲೆಕ್ಕವನ್ನು ತಲೆಗೆ ತಂದುಕೊಂಡರೆ ಈ ಯೋಜನೆಯ ವಿಸ್ತಾರ, ಹಿರಿಯಾಸೆಯ ಕಲ್ಪನೆ ಮೂಡೀತು!

ಈ ಪುಟ್ಟ ಉಪಗ್ರಹಗಳು ಭೂಸ್ಥಾಯಿ ಕಕ್ಷೆಯ ಉಪಗ್ರಹಗಳಷ್ಟು ಹೈಜಂಪ್ ಮಾಡಿ ದೂರತೀರ ಯಾನ ಮಾಡುವುದಿಲ್ಲ, ಅವುಗಳು ಹಾರುವುದು ಬರೀ 550 ಕಿ.ಮೀ. ಎತ್ತರಕ್ಕೆ. ಹೀಗಾಗಿ ಸಿಗ್ನಲ್ಲುಗಳು ಭಯಂಕರ ದೂರ ಹೋಗಿ ಬರಬೇಕು ಎಂಬ ಕಷ್ಟ ಇಲ್ಲ; 'ನೆಟ್ಟು ಸ್ಪೀಡಾಗಿದೆ' ಅನ್ನಿಸಿಕೊಳ್ಳಲಿಕ್ಕೆ ಇದು ಮುಖ್ಯ. ಗ್ರಾಹಕರು ಮನೆಯ ಹೊರಗೆ ಒಂದು ಡಿಶ್ ನಿಲ್ಲಿಸಿದರೆ ಆಯಿತು, ಅದು ಟಪಕ್ಕನೆ ಆಕಾಶವನ್ನು ಸ್ಕ್ಯಾನ್ ಮಾಡಿ, ಅದರ ತಲೆ ಮೇಲೆ ಯಾವ ಉಪಗ್ರಹ ಆ ಕ್ಷಣದಲ್ಲಿ ಇದೆಯೋ ಅದಕ್ಕೆ ನಮಸ್ಕಾರ ಹಾಕಿ, ಅದರ ಜೊತೆ ಮಾತಾಡುತ್ತದೆ. ತೊಂಬತ್ತರ ದಶಕದಲ್ಲಿ ಟಿವಿ 'ಗರ ಗರ' ಎಂದರೆ ನಾವೆಲ್ಲ ಆಂಟೆನಾವನ್ನು ಸ್ವಲ್ಪ ಆಚೆ ಸ್ವಲ್ಪ ಈಚೆ ತಿರುಗಿಸಿ, 'ಈಗ ಬಂತಾ' ಅಂತ ಕೊರಳುದ್ದ ಮಾಡುತ್ತಿದ್ದೆವು. ಈ ಡಿಶ್ ಆ ಅಂಟೆನಾಕ್ಕಿಂತ ಬುದ್ಧಿವಂತ! ಅಲೆಗಳು ಇರುವ ದಿಕ್ಕಿಗೆ ಅದೇ ತಿರುಗಿಕೊಳ್ಳುತ್ತದೆ.

ಬೆಟ್ಟದ ಮೇಲೆ ಹತ್ತಿದವನಿಗೆ ಇಡೀ ಊರು ಒಂದೇ ನೋಟಕ್ಕೆ ಕಾಣುವಂತೆ ಉಪಗ್ರಹಗಳು ಮೇಲೆ ಮೇಲೆ ಹೋದಷ್ಟು ಅವಕ್ಕೆ ಹೆಚ್ಚೆಚ್ಚು ಭೂಮಿ ಕಾಣುತ್ತದೆ. ಸ್ಪೇಸ್-ಎಕ್ಸಿನವು ತೀರಾ ಕೆಳಮಟ್ಟದಲ್ಲಿರುವುದರಿಂದ, ಇಡೀ ವಸುಂಧರೆ ಅವುಗಳ ತೆಕ್ಕೆಗೆ ಸಿಗಬೇಕಾದರೆ ಸಾವಿರಗಟ್ಟಲೆ ಉಪಗ್ರಹಗಳು ಬೇಕು. ಇದೊಂಥರಾ, ಬೆಂಗಳೂರಿನಲ್ಲಿ ಸಾವಿರ ಜನರು ಸಾವಿರ ಬಹುಮಹಡಿ ಕಟ್ಟಡಗಳಲ್ಲಿ ನಿಂತು ಒಬ್ಬರ ಜೊತೆ ಇನ್ನೊಬ್ಬರು ಮಾತಾಡಿದರೆ, ಅವರೆಲ್ಲರ ನೋಟಗಳು ಸೇರಿ ಇಡೀ ಬೆಂಗಳೂರನ್ನು ಒಳಗೊಳ್ಳಬಹುದಾದಂತೆ. ಇಷ್ಟೊಂದು ಉಪಗ್ರಹಗಳು ಅಂಬರದಲ್ಲಿ ಇಡಿಕಿರಿದರೆ ಅವು ಸಿಕ್ಕಾಬಟ್ಟೆ ಬೆಳಕನ್ನು ಪ್ರತಿಫಲಿಸಿ ಖಗೋಳಶಾಸ್ತ್ರಜ್ಞರಿಗೆ ತೊಂದರೆ ಕೊಡುತ್ತವೆ; ನಭೋಮಂಡಲಕ್ಕೆ ದೂರದರ್ಶಕಗಳನ್ನು ನೆಟ್ಟು ಕೂತು ತಾರೆ ನೀಹಾರಿಕೆಗಳಾಚೆಯ ಸಮಾಚಾರದಲ್ಲಿ ಆಸಕ್ತರಾಗಿರುವ ತಜ್ಞರಿಗೆ ಈ ಉಪಗ್ರಹಗಳು ಕಾಟ ಕೊಡುತ್ತವೆ; ಇವುಗಳ ಭಗ್ನಾವಶೇಷಗಳ ಕಸ ಬಾನಿನಲ್ಲಿ ರಾಶಿ ಬೀಳಲಿದೆ ಎಂಬೆಲ್ಲ ಗಂಭೀರ ಕೂಗುಗಳೂ ಎದ್ದಿವೆ. ಅದಕ್ಕೇನು ಮಾಡುತ್ತಾರೋ ಕಾದು ನೋಡಬೇಕಾಗಿದೆ.

ಏನೇ ಇದ್ದರೂ, ಈ ತಂತ್ರಜ್ಞಾನ ಮುಂದಿನ ದಿನಗಳಲ್ಲಿ ಸುದ್ದಿಗಳನ್ನು ಹುಟ್ಟಿಸಲಿದೆ ಅನ್ನುವುದಂತೂ ಈ ಕ್ಷಣದ ಸತ್ಯ.

❖



ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 59

801. 'ನಾನು ನನ್ನ ಗುರುವನ್ನು ಗೌರವಿಸುತ್ತೇನೆ ಆದರೆ, ಸತ್ಯವನ್ನು ಅದಕ್ಕಿಂತಲೂ ಹೆಚ್ಚು ಗೌರವಿಸುತ್ತೇನೆ' ಎಂದು ಯಾರು ಹೇಳಿದ್ದಾರೆ?
ಎ) ಅರಿಸ್ಟಾಟಲ್
ಬಿ) ರಾಮಕೃಷ್ಣ ಪರಮಹಂಸ
ಸಿ) ಬಸವಣ್ಣ ಡಿ) ವಿವೇಕಾನಂದ

802. ಇಸ್ಲಾಂ ಧರ್ಮದ ಪ್ರಕಾರ ಜಕಾತ್ ಎಂದರೇನು?
ಎ) ಆದಾಯದಲ್ಲಿ ನಿಗದಿಪಡಿಸಿದ ಭಾಗವನ್ನು ಬಡವರಿಗೆ ದಾನ ನೀಡಬೇಕು
ಬಿ) ದಿನಕ್ಕೆ ಐದು ಬಾರಿ ಪ್ರಾರ್ಥನೆ ಸಲ್ಲಿಸಬೇಕು
ಸಿ) ಅಲ್ಲಾಹನಲ್ಲಿ ಮಾತ್ರ ನಂಬಿಕೆ ಹೊಂದಬೇಕು
ಡಿ) ಮೇಲಿನ ಎಲ್ಲವೂ ಸರಿ

803. ಕದಂಬ ವಂಶದ ಸ್ಥಾಪಕ ಯಾರು?
ಎ) ಮಯೂರ ವರ್ಮ ಬಿ) ಕಾಕತ್ಸ ವರ್ಮ
ಸಿ) ಮಹೇಂದ್ರ ವರ್ಮ ಡಿ) ಮಯೂರ ಶರ್ಮ

804. ಅಧೀನ ನ್ಯಾಯಾಲಯಗಳು ತಮ್ಮ ಅಧಿಕಾರ ವ್ಯಾಪ್ತಿಯನ್ನು ಮೀರಿ ಅಥವಾ ನೈಸರ್ಗಿಕ ನಿಯಮಗಳಿಗೆ ವಿರುದ್ಧವಾಗಿ ತೀರ್ಪು ನೀಡಿದಾಗ, ಸುಪ್ರೀಂಕೋರ್ಟ್ ಅಂತಹ ಪ್ರಕರಣವನ್ನು ಸಾಕ್ಷಿಸಹಿತ ತನಗೆ ವರ್ಗಾಯಿಸುವಂತೆ ನೀಡುವ ರಿಟ್ ಇದಾಗಿದೆ
ಎ) ಪರಮಾದೇಶ (Mandamus)
ಬಿ) ಪ್ರತಿಬಂಧಕಾಜ್ಞೆ (Prohibition)
ಸಿ) ಉತ್ಪ್ರೇಕ್ಷಣಾ ಲೇಖ (Certiorari)
ಡಿ) ಅಧಿಕಾರ ಲೇಖ (Co-Warranto)

805. ಬೆಳಕನ್ನು ತನ್ನ ಮೂಲಕ ಹರಿಯಲು ಬಿಡದ ವಸ್ತುಗಳಿಗೆ ಏನೆಂದು ಕರೆಯುತ್ತಾರೆ?
ಎ) ಪಾರದರ್ಶಕ ಬಿ) ಅರೆ ಪಾರದರ್ಶಕ
ಸಿ) ಅಪಾರದರ್ಶಕ ಡಿ) ಪ್ರತಿಬಂಧಕ

806. ಕ್ಷಯ ರೋಗ ಯಾವ ಅಂಗಕ್ಕೆ ಸಂಬಂಧಿಸಿದೆ?
ಎ) ಹೃದಯ ಬಿ) ಪಿತ್ತಜನಕಾಂಗ
ಸಿ) ಶ್ವಾಸಕೋಶ ಡಿ) ಜಠರ

807. ಹಳದಿ ಕ್ರಾಂತಿ ಯಾವುದಕ್ಕೆ ಸಂಬಂಧಿಸಿದೆ?
ಎ) ಎಣ್ಣೆಕಾಳುಗಳು ಬಿ) ಗೊಬ್ಬರ
ಸಿ) ಜೇನು ಡಿ) ಹಣ್ಣುಗಳು

808. ಬಡ್ಡಿದರ ನಿರ್ಣಯ ಸಿದ್ಧಾಂತವನ್ನು ನೀಡಿದವರು
ಎ) ಪಾಲ್ ಸ್ಯಾಮ್ಯುಯೆಲ್ಸನ್
ಬಿ) ಗುನ್ನಾರ್ ಮಿರ್ಡಾಲ್
ಸಿ) ನಟ್ ವಿಕ್ಸೆಲ್ ಡಿ) ಜೆ.ಆರ್.ಹಿಕ್ಸ್

809. ಅರ್ಥಶಾಸ್ತ್ರದ ಕೊರತೆ ವ್ಯಾಖ್ಯಾನವನ್ನು ನೀಡಿದವರು
ಎ) ಆಡಂ ಸ್ಮಿತ್ ಬಿ) ಆಲ್ ಫ್ರೆಡ್ ಮಾರ್ಷಲ್
ಸಿ) ಲಿಯೊನಲ್ ರಾಬಿನ್ಸ್ ಡಿ) ಜೆ.ಎಮ್.ಕೇನ್ಸ್

810. ರಾಷ್ಟ್ರೀಯ ಆದಾಯ ಈ ಕೆಳಗಿನ ಯಾವುದನ್ನು ಒಳಗೊಂಡಿರುತ್ತದೆ?
ಎ) ಗೇಣಿ ಮತ್ತು ಲಾಭ ಬಿ) ಕೂಲಿ
ಸಿ) ಬಡ್ಡಿ ಡಿ) ಮೇಲಿನ ಎಲ್ಲವೂ

811. ಸಂವಿಧಾನದ 95 ನೇ ತಿದ್ದುಪಡಿ ಒಳಗೊಂಡಿರುವುದು
ಎ) ಎಸ್ಸಿ/ಎಸ್ಟಿ ಆಂಗ್ಲೋ ಇಂಡಿಯನ್ನರಿಗೆ ಮೀಸಲಾತಿ
ಬಿ) ಬುಡಕಟ್ಟು ಜನರ ಕಲ್ಯಾಣ
ಸಿ) ಖಾಸಗಿ ವಿದ್ಯಾಸಂಸ್ಥೆಗಳಲ್ಲಿ ಮೀಸಲಾತಿ
ಡಿ) ಮೇಲಿನ ಯಾವುದೂ ಅಲ್ಲ

812. ಭಾರತದ ರಾಷ್ಟ್ರಪತಿಯಾಗಿ ಆಯ್ಕೆಯಾಗಲು ಇರಬೇಕಾದ ಅರ್ಹತೆಗಳು
ಎ) ಭಾರತದ ಪ್ರಜೆಯಾಗಿರಬೇಕು
ಬಿ) 35 ವರ್ಷ ವಯಸ್ಸಾಗಿರಬೇಕು
ಸಿ) ಲೋಕಸಭೆಯ ಸದಸ್ಯನಾಗುವ ಅರ್ಹತೆ ಇರಬೇಕು
ಡಿ) ಮೇಲಿನ ಎಲ್ಲವೂ ಸರಿ

813. ಉಪ ರಾಷ್ಟ್ರಪತಿಯವರ ಅಧಿಕಾರವಧಿ
ಎ) ಮೂರು ವರ್ಷ ಬಿ) ನಾಲ್ಕು ವರ್ಷ
ಸಿ) ಐದು ವರ್ಷ ಡಿ) ನಿರ್ದಿಷ್ಟತೆ ಇಲ್ಲ

814. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ ಸಂಕೇತಗಳ ಸಹಾಯದಿಂದ ಉತ್ತರಿಸಿ.
ಎ) ಭೂಕಂಪನದ ದ್ವಿತೀಯ ಅಲೆಗಳನ್ನು ಅಡ್ಡಾಲೆಗಳೆಂದು ಕರೆಯುವರು
ಬಿ) ಈ ಅಲೆಗಳು ಘನ, ದ್ರವ ಮತ್ತು ಅನಿಲಗಳ ಮೂಲಕ ಚಲಿಸುತ್ತವೆ
ಸಂಕೇತಗಳು:
ಎ) ಎ ಮಾತ್ರ ಸರಿ ಬಿ) ಬಿ ಮಾತ್ರ ಸರಿ
ಸಿ) ಎ ಮತ್ತು ಬಿ ಸರಿ ಡಿ) ಎ ಮತ್ತು ಬಿ ತಪ್ಪು

815. ಉಪ ಉಷ್ಣವಲಯದ ಅಧಿಕ ಒತ್ತಡ ಪ್ರದೇಶದಿಂದ ಸಮಭಾಜಕ ವೃತ್ತದ ಕಡಿಮೆ ಒತ್ತಡ ಪ್ರದೇಶದ ಕಡೆಗೆ ಬೀಸುವ ಮಾರುತಗಳು ಯಾವುವು?
ಎ) ನಿರಂತರ ಮಾರುತಗಳು
ಬಿ) ವಾಣಿಜ್ಯ ಮಾರುತಗಳು
ಸಿ) ಪ್ರತಿ ವಾಣಿಜ್ಯ ಮಾರುತಗಳು
ಡಿ) ಧ್ರುವೀಯ ಮಾರುತಗಳು

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ 58ರ ಉತ್ತರಗಳು: 786. ಡಿ, 787. ಬಿ, 788. ಬಿ, 789. ಎ, 780. ಬಿ, 791. ಬಿ, 792. ಬಿ, 793. ಎ, 794. ಬಿ, 795. ಬಿ, 796. ಬಿ, 797. ಎ, 798. ಡಿ, 799. ಡಿ, 800. ಎ

ಕೃಷಿಯಲ್ಲೂ ತಂತ್ರ

ಪೃಥ್ವಿರಾಜ್

ಕೃಷಿ ಚಟುವಟಿಕೆಗಳ ನಿರ್ವಹಣೆಗೆ ವಿವಿಧ ಬಗೆಯ ತಂತ್ರಜ್ಞಾನಗಳು ನೆರವಾಗುತ್ತಿವೆ. ಬೆಳೆ ಸಂರಕ್ಷಣೆ, ಕೃಷಿಭೂಮಿ, ವಾತಾವರಣ ಬದಲಾವಣೆಯ ಅಧ್ಯಯನ – ಹೀಗೆ ಹಲವು ವಿಷಯಗಳನ್ನು ತಂತ್ರಜ್ಞಾನದ ಮೂಲಕ ತಿಳಿಯಲು ಸಾಧ್ಯವಾಗುತ್ತಿದೆ. ಸಮಯ, ಹಣ, ಶ್ರಮ ಉಳಿತಾಯದ ಜತೆಗೆ ಆದಾಯದ ಹೆಚ್ಚುವಿಕೆಯಲ್ಲೂ ತಂತ್ರಜ್ಞಾನ ನೆರವಾಗುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಕೃಷಿಕ್ಷೇತ್ರಕ್ಕೆ ಒಗ್ಗಿಕೊಳ್ಳುತ್ತಾ, ರೈತರಿಗೆ ಸಹಕಾರಿಯಾಗುತ್ತಿರುವ ಐದು ಪ್ರಮುಖ ತಂತ್ರಜ್ಞಾನಗಳನ್ನು ಕುರಿತು ಒಂದಿಷ್ಟು ಮಾಹಿತಿ ಇಲ್ಲಿದೆ.

ರೋಬೊ ತಂತ್ರಜ್ಞಾನ

ರೈತರು ಮಾಡಬಹುದಾದ ಹಾಗೂ ರೈತರೂ ಮಾಡಲು ಸಾಧ್ಯವಿಲ್ಲದ ಹಲವು ಕೃಷಿ ಚಟುವಟಿಕೆಗಳನ್ನು ರೋಬೊಗಳ ನೆರವಿನಿಂದ ಸುಲಭವಾಗಿ ನಿರ್ವಹಿಸಲು ಸಾಧ್ಯವಾಗುತ್ತಿದೆ. ಕಳೆಯ ನಿರ್ವಹಣೆಗೆ ತಯಾರಿಸಿರುವ ರೋಬೊಗಳನ್ನು ಕೃಷಿಭೂಮಿಯಲ್ಲಿ ಬಿಟ್ಟರೆ ಸಾಕು, ಬೇರು ಸಮೇತ ಕಳೆಯನ್ನು ಕಿತ್ತೊಗೆಯುತ್ತವೆ. ಕೀಟಗಳನ್ನೂ ಹುಡುಕಿ ಕೊಲ್ಲುವಂತೆಯೂ ಅವನ್ನು ತಯಾರಿಸಲಾಗುತ್ತಿದೆ. ಹೀಗೆ ಕೃಷಿಗೆಂದೇ ಅಭಿವೃದ್ಧಿಗೊಳ್ಳುತ್ತಿರುವ ರೋಬೊಗಳು ನಿತ್ಯವೂ ಹೊಸ ರೂಪದಲ್ಲಿ ನಿರ್ಮಾಣಗೊಳ್ಳುತ್ತ ರೈತರಿಗೆ ನೆರವಾಗುತ್ತಿವೆ. ಬೆಳೆಯ ಕಟಾವಿಗೂ ರೋಬೊಗಳನ್ನು ಬಳಸಿಕೊಳ್ಳಲಾಗುತ್ತಿದೆ. ರೋಬೊಗಳಲ್ಲಿ ಅಳವಡಿಸುತ್ತಿರುವ ಅತ್ಯಾಧುನಿಕ ಸೆನ್ಸರ್‌ಗಳು, ಕ್ಯಾಮೆಗಳು ಕೃಷಿ ಚಟುವಟಿಕೆಗಳ ಸೂಕ್ಷ್ಮ ನಿರ್ವಹಣೆಯಲ್ಲಿ ನೆರವಾಗುತ್ತಿವೆ.

ಪೂರ್ಣ ಲೇಖನಕ್ಕೆ prajavani.net ನೋಡಿ



ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್: editpage@prajavani.co.in

ಅಭಿಮತ

ಸುಭಾಷಿತ

ನೀವು ಯಶಸ್ಸಿನ ಮೇಲೆ ಗಮನ ಕೇಂದ್ರೀಕರಿಸಿದರೆ ಒತ್ತಡ ಅನುಭವಿಸುತ್ತೀರಿ. ಅದರ ಬದಲು ಪರಿಣತಿ ಗಳಿಸಿದರೆ ಯಶಸ್ಸು ಸಿಗುವುದು ಖಾತರಿಯಾಗುತ್ತದೆ.

–ದೀಪಕ್ ಚೋಪ್ರಾ

ವಾರ್ಡ್ ಮರುವಿಂಗಡಣೆ ಪೂರ್ಣಗೊಳಿಸಿ ಬಿಬಿಎಂಪಿಗೆ ಶೀಘ್ರ ಚುನಾವಣೆ ನಡೆಸಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಹಿಂದಿನ ಚುನಾಯಿತ ಕೌನ್ಸಿಲ್‌ನ ಅಧಿಕಾರದ ಅವಧಿ 2020ರ ಸೆಪ್ಟೆಂಬರ್ 10ಕ್ಕೆ ಕೊನೆಗೊಂಡಿದ್ದು, ಆ ಬಳಿಕ ಅಧಿಕಾರಿಗಳ ಆಡಳಿತ ಜಾರಿಯಲ್ಲಿದೆ. ಚುನಾಯಿತ ಕೌನ್ಸಿಲ್‌ನ ಅವಧಿ ಮುಗಿಯುವುದಕ್ಕೆ ಮುನ್ನವೇ ಹೊಸ ಕೌನ್ಸಿಲ್ ರಚನೆ ಪ್ರಕ್ರಿಯೆ ಪೂರ್ಣಗೊಳಿಸುವುದು ಸರ್ಕಾರದ ಹಾಗೂ ರಾಜ್ಯ ಚುನಾವಣಾ ಆಯೋಗದ ಸಂವಿಧಾನಬದ್ಧ ಕರ್ತವ್ಯ. ಕೌನ್ಸಿಲ್‌ನ ಅಧಿಕಾರ ಅವಧಿ ಪೂರ್ಣಗೊಳ್ಳುವ ಮುನ್ನ ಚುನಾವಣೆ ನಡೆಸದಿರುವುದಕ್ಕೆ ರಾಜ್ಯ ಚುನಾವಣಾ ಆಯೋಗವಾಗಲೀ ಸರ್ಕಾರವಾಗಲೀ ಸ್ಪಷ್ಟ ಕಾರಣ ನೀಡಿಲ್ಲ. ಯಾವುದೇ ಕಾರಣದಿಂದ ಚುನಾವಣೆಯನ್ನು ಮುಂದೂಡುವುದಿದ್ದರೆ ಗರಿಷ್ಠ ಆರು ತಿಂಗಳ ಮಾತ್ರ ಆಡಳಿತಾಧಿಕಾರಿಯನ್ನು ನೇಮಿಸುವುದಕ್ಕೆ ಸಂವಿಧಾನದಲ್ಲಿ ಅವಕಾಶವಿದೆ. ಆದರೆ, ಬಿಬಿಎಂಪಿಯಲ್ಲಿ ಚುನಾಯಿತ ಕೌನ್ಸಿಲ್ ಆಡಳಿತ ಇಲ್ಲದೇ ಒಂದು ವರ್ಷ ಕಳೆದಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯ ಮೂರು ಮುಖ್ಯ ಸ್ತರಗಳಲ್ಲಿ ಕೆಳಸ್ತರದ ಸ್ಥಳೀಯ ಆಡಳಿತ ಅತೀ ಮುಖ್ಯವಾದುದು. ಜನರ ಸಮಸ್ಯೆಗಳಿಗೆ ನೇರವಾಗಿ ಸ್ಪಂದಿಸುವ ವ್ಯವಸ್ಥೆ ಇದಾಗಿದೆ. ಅಂತಹ ವ್ಯವಸ್ಥೆಯನ್ನು ಸಮರ್ಥವಾಗಿ ಕಾರ್ಯನಿರ್ವಹಿಸಲು ಕೌನ್ಸಿಲ್ ಬೇಕೇಬೇಕು ಎನ್ನುವುದನ್ನು ಸರ್ಕಾರ ಬೇಕಂತಲೇ ಮರೆತಂತಿದೆ.

ಸ್ಥಳೀಯ ಹಂತದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸುವ ಇಚ್ಛಾಶಕ್ತಿಯನ್ನು ಸರ್ಕಾರ ಪ್ರದರ್ಶಿಸಬೇಕು

ಬಿಬಿಎಂಪಿ ವಾರ್ಡ್‌ಗಳ ಸಂಖ್ಯೆಯನ್ನು ಕನಿಷ್ಠ 225ರಿಂದ ಗರಿಷ್ಠ 250ರವರೆಗೆ ಪರಿಷ್ಕರಿಸುವ ಬಗ್ಗೆ ಸರ್ಕಾರ 2020ರ ಅ.3ರಂದು ಅಧಿಸೂಚನೆ ಪ್ರಕಟಿಸಿತು. ಇದರ ಆಧಾರದಲ್ಲಿ ವಾರ್ಡ್‌ಗಳ ಮರುವಿಂಗಡಣೆಗೆ 2020ರ ಅ. 14ರಂದು ಬಿಬಿಎಂಪಿ ಆಯುಕ್ತರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿತು. ಆ ಬಳಿಕ ಬಿಬಿಎಂಪಿ ಮಸೂದೆ- 2020 ಅನ್ನು ವಿಧಾನ ಮಂಡಲದಲ್ಲಿ ತರಾತುರಿಯಲ್ಲಿ ಅಂಗೀಕರಿಸಲಾಯಿತು. ಹೊಸ ಕಾಯ್ದೆಯನ್ವಯ ಬಿಬಿಎಂಪಿ ವಾರ್ಡ್‌ಗಳ ಸಂಖ್ಯೆಯನ್ನು 243ಕ್ಕೆ ನಿಗದಿಪಡಿಸಿ ಸರ್ಕಾರ 2021ರ ಜ. 29ರಂದು ಅಧಿಸೂಚನೆ ಹೊರಡಿಸಿತು. ವಾರ್ಡ್ ಮರುವಿಂಗಡಣೆಗೆ ಹಿಂದೆ ರಚಿಸಿದ್ದ ಸಮಿತಿಯ ಸದಸ್ಯರನ್ನೇ ಮುಂದುವರಿಸಿ ಅದೇ ದಿನ ಮತ್ತೊಮ್ಮೆ ಅಧಿಸೂಚನೆ ಹೊರಡಿಸಿತು. ಬಿಬಿಎಂಪಿ ಚುನಾವಣೆಯನ್ನು ಮುಂದೂಡುವ ಸಲುವಾಗಿ ಸರ್ಕಾರ ಈ ಎಲ್ಲ ಕಸರತ್ತುಗಳನ್ನು ನಡೆಸುತ್ತಿದೆ ಎಂಬ ಬಗ್ಗೆ ಆಗ ವ್ಯಾಪಕ ಟೀಕೆ ವ್ಯಕ್ತವಾಗಿತ್ತು. ಆದಷ್ಟು ಬೇಗ ವಾರ್ಡ್‌ಗಳ ಮರುವಿಂಗಡಣೆ ಪೂರ್ಣಗೊಳಿಸಿ ಬಿಬಿಎಂಪಿಗೆ ಚುನಾವಣೆ ನಡೆಸುವ ಭರವಸೆಯನ್ನು ಸರ್ಕಾರ ನೀಡಿತ್ತು. ಆದರೆ, ಈ ಭರವಸೆಯನ್ನು ಉಳಿಸಿಕೊಳ್ಳುವುದಕ್ಕೆ ಸರ್ಕಾರವು ಗಂಭೀರ ಪ್ರಯತ್ನ ಮಾಡುತ್ತಿರುವ ಯಾವುದೇ ಲಕ್ಷಣ ಕಾಣಿಸುತ್ತಿಲ್ಲ. ವಾರ್ಡ್‌ಗಳ ಮರುವಿಂಗಡಣೆ ಪ್ರಕ್ರಿಯೆ ಆಮೆಗತಿಯಲ್ಲಿ ಸಾಗುತ್ತಿರುವುದನ್ನು ಗಮನಿಸಿದರೆ, ಬಿಬಿಎಂಪಿ ಚುನಾವಣೆ ಸದ್ಯಕ್ಕೆ ನಡೆಯುವುದು ಅನುಮಾನ ಎಂಬ ಸಂದೇಹ ಮೂಡಿದೆ. ವಾರ್ಡ್‌ಗಳ ಒಟ್ಟು ಸಂಖ್ಯೆಯನ್ನು 243ಕ್ಕೆ ಹೆಚ್ಚಿಸುವಾಗ ಪಾಲಿಕೆಯ ಗಡಿಯಿಂದ 1 ಕಿ.ಮೀ. ವ್ಯಾಪ್ತಿಯಲ್ಲಿರುವ ಯಾವೆಲ್ಲ ಗ್ರಾಮಗಳನ್ನು ಬಿಬಿಎಂಪಿ ಸೇರಿಸಿಕೊಳ್ಳಬೇಕು ಎಂಬ ಕುರಿತು ಮರುವಿಂಗಡಣಾ ಸಮಿತಿಯು ಸರ್ಕಾರಕ್ಕೆ ಶಿಫಾರಸು ಮಾಡಬೇಕಿದೆ. ಸಮಿತಿ ರಚನೆಯಾಗಿ 11 ತಿಂಗಳುಗಳೇ ಕಳೆದಿವೆ. ಅಚ್ಚರಿ ಎಂದರೆ, ಈ ಅವಧಿಯಲ್ಲಿ ಒಂದು ಬಾರಿ ಮಾತ್ರ ಸಭೆ ನಡೆದಿದೆ. ಬಿಬಿಎಂಪಿಗೆ ಮತ್ತೆ ಚುನಾಯಿತ ಪ್ರತಿನಿಧಿಗಳ ಆಡಳಿತ ಮರುಸ್ಥಾಪನೆ ಬಗ್ಗೆ ಸರ್ಕಾರ ಎಷ್ಟರ ಮಟ್ಟಿನ ಆಸಕ್ತಿ ಹೊಂದಿದೆ ಎಂಬುದಕ್ಕೆ ಈ ವಿಳಂಬ ಧೋರಣೆಯೇ ಸಾಕ್ಷಿ.

ಪ್ರಜಾಪ್ರಭುತ್ವದ ಯಶಸ್ಸಿನಲ್ಲಿ ಸ್ಥಳೀಯ ಆಡಳಿತ ಸಂಸ್ಥೆಗಳ ಪಾತ್ರವೂ ಮುಖ್ಯವಾದುದು. ಬೆಂಗಳೂರಿನಲ್ಲಿ ಕೋವಿಡ್ ವ್ಯಾಪಿಸಿದ ಬಳಿಕವಂತೂ ಜನರು ನಾನಾ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಬಿಬಿಎಂಪಿ ಮುಖ್ಯ ಆಯುಕ್ತರು ವಾರ್ಡ್‌ಗಳಿಗೆ ನೋಡಲ್ ಅಧಿಕಾರಿಯನ್ನು ನೇಮಿಸಿ ವಾರ್ಡ್ ಸಭೆಗಳನ್ನು ಪ್ರತಿ ತಿಂಗಳು ನಡೆಸುವಂತೆ ಆದೇಶ ಮಾಡಿದ್ದಾರೆ. ಈ ಆದೇಶವು ಕಡತದಲ್ಲಿ ಮಾತ್ರ ಇದ್ದಂತಿದೆ. ಬಹುತೇಕ ಕಡೆ ವಾರ್ಡ್ ಸಭೆಗಳು ಸಮರ್ಪಕವಾಗಿ ನಡೆದಿಲ್ಲ. ತಮ್ಮ ಅಹವಾಲುಗಳನ್ನು ಯಾರ ಬಳಿ ಹೇಳಿಕೊಳ್ಳುವುದು ಎಂಬ ಪ್ರಶ್ನೆ ನಾಗರಿಕರನ್ನು ಕಾಡುತ್ತಿದೆ. ಇನ್ನು, ಬಿಬಿಎಂಪಿ ವ್ಯಾಪ್ತಿಯ 28 ಶಾಸಕರು, ನಗರದ 1.30 ಕೋಟಿ ಜನರ ಸಮಸ್ಯೆಗಳಿಗೆ ಸ್ಪಂದಿಸುವುದು ಕನಸಿನ ಮಾತೇ ಸರಿ. ವಾರ್ಡ್‌ಗಳಿಗೆ ಪಾಲಿಕೆ ಸದಸ್ಯರ ಆಯ್ಕೆಯಾದರೆ ತಮ್ಮ ಅಧಿಕಾರಕ್ಕೆ ಕತ್ತರಿ ಬೀಳುತ್ತದೆ ಎಂಬ ಕಾರಣಕ್ಕೆ ಕೆಲವು ಶಾಸಕರು ಬಿಬಿಎಂಪಿಗೆ ಚುನಾವಣೆ ನಡೆಯುವುದನ್ನು ಬಯಸುತ್ತಿಲ್ಲ ಎಂಬ ಆರೋಪವೂ ಇದೆ. ಬಿಬಿಎಂಪಿ ಚುನಾವಣೆಯನ್ನು ನಡೆಸಲು ಶಾಸಕರು ಯಾವುದೇ ಒತ್ತಡ ಹೇರದಿರುವುದನ್ನು ನೋಡಿದರೆ ಈ ಆರೋಪದಲ್ಲಿ ಹುರುಳಿಲ್ಲದಿಲ್ಲ ಎಂದೆನಿಸುತ್ತದೆ. ವಿರೋಧ ಪಕ್ಷಗಳಂತೂ ಚುನಾವಣೆ ಮುಂದೂಡಿದ್ದನ್ನು ನೆಪಮಾತ್ರಕ್ಕೆ ಖಂಡಿಸಿ, ಆ ಬಳಿಕ ಜಾಣ ಮರೆವು ಪ್ರದರ್ಶಿಸಿವೆ. ಬೆಳಗಾವಿ, ಕಲಬುರ್ಗಿ ಹಾಗೂ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಗಳಿಗೆ ಇತ್ತೀಚೆಗೆ ಚುನಾವಣೆ ನಡೆಸಲಾಗಿದೆ. ವಾರ್ಡ್ ಮರುವಿಂಗಡಣೆ ಪ್ರಕ್ರಿಯೆಯನ್ನು ತ್ವರಿತವಾಗಿ ಪೂರ್ಣಗೊಳಿಸಿ ಬಿಬಿಎಂಪಿಗೂ ಚುನಾವಣೆ ನಡೆಸಬೇಕು. ಸ್ಥಳೀಯ ಹಂತದಲ್ಲೂ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸುವ ಇಚ್ಛಾಶಕ್ತಿಯನ್ನು ಸರ್ಕಾರ ಪ್ರದರ್ಶಿಸಬೇಕು.

ಕಾಲದ ಬಂಡಿಯಲ್ಲಿ ಅಡಕವಾಗಿರುವ ಸರ್ಕಾರಿ ಶಾಲೆಯ ಚಕ್ರ ಬೇರೆ ಬೇರೆಯದೇ ಕತೆ ಹೇಳುತ್ತದೆ

ಸರ್ಕಾರಿ ಶಾಲೆ ಇಷ್ಟ, ಆದರೆ...

ವಿಶ್ಲೇಷಣೆ

ಜಿ.ಎಸ್.ಜಯದೇವ
ಕೃಷ್ಣಮೂರ್ತಿ ಹನೂರು

ಈಗ ನಾವು ಇಲ್ಲಿ ಹೇಳಲು ಹೊರಟಿರುವ ಒಂದು ಜಿಲ್ಲೆಯ ಸರ್ಕಾರಿ ಶಾಲೆಗಳಿಗೆ ಸಂಬಂಧಿಸಿದ ಸಂಗತಿಯು ಬಹುಮಟ್ಟಿಗೆ ಕರ್ನಾಟಕದ ಇತರ ಭಾಗಗಳಿಗೂ ಅನ್ವಯಿಸಬಹುದೇನೊ?

ಪಟ್ಟಣದವರಲ್ಲದೆ ಗ್ರಾಮೀಣ ಪೋಷಕರೂ ಸರ್ಕಾರಿ ಶಾಲೆ ಬೇಡವೆಂದು ಖಾಸಗಿ ಶಾಲೆಗೆ ತಮ್ಮ ಮಕ್ಕಳನ್ನು ಕಳಿಸಲು ಬಯಸುತ್ತಿರುವುದು ಯಾಕೆ, ಪೋಷಕರ ನಿಜವಾದ ಚಿಂತೆಯೇನು, ಅವರ ತಿಳಿವಳಿಕೆಯಲ್ಲಿ ಒಳ್ಳೆಯ ಶಿಕ್ಷಣವೆಂದರೇನು, ಪೋಷಕರ ದೃಷ್ಟಿಯಲ್ಲಿ ಸರ್ಕಾರಿ ಶಾಲೆಗಳಿಗಿಂತ ಖಾಸಗಿ ಶಾಲೆಗಳು ಹೇಗೆ ಉತ್ತಮ ಎಂಬುದನ್ನು ಅರಿಯುವುದು ಚಾಮ-ರಾಜನಗರದ ದೀನಬಂಧು ಸಂಸ್ಥೆಯ ಶಿಕ್ಷಕರ ಉದ್ದೇಶವಾಗಿದ್ದಿತು. ಇದರೊಂದಿಗೆ, ಎರಡು ವರ್ಷಗಳಿಂದ ಸರ್ಕಾರಿ ಶಾಲೆಗಳಲ್ಲೇ ಇಂಗ್ಲಿಷ್ ಮಾಧ್ಯಮ ಎಂಬಂತೆ ವರ್ಷಕ್ಕೆ ಒಂದೊಂದು ಸಾವಿರ ಶಾಲೆಗಳಲ್ಲಿ ತರಗತಿ ಆರಂಭಿಸುವಂತೆ ಆಜ್ಞೆ ಹೊರಡಿಸಲಾಗಿದೆ. ಈ ಸಾಲಿನಲ್ಲೂ 960 ಇಂಗ್ಲಿಷ್ ಮಾಧ್ಯಮ ತರಗತಿಗಳನ್ನು ತೆರೆಯಲು ಅನುಮತಿ ನೀಡಲಾಗಿದೆ. ಅದರ ಆರಂಭ ಮತ್ತು ಅದು ಹೇಗೆ ನಡೆಯುತ್ತಿದೆಯೆಂದರೆ, ಅದು ಸಹ ಶಾಲೆಯ ಇತರ ಹಲವು ಹತ್ತು ಸಮಸ್ಯೆಗಳೊಂದಿಗೆ ಸೇರಿ-ಕೊಳ್ಳುತ್ತದೆ.

ಈಗಾಗಲೇ ಎಲ್ಲ ವಿದ್ಯಾವಂತರೂ ತಿಳಿದಿರುವಂತೆ, ಗ್ರಾಮೀಣರು ಸಹ ತಮ್ಮ ಮಕ್ಕಳನ್ನು ಇಂಗ್ಲಿಷ್ ಮಾಧ್ಯಮ ಶಾಲೆಗೆ ಕಳಿಸುವುದಾದರೆ ಬಹಳ ಬೇಗ ಅವರು ಮೇಲೆ ಬರುತ್ತಾರೆ ಎಂಬ ನಂಬಿಕೆಯಲ್ಲಿದ್ದಾರೆ. ಮುಖ್ಯವಾಗಿ ಅವರು ಹೇಳುವುದೆಂದರೆ, ಖಾಸಗಿ ಶಾಲೆಗಳಲ್ಲಿ ವಾಹನ ಸೌಲಭ್ಯವಿದೆ, ನಾವು ಕೂಲಿಗೆ ಹೋಗಿ ತಡವಾಗಿ ಬಂದರೂ ಮಕ್ಕಳು ಕ್ಷೇಮದಿಂದ ಮನೆ ತಲುಪುತ್ತಾರೆ. ಜತೆಗೆ ಮಕ್ಕಳು ಶಿಸ್ತಿನಿಂದ ಯೂನಿ-ಫಾರ್ಮ್‌ನಲ್ಲಿ ಬರಬೇಕೆಂಬುದರಿಂದ ಹಿಡಿದು ಕಲಿಸುವ ಕ್ರಮದಲ್ಲೂ ಶಾಲೆಯವರು ಆಸಕ್ತಿ ವಹಿಸುತ್ತಾರೆ. ನಿತ್ಯ ಆದ ಪಾಠ, ಆಗುವ ಪಾಠದ ಬಗ್ಗೆ ಡೈರಿ ಬರೆಸುತ್ತಾರೆ. ಎಸ್‌ಎಂಎಸ್ ಮೂಲಕ ಮಕ್ಕಳ ಪ್ರಗತಿ ತಿಳಿಸುವುದಿದೆ.

ಆಮೇಲೆ ತರಗತಿವಾರು, ವಿಷಯವಾರು ಶಿಕ್ಷಕರು ಇರುತ್ತಾರೆ. ಆದರೆ ಸರ್ಕಾರಿ ಶಾಲೆಗಳಲ್ಲಿ ಇಬ್ಬರು–ಮೂವರು ಅಥವಾ ನಾಲ್ವರು ಶಿಕ್ಷಕರು ಇರುತ್ತಾರೆ. ಕೆಲವು ಕಡೆ ಹೆಚ್ಚು ಸಂಖ್ಯೆಯ ವಿದ್ಯಾರ್ಥಿಗಳಿರುವಲ್ಲಿ ಎಂಟು ಜನ ಶಿಕ್ಷಕರಿದ್ದು, ಕಡಿಮೆ ಸಂಖ್ಯೆಯಲ್ಲಿ ವಿದ್ಯಾರ್ಥಿಗಳಿರುವ ಶಾಲೆಗಳಲ್ಲೂ ಎಂಟು ಜನ ಶಿಕ್ಷಕರಿರುತ್ತಾರೆ. ಇಷ್ಟಾಗಿ ಬಹುತೇಕ ಶಾಲೆಗಳಲ್ಲಿ ಶಿಕ್ಷಕರ ಸಂಖ್ಯೆ ಕಡಿಮೆಯೇ ಇದೆ. ಈ ನಡುವೆ ಇಂಗ್ಲಿಷ್ ಮಾಧ್ಯಮ ತರಗತಿಗಳನ್ನು ಆರಂಭ ಮಾಡಿರುವುದರಿಂದ ಒಬ್ಬಿಬ್ಬರು ಶಿಕ್ಷಕರಿಗೆ ಇಂಗ್ಲಿಷ್ ಕಲಿಕೆಯ ತರಬೇತಿ ಕೊಟ್ಟು, 'ನೀವು ಇಂಗ್ಲಿಷ್ ಮಾಧ್ಯಮ ತರಗತಿ ಬಗ್ಗೆ ನಿಗಾ ವಹಿಸಿ' ಎಂದರೆ, ಉಳಿಯುವ ಒಬ್ಬಿಬ್ಬರು ಶಿಕ್ಷಕರು ಕನ್ನಡ ಮಾಧ್ಯಮ ತರಗತಿಗಳನ್ನು ನಿರ್ವಹಿಸಲಾಗುವುದಿಲ್ಲ.

ಖಾಸಗಿ ಶಾಲೆಗಳಲ್ಲಿ ಶಿಕ್ಷಕರಿಗೆ ಪಾಠ ಮಾಡುವುದು ಬಿಟ್ಟು ಬೇರೆ ಯಾವ ಜವಾಬ್ದಾರಿಯೂ ಇರುವುದಿಲ್ಲ. ಎಲ್ಲಕ್ಕಿಂತ ಮುಖ್ಯ ಈ ಶಿಕ್ಷಕರು ಆಗಾಗ್ಗೆ ಪೋಷಕರ ಸಭೆ ಕರೆದು ಮಕ್ಕಳ ಕಲಿಕಾ ಪ್ರಗತಿಯ ವರದಿ ಕೊಡುವುದುಂಟು. ಸರ್ಕಾರಿ ಶಾಲೆಗಳಲ್ಲಿ ಈ ಕ್ರಮ ಇಲ್ಲ. ಖಾಸಗಿ ಶಾಲಾ ಶಿಕ್ಷಕರು ಸಮಯಕ್ಕೆ ಸರಿಯಾಗಿ ತರಗತಿಯಲ್ಲಿದ್ದು ಪಾಠ ಮಾಡುವರು. ಸರ್ಕಾರಿ ಶಾಲೆಯ ಎಷ್ಟೋ ಶಿಕ್ಷಕರು ಸರಿಯಾದ ಸಮಯಕ್ಕೆ ಬರುವುದಿಲ್ಲ. ಅದರಲ್ಲೂ ಬಸ್ಸಿನ ಅನುಕೂಲವಿಲ್ಲದ ಒಳಪ್ರದೇಶಗಳಲ್ಲಿ ಅವರ ನಿತ್ಯಹಾಜರಿ ಇರುವುದಿಲ್ಲ. ಎಲ್ಲಕ್ಕಿಂತ ಮುಖ್ಯ ಖಾಸಗಿ ಶಾಲೆಗಳಲ್ಲಿ ಶಿಕ್ಷಕರು ಯಾವುದೇ ದುಶ್ಚಟಗಳನ್ನು ಪ್ರದರ್ಶಿಸುವುದಿಲ್ಲ, ಅಶ್ಲೀಲ ಭಾಷೆ ಬಳಸುವುದಿಲ್ಲ. ಅಲ್ಲಲ್ಲಿ ಸರ್ಕಾರಿ ಶಾಲೆಯ ಶಿಕ್ಷಕರಲ್ಲಿ ಇರಬಹುದಾದ ಚಟಗಳನ್ನು ಕುರಿತು ಮಕ್ಕಳ ತಾಯಂದಿರೇ ದೂರು ಹೇಳಿದ್ದು ಇದೆ.

ಹೀಗೆ ಹೇಳುವ ಪೋಷಕರೇ ತಮ್ಮ ದುಡಿಮೆಯ ಸಂಪಾದನೆಯಲ್ಲಿ ಖಾಸಗಿ ಶಾಲೆಯ ಫೀಸು ಕಟ್ಟಲಾಗದೆಂದು, ಸರ್ಕಾರಿ ಶಾಲೆ ಸರಿ ಹೋಗುವುದಾದರೆ ಮಕ್ಕಳನ್ನು ಅಲ್ಲಿಗೇ ಕಳಿಸುವ ಇಷ್ಟವಿದೆಯೆಂದು ಹೇಳುತ್ತಾರೆ. ಖಾಸಗಿ ಶಾಲೆಗಳಲ್ಲಿ ಎಲ್ಲ ಮಕ್ಕಳನ್ನೂ ಸಮನಾಗಿ ನೋಡುವ ಕ್ರಮ ಇರುವುದು ನಿಜವಾದರೂ ಒಮ್ಮೊಮ್ಮೆ ಅದೆಲ್ಲ ನಾಟಕದಂತೆ ತೋರುವುದೆಂಬ ಅಂತರಂಗದ ಅಭಿಪ್ರಾಯವನ್ನು ಕೆಳ ಮಧ್ಯಮ ಕುಟುಂಬಗಳ ಗ್ರಾಮೀಣರು ಹೇಳುವುದುಂಟು. ಒಂದು ವೇಳೆ ಸರ್ಕಾರಿ ಶಾಲೆಗಳ ಸ್ಥಿತಿಗತಿ ಸರಿಹೋಗುವುದಾದರೆ ತಮ್ಮ ಮಕ್ಕಳನ್ನು ಸೇರಿಸುವುದಲ್ಲದೆ ಅಂಥ ಶಾಲೆ ಕುರಿತು ತಾವೇ ಪ್ರಚಾರ ಮಾಡುವುದಾಗಿ ಹೇಳುತ್ತಾರೆ.

ಸರ್ಕಾರಿ ಶಾಲೆಯ ಮೇಷ್ಟರುಗಳು ಪದವಿ ಪಡೆದವರೂ ಬುದ್ಧಿವಂತರೂ ಇರುತ್ತಾರೆ. ಯಾಕೆಂದರೆ ಅವರು ಬೇರೆ ಬೇರೆ ವರ್ಗ, ಸಮೂಹಗಳಿಂದ ಬಂದವರು. ಖಾಸಗಿ ಶಾಲೆಗಳಲ್ಲಿ ಒಂದೊಂದೇ ಕೋಮಿನ ಶಿಕ್ಷಕರು ಶಿಫಾರಸಿನ ಮೇಲೆ ಸೇರಿಕೊಂಡಿರುತ್ತಾರೆಂಬ ಅಭಿಪ್ರಾಯವಿದೆ. ಇದರೊಂದಿಗೆ ಖಾಸಗಿ ಶಾಲೆಗಳ ಶುಲ್ಕ ಭರಿಸಲಾಗದ ಜತೆಗೆ ಇತರ ಕಾರಣಕ್ಕೂ ಹಣ ವಸೂಲಿ ಮಾಡುವುದಿದೆ. ಇತ್ತ ಕಡೆ ಸರ್ಕಾರಿ ಶಾಲೆಗಳು ಗ್ರಾಮಗಳಲ್ಲಿ ದೊಡ್ಡ ಮೈದಾನದ ನಡುವೆ ಇದ್ದರೂ ಕಟ್ಟಡಗಳು ಸುವ್ಯವಸ್ಥೆಯಿಂದ ಕೂಡಿರುವುದಿಲ್ಲ, ಶೌಚಾಲಯ ವ್ಯವಸ್ಥೆ ಇರುವುದಿಲ್ಲ. ಇತ್ತೀಚೆಗೆ ಸರ್ಕಾರಿ ಶಾಲೆಗಳ ನಿರ್ವಹಣಾ ಸಮಿತಿಗೆ ಸರ್ಕಾರದಿಂದ ಬರುವ ಅನುದಾನದಡಿ ಶೌಚಾಲಯ ಮತ್ತಿತರ ಅನುಕೂಲಗಳು ಆಗುತ್ತಿವೆ ನಿಜ. ಆದರೆ ಈ ನಿರ್ವಹಣಾ ಸಮಿತಿಯು ಹಮ್ಮಿಕೊಳ್ಳುವ ಅಭಿವೃದ್ಧಿ ಕೆಲಸಗಳು ಸರ್ಕಾರಿ ಚಕ್ರದ ನಿಧಾನಗತಿಯಿಂದ ಹಾಗೂ ಅಲ್ಲಲ್ಲೇ ಹುಟ್ಟಿಕೊಳ್ಳುವ ಇನ್ನಿತರ ಕ್ಷುಲ್ಲಕ ಮನಃಸ್ಥಿತಿಯ ಕಾರಣಗಳಿಂದ ಬೇಗ ನೆರವೇರುವುದಿಲ್ಲ. ಶೌಚಾಲಯ ಕಟ್ಟುವುದೇನೋ ಸರಿ, ಇಡೀ ಶಾಲೆಯ ಸ್ವಚ್ಛತಾ ಕೆಲಸಕ್ಕೆ ಒಬ್ಬರ ನೇಮಕಾತಿಯ ಅವಕಾಶವೇ ಪ್ರಾಥಮಿಕ ಶಾಲೆಗೆ ಇರುವುದಿಲ್ಲ.

ಇಂಥ ಶಾಲೆಗಳಲ್ಲಿ ಈಗ ಎರಡು ವರ್ಷಗಳಿಂದ ಇಂಗ್ಲಿಷ್ ಮಾಧ್ಯಮ ತರಗತಿಗಳು ಆರಂಭಗೊಂಡಿವೆ. ಮೊದಲನೆಯದಾಗಿ, ಅಲ್ಲಿ ಶಿಕ್ಷಕರ ಕೊರತೆ ಇರುವುದರಿಂದ ಈ ತರಗತಿಗಳಿಗೆ ವಿದ್ಯಾರ್ಥಿಗಳ ಸಂಖ್ಯೆ ಅಷ್ಟೇನೂ ಹೆಚ್ಚಿಲ್ಲ. ಅಥವಾ ಹೆಚ್ಚು ಜನ ಇಂಗ್ಲಿಷ್ ಮಾಧ್ಯಮಕ್ಕೆ ಅವಕಾಶ ಕೊಡಿ ಅಂದರೆ ಅದೂ ಸಾಧ್ಯವಿಲ್ಲ. 30 ಅರ್ಜಿಗಳ ನಂತರ ಅರ್ಜಿ ಸಲ್ಲಿಸಿದ ವಿದ್ಯಾರ್ಥಿ ಕನ್ನಡ ಮಾಧ್ಯಮಕ್ಕೆ ಸೇರಿಕೊಳ್ಳಬೇಕು. ಇನ್ನು ಇಂಗ್ಲಿಷ್ ಮಾಧ್ಯಮದಲ್ಲಿ ಪಾಠ ಮಾಡುವ ಶಿಕ್ಷಕರಿಗೆ ಅಲ್ಲಿ ಬೋಧಿಸುವ ಇಷ್ಟವಿದೆಯೇ ಅಂದರೆ ಅವರು 'ಹತ್ತಿಪ್ಪತ್ತು ವರ್ಷಗಳಿಂದ ಕನ್ನಡದಲ್ಲಿಯೇ ಬೋಧಿಸಿ ಅಭ್ಯಾಸ' ಅನ್ನುತ್ತಾರೆ. ಇಂಗ್ಲಿಷ್ ಪಾಠದ ಅನುಭವ ಅಂದರೆ, 'ಡಿಎಡ್ ತರಬೇತಿ ಕೇಂದ್ರಗಳಲ್ಲಿ ಆಗಾಗ ಕೆಲವು ದಿನಗಳ ಮಟ್ಟಿಗೆ ಪಡೆದ ತರಬೇತಿಯಷ್ಟೇ' ಅನ್ನುತ್ತಾರೆ. ಇದು ಕರ್ನಾಟಕದ ಎಲ್ಲ ಗ್ರಾಮಭಾಗಗಳ ಇಂಗ್ಲಿಷ್ ಮಾಧ್ಯಮ ಶಾಲೆಗಳ ಸಮಸ್ಯೆ. ಯಾವುದೇ ಪೂರ್ವತಯಾರಿ ಇಲ್ಲದೆ ಬರಿದೇ ಸರ್ಕಾರಿ ಆಜ್ಞೆಯ ಮೇಲೆ ಇವು ಆರಂಭವಾಗಿವೆ.

ಒಂದು ವೇಳೆ ಇಂಥ ಶಾಲೆಗಳಲ್ಲಿ ನಾಲ್ಕೈದು ತರಗತಿವರೆಗೆ ಅರೆಬರೆ ಇಂಗ್ಲಿಷ್ ಕಲಿತು ಒಬ್ಬ ಬಡ ಹುಡುಗ ಡ್ರಾಪ್‌ಔಟ್ ಆದರೆ ಅವನಿಗೆ ಎಷ್ಟು ಕನ್ನಡ, ಎಷ್ಟು ಇಂಗ್ಲಿಷ್ ಬರಬಹುದು ಎಂಬ ಪ್ರಶ್ನೆಗೆ ಅಧ್ಯಾಪಕ-ರಲ್ಲಿ ಉತ್ತರವಿಲ್ಲ.

ಇಷ್ಟರ ಮೇಲೆ ಸರ್ಕಾರಿ ಶಾಲೆಗಳು ಚೆನ್ನಾಗಿ ನಡೆಯುತ್ತಲೇ ಇಲ್ಲ ಎನ್ನುವಂತಿಲ್ಲ. ಖಾಸಗಿ ಶಾಲೆಯವರು ಪಡೆಯುವುದರ ಎರಡು– ಮೂರು ಪಟ್ಟು ಹೆಚ್ಚು ವೇತನ ಪಡೆಯುತ್ತಿರುವೆವೆಂಬ ಭಾವನೆಯುಳ್ಳ ಅಧ್ಯಾಪಕರು ತುಂಬ ಶ್ರಮ ವಹಿಸಿ ಶಾಲೆಯನ್ನು ನೋಡಿಕೊಳ್ಳುತ್ತಿ-ರುವ ದಾಖಲೆಗಳೂ ಇವೆ. ಕೊರೊನಾ ಸಂದರ್ಭದಲ್ಲೂ ಒಂದೊಂದು ಬೀದಿಯ ಮಕ್ಕಳನ್ನು ಒಂದೊಂದು ಮನೆಯಲ್ಲಿ ಕೂರಿಸಿ ಪಾಠ ಹೇಳಿದ ಆದರ್ಶ ಶಿಕ್ಷಕರಿ-ದ್ದಾರೆ. ಶಾಲೆಯ ಸುತ್ತ ಪಾರ್ಥೇನಿಯಂ ಬೆಳೆದರೆ ಏನು ಬಂದೀತು, ಹೂವಿನ ತೋಟ, ಗಿಡ, ಮರ ಬೆಳೆದರೆ ಹಕ್ಕಿ ಪಕ್ಷಿಗಳು ಬಂದೇ ಬರುತ್ತವೆ ಎನ್ನುವ ನಿಷ್ಠಾವಂತ ಶಿಕ್ಷಕರೂ ಇದ್ದಾರೆ. ಅಂತಹವರ ಸಮ್ಮುಖಕ್ಕೆ ಶಿಕ್ಷಣ ಸಚಿವರೇ ಹೋಗಿ ಬೆನ್ನು ತಟ್ಟಿ ಸನ್ಮಾನಿಸಿದ್ದಾರೆ. ಅದೇ ಪ್ರಾಮಾಣಿಕತೆಗೆ ಇನ್ನೊಬ್ಬ ಮಂತ್ರಿಯಿಂದ ಅದೇ ಶಿಕ್ಷಕ ಅಮಾನತು ಆದದ್ದೂ ಉಂಟು. ಇದು ಸರ್ಕಾರಿ ಚಕ್ರದ ಬೇರೆಯದೇ ಕಥೆ.

ಚುರುಮುರಿ

ಬಲು ಫಾಟು

• ಲಿಂಗರಾಜು ಡಿ.ಎಸ್.

ತುರೇಮಣೆ ಒಂದೇ ಸಮನೆ ಸೀನುತಿದ್ದರು. 'ಇದ್ಯಾಕ್ಸಾ ಸೀನುತಿದ್ದೀರಿ. ಕೊರೊನಾ ಬಂದದೆ ಅಂತ ಜನ ತಪ್ಪು ತಿಳಕತರೆ' ಅಂತ ಪುಳ್ಳೆ ಹಾಕಿದೆ.

'ಲೋ ಬೊಡ್ಡಿಹೈದ್ನೇ, ಮನೇಲಿ ಒಣ ಮೆಣಸಿನಕಾಯಿ ಹುರಿತಾವ್ರೆ! ಅದುರುದ್ದೇ ಫಾಟು ಕಲಾ!' ಅಂದ್ರು.

'ಹ್ಞೂಂ ಕಯ್ಯಾ, ರಾಜ್ಯದೇಲ್ಲಾ ಫಾಟುಗಳು ಜಾಸ್ತಿಯಾಗಿ ಜನ ಕೆಮ್ಮಿ, ಸೀತು ಸುಸ್ತಾಗ್ಯವರೆ. ಎತ್ತಿನ ಬಂಡೀಲಿ ಸದನಕ್ಕೋದ್ರೆ ಜನದ ಬಂಡಾಟ ತಪ್ಪದಾ! ಬಸಣ್ಣ ಮಾಮ ಡೆಲ್ಲಿಗೋ-ಗದ್ರಲ್ಲೇ ಬಿಜಿ ಅದೆ!' ಯಂಟಪ್ಪಣ್ಣ ಬೇಜಾರಲ್ಲಿ ಮಾತಾಡಿತು.

'ಅಣ್ಣೇಳದು ಸರಿಯಾಗದೆ. ಶಿರಾಡಿ ಫಾಟು, ಚಾರ್ಮಾಡಿ ಫಾಟು ಕಡೆ ಮೂರೊರ್ಸದ ಹಿಂದೆ ಮಾಡಿದ ಸಿಮೆಂಟು ರೋಡು ಕಿಸ್ಕಂಡು ಬಿದ್ದದಂತೆ?' ತುರೇಮಣೆ ಹೇಳಿದರು.

'ಸಿಮೆಂಟ್ ತೋರಿಸಿಕ್ಕಂಡೋದ್ರೆ ಸಿಮೆಂಟು ರೋಡು ಅಂದಾರೇ? ಬಿಬಿಎಂಪಿ ರೋಡೆಲ್ಲಾ ಬೀಟೆ ಸೆಣೆದು ಬಿರುಕು ಬಿಟ್ಟವೆ, ಕಲ್ಯಾಣ ಕರ್ನಾಟಕದೇಲಿ ರೋಡೆಲ್ಲ ದೂಳಿನ ಫಾಟು ಎಬ್ಬಿಸ್ತಾವೆ. ಶಾಸಕರ ನಿಧಿ ಬಳಕೆಯಾಗ್ದೆ ಕೋಟಿ ಕೋಟಿ ಹಂಗೇ ಬಿದ್ದದಂತೆ? ಜನ ಹಳೆ ಕಲ್ಲು ಹೊಸ ಬಿಲ್ಲು ಅಂತ ನಗಾಡಿಕ್ಯಂಡು ಸುಮ್ಮಗವ್ರೆ' ಅಂತು ಯಂಟಪ್ಪಣ್ಣ.

'ಯಂಟಪ್ಪಣ್ಣೋ, ಅತ್ಯಾಚಾರದ ಫಾಟು, ನಡು ರಾತ್ರೀಲಿ ಡ್ರಗ್ಸ್ ಫಾಟು, ಕಾಶ್ಮೀರದಲ್ಲಿ ಉಗ್ರರ ಫಾಟು, ಸದನದಲ್ಲಿ ಆರೋಪದ ಫಾಟು, ಮೀಸಲಾತಿ ಫಾಟು, ಖಾತೆ ಫಾಟು, ಅತಂತ್ರ ನಗರಸಭೆಗಳಲ್ಲಿ ಕುರ್ಚಿ ಫಾಟು, ಒಂದಾ ಎರಡಾ, ಶಾಸಕರ ನಿಧಿಯಗೇನದೆ ಪುಗಸಟ್ಟೆ ಪುನುಗು' ಅಂತಂದೆ.

'ಕೊರೊನಾ, ಪೆಟ್ರೋಲು, ಗ್ಯಾಸು ಟ್ರಬಲ್ಲಲ್ಲಿ ನಮ್ಮ ಸ್ಥಿತಿ ಕೊಯ್ ಕೊಟಾರ್ ಆಗಿ ಹರಿಶ್ಚಂದ್ರ ಫಾಟ್ ಕಾಣ್ತಾ ಅದೆ ಕನೋ. ಮೋದಿ ಮಾವಾರು ಮಾತ್ರ ನಮ್ಮ ಆರ್ಥಿಕತೆ ಬಲಿಷ್ಠವಾಗ್ಯದೆ ಅಂತ ಫಾಟಬ್ಬಿಸವ್ರಲ್ರೋ! ಯಾಕಿಂಗೆ?' ಅಂತು ಯಂಟಪ್ಪಣ್ಣ.

'ಉಳ್ಳೋರಿಗೇ ಪಾಯ್ದೆಯಾಗಬೇಕಾದ್ರೆ ಒಳ್ಳೇರಿಗೆ ಫಾಟು ಆದೇ ಆಯ್ತದೆ ಕನಿರ್ಲಾ. ಪಾಯ್ದೆ ಸಂಸ್ಥಾಪನಾರ್ಥಾಯ ಫಾಟು ಸಂಭವಾಮಿ ಯುಗೇಯುಗೇ' ಅಂದ ತುರೇಮಣೆ ಫಾಟಿನ ವಿಶ್ವರೂಪ ತೋರಿಸಿದರು.

ಸಂಗತ

ಬದುಕೆಂದರೆ ಹಾಗೆ, ಅಚ್ಚರಿಗಳ ಸಂತೆ

ಕೆಲವೊಮ್ಮೆ ಬಂದೆರಗುವ ಕಷ್ಟನಷ್ಟಗಳು ನಮ್ಮ ಮನೋಬಲವನ್ನೇ ಉಡುಗಿಸಿಬಿಡುವ ಅಪಾಯವಿದೆ. ಕೋವಿಡ್ ಕಾಲಘಟ್ಟದಲ್ಲಿ ಮನೋಸ್ಥೈರ್ಯವನ್ನು ಗಟ್ಟಿಗೊಳಿಸುವ ಪ್ರಯತ್ನ ಬಲಗೊಳ್ಳಬೇಕಿದೆ

• ಸತೀಶ್ ಜಿ.ಕೆ. ತೀರ್ಥಹಳ್ಳಿ

ಇಲ್ಲಿ ಯಾವುದೂ ಶಾಶ್ವತ ಅಲ್ಲ, ಎಲ್ಲವೂ ಬದಲಾಗುತ್ತವೆ. ಬದಲಾವಣೆಯೊಂದೇ ಶಾಶ್ವತ. ಕಾರಣ 'ಪರಿವರ್ತನೆ ಜಗದ ನಿಯಮ'. ಹಣ, ಕೀರ್ತಿ, ಆಸ್ತಿ, ಅಂತಸ್ತು, ಸಾಮ್ರಾಜ್ಯ, ದೇಶ, ಭಾಷೆ, ಈರ್ಷ್ಯೆ ಎಲ್ಲವೂ ಮುಂದೊಂದು ದಿನ ಮಾಯವಾಗುತ್ತವೆ. ಆದರೆ ಬಗೆ ಬಗೆಯಾಗಿ ಬರೆದಿಟ್ಟ ಕೃತಿ, ಕಡೆದ ಕಲೆ, ಮಾಡಿದ ಸಾಧನೆ, ಬೀರಿದ ಪ್ರಭಾವಗಳೆಲ್ಲ ಕಾಲಗಡಿಯಾಚೆಗೆ ವರ್ತಮಾನವನ್ನು ಆಳುತ್ತವೆ.

ಹತ್ತನೇ ಶತಮಾನದಲ್ಲಿ ಬರೆಯುತ್ತಿದ್ದ ಪಂಪ ತನ್ನ ಕೃತಿಗಳಲ್ಲಿ ಇವತ್ತೂ ಬದುಕಿದ್ದಾನೆ. ಕಣ್ಣು ಕುಕ್ಕುವ ಹಂಪಿ- ಹಳೇಬೀಡಿನ ಶಿಲಾಕೃತಿಗಳು ಈಗಲೂ ಜೀವಂತ. ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್ ನಮ್ಮೊಡನೆ ಉಸಿರಾಡುತ್ತಲೇ ಇದ್ದಾರೆ. ಭೌತಿಕ ವ್ಯಕ್ತಿಯಾಗಿ- ವಸ್ತುವಾಗಿ ಅಲ್ಲದಿದ್ದರೂ ಜೀವ ಪ್ರಚೋದಕ ಶಕ್ತಿಯಾಗಿ... ಶಕ್ತಿಗೆ ಸಾವಿಲ್ಲ. ಕಾರಣ 'ಶಕ್ತಿ ನಿತ್ಯದ ನಿಯಮ'. ಭೂಮಿ- ಭಾನು, ಗ್ರಹ- ನಕ್ಷತ್ರಗಳಾದಿಯಾಗಿ ಯಾವ ಕಾಯ- ಚರಾಚರಗಳೂ ಸ್ಥಿರವಲ್ಲ. ಸ್ಥಿರವಾದರೆ ಅವಕ್ಕೆ ಉಳಿವಿಲ್ಲ. ಬದುಕೂ ಅಷ್ಟೇ, ಅದು ನಿಂತ ನೀರಲ್ಲ. ನಿಂತರದು ಬಗ್ಗಡ.

ಭೂಮಿ ತನ್ನ ಪರಿಭ್ರಮಣೆಯ ಹಾದಿಯಲ್ಲಿ ಕ್ಷಣ-ಕ್ಷಣಕ್ಕೆ ದಿಕ್ಕು ಬದಲಿಸುತ್ತಿದ್ದರೂ ನಿರ್ದಿಷ್ಟ ಕಕ್ಷೆಯನ್ನು ಬಿಟ್ಟು ಹೊರಳದೇ ಉರುಳಬೇಕಾದಲ್ಲೇ ಉರುಳುತ್ತದೆ. ನಮ್ಮ ನಾಳೆಗಳ ಬಗ್ಗೆ ನಮಗೆ ಅರಿವಿಲ್ಲ, ಸಾಗುವ ಹಾದಿಯುದ್ದ ಏರಿಳಿತಗಳು, ಅಸಂಖ್ಯ ತಿರುವುಗಳು. ನಿತ್ಯವೂ ಎದುರುಗೊಳ್ಳಲು ತುದಿಗಾಲಲ್ಲಿ ಕಾದಿರುವ ಸಮಸ್ಯೆ– ಸವಾಲುಗಳಿಗೆ ನಾವು ಎದೆಗೊಡಲೇಬೇಕು. ದೃಢ ಸಂಕಲ್ಪದೊಟ್ಟಿಗಿನ ಸತತ ಪರಿಶ್ರಮಕ್ಕೆ ಮಾತ್ರ ಅನಿರೀಕ್ಷಿತಗಳನ್ನು ಗೆಲ್ಲಬಲ್ಲ ತಾಕತ್ತು ಬರುತ್ತದೆ. ಸನ್ನಿವೇಶದ ಕೂಸಾಗಿರುವ ನಾವು ಕಠಿಣ ಸಂದರ್ಭ, ಪಾರಿಸರಿಕ ಸಂಗತಿಗಳನ್ನು ಹೇಗೆಲ್ಲಾ ಎದುರುಗೊಳ್ಳುತ್ತೇವೆ, ವಿದ್ಯಮಾನಗಳಿಗೆ ಎಷ್ಟು ಜೀವಂತಿಕೆಯಲ್ಲಿ ಪ್ರತಿಕ್ರಿಯಿಸುತ್ತೇವೆ ಎನ್ನುವುದರ ಆಧಾರದಲ್ಲಿ ನಮ್ಮ ವ್ಯಕ್ತಿತ್ವ ನಿರ್ಧಾರವಾಗುತ್ತದೆ. ಡಾ. ಅಬ್ದುಲ್ ಕಲಾಂ ಅವರು ನುಡಿದಂತೆ 'ಇಲ್ಲಿ ಯಾವುದೂ ಅಸಾಧ್ಯ ಅಲ್ಲ, ನಾನೇ ಸಾಧ್ಯ!' ಈ ಮಾತಿಗೆ ಜೀವಂತ ಸಾಕ್ಷಿಯಾಗಿದ್ದವರು ಖಗೋಳ ಶಾಸ್ತ್ರಜ್ಞ ಸ್ಟೀಫನ್ ಹಾಕಿಂಗ್ಸ್. ಅಸಹಜ ದೈಹಿಕ ದೌರ್ಬಲ್ಯಗಳಲ್ಲಿ ಅವರು ಸುದೀರ್ಘ ಎಪ್ಪತ್ತಾರು ವರ್ಷಗಳ ಕಾಲ ಬದುಕುಳಿದಿದ್ದೇ ವೈದ್ಯಲೋಕದ ದೊಡ್ಡ ಅಚ್ಚರಿ! ತಮ್ಮ ದೌರ್ಬಲ್ಯಗಳನ್ನು ಮೀರಿ ವಿಶ್ವಸೃಷ್ಟಿಯ ಅನೂಹ್ಯಗಳನ್ನು ಭೇದಿಸುತ್ತಾ ಹೊರಟ ಅವರ ಸಂಶೋಧನಾ ದಾರಿಯು ಮತ್ತೊಂದು ಅಚ್ಚರಿಯೇ ಸರಿ.

ಅಷ್ಟಕ್ಕೂ ನಮ್ಮ ಸೃಷ್ಟಿಯೇ ಒಂದು ವಿಸ್ಮಯ. ಜೀವ, ದೇಹ, ಜನನ, ಜೀವನ ಎಲ್ಲವೂ ಅದ್ಭುತಗಳೇ, ಲೋಕಸೃಷ್ಟಿಯಂತೆ. ಗರ್ಭಾಂಕುರದ ಪೂರ್ವದಲ್ಲಿ ಹೆಣ್ಣಿನ ಅಂಡನಾಳವನ್ನು ಪ್ರವೇಶಿಸುವ ಕೋಟ್ಯಂತರ ಶಕ್ತ ವೀರ್ಯಾಣುಗಳು ತತ್ತಿಯೊಳಗೆ ನುಸುಳಲು ನಿರಂತರವಾಗಿ ಸೆಣಸುತ್ತಿರುತ್ತವೆ, ಗೆಲುವಿನ ಆ ಒಂದು ಕ್ಷಣಕ್ಕಾಗಿ. ಕಟ್ಟಕಡೆಗೆ ಸ್ಪರ್ಧೆ ಗೆದ್ದು ತತ್ತಿಯ ಭಿತ್ತಿ-ಯೊಳಗಿಳಿದು ಫಲಿತಗೊಳ್ಳುವುದು ಕೇವಲ ಒಂದೇ ಒಂದು ವೀರ್ಯಾಣು. ನಮ್ಮೆಲ್ಲರ ವಿಷಯದಲ್ಲಿ ಹಾಗೆ ಯಶಸ್ವಿಯಾದ ಏಕೈಕ ಲಿಂಗಾಣುವೆಂದರೆ ಅದು ಸ್ವತಃ ನಾವೇ! ಒಂದೊಮ್ಮೆ ಆ ಕೋಟ್ಯಂತರ ವೀರ್ಯಾಣುಗಳಲ್ಲಿ ಅದನ್ನು ಬಿಟ್ಟು ಬೇರಾವುದೇ ಲಿಂಗಾಣು ಗರ್ಭಾಂಕುರವಾಗಿದ್ದಲ್ಲಿ ಭೂಮಿಯ ಮೇಲಿಂದು ನಾವಿರುತ್ತಿರಲಿಲ್ಲ, ಇನ್ಯಾರೋ ಇರುತ್ತಿದ್ದರು. ಹತ್ತೇಹತ್ತು ಜನ ಓಡುವವರಲ್ಲಿ ನಾವು ಮೊದಲಿಗರಾದರೆ ಆ ಹೊತ್ತು ಜಗತ್ತು ಗೆದ್ದಂತೆ ಬೀಗುತ್ತೇವೆ. ಆದರೆ ಹುಟ್ಟುವ ಮೊದಲೇ ಅತ್ಯಂತ ತೀವ್ರತರದ ಸ್ಪರ್ಧೆ ಜಯಿಸಿ ಬಂದಿದ್ದೇವೆಂಬ ಸತ್ಯವನ್ನು ಸಂಭ್ರಮಿಸುವುದನ್ನು ಮರೆತಿರುತ್ತೇವೆ. ಸರ್ವ-ರೀತಿಯಲ್ಲೂ ಶಕ್ತರೂ ಸ್ವತಂತ್ರರೂ ಆದ ನಾವು ಸೋಲಿಗಂಜದೇ ಅವಕಾಶಕ್ಕಾಗಿ ಕಾಯುತ್ತಾ ಕೂರದೇ ಸಮಸ್ಯೆಗಳನ್ನೇ ಸವಾಲಾಗಿ ಪರಿಗಣಿಸಬೇಕು ಸತ್ಕಾರ್ಯ- ಸಾಧನೆಗಳಿಗೆ ನಮ್ಮ ಜೀವಿತಾವಧಿಯನ್ನೇ ಸುಮುಹೂರ್ತವೆಂದು ಭಾವಿಸಿ ಕ್ರಿಯಾಶೀಲರಾಗಬೇಕು. ಕರ್ತೃತ್ವವ ನಂಬಿ ಆತ್ಮವಿಶ್ವಾಸದಿಂದ ಅಡಿಯಿಡುವಾಗ ಸೋಲುಗಳನ್ನೂ ಸೋಲಿಸಲು ಸಾಧ್ಯ. ಹಿರಿಯರು ಹೇಳುವಂತೆ 'ಬದುಕೆಂಬುದು ಕನಸುಗಳನ್ನು ಮಾರುವ ಬಜಾರು, ಅಚ್ಚರಿ- ಅನಿರೀಕ್ಷಿತಗಳ ನಿತ್ಯಸಂತೆ. ಬೇಕಾದ್ದು, ಬೇಡದ್ದು ಎಲ್ಲವೂ ಅಲ್ಲಿ ಬಿಕರಿಗಿವೆ, ಅವರವರ ಅಗತ್ಯಕ್ಕೆ ಬೇಕಾಗಿದ್ದನ್ನು ಕೊಂಡುಕೊಳ್ಳುವ ಜಾಣತನವಿರಬೇಕಷ್ಟೆ'.



ಹೌದು, ಕೆಲವೊಮ್ಮೆ ಸಂಬಂಧಿಗಳ ಸಾವು, ಪರೀಕ್ಷೆಯ ಸೋಲು, ವ್ಯಾಪಾರ ನಷ್ಟ, ಉದ್ಯೋಗ ಅನಿಶ್ಚಿತತೆ, ಆರೋಗ್ಯ ಬಾಧೆ, ಹಿಂಸೆ- ಅವಮಾನಗಳು ಮನೋಬಲವನ್ನೇ ಗಾಸಿಗೊಳಿಸುವುದಿದೆ. ಹಾಗೆಂದು ಬದುಕನ್ನು ಮೊಟಕುಗೊಳಿಸುವುದಲ್ಲ. ವಾಸ್ತವವನ್ನು ಒಪ್ಪಿಕೊಂಡು ಮುಂದೆ ನಡೆಯಬೇಕು. ಬದುಕು ಹಿಮ್ಮುಖವಾಗಿಯೇನೂ ಚಲಿಸುವುದಿಲ್ಲ. ಮಣ್ಣೊಳಗೆ ಮಣ್ಣಾದಂತೆ ಕಾಣುವ ಬೀಜವೊಂದು ನೆಲದಿಂದ ಮೇಲೆದ್ದು ಮುಗಿಲಿಗೆ ಬೆಳೆಯುವ ಆದರ್ಶವನ್ನೂ ಪ್ರೇರಣೆಯನ್ನೂ ಗ್ರಹಿಸಬೇಕು.

ಅವರವರ ನೆಲೆಯಲ್ಲಿ ಸಾಧಿಸಲು ಎಲ್ಲರಿಗೂ ಸಾಧ್ಯವಿದೆ. ಸೀಮಿತ ಜೀವಿತಾವಧಿಯಲ್ಲಿ ಪ್ರತಿಕ್ಷಣವೂ ಅಮೂಲ್ಯ. ಸಾವಿರಾರು ಮೈಲಿಗಳ ಪ್ರಯಾಣವೂ ಪುಟ್ಟ ಹೆಜ್ಜೆಯಿಂದಲೇ ಶುರುವಾಗುವ ಹಾಗೆ, ಸವಾಲೊಡ್ಡುವ ಸಣ್ಣಸಣ್ಣ ಸಮಸ್ಯೆಗಳನ್ನು ಗೆಲ್ಲುತ್ತಾ ಹೋದಂತೆ ಗುರಿ ಸಾಧನೆಗೆ ಹತ್ತಿರವಾಗುತ್ತೇವೆ. ಪ್ರಯತ್ನವನ್ನೆಲ್ಲಾ ಒಗ್ಗೂಡಿಸಿಕೊಂಡು ಕನಸುಗಳನ್ನು ಬೆನ್ನುಹತ್ತಿ ದುಡಿದರಾಯಿತು. ಸರಳ, ನಿಸ್ಪೃಹ, ನಂಬಿಕೆಯುಳ್ಳ ಮನಃಸ್ಥಿತಿಯೇ ಸಂತೃಪ್ತ ಜೀವನದ ಅಡಿಪಾಯ. ವಿಶ್ವಾಸ- ಜೀವನೋತ್ಸಾಹದಿಂದ ಸರಳವಾಗಿ, ಸಮಾಜಮುಖಿಯಾಗಿ ಬದುಕು ಕಟ್ಟಿಕೊಳ್ಳುತ್ತಾ ಅಸ್ತಿತ್ವದ ಸಾರ್ಥಕತೆಯನ್ನು ಸಿದ್ಧಿಸಿಕೊಳ್ಳ-ಬೇಕಾದ ಅನಿವಾರ್ಯ ನಮ್ಮದಾಗಿರಲಿ ಸದಾ.

ದಿನದ ಟ್ವೀಟ್

ಅಗತ್ಯವಿರುವೆಡೆ ಕನ್ನಡ ಏಕಿಲ್ಲ?

ಕಾನೂನು, ಕಟ್ಟೆ & ನ್ಯಾಯಾಲಯದ ತೀರ್ಪುಗಳನ್ನು ಓದುತ್ತಾ ವಿಶ್ಲೇಷಣೆ ಮಾಡುವವರಿಗೇ ಬ್ಯಾಂಕ್ & ವಿಮಾ ಕಂಪನಿಗಳು ನೀಡುವ ಇಂಗ್ಲಿಷ್/ಹಿಂದಿಯ ಕಾಗದ ಪತ್ರಗಳನ್ನು ಓದಿ ಅವುಗಳ ನಿಗೂಢ ಮರ್ಮವನ್ನು ಅರಿಯಲಾಗದು. ಹೀಗಿರುವಾಗ ನೆಲದ ಮಕ್ಕಳಿಗೆ ಇದು ಎಷ್ಟು ತೊಡಕಾಗಿದೆ ಎಂಬುದನ್ನು ಗ್ರಹಿಸಿ. ಅಗತ್ಯ ಕ್ಷೇತ್ರಗಳಲ್ಲಿ ಕನ್ನಡ ಇರಲಿ.
#ಹಿಂದಿಹೇರಿಕೆನಿಲ್ಲಿಸಿ

ಕೆ.ಬಿ.ಕೆ.ಸ್ವಾಮಿ, ವಕೀಲ

ಕಿಡಿನುಡಿ

ರಾಜ್ಯದಲ್ಲಿ ಸ್ಮಾರ್ಟ್ ಸಿಟಿ ಮತ್ತು ಅಮೃತ್ ಯೋಜನೆಗಳ ಕಾಮಗಾರಿ ಬಗ್ಗೆ ರಾಜ್ಯ ಸರ್ಕಾರ ಉದ್ದದ ಪಟ್ಟಿಯನ್ನೇ ಮುಂದಿಡುತ್ತದೆ. ಈ ಯೋಜನೆಗಳ ಹೆಸರಿನಲ್ಲಿ ಒಂದೊಂದು ರಸ್ತೆಯನ್ನು ಆರು ಬಾರಿ ಅಗೆಯಲಾಗುತ್ತಿದೆ. ಕಾಮಗಾರಿಯ ಪ್ರಗತಿ ಮತ್ತು ಫಲಿತಾಂಶದ ಬಗ್ಗೆ ಮಾತ್ರ ಚಕಾರವೆತ್ತುವುದಿಲ್ಲ. ಇದು ಮದುವೆ ಬಗ್ಗೆ ಮಾತನಾಡುತ್ತಾರೆ, ಮಕ್ಕಳು ಆದವೋ ಇಲ್ಲವೋ ಎಂದು ಹೇಳುವುದಿಲ್ಲ ಎನ್ನುವಂತಾಗಿದೆ.

ಸಿ.ಎಂ.ಇಬ್ರಾಹಿಂ, ಕಾಂಗ್ರೆಸ್ ಶಾಸಕ

25 ವರ್ಷಗಳ ಹಿಂದೆ

ಭಾನುವಾರ, 15-9-1996

• **ರಾಜ್ಯಸಭೆಗೆ ಪ್ರಧಾನಿ ಸ್ಪರ್ಧೆ ಸಚಿವ ಮಿಶ್ರಾ ಟೀಕೆ**

ಬೆಂಗಳೂರು, ಸೆ. 14– ಜನಪ್ರಿಯ ಪ್ರಧಾನಿಯೊಬ್ಬರು ಜನತೆಯಿಂದ ನೇರವಾಗಿ ಲೋಕಸಭೆಗೆ ಆಯ್ಕೆ ಆಗಬೇಕೇ ಹೊರತು ವಿಧಾನಸಭೆಯಂಥ ಹಿಂದಿನ ಬಾಗಿಲಿಂದ ಸಂಸತ್ತಿಗೆ ಆಯ್ಕೆಯಾಗುವುದು ಸಲ್ಲ ಎಂದು ಎಚ್.ಡಿ.ದೇವೇಗೌಡರ ಸಂಪುಟದ ಕೃಷಿ ಸಚಿವ, ಸಿಪಿಐ ಮುಖಂಡ ಚತುರಾನನ ಮಿಶ್ರಾ ಇಂದು ಇಲ್ಲಿ ಖಚಿತ ಅಭಿಪ್ರಾಯ ವ್ಯಕ್ತಪಡಿಸಿದರು.

'ಗೌಡರು ರಾಜ್ಯಸಭೆಗೆ ಆಯ್ಕೆ ಆಗಲು ನಡೆಸುತ್ತಿರುವ ಪ್ರಯತ್ನ ನನಗಂತೂ ಗೊತ್ತಿಲ್ಲ. ಅವರು ಈ ವಿಚಾರವನ್ನು ಸಂಯುಕ್ತ ರಂಗದ ಸದಸ್ಯ ಪಕ್ಷಗಳೊಂದಿಗೆ ಚರ್ಚಿಸಿದಂತಿಲ್ಲ; ನನ್ನ ವೈಯಕ್ತಿಕ ಅಭಿಪ್ರಾಯ ಹೇಳುವುದಾದರೆ, ಜನಪ್ರಿಯ ಪ್ರಧಾನಿಯೊಬ್ಬರು ನೇರವಾಗಿ ಜನತೆಯಿಂದಲೇ ಆಯ್ಕೆಯಾಗಬೇಕು' ಎಂದು ಸುದ್ದಿಗಾರರಿಗೆ ಹೇಳಿದರು.

• **ಕಾಫಿ ಕಡ್ಡಾಯ ಸಂಗ್ರಹ ಪದ್ಧತಿ ಪೂರ್ಣ ರದ್ದು**

ನವದೆಹಲಿ, ಸೆ. 14 (ಪಿಟಿಐ)– ಕಾಫಿ ಮಂಡಳಿಯು ದೊಡ್ಡ ಬೆಳೆಗಾರರಿಂದ ಕಡ್ಡಾಯವಾಗಿ ಮಾಡುತ್ತಿದ್ದ ಕಾಫಿ ಸಂಗ್ರಹಣೆ ಪದ್ಧತಿಯನ್ನು (ಪೂಲಿಂಗ್) ಸರ್ಕಾರ ರದ್ದುಪಡಿಸಿದೆ. ಇದರಿಂದ ಎಲ್ಲಾ ವರ್ಗಗಳ ಕಾಫಿ ಬೆಳೆಗಾರರು ತಾವು ಬೆಳೆದ ಎಲ್ಲಾ ಕಾಫಿ ಬೆಳೆಯನ್ನು ಮುಕ್ತ ಮಾರುಕಟ್ಟೆ-ಯಲ್ಲಿ ಮಾರಾಟ ಮಾಡಲು ಅವಕಾಶ ನೀಡಿದಂತಾಗಿದೆ.

50 ವರ್ಷಗಳ ಹಿಂದೆ

ಬುಧವಾರ, 15-9-1971

• **ನಗರದ ಕಾಲೇಜುಗಳು ಅನಿರ್ದಿಷ್ಟ ಕಾಲ ಬಂದ್**

ಬೆಂಗಳೂರು, ಸೆ. 14– ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸೇರಿರುವ ನಗರದಲ್ಲಿನ ಕಾಲೇಜುಗಳನ್ನು ಅನಿರ್ದಿಷ್ಟಕಾಲದವ-ರೆವಿಗೆ ಮುಚ್ಚಬೇಕೆಂದು ಇಂದು ಸಂಜೆ ನಡೆದ ಕಾಲೇಜು ಪ್ರಿನ್ಸಿಪಾಲ್‌ಗಳ ಸಭೆ ತೀರ್ಮಾನಿಸಿತು.

ಕೆಲವು ಶಕ್ತಿಗಳು ಬಿಕ್ಕಟ್ಟನ್ನು ಸೃಷ್ಟಿಸಿರುವುದರಿಂದ ತಮ್ಮ ಸಂಸ್ಥೆಗಳಲ್ಲಿ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಸಾಧ್ಯವಾಗುತ್ತಿಲ್ಲ ಎಂಬುದು ಪ್ರಿನ್ಸಿಪಾಲ್‌ಗಳ ಒಮ್ಮತದ ಅಭಿಪ್ರಾಯವಾಗಿತ್ತು.

ವಿದ್ಯಾರ್ಥಿಗಳ ಮುಷ್ಕರದಿಂದ ಕಳೆದ ಎರಡು– ಮೂರು ದಿವಸಗಳ ಗಲಭೆಯಿಂದ ಉದ್ಭವಿಸಿರುವ ಪರಿಸ್ಥಿತಿಯನ್ನು ಪರಿಶೀಲಿಸಲು ಉಪಕುಲಪತಿ ಶ್ರೀ ಟಿ.ಕೆ. ತುಕೋಳ್ ಅವರು ಪ್ರಿನ್ಸಿಪಾಲ್‌ಗಳ ಸಭೆಯನ್ನು ಕರೆದಿದ್ದರು.

• **ಹುಬ್ಬಳ್ಳಿ–ಕಾರವಾರ ನಡುವೆ ಹೊಸ ರೈಲು ಮಾರ್ಗ: ಮಳೆಗಾಲದ ನಂತರ ಸಮೀಕ್ಷೆ**

ಹೈದರಾಬಾದ್, ಸೆ. 14– ಹುಬ್ಬಳ್ಳಿಯಿಂದ ಕಾರವಾರದವರೆಗೆ ಹೊಸ ಮಾರ್ಗ ನಿರ್ಮಿಸುವ ಬಗ್ಗೆ ಮಳೆಗಾಲ ಮುಗಿದ ಕೂಡಲೇ ಎಂಜಿನಿಯರಿಂಗ್ ಮತ್ತು ಸಂಚಾರಕ್ಕೆ ಸಂಬಂಧಿಸಿದ ಪೂರ್ವಭಾವಿ ಸಮೀಕ್ಷೆ ಕಾರ್ಯ ಆರಂಭಿಸಲಾಗುವುದೆಂದು ದಕ್ಷಿಣ ಮಧ್ಯೆ ರೈಲ್ವೆಯ ಜನರಲ್ ಮ್ಯಾನೇಜರ್ ಎಂ.ಟಿ. ಲೀ ಅವರು ಇಂದು ಇಲ್ಲಿ ತಿಳಿಸಿದರು.

ವಾಚಕರ ವಾಣಿ

ಎಲ್ಲೆಡೆ ತಮಿಳು ಸ್ತೋತ್ರ: ಎಷ್ಟು ಸರಿ?

ತಮಿಳು ಭಾಷೆಯು ದೇವರ ಭಾಷೆಯಾಗಿದ್ದು ದೇಶದಾದ್ಯಂತ ದೇವಸ್ಥಾನಗಳ ಪ್ರತಿಷ್ಠಾಪನೆಯನ್ನು ಸಂತರು ರಚಿಸಿದ ತಮಿಳು ಸ್ತೋತ್ರಗಳೊಂದಿಗೆ ನೆರವೇರಿಸಬೇಕು ಎಂದು ಮದ್ರಾಸ್ ಹೈಕೋರ್ಟ್ ಹೇಳಿರುವುದಾಗಿ ವರದಿಯಾಗಿದೆ (ಪ್ರ.ವಾ., ಸೆ. 14).

ತಮಿಳುನಾಡಿನಲ್ಲಿ ಬೇಕಾದರೆ ಎಲ್ಲ ದೇವಸ್ಥಾನಗಳಲ್ಲೂ ತಮಿಳು ಸ್ತೋತ್ರ ಪಠಣವಾಗಲಿ. ಆದರೆ ದೇಶದ ಬೇರೆ ದೇವಸ್ಥಾನಗಳಲ್ಲೂ ಈ ಭಾಷೆಯ ಸ್ತೋತ್ರವೇ ಪಠಣವಾಗಬೇಕು ಎನ್ನುವುದು ಎಷ್ಟರಮಟ್ಟಿಗೆ ಸರಿ? ಬೇರೆ ಬೇರೆ ರಾಜ್ಯದವರು ಇದನ್ನು ಅಂಗೀಕರಿಸುವುದಕ್ಕೆ ಒಪ್ಪಿಕೊಳ್ಳುತ್ತಾರೆಯೇ? ಇದರಿಂದ ಮತ್ತೊಮ್ಮೆ ಭಾಷಾ ವಿವಾದ ಭುಗಿ-ಲೇಳುವುದಕ್ಕೆ ಆಸ್ಪದ ಕೊಟ್ಟಂತೆ ಆಗುವುದಿಲ್ಲವೇ?

ಎಚ್.ವಿ.ಶ್ರೀಧರ್, ಬೆಂಗಳೂರು

ಗೋಡ್ಸೆ ಪ್ರತಿಮೆ ಸ್ಥಾಪನೆ ನಿಲ್ಲಲಿ

ರಾಷ್ಟ್ರಪಿತ ಮಹಾತ್ಮ ಗಾಂಧಿಯವರನ್ನು ಗುಂಡಿಕ್ಕಿ ಕೊಂದ ನಾಥೂರಾಂ ಗೋಡ್ಸೆಯ ಪ್ರತಿಮೆ ಸ್ಥಾಪಿಸಲು ಹಿಂದೂ ಸೇನಾ ಸಂಘಟನೆ ತೆಗೆದುಕೊಂಡಿರುವ ನಿರ್ಧಾರ (ಪ್ರ.ವಾ., ಸೆ. 13) ಹಿಂಸೆಯನ್ನು ಪ್ರಚೋದಿಸುವ ಕೃತ್ಯ. ವಿಶ್ವವನ್ನೇ ಬೆರಗುಗೊಳಿಸಿದ ಭಾರತೀಯ ಅಹಿಂಸಾ ಸಿದ್ಧಾಂತಕ್ಕೆ ತಿಲಾಂಜಲಿಯನ್ನಿಕ್ಕುವ ಘೋರ ಪ್ರಮಾದಕ್ಕೆ ಇದು ಆಸ್ಪದವನ್ನು ನೀಡುತ್ತದೆ.

ಗೋಡ್ಸೆ ವಿಚಾರಗಳು ದೇಶಹಿತದ ಪರವಾಗಿ ಇದ್ದವೋ ಇಲ್ಲವೋ ಆದರೆ ಆತನು ತುಳಿದ ಹಿಂಸಾಮಾರ್ಗ ಮಾತ್ರ ಎಂದೆಂದಿಗೂ ಕ್ಷಮಿಸುವಂಥದ್ದಲ್ಲ. ಇಂದಿನ ಯುವಕರಲ್ಲಿ ರಾಷ್ಟ್ರಪ್ರೇಮವನ್ನು ತುಂಬುವುದು ಪ್ರತಿಮೆ ಸ್ಥಾಪಿಸುವ ಉದ್ದೇಶ ಎಂದು ಸಂಘಟಕರು ಹೇಳಿದ್ದಾರೆ. ಗೋಡ್ಸೆ ಅಂತಹವರ ವಿಚಾರಗಳಿಂದ ರಾಷ್ಟ್ರಭಕ್ತಿಯನ್ನು ಕಲಿಯುವುದು ಸರ್ವಥಾ ಸಾಧ್ಯವಿಲ್ಲ. ಹಾಗೆ ಮಾಡುತ್ತೇವೆ ಎಂದುಕೊಂಡರೆ ಅದೊಂದು ಹಾಸ್ಯಾಸ್ಪದ ವಿಚಾರ. ಗಾಂಧಿ ಹಂತಕನ ಪ್ರತಿಮೆ ಸ್ಥಾಪನೆ ಪ್ರಯತ್ನ ನಿಲ್ಲಬೇಕು.

ಪ್ರೊ. ಶಾಶ್ವತಸ್ವಾಮಿ ಮುಕ್ಕುಂದಿಮಠ, ಸಿಂಧನೂರು

ಹಿಂದಿಯನ್ನು ಲೋಕಭಾಷೆಯಾಗಿ ಬೆಳೆಸಬೇಕಿದೆ

'ಹಿಂದಿ ದಿವಸ್'ಗೆ ಸಂಬಂಧಿಸಿದಂತೆ ಒಂದು ಪತ್ರ ಪ್ರಕಟವಾಗಿತ್ತು (ವಾ.ವಾ., ಸೆ. 10) ಸಂಸ್ಕೃತಕ್ಕೆ ಅನ್ಯ ಭಾಷೆ ಪ್ರತಿಸ್ಪರ್ಧಿಯಲ್ಲ ಎಂದು ಒಬ್ಬರು ಬರೆದಿದ್ದರು (ಪ್ರ.ವಾ., ಆ. 28). ಇವೆರಡರ ನಡುವೆ 'ಸಂಸ್ಕೃತ ಪ್ರಸಾರಗೊಂಡಲ್ಲಿ ಸಂಸ್ಕೃತಿ ಸುಭದ್ರ' ಎಂದು ರಾಜ್ಯಪಾಲರ ಮಾತು (ಪ್ರ.ವಾ., ಸೆ. 9). ಹಿಂದಿಯನ್ನು ರಾಜಭಾಷೆಗಿಂತ ಲೋಕಭಾಷೆಯಾಗಿ ಬೆಳೆಸುವ ಅಗತ್ಯವಿದೆ. ನಲವತ್ತು ವರ್ಷಗಳ ಹಿಂದಿನ ಕಾಲಕ್ಕೆ ಹೋಲಿಸಿದಾಗ ಚಲಾವಣೆಯ ದೃಷ್ಟಿಯಿಂದ ಅದು ಹೆಚ್ಚಿದೆ, ಬಾಲಿವುಡ್ ಅಥವಾ ಇತರ ಬೆರಕೆ ರೂಪ ಕಡಿಮೆ ಮಾಡಿ ಮೂಲ ಶುದ್ಧ ರೂಪದ ಹತ್ತಿರ ಹೋಗಬೇಕು.

ಸಂಸ್ಕೃತವನ್ನು ಸಂಸ್ಕೃತಿಯೊಂದಿಗೆ ಸಮೀಕರಿಸುವುದು ಸರಿಯಲ್ಲ (ನಾನು ಐದು ವರ್ಷ ಅದನ್ನು ಓದಿದ್ದೇನೆ). ಆರ್ಯ, ಅನಾರ್ಯ, ದ್ರಾವಿಡ ಚರ್ಚೆ ನೆನಪಾಗುತ್ತದೆ. ಕನ್ನಡ ನುಡಿ ಸಂಸ್ಕೃತದಿಂದ ಬೆಳೆದು ಬಂದಿಲ್ಲ ಎಂದು ಡಿ.ಎನ್.ಶಂಕರ ಬಟ್ ಅವರು ಒಂದು ಅಧ್ಯಾಯವನ್ನೇ ಬರೆದಿದ್ದಾರೆ. ಒಂದು ಘಟ್ಟದಲ್ಲಿ ಕನ್ನಡ ಭಿನ್ನ ವ್ಯಾಕರಣವನ್ನೂ ಅಳವಡಿಸಿಕೊಂಡಿದೆ. 'ಸರ್ವರ ಕಲ್ಯಾಣ'ದ ಆಶಯ ಸಂಸ್ಕೃತಕ್ಕೆ ಸೀಮಿತವಾಗಿಲ್ಲ. ಸಂಸ್ಕೃತ ವಿಶ್ವವಿದ್ಯಾಲಯ ಆ ಭಾಷೆಯನ್ನು ಸರ್ವಸ್ಪರ್ಶಿ/ವ್ಯಾಪಿ ಮಾಡಲು ಪ್ರಯತ್ನಿಸಬೇಕೆ? ಒಂದು ಪ್ರಾಚೀನ ಭಾಷೆಯಾಗಿ ಅದರ ಮಹತ್ವ, ಸೌಂದರ್ಯಗಳನ್ನು (ಉದಾಹರಣೆಗೆ- ನಾಟಕಗಳು ಗ್ರೀಕ್ ಎಪಿಕ್‌ಗಳಂತೆ ಶ್ರೇಷ್ಠ) ಪ್ರಸಾರ ಮಾಡಿದರೆ ಸಾಲದೇ? ಅದರ ಕಂಪ್ಯೂಟರ್ ಅಪ್ರೋಪ್ರಿಯೇಟ್ ಗುಣದ ಬಗೆಗೂ ಸಂಶೋಧನೆ ನಡೆಸಲಿ. ಆದರೆ ಸಾಂಸ್ಕೃತಿಕ ಪುನರುಜ್ಜೀವನ ದೃಷ್ಟಿಯಿಂದ ಹರಡುವುದು ಸೂಕ್ತವಲ್ಲ. ಹೊರರಾಜ್ಯದಿಂದ ಬರುವ ಸಾಂವಿಧಾನಿಕ ಅಧಿಕಾರಿಗಳಿಗೆ ಇದನ್ನು ತಿಳಿಹೇಳುವ ತಾಕತ್ತನ್ನು ನಮ್ಮ ರಾಜ್ಯದ ನಾಯಕರು ತೋರಬೇಕಾಗಿದೆ.

ಎಚ್.ಎಸ್.ಮಂಜುನಾಥ, ಬೆಂಗಳೂರು

ಪ್ಲಾಸ್ಟಿಕ್ ಹಾರ: ಮಣ್ಣಿನ ಉಸಿರಾಟಕ್ಕೆ ಭಾರ

ಕರ್ನಾಟಕ ಸಾಹಿತ್ಯ ಅಕಾಡೆಮಿಯು ಬೆಂಗಳೂರಿನಲ್ಲಿ ಇತ್ತೀಚೆಗೆ ನಾಡಿನ ಸಾಹಿತಿ, ಲೇಖಕರಿಗೆ ಪ್ರಶಸ್ತಿ ಪ್ರದಾನ ಮಾಡಿ ಸನ್ಮಾನಿಸಿತು. ಲಾಕ್‌ಡೌನ್ ಕಾರಣದಿಂದ 2018, 2019 ಮತ್ತು 2020 ಸೇರಿದಂತೆ ಮೂರು ವರ್ಷದ ಪ್ರಶಸ್ತಿಗಳನ್ನು ಒಟ್ಟಿಗೆ ವಿತರಿಸಿದ್ದರಿಂದ ಸುಮಾರು 80 ಲೇಖಕರು ಆಹ್ವಾನಿತರಾಗಿದ್ದರು. ಅದ್ಧೂರಿಯಿಂದ ನಡೆದ ಸಮಾರಂಭದಲ್ಲಿ ಆದ ಒಂದು ಲೋಪವೆಂದರೆ ಸಚಿವ, ಸಂಸದ, ಮುಖ್ಯ ಅತಿಥಿ, ಸಾಹಿತಿಗಳೂ ಸೇರಿದಂತೆ ಸುಮಾರು 80 ಮಂದಿಗೆ ಪ್ಲಾಸ್ಟಿಕ್ ಹಾರಗಳನ್ನು ಹಾಕಿ ಸನ್ಮಾನಿಸಿದ್ದು. ಪ್ಲಾಸ್ಟಿಕ್ ಹಾರವೊಂದಕ್ಕೆ ಕನಿಷ್ಠ 250 ಗ್ರಾಂನಂತೆ ನೂರಕ್ಕೆ 25 ಕೆ.ಜಿ ಮತ್ತು ನೂರು ಪ್ಲಾಸ್ಟಿಕ್ ತಟ್ಟೆಗಳಿಗೆ ಸರಾಸರಿ ಕನಿಷ್ಠ 1 ತಟ್ಟೆಗೆ 250 ಗ್ರಾಂನಂತೆ ನೂರಕ್ಕೆ 25 ಕೆ.ಜಿ. ಸೇರಿ ಒಟ್ಟು 50 ಕೆ.ಜಿ.ಯಷ್ಟು ಪ್ಲಾಸ್ಟಿಕ್ ಕಸ ಕಡೆಗೆ ಮಣ್ಣು ಸೇರುತ್ತದೆ. ಇದು, ಪ್ಲಾಸ್ಟಿಕ್‌ಮುಕ್ತ ಭೂಮಿ ಮಾಡಬೇಕೆಂಬ ಪರಿಸರಸ್ನೇಹಿ ನಡೆಗೆ ತದ್ವಿರುದ್ಧ.

ವಿಪರ್ಯಾಸವೆಂದರೆ ಇಲ್ಲಿ ಸನ್ಮಾನಿತರಾದ ಕೆಲವು ಸಾಹಿತಿ, ಲೇಖಕರು ಕಟ್ಟಾ ಪ್ಲಾಸ್ಟಿಕ್ ವಿರೋಧಿಗಳು. 'ಪ್ಲಾಸ್ಟಿಕ್ ತ್ಯಜಿಸಿ ಪರಿಸರ ಉಳಿಸಿ' ಎಂದು ಮುಂಚೂಣಿಯಲ್ಲಿ ದನಿ ಎತ್ತಿದವರು. ಇಂಥವರೂ ಪ್ಲಾಸ್ಟಿಕ್ ಹಾರಕ್ಕೆ ಕೊರಳೊಡ್ಡಿದ್ದು ನೋಡಿದರೆ, ನಮ್ಮ ನುಡಿಗೂ ನಡೆಗೂ ಸಂಬಂಧವೇ ಇಲ್ಲವೆನಿಸುತ್ತದೆ. ನಾನೂ ಒಬ್ಬ ಸನ್ಮಾನಿತನಾದರೂ ಈ ಹಾರವನ್ನು ಸ್ವೀಕರಿಸದೆ ನಯವಾಗಿ ನಿರಾಕರಿಸಿದೆ. ಎಲ್ಲರೂ ಹಾಗೇ ಮಾಡಬಹುದಿತ್ತು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಸಂಬಂಧಪಟ್ಟಂತೆ ಹತ್ತಾರು ಅಕಾಡೆಮಿಗಳಿವೆ. ಆ ಕಾರ್ಯಕ್ರಮಗಳಲ್ಲೂ ಪ್ಲಾಸ್ಟಿಕ್ ಹಾರ, ಪ್ಲಾಸ್ಟಿಕ್ ತಟ್ಟೆ ಬುಟ್ಟಿ ಬಳಕೆ ಇದ್ದದ್ದೆ. ಇನ್ನು ರಾಜ್ಯೋತ್ಸವ, ಬೇರೆ ಬೇರೆ ಸಾಂಸ್ಕೃತಿಕ ಕಾರ್ಯಕ್ರಮಗಳು ಇಡೀ ವರ್ಷ ಜರುಗುತ್ತಿರುತ್ತವೆ. ಹೇಗಿದ್ದರೂ, ಎಂದಾದರೂ ನಾವು ಒಮ್ಮೆ ಬಳಸಿದ ಪ್ಲಾಸ್ಟಿಕ್ ಒಂದು ದಿನ ಮಣ್ಣಿಗೆ ಸೇರಿ ಅದರ ಉಸಿರು ಕಟ್ಟುತ್ತದೆ. ಮುಂಬರುವ ರಾಜ್ಯೋತ್ಸವ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪ್ಲಾಸ್ಟಿಕ್ ಹಾರ, ತಟ್ಟೆ ಬುಟ್ಟಿಗಳನ್ನು ಕಟ್ಟುನಿಟ್ಟಾಗಿ ನಿಷೇಧಿಸಿ, ಪರಿಸರಸ್ನೇಹಿ ಹೂವಿನಹಾರಗಳನ್ನು ಬಳಸುವುದು ಕ್ಷೇಮ.

ಪ್ರೊ. ಶಿವರಾಮಯ್ಯ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕನಸುಗಳಿಗೆ ರೆಕ್ಕೆ ಕಟ್ಟಿದ ಸುಧಾರಣೆ

• ಕ್ಯಾಪ್ಟನ್ ಜಿ.ಆರ್. ಗೋಪಿನಾಥ್



ಸುಧಾರಕರು ಯಾವಾಗಲೂ ಜಗತ್ತನ್ನು ಉತ್ತಮವಾಗಿ ಬದಲಾಯಿಸುವುದರ ಹರಿಕಾರರು ಮತ್ತು ನಾಗರಿಕತೆಯ ಗತಿಯ ಮೇಲೆ ಪ್ರಭಾವ ಬೀರುವುದರ ಮುನ್ನೆಲೆಯಲ್ಲಿ ಇರುವವರು. ಉಪನಿಷತ್‌ನಿಂದ ಈಗಿನವರೆಗೆ ಭಾರತದ ಇತಿಹಾಸವನ್ನು ಗಮನಿಸಿದರೆ, ಜನರ ಜೀವನವನ್ನು ಅಧ್ಯಾತ್ಮಿಕ ಮತ್ತು ಸತ್ಯಯುತ ನಡವಳಿಕೆಯ ನೆಲೆಯಲ್ಲಿ ಮೇಲಕ್ಕೆ ಎತ್ತುವ ತುಡಿತವಿದ್ದ ಹಲವು ಶ್ರೇಷ್ಠರನ್ನು ಗುರುತಿಸಬಹುದು. ಆದಿ ಶಂಕರ, ಬುದ್ಧ, ರಾಜಾರಾಮ್ ಮೋಹನ್‌ರಾಯ್, ಕಬೀರ್, ಮೀರಾ, ಅಕ್ಕ ಮಹಾದೇವಿ, ಬಸವೇಶ್ವರ, ದಯಾನಂದ ಸಾಗರ್, ಸ್ವಾಮಿ ವಿವೇಕಾನಂದ, ಅರವಿಂದೋ, ಮಹಾತ್ಮ ಗಾಂಧಿ, ರವೀಂದ್ರನಾಥ ಟ್ಯಾಗೋರ್, ಸರೋಜಿನಿ ನಾಯ್ಡು– ಇವು ನಮ್ಮನ್ನು ಚಕಿತರನ್ನಾಗಿ ಮಾಡಿ, ಸ್ಫೂರ್ತಿ ತುಂಬಿದ ಕೆಲವು ಹೆಸರುಗಳು.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಆರ್ಥಿಕ ಕ್ಷೇತ್ರದ ಸುಧಾರಣೆಯಲ್ಲಿ ಮಾಜಿ ಪ್ರಧಾನಿ ಪಿ.ವಿ. ನರಸಿಂಹ ರಾವ್ ಅವರ ಎತ್ತರಕ್ಕೆ ನಿಲ್ಲಬಲ್ಲ ಇನ್ನೊಬ್ಬ ನಾಯಕ ಇಲ್ಲ; ಸಾರ್ವತ್ರಿಕವಾಗಿ ಅವರಷ್ಟು ಗೌರವಕ್ಕೆ ಭಾಜನರಾದ ವ್ಯಕ್ತಿಯೂ ಇಲ್ಲ. ರಾವ್ ಅವರ ನೇತೃತ್ವದಲ್ಲಿ, ಆಗಿನ ಹಣಕಾಸು ಸಚಿವ ಡಾ. ಮನಮೋಹನ್ ಸಿಂಗ್ ಜಾರಿಗೆ ತಂದ ಆರ್ಥಿಕ ಸುಧಾರಣೆ ಲಕ್ಷಾಂತರ ಭಾರತೀಯರನ್ನು ಬಡತನದಿಂದ ಮೇಲಕ್ಕೆ ಎತ್ತಿತು ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ಭಾರತವು ಏಷ್ಯಾದ ಹೊಸ ವ್ಯಾಘ್ರ ಎಂಬುದನ್ನು ಜಗತ್ತು ಗಮನಿಸಿತು.

ಭಾರತದ ಅರ್ಥ ವ್ಯವಸ್ಥೆಗೆ ದಶಕಗಳ ಕಾಲ ಸಂಕೋಲೆಯಾಗಿದ್ದ ಲೈಸೆನ್ಸ್‌ರಾಜ್ ಪದ್ಧತಿಯನ್ನು ರಾವ್ ಅವರ ಸ್ಪಷ್ಟ ಸೂಚನೆಗೆ ಅನುಗುಣವಾಗಿ ಮನಮೋಹನ್ ಅವರು ರದ್ದುಪಡಿಸದೇ ಇದ್ದಿದ್ದರೆ ಇನ್ಫೊಸಿಸ್, ಟಿಸಿಎಸ್, ವಿಪ್ರೊ, ಎಚ್‌ಸಿಎಲ್, ಬಯೊಕಾನ್ ಮತ್ತು ಇತರ ಕಂಪನಿಗಳು ಅವು ಈಗ ಇರುವ ಸ್ಥಿತಿಯಲ್ಲಿ ಇರುತ್ತಿರಲಿಲ್ಲ; ಕೆಲವಂತೂ ಬದುಕಿ ಉಳಿಯುವುದೇ ಸಂದೇಹಾಸ್ಪದ. ನನ್ನ ಔದ್ಯಮಿಕ ಪಯಣ ಮತ್ತು 'ಏರ್ ಡೆಕ್ಕನ್' ಸ್ಥಾಪನೆಯ ಕತೆಯನ್ನು ಕೂಡ ಸಂಕ್ಷಿಪ್ತವಾಗಿ ಇಲ್ಲಿ ಉಲ್ಲೇಖಿಸುವುದು ಪ್ರಸ್ತುತ ಎನಿಸಬಹುದು. ಎಮರ್ಸನ್ ಹೇಳಿದಂತೆ, ಭರವಸೆಯು ಸುಧಾರಣೆಗಳ ತಾಯಿ. ಭರವಸೆಯು ಅರ್ಥ ವ್ಯವಸ್ಥೆಯ ಅಗೋಚರ ಶಕ್ತಿಯೂ ಹೌದು. ಹೊಸ ಮಾರುಕಟ್ಟೆಗಳನ್ನು ಸೃಷ್ಟಿಸಬಹುದು ಎಂಬ ಕನಸು ಮತ್ತು ಭರವಸೆಯೊಂದಿಗೆ ಉದ್ಯಮಿಗಳು ಹೊಸ ಕಂಪನಿಗಳನ್ನು ಸ್ಥಾಪಿಸುತ್ತಾರೆ. ನಿಯಮ, ನಿಯಂತ್ರಣ ಮತ್ತು ನೀತಿಗಳಿಗೆ ಸಂಬಂಧಿಸಿದ ಪೂರಕ ವಾತಾವರಣ, ಚಿಂತನೆಗಳ ಬೀಜ ಬಿತ್ತಲು ಮತ್ತು ಉದ್ಯಮವನ್ನು ಕಟ್ಟಿ ಬೆಳೆಸಲು ಫಲವತ್ತಾದ ನೆಲ ಹಾಗೂ ತಮ್ಮ ಉದ್ಯಮವು ಗೆಲ್ಲಲಿದೆ ಎಂಬ ಭರವಸೆ ಇದ್ದಾಗ ಮಾತ್ರ ಉದ್ಯಮಿಗಳು ದೊಡ್ಡ ದೊಡ್ಡ ಸಾಹಸಗಳಿಗೆ ಕೈ ಹಾಕುತ್ತಾರೆ.

ಸರಳವಾದ ಕೆಲವು ಚಿಂತನೆಗಳು, ತಡೆದು ನಿಲ್ಲಿಸಲಾಗದ ಸುಧಾರಣೆಯ ಹಾದಿಯಲ್ಲಿದ್ದ ಭಾರತ, ಉದ್ಯೋಗ ಇಲ್ಲದೆ ಇದ್ದ ನೂರಾರು ಪೈಲಟ್‌ಗಳು, ಒಂದು ಹೆಲಿಕಾಪ್ಟರ್ ಕೂಡ ಇಲ್ಲದಿದ್ದ ದಕ್ಷಿಣ ಭಾರತವು ನಾನು ಮತ್ತು ಸೇನೆಯ ಸಹೋದ್ಯೋಗಿ ಕ್ಯಾಪ್ಟನ್ ಸ್ಯಾಮುವೆಲ್ ಸೇರಿ 1995ರಲ್ಲಿ ಡೆಕ್ಕನ್ ಹೆಲಿಕಾಪ್ಟರ್ ಕಂಪನಿ ಸ್ಥಾಪಿಸಲು ಸ್ಫೂರ್ತಿಯಾದವು. ಆಗ ನರಸಿಂಹ ರಾವ್ ಅವರು ಪ್ರಧಾನಿಯಾಗಿದ್ದರು. ಪ್ರತಿ ಭಾರತೀಯನೂ ವಿಮಾನದಲ್ಲಿ ಪ್ರಯಾಣಿಸಬೇಕು ಎಂಬ ಅಸಾಧ್ಯವೇ ಆಗಿದ್ದ ಹುಚ್ಚು ತುಡಿತವು ಮಿತ ದರದ ವಿಮಾನ ಯಾನ ಸಂಸ್ಥೆ ಏರ್ ಡೆಕ್ಕನ್ ಸ್ಥಾಪನೆಯ ಕನಸಿಗೆ ಕಾರಣವಾಯಿತು. ಏರ್ ಡೆಕ್ಕನ್ ಸ್ಥಾಪನೆಯು ವಿಮಾನಯಾನದ ಬಗೆಗಿನ ಮಿಥ್ಯೆಯನ್ನು ಒಡೆಯಿತು ಮತ್ತು ವಿಮಾನ ಯಾನ ಕ್ಷೇತ್ರದ ಕ್ರಾಂತಿಗೆ ಕಾರಣವಾಯಿತು. ಸರಳ ನಿಯಮಗಳು, ತ್ವರಿತ ಪರವಾನಗಿ, ಬದಲಾದ ಮನಸ್ಥಿತಿಯ ಅಧಿಕಾರಶಾಹಿ, ಬದಲಾದ ರಾಜಕೀಯ ಪರಿಸ್ಥಿತಿ, ಮಾರುಕಟ್ಟೆಗೆ ಪೂರಕವಾದ ಸ್ಥಿತಿಯು ಹೊಸ ಹೊಸ ಯೋಚನೆಗಳು ಉದ್ಯಮಗಳಾಗಲು ನೆರವಾದವು. ಎಲ್ಲಕ್ಕಿಂತ ಮುಖ್ಯವಾಗಿ, ಚಲನಶೀಲವಾದ ಅರ್ಥ ವ್ಯವಸ್ಥೆಯು ಹೂಡಿಕೆದಾರರು, ಉದ್ಯಮಿಗಳು ಮತ್ತು ಜನರಲ್ಲಿ ಭರವಸೆ ಮೂಡಿಸಿತು ಮತ್ತು ಕನಸುಗಳಿಗೆ ರೆಕ್ಕೆ ಕಟ್ಟಿತು. ಏರ್ ಡೆಕ್ಕನ್ ನವ ಭಾರತದ, ಹೊಸ ಸಾಧ್ಯತೆಗಳ ಭಾರತದ ಕಥನ. ರಾವ್ ಮತ್ತು ಮನಮೋಹನ್ ಅವರ ಸುಧಾರಣೆಗಳಿಲ್ಲದೇ ಇದ್ದರೆ ಏರ್ ಡೆಕ್ಕನ್ ಆಕಾಶಕ್ಕೆ ಏರುತ್ತಲೇ ಇರಲಿಲ್ಲ.

ರಾವ್ ಅವರ ಪಕ್ಷದ ಪರಂಪರೆ ಏನಿತ್ತು ಎಂಬುದನ್ನು ಗಣನೆಗೆ ತೆಗೆದುಕೊಂಡಾಗ ಮಾತ್ರ ಅವರ ಕೊಡುಗೆ ಎಷ್ಟು ಅಮೂಲ್ಯವಾದುದು ಎಂಬುದು ಮನವರಿಕೆ ಆಗುತ್ತದೆ. ಮೊದಲಿಗೆ, ಜವಾಹರಲಾಲ್ ನೆಹರೂ ನಾಯಕತ್ವದಲ್ಲಿ ಮತ್ತು ನಂತರ ಇಂದಿರಾ ಗಾಂಧಿ ನಾಯಕತ್ವದಲ್ಲಿ ಸಮಾಜವಾದಿ ಚಿಂತನೆ ಆಧಾರಿತ ಅರ್ಥ ವ್ಯವಸ್ಥೆ ಇತ್ತು. ಖಾಸಗಿ ಕ್ಷೇತ್ರವೂ ಇದ್ದ ಮಿಶ್ರ ಅರ್ಥ ವ್ಯವಸ್ಥೆ ಅದಾಗಿದ್ದರೂ, ಸಾರ್ವಜನಿಕ ವಲಯದ ಪ್ರಾಬಲ್ಯವೇ ಹೆಚ್ಚಾಗಿತ್ತು. ಖಾಸಗಿ ವಲಯವು ಅಧಿಕಾರಶಾಹಿಯ ನಿಯಂತ್ರಣದಲ್ಲಿತ್ತು. ಬಜಾಜ್ ಕಂಪನಿಯ ಎಷ್ಟು ಸ್ಕೂಟರ್‌ಗಳು ತಯಾರಾಗಬೇಕು ಅಥವಾ ಎಷ್ಟು ಅಂಬಾಸಡರ್ ಕಾರುಗಳು ತಯಾರಾಗಬೇಕು, ಟಾಟಾ ಕಂಪನಿಯು ಎಷ್ಟು ಉಕ್ಕು ತಯಾರಿಸಬೇಕು ಎಂಬುದನ್ನು ಅಧಿಕಾರಶಾಹಿಯೇ ನಿರ್ಧರಿಸುತ್ತಿತ್ತು. ಈ ಎಲ್ಲ ಪ್ರಮುಖ ಉದ್ಯಮಗಳ ಪರವಾನಗಿಯು ಭಾರತದ ಪ್ರಸಿದ್ಧವಾದ ಕೆಲವು ಕಂಪನಿಗಳ ಕೈಯಲ್ಲಿ ಇತ್ತು. ಪ್ರಧಾನಿಯಾಗಿದ್ದ ರಾಜೀವ್ ಗಾಂಧಿ ಆಧುನಿಕರಾಗಿದ್ದರೂ ಭಾರತವು ಸಿಲುಕಿಕೊಂಡಿದ್ದ ಕಂದರದಿಂದ ಬಿಡಿಸಿ ಮಾರುಕಟ್ಟೆ ಕೇಂದ್ರಿತ ಅರ್ಥವ್ಯವಸ್ಥೆಯತ್ತ ಒಯ್ಯುವ ರಾಜಕೀಯ ಸಾಮರ್ಥ್ಯವಾಗಲಿ, ಚಾತುರ್ಯವಾಗಲಿ ಅವರಲ್ಲಿ ಇರಲಿಲ್ಲ.

ಲೈಸೆನ್ಸ್ ರಾಜ್ ವ್ಯವಸ್ಥೆಯನ್ನು ಕೊನೆಗೊಳಿಸಿದವರು ಎಂದಷ್ಟೇ ನಾವು ರಾವ್ ಅವರನ್ನು ನೆನಪಿಸಿಕೊಂಡರೆ ಅದು ತೀರಾ ಸರಳೀಕರಣವಾಗುತ್ತದೆ. ಅವರು ಜಾರಿಗೆ ತಂದ ದಿಟ್ಟ, ಗಾಢ ಮತ್ತು ವಿಸ್ತೃತವಾದ ಸುಧಾರಣೆಗಳು ವ್ಯಾಪಕವಾದ ಆರ್ಥಿಕ ಚಟುವಟಿಕೆಗಳಿಗೆ ಪೂರಕವಾಗಿದ್ದವು. ಬಜೆಟ್ ಅಂಗೀಕರಿಸುವುದಕ್ಕೇ ಸಾಧ್ಯವಿಲ್ಲದ ರೀತಿಯಲ್ಲಿ ಚಂದ್ರಶೇಖರ್ ನೇತೃತ್ವದ ಸರ್ಕಾರದ ಪತನದ ಬಳಿಕ ದೇಶವು ಆರ್ಥಿಕ ಬಿಕ್ಕಟ್ಟಿಗೆ ಒಳಗಾಗಿ ಕುಸಿಯುವುದನ್ನು ಈ ಆರ್ಥಿಕ ಸುಧಾರಣೆಗಳು ತಡೆದವು. ವಿದೇಶಿ ಹೂಡಿಕೆ, ಬಂಡವಾಳ ಮತ್ತು ಶೇರು ಮಾರುಕಟ್ಟೆಗೆ ಸಂಬಂಧಿಸಿದ ಕ್ರಾಂತಿಕಾರಕ ಸುಧಾರಣೆಗಳು, 1992ರ ಸೆಬಿ ಕಾಯ್ದೆ, 1994ರಲ್ಲಿ ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಸ್ಥಾಪನೆ, ನಿಯಂತ್ರಣ ಮುಕ್ತವಾದ ದೇಶೀಯ ವ್ಯಾಪಾರ, ಆರ್ಥಿಕ ಕೊರತೆ ಇಳಿಕೆ, ಸಾರ್ವಜನಿಕ ವಲಯದ ಉದ್ದಿಮೆಗಳ ಖಾಸಗೀಕರಣ, ಮೂಲಸೌಕರ್ಯದಲ್ಲಿ ಹೆಚ್ಚಿನ ಹೂಡಿಕೆ, ರಫ್ತು–ಆಮದುವಿನ ವ್ಯಾಪಾರ ಸುಧಾರಣೆ ಮುಂತಾದ ಕ್ರಮಗಳು ಅರ್ಥ ವ್ಯವಸ್ಥೆಗೆ ಶಕ್ತಿ ತುಂಬಿದವು. ಭಾರತದ ಅರ್ಥ ವ್ಯವಸ್ಥೆಯನ್ನು ಪುನಶ್ಚೇತನಗೊಳಿಸುವಲ್ಲಿ ಈ ಎಲ್ಲ ಸುಧಾರಣೆಗಳ ಒಟ್ಟು ಪ್ರಭಾವವು ಅಪಾರವೇ ಆಗಿದೆ. ಇದು ಭಾರತದ ಅರ್ಥ ವ್ಯವಸ್ಥೆಯನ್ನು ಹಿಂದಕ್ಕೆ ಜಾರದ, ತಡೆಯೊಡ್ಡಲಾಗದ ಹಾದಿಗೆ ಒಯ್ದು, ಜಾಗತಿಕ ಮಟ್ಟದ ಅರ್ಥ ವ್ಯವಸ್ಥೆಗಳ ಸಾಲಿಗೆ ತಂದು ನಿಲ್ಲಿಸಿತು.

ಆರ್ಥಿಕ ಸುಧಾರಣೆಗಳು ಮತ್ತು ಇತರ ಕ್ಷೇತ್ರಗಳ ಸಾಧನೆ ಜತೆಗೆ ಜತೆಗೆ ಸಾಗಿದವು ಮತ್ತು ಇವು ಜಾಗತಿಕವಾಗಿ ಭಾರತದ ವರ್ಚಸ್ಸು ಹೆಚ್ಚಿಸಿದವು ಎಂಬುದು ನಾವು ಮರೆತಿರುವ ಇನ್ನೊಂದು ವಿಚಾರ. ಇಸ್ರೇಲ್ ಜತೆಗೆ ರಾವ್ ಅವರು ರಾಜತಾಂತ್ರಿಕ ಸಂಬಂಧ ಸ್ಥಾಪಿಸಿದರು. ತೈವಾನ್ ಜತೆಗೆ ರಾಜತಾಂತ್ರಿಕ ಸಂಬಂಧ ಭಾಗಶಃ ಆರಂಭಗೊಂಡಿತು. 'ಪೂರ್ವಕ್ಕೆ ಒತ್ತು' ಎಂಬ ಭಾರತದ ನೀತಿಯು ಆಸಿಯಾನ್ ಜತೆಗಿನ ಭಾರತದ ನಂಟನ್ನು ನಿಕಟಗೊಳಿಸಿತು ಮತ್ತು ಚೀನಾದ ಪ್ರಾಬಲ್ಯ ತಡೆಗೆ ಇದು ನೆರವಾಯಿತು. ಅಣ್ವಸ್ತ್ರ ಕಾರ್ಯಕ್ರಮಕ್ಕೂ ಇದು ನೆರವು ನೀಡಿ, ಅಟಲ್ ಬಿಹಾರಿ ವಾಜಪೇಯಿ ಪ್ರಧಾನಿಯಾಗಿದ್ದಾಗ 1998ರಲ್ಲಿ ಪೋಖರಣ್ ಅಣು ಪರೀಕ್ಷೆಗೆ ಇದು ಪೂರಕವಾಯಿತು ಎಂಬುದನ್ನು ಮಾಜಿ ರಾಷ್ಟ್ರಪತಿ ಅಬ್ದುಲ್ ಕಲಾಂ ಅವರು ಒಪ್ಪಿಕೊಂಡಿದ್ದರು. 'ಬಾಂಬ್ ಸಿದ್ಧವಾಗಿದೆ ಎಂದು ರಾವ್ ನನಗೆ ಹೇಳಿದ್ದರು. ಅದನ್ನು ನಾನು ಸ್ಫೋಟಿಸಿದೆ ಅಷ್ಟೇ' ಎಂದು ವಾಜಪೇಯಿ ಅವರು ತಮ್ಮ ವಿಶಿಷ್ಟ ಶೈಲಿಯಲ್ಲಿ ಹೇಳಿದ್ದರು. ಭಯೋತ್ಪಾದನೆ ವಿರುದ್ಧ ಹೋರಾಡುವುದಕ್ಕಾಗಿ ಅವರು ರಕ್ಷಣಾ ವೆಚ್ಚ ಹೆಚ್ಚಿಸಿದ್ದರು ಮತ್ತು ಪಂಜಾಬ್‌ನ ಬಂಡಾಯವನ್ನು ದಮನ ಮಾಡಿದ್ದರು.

ದೇಶವು ರಾವ್ ಅವರಿಗೆ ಸದಾ ಋಣಿಯಾಗಿರಬೇಕು. ಮುಕ್ತ ಮಾರುಕಟ್ಟೆಯು ಇನ್ನೊಂದು ತುದಿಗೆ ತಲುಪಿ, ಹಳೆಯ ಊಳಿಗಮಾನ್ಯ ಉದ್ಯಮಕ್ಕೆ ಬದಲಾಗಿ ಹೊಸ ಉದ್ಯಮಪತಿಗಳನ್ನು ಸೃಷ್ಟಿಸಿ, ಅವರು ಸರ್ಕಾರವನ್ನು ನಿಯಂತ್ರಿಸಿದರೆ ನಮ್ಮಂತಹ ಪರಿಪೂರ್ಣವಲ್ಲದ ಪ್ರಜಾಸತ್ತೆಗಳಲ್ಲಿ ಅಸಮತೋಲನ ಉಂಟಾಗಬಹುದು. ರಾವ್ ಉತ್ತರಾಧಿಕಾರಿಗಳು ಅವರನ್ನೇ ಅನುಸರಿಸಬೇಕು ಮತ್ತು ಸುಸ್ಥಿರ ಮತ್ತು ಸುಸಂಬದ್ಧ ನೀತಿಗಳ ಮೂಲಕ ಸುಧಾರಣೆಯನ್ನು ಮುಂದುವರಿಸುತ್ತಲೇ ಇರಬೇಕು. ಇದು ಮಾಲೀಕತ್ವ ನೆಲೆಯನ್ನು ಇನ್ನಷ್ಟು ವಿಸ್ತರಿಸಲು ನೆರವಾಗುತ್ತದೆ, ಲಕ್ಷಾಂತರ ಉದ್ಯಮಿಗಳು ಮತ್ತು ಉದ್ಯಮಗಳಿಗೆ ಪ್ರೋತ್ಸಾಹ ನೀಡುತ್ತದೆ ಹಾಗೂ ಈ ಮೂಲಕ ಸ್ಪರ್ಧೆ ಹೆಚ್ಚಿಸಿ ಏಕಸ್ವಾಮ್ಯ ಹಾಗೂ ಕೆಲವೇ ಗುಂಪುಗಳ ಪ್ರಾಬಲ್ಯವನ್ನು ತಪ್ಪಿಸುತ್ತದೆ.

ವ್ಯಾಪಾರ ಮತ್ತು ವಾಣಿಜ್ಯವು ಸಮಾಜದಲ್ಲಿ ಸಮಾನತೆ ತರುವ ಚಟುವಟಿಕೆಗಳು. ಏಕೆಂದರೆ, ಉದಾರ, ಸ್ಪರ್ಧಾತ್ಮಕ ಅರ್ಥ ವ್ಯವಸ್ಥೆಯಲ್ಲಿ ಸಂಪತ್ತು ಎಲ್ಲೋ ಒಂದು ಕಡೆ ಕೇಂದ್ರೀಕರಣವಾಗುವುದಿಲ್ಲ. ಹೊಸ ಉದ್ಯಮಿಗಳು ಯಥಾಸ್ಥಿತಿಯನ್ನು ಅಲುಗಾಡಿಸುತ್ತಾರೆ ಮತ್ತು ಹಳೆಯ ಉದ್ಯಮಗಳು ಶಿಥಿಲವಾಗುತ್ತವೆ. ನೀರಿನಂತೆ ಸಮಾಜದಲ್ಲಿ ಎಲ್ಲೆಡೆಗೆ ಹರಿಯುವ ಪ್ರವೃತ್ತಿಯನ್ನು ಹೊಂದಿರುವ ಇದು, ಜನರನ್ನು ಒಗ್ಗೂಡಿಸುತ್ತದೆ. ಸಮಾಜದಲ್ಲಿ ಸೇವೆ ಹಾಗೂ ಸರಕುಗಳ ಉತ್ಪಾದಕರು ಮತ್ತು ಗ್ರಾಹಕರು ಎಂಬ ಎರಡು ಜಾತಿಗಳು ಮಾತ್ರ ಉಳಿಯುತ್ತವೆ.

ಎಲ್ಲಕ್ಕಿಂತ ಮುಖ್ಯವಾಗಿ, ವ್ಯಾಪಾರವು ಶಾಂತಿಯ ಅಡಿಪಾಯ. ಸಂಘರ್ಷ ತಪ್ಪಿಸುವ ಹೊಣೆಯು ಪ್ರತಿಯೊಬ್ಬರಲ್ಲಿಯೂ ಇರುತ್ತದೆ.

ಸುಧಾರಣೆಗಳ 30ನೇ ವರ್ಷಕ್ಕೆ ಶುಭಹಾರೈಕೆಗಳು ಮತ್ತು ರಾವ್ ಅವರ ಕೊಡುಗೆಯು ದೀರ್ಘಾಯುವಾಗಲಿ.

ಲೇಖಕ: ಉದ್ಯಮಿ ಮತ್ತು ಅಂಕಣಕಾರ

> ಸರಳ ನಿಯಮಗಳು, ತ್ವರಿತ ಪರವಾನಗಿ, ಬದಲಾದ ಮನಸ್ಥಿತಿಯ ಅಧಿಕಾರಶಾಹಿ, ಬದಲಾದ ರಾಜಕೀಯ ಪರಿಸ್ಥಿತಿ, ಮಾರುಕಟ್ಟೆಗೆ ಪೂರಕವಾದ ಸ್ಥಿತಿಯು ಹೊಸ ಹೊಸ ಯೋಚನೆಗಳು ಉದ್ಯಮಗಳಾಗಲು ನೆರವಾದವು. ಎಲ್ಲಕ್ಕಿಂತ ಮುಖ್ಯವಾಗಿ, ಚಲನಶೀಲವಾದ ಅರ್ಥ ವ್ಯವಸ್ಥೆಯು ಹೂಡಿಕೆದಾರರು, ಉದ್ಯಮಿಗಳು ಮತ್ತು ಜನರಲ್ಲಿ ಭರವಸೆ ಮೂಡಿಸಿತು ಮತ್ತು ಕನಸುಗಳಿಗೆ ರೆಕ್ಕೆ ಕಟ್ಟಿತು

ಉದಾರೀಕರಣಕ್ಕೆ 30 ವರ್ಷ

ದೆಹಲಿಯ ಸಿಂಘು ಗಡಿಯಲ್ಲಿ ಪ್ರತಿಭಟನೆ ನಡೆಸುತ್ತಿರುವ ರೈತರು ದೆಹಲಿ–ಹರಿಯಾಣ ಹೆದ್ದಾರಿಯಲ್ಲಿ ಟೆಂಟ್ ಹಾಕಿಕೊಂಡಿರುವ ದೃಶ್ಯ. ಇದು ಮಾರ್ಚ್ 4ರಂದು ತೆಗೆದ ಚಿತ್ರ –ಎಎಫ್‌ಪಿ ಚಿತ್ರ

ರೈತರ ಪ್ರತಿಭಟನೆ ದುಷ್ಪರಿಣಾಮ ವರದಿ ಕೇಳಿದ ಎನ್‌ಎಚ್‌ಆರ್‌ಸಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸರ್ಕಾರದ ಮೂರು ಕೃಷಿ ಕಾಯ್ದೆಗಳ ವಿರುದ್ಧ ರೈತರು 2020ರ ನವೆಂಬರ್‌ನಿಂದ ನಡೆಸುತ್ತಿರುವ ಪ್ರತಿಭಟನೆಯಿಂದಾಗುತ್ತಿರುವ ದುಷ್ಪರಿಣಾಮಗಳ ಬಗ್ಗೆ ವರದಿ ನೀಡಿ ಎಂದು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು (ಎನ್‌ಎಚ್‌ಆರ್‌ಸಿ) ದೆಹಲಿ, ಹರಿಯಾಣ, ಉತ್ತರ ಪ್ರದೇಶ, ಪಂಜಾಬ್, ರಾಜಸ್ಥಾನ ಮತ್ತು ಕೇಂದ್ರ ಸರ್ಕಾರಗಳಿಗೆ ನೋಟಿಸ್ ನೀಡಿದೆ.

ರೈತರ ಪ್ರತಿಭಟನೆಯಿಂದ ತೊಂದರೆಯಾಗುತ್ತಿದೆ ಎಂದು ಈವರೆಗೆ ಸಾವಿರಾರು ದೂರುಗಳು ಬಂದಿವೆ. ಹೀಗಾಗಿ ಈ ಬಗ್ಗೆ ವರದಿ ನೀಡುವಂತೆ ರಾಜ್ಯ ಸರ್ಕಾರಗಳಿಗೆ ಮತ್ತು ಕೇಂದ್ರ ಸರ್ಕಾರಕ್ಕೆ ನೋಟಿಸ್ ನೀಡಿದ್ದೇವೆ ಎಂದು ಎನ್‌ಎಚ್‌ಆರ್‌ಸಿ ಹೇಳಿದೆ.

ರೈತರ ಪ್ರತಿಭಟನೆಯಿಂದ ಪ್ರಯಾಣಿಕರಿಗೆ, ವಾಣಿಜ್ಯ ಚಟುವಟಿಕೆಗಳಿಗೆ, ಕೈಗಾರಿಕೆಗಳಿಗೆ ಆಗುತ್ತಿರುವ ತೊಂದರೆ ಬಗ್ಗೆ ಸಮೀಕ್ಷೆ ನಡೆಸಿ ವರದಿ ಸಲ್ಲಿಸುವಂತೆ ಇನ್‌ಸ್ಟಿಟ್ಯೂಟ್ ಆಫ್ ಎಕನಾಮಿಕ್ ಗ್ರೋತ್ (ಐಇಜಿ), ರಾಷ್ಟ್ರೀಯ ವಿಕೋಪ ನಿರ್ವಹಣಾ ಪ್ರಾಧಿಕಾರ (ಎನ್‌ಡಿಎಂಎ) ಮತ್ತು ದೆಹಲಿ ಸ್ಕೂಲ್ ಆಫ್ ಸೋಷಿಯಲ್ ವರ್ಕ್‌ಗೆ ಎನ್‌ಎಚ್‌ಆರ್‌ಸಿ ಸೂಚನೆ ನೀಡಿದೆ.

> **ಪ್ರತಿಭಟನೆಯೂ ಒಂದು ಹಕ್ಕು. ಆದರೆ ಅದರಿಂದ ಬೇರೆ ಮಾನವ ಹಕ್ಕುಗಳಿಗೆ ಆಗುವ ಧಕ್ಕೆಯನ್ನು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ**
> **ಎನ್‌ಎಚ್‌ಆರ್‌ಸಿ**

'ರೈತರ ಪ್ರತಿಭಟನೆಯಿಂದ ತೀರಾ ದುಷ್ಪರಿಣಾಮಗಳು ಉಂಟಾಗುತ್ತಿವೆ ಎಂದು ಹಲವರು ದೂರು ನೀಡಿದ್ದಾರೆ. ಕೈಗಾರಿಕೆಗಳಿಗೆ ಭಾರಿ ತೊಂದರೆಯಾಗುತ್ತಿದೆ. ರೈತರು ರಸ್ತೆಗಳಲ್ಲಿ ಪ್ರತಿಭಟನೆ ನಡೆಸುತ್ತಿರುವ ಕಾರಣ 9,000ಕ್ಕೂ ಹೆಚ್ಚು ಸೂಕ್ಷ್ಮ, ಸಣ್ಣ, ಮಧ್ಯಮ ಮತ್ತು ಬೃಹತ್ ಕೈಗಾರಿಕೆಗಳ ಕಾರ್ಯಾಚರಣೆಗೆ ಹಲವು ರೀತಿಯ ಅಡಚಣೆಯಾಗುತ್ತಿದೆ. ರೋಗಿಗಳು, ಅಂಗವಿಕಲರು ಮತ್ತು ಹಿರಿಯ ನಾಗರಿಕರ ಓಡಾಟಕ್ಕೆ ತೀವ್ರ ಅಡ್ಡಿ ಆಗುತ್ತಿದೆ. ಪ್ರತಿಭಟನೆಯ ಕಾರಣದಿಂದ ಪೊಲೀಸರು ಎಲ್ಲೆಡೆ ಬ್ಯಾರಿಕೇಡ್‌ಗಳನ್ನು ಹಾಕಿದ್ದಾರೆ. ಹೀಗಾಗಿ ಜನಸಾಮಾನ್ಯರು ಪ್ರತಿನಿತ್ಯ ಸುತ್ತುಬಳಸಿ ಓಡಾಡಬೇಕಿದೆ ಎಂಬ ದೂರುಗಳು ಬಂದಿವೆ' ಎಂದು ಎನ್‌ಎಚ್‌ಆರ್‌ಸಿ ವಿವರಿಸಿದೆ.

ಈ ದುಷ್ಪರಿಣಾಮಗಳನ್ನು ತಡೆಗಟ್ಟಲು ತೆಗೆದುಕೊಂಡ ಕ್ರಮಗಳ ಬಗ್ಗೆ ವರದಿ ನೀಡಿ ಎಂದು ಪಂಜಾಬ್, ಉತ್ತರ ಪ್ರದೇಶ, ರಾಜಸ್ಥಾನ, ದೆಹಲಿ ಮತ್ತು ಹರಿಯಾಣ ಸರ್ಕಾರಗಳ ಮುಖ್ಯ ಕಾರ್ಯದರ್ಶಿಗಳು ಮತ್ತು ಪೊಲೀಸ್ ಮಹಾ ನಿರ್ದೇಶಕರಿಗೆ ಎನ್‌ಎಚ್‌ಆರ್‌ಸಿ ನೋಟಿಸ್ ನೀಡಿದೆ.

ಪ್ರತಿಭಟನೆ ವೇಳೆ ರೈತರು ಕೋವಿಡ್ ನಿಯಂತ್ರಣ ಮಾರ್ಗಸೂಚಿಗಳನ್ನು ಉಲ್ಲಂಘಿಸುತ್ತಿದ್ದಾರೆ ಎಂಬ ದೂರುಗಳಿವೆ. ಇದರ ಬಗ್ಗೆ ವರದಿ ನೀಡಿ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಮತ್ತು ರಾಷ್ಟ್ರೀಯ ವಿಕೋಪ ನಿರ್ವಹಣಾ ಪ್ರಾಧಿಕಾರಕ್ಕೆ ಸೂಚನೆ ನೀಡಲಾಗಿದೆ.

ರೈತರ ಪ್ರತಿಭಟನೆಯಿಂದ ಕೈಗಾರಿಕೆಗಳು, ವಾಣಿಜ್ಯ ಚಟುವಟಿಕೆಗಳು ಮತ್ತು ಸಾರಿಗೆ ಕ್ಷೇತ್ರಕ್ಕೆ ಆಗುತ್ತಿರುವ ಅಡಚಣೆ ಮತ್ತು ಹೆಚ್ಚುವರಿ ವೆಚ್ಚದ ಬಗ್ಗೆ ಅಧ್ಯಯನ ನಡೆಸಿ, ವರದಿ ಸಲ್ಲಿಸಿ ಎಂದು ಐಇಜಿಗೆ ಎನ್‌ಎಚ್‌ಆರ್‌ಸಿ ಸೂಚನೆ ನೀಡಿದೆ. ಅಕ್ಟೋಬರ್ 10ರ ಒಳಗೆ ಈ ವರದಿ ಸಲ್ಲಿಸುವಂತೆ ಸೂಚನೆ ನೀಡಿದೆ.

ಹರಿಯಾಣದ ಜಝ್ಝರ್‌ನಲ್ಲಿ ರೈತರ ಪ್ರತಿಭಟನೆ ವೇಳೆ ನಡೆದಿದೆ ಎನ್ನಲಾದ ಸಾಮೂಹಿಕ ಅತ್ಯಾಚಾರದ ಸಂತ್ರಸ್ತೆಗೆ ಪರಿಹಾರ ನೀಡುವ ಬಗ್ಗೆ ವರದಿ ನೀಡುವಂತೆ ಜಝ್ಝರ್ ಜಿಲ್ಲಾಡಳಿತಕ್ಕೆ ಎನ್‌ಎಚ್‌ಆರ್‌ಸಿ ಸೂಚನೆ ನೀಡಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಮಾಜಿ ರಾಷ್ಟ್ರಪತಿ ಎಪಿಜೆ ಅಬ್ದುಲ್ ಕಲಾಂ ಅವರು ಮದರಸಾಗಳು ಹಾಗೂ ಭಯೋತ್ಪಾದಕರ ಕುರಿತು ನೀಡಿದ್ದರು ಎನ್ನಲಾದ ಹೇಳಿಕೆಯೊಂದರ ಪತ್ರಿಕಾ ತುಣುಕು ಸಾಮಾಜಿಕ ಜಾಲತಾಣದಲ್ಲಿ ಚರ್ಚೆ ಹುಟ್ಟುಹಾಕಿದೆ. 'ಮದರಸಾಗಳು ಉಗ್ರರ ತರಬೇತಿ ಕೇಂದ್ರಗಳು. ಹೀಗಾಗಿ ಅವುಗಳನ್ನು ನಿಷೇಧಿಸಬೇಕು' ಎಂದು ಕಲಾಂ ಹೇಳಿದ್ದರು ಎಂದು ಈ ತುಣುಕಿನಲ್ಲಿ ಉಲ್ಲೇಖವಾಗಿದೆ. ನೂರಾರು ಜನರು ಇದನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ.

ವೈರಲ್ ಆಗಿರುವ ಪತ್ರಿಕಾ ಸುದ್ದಿಯ ಕೀವರ್ಡ್‌ಗಳನ್ನು ಗೂಗಲ್‌ನಲ್ಲಿ ಶೋಧನೆ ನಡೆಸಿದಾಗ, ಈ ಸುದ್ದಿಗೆ ಸಂಬಂಧಿಸಿದ ಯಾವುದೇ ಮಾಹಿತಿ ಲಭ್ಯವಾಗಿಲ್ಲ ಎಂದು ಲಾಜಿಕಲ್ ಇಂಡಿಯನ್ ವೆಬ್‌ಸೈಟ್ ತಿಳಿಸಿದೆ. ಒಂದು ವೇಳೆ ಕಲಾಂ ಅವರು ಮದರಸಾಗಳ ಕುರಿತು ಹೇಳಿಕೆ ನೀಡಿದ್ದಿದ್ದರೆ ಅದು ಬಹುದೊಡ್ಡ ಸುದ್ದಿಯಾಗುತ್ತಿತ್ತು. ಈ ಮಾಹಿತಿ ಇರುವ 2014ರಲ್ಲಿ ಬರೆಯಲಾಗಿರುವ ಒಂದು ಬ್ಲಾಗ್‌ಪೋಸ್ಟ್ ಸಿಕ್ಕಿದೆ. ಅದರಲ್ಲಿ ಕಂಪ್ಯೂಟರ್ ಮತ್ತು ಖುರಾನ್ ಎಂಬ ತಲೆಬರಹದಲ್ಲಿ ಮದರಸಾಗಳ ಕುರಿತ ಉಲ್ಲೇಖವಿದೆ. ಇದನ್ನು ಕಲಾಂ ಅವರು ಹೇಳಿದ್ದರು ಎಂದು ತಿರುಚಲಾಗಿದೆ. ಕಲಾಂ ಅವರ ಸಂಬಂಧಿ ಶೇಕ್ ಸಲೀಮ್ ಅವರು ವೈರಲ್ ಸುದ್ದಿಯನ್ನು ಅಲ್ಲಗಳೆದಿದ್ದಾರೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ತಂದೆಯ ದರ್ಶನ

ಜಾಲಿಕುಮಾರ ಮುಚಲಿಂದ ಸರೋವರದ ದಂಡೆಯ ಮೇಲೆ ಡೇರೆ ಹಾಕಿಸಿದ. ಹದಿನಾಲ್ಕು ಸಾವಿರ ರಥಗಳನ್ನು ಬಂದ ದಾರಿಯ ಮೇಲೆ ನಿಲ್ಲಿಸಿ, ಆಶ್ರಮದ ಕಡೆಗೆ ಸಿಂಹ, ಹುಲಿ, ಗೆಂಡೆ ಮೃಗಗಳು ಬರುವ ದಾರಿಯಲ್ಲಿ ಕಾವಲು ಕೂಡಿಸಿದ. ಇಷ್ಟೊಂದು ದೊಡ್ಡ ಸೈನ್ಯ ಬಂದ ಮೇಲೆ ಸದ್ದಾಗದೆ ಇರುತ್ತದೆಯೇ? ಕೋಲಾಹಲವಾದಂತಾಯಿತು. ಇದನ್ನು ಕೇಳಿದ ವೆಸ್ಸಂತರ ಬೋಧಿಸತ್ವ ಚಿಂತೆಗೆ ಒಳಗಾದ. ಯಾರೋ ಶತ್ರುವೊಬ್ಬ ತನ್ನ ತಂದೆಯನ್ನು ಕೊಂದು, ಈಗ ತನ್ನನ್ನು ಕೊಲ್ಲಲು ಬಂದಿರಬಹುದೇ ಎಂಬ ಯೋಚನೆ ಬಂದಿತು.

ಆತ ಮಾದ್ರಿದೇವಿಯನ್ನು ಕರೆದುಕೊಂಡು ಪರ್ವತವನ್ನೇರಿದ. ಅಲ್ಲಿಂದ ಸೇನೆ ಕಾಣುತ್ತಿತ್ತು. ಆತ ಹೇಳಿದ, 'ಮಾದ್ರಿ, ನೋಡು ಎಂಥ ಅನಾಹುತದ ದೃಶ್ಯ. ಅದೆಂಥ ಶಬ್ದ! ಶ್ರೇಷ್ಠ ಕುದುರೆಗಳು ಕೆನೆಯುತ್ತಿವೆ, ಧ್ವಜಗಳು ಹಾರಾಡುತ್ತಿವೆ. ಈ ಸೈನಿಕರು, ಕಾಡಿನಲ್ಲಿ ಬೇಟೆಗಾರರು ಪ್ರಾಣಿಗಳನ್ನು ಬೇಟೆಯಾಡಿ ಅವುಗಳನ್ನು ತಮ್ಮ ಈಟಿಗೆ ಸಿಕ್ಕಿಸಿಕೊಂಡು ಮುಂದೆ ಪ್ರಪಾತದಲ್ಲಿ ಬೀಳಿಸುವಂತೆ, ನಮ್ಮನ್ನು ತಮ್ಮ ತೀಕ್ಷ್ಣ ಆಯುಧಗಳಿಂದ ಚುಚ್ಚಿ ಚುಚ್ಚಿ ಕೊಲ್ಲುವರು. ನಿರ್ದೋಷಿಗಳಾದ ನಮ್ಮನ್ನು ಹಿಂದೊಮ್ಮೆ ದೇಶದಿಂದ ಹೊರಗೆ ಹಾಕಿ ಕಾಡಿಗೆ ಕಳುಹಿಸಿದಂತೆ, ಮತ್ತೆ ನಾವು ಯಾವುದೇ ತಪ್ಪು ಮಾಡದಿದ್ದರೂ ಶತ್ರುಗಳ ಕೈಯಲ್ಲಿ ಸಿಕ್ಕಿಬಿದ್ದಿದ್ದೇವೆ'. ಮಾದ್ರಿದೇವಿ ಕೂಡ ಸೈನ್ಯವನ್ನು ನೋಡುತ್ತಿದ್ದಳು. ಆಕೆ, 'ದೇವಾ, ನನಗೇನೋ ಆ ಸೇನೆ ನಮ್ಮ ದೇಶದ್ದೇ ಎನ್ನಿಸುತ್ತಿದೆ. ಅವರು ವೈರಿಗಳಾಗಿದ್ದರೆ ತಕ್ಷಣ ನಮ್ಮ ಮೇಲೆ ಆಕ್ರಮಣ ಮಾಡುತ್ತಿದ್ದರು. ಬೆಂಕಿ ನೀರಿಗೆ ಹಾನಿಯನ್ನುಂಟು ಮಾಡಲಾರದು. ಅಂತೆಯೇ ಈ ಸೈನ್ಯ ನಮ್ಮನ್ನು ಏನೂ ಮಾಡಲಾರದು. ಹೀಗೆ ಧನಾತ್ಮಕವಾಗಿ ಯೋಚಿಸು. ಇದರಿಂದ ಕಲ್ಯಾಣವಾಗುತ್ತದೆ' ಎಂದಳು.

ಬೋಧಿಸತ್ವ ಕೊಂಚ ಸಮಯದ ನಂತರ ತನ್ನ ಭಾವನೆಗಳ ಮೇಲೆ ಹತೋಟಿಯನ್ನು ಹೊಂದಿದಾಗ ಮಾದ್ರಿಯೊಂದಿಗೆ ಪರ್ವತದಿಂದ ಕೆಳಗಿಳಿದು ಬಂದು ಪರ್ಣಕುಟಿಯ ಬಾಗಿಲಲ್ಲಿ ಕುಳಿತ.

ಇತ್ತ ಸಂಜಯ ಮಹಾರಾಜ ತನ್ನ ರಾಣಿ ಪುಸತಿದೇವಿಗೆ ಹೇಳಿದ, 'ಭದ್ರೆ, ನಾವೆಲ್ಲರೂ ಒಟ್ಟಿಗೇ ಹೋಗುವುದು ಬೇಡ. ಮೊದಲು ನಾನು ಹೋಗುತ್ತೇನೆ, ಮಗ ವೆಸ್ಸಂತರನ ದುಃಖವನ್ನು ಶಮನ ಮಾಡಲು ನೋಡುತ್ತೇನೆ. ಸ್ವಲ್ಪ ಹೊತ್ತಿನ ಮೇಲೆ ನೀನು ಎಲ್ಲರನ್ನು ಜೊತೆಗೆ ಕರೆದುಕೊಂಡು ಬಾ. ನಂತರ ಕೆಲ ಸಮಯದ ನಂತರ ಮಕ್ಕಳು ಜಾಲಿಕುಮಾರ ಮತ್ತು ಕೃಷ್ಣಾಜಿನರು ಬರಲಿ' ಹೀಗೆ ಹೇಳಿ ಆಶ್ರಮದ ಕಡೆಗೆ ಆನೆಯ ಮೇಲೆ ನಡೆದ. ಆಶ್ರಮದ ಬಾಗಿಲಲ್ಲಿ ಆನೆಯನ್ನು ನಿಲ್ಲಿಸಿ ಅದರ ಮೇಲಿಂದಿಳಿದು ಮಗನಿದ್ದ ಸ್ಥಳಕ್ಕೆ ಬಂದ. ಶಲ್ಯವನ್ನು ಒಂದು ಹೆಗಲ ಮೇಲೆ ಹಾಕಿಕೊಂಡು, ಅಮಾತ್ಯರನ್ನು ಜೊತೆ ಮಾಡಿಕೊಂಡು, ಸೇವಕರಿಂದ ಮಗನ ಮೇಲೆ ಹಣದ ಮಳೆ ಸುರಿಸಿದ. ಆದರೆ ಮಗ ವೆಸ್ಸಂತರ ಬೋಧಿಸತ್ವ ಏಕಾಗ್ರಚಿತ್ತದಿಂದ, ನಿರ್ಭಯಿಯಾಗಿ, ಧ್ಯಾನದಲ್ಲಿ ಸುಂದರ ವಿಗ್ರಹದಂತೆ ಕುಳಿತಿದ್ದ. ಹಣ ಮಳೆಯಾದೊಡನೆ ನಿಧಾನವಾಗಿ ಕಣ್ಣು ತೆರೆದು ತಂದೆಯನ್ನು ಕಂಡ. ಮಾದ್ರಿಯೆಡೆಗೆ ನೋಡಿದ. ಇಬ್ಬರೂ ಮುಂದೆ ಬಂದು, 'ದೇವ, ತಮ್ಮ ಚರಣಗಳಿಗೆ ಬಹಳ ಗೌರವದಿಂದ ವಂದಿಸುತ್ತೇವೆ' ಎಂದು ಇಬ್ಬರೂ ಸಂಜಯ ಮಹಾರಾಜನ ಚರಣಕ್ಕೆ ಸಾಷ್ಟಾಂಗ ನಮಸ್ಕಾರ ಮಾಡಿದರು.

ಗುಂಡಣ್ಣ



ದಿನ ಭವಿಷ್ಯ

ಬುಧವಾರ ಸೆಪ್ಟೆಂಬರ್ 15, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಭಾದ್ರಪದ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಉತ್ತರ ಫಲ್ಗುಣಿ ನವಮಿ ಗಂ. 15-24 (ಹ. 12-24) ಬುಧವಾರ ನಿತ್ಯ ನಕ್ಷತ್ರ ಮೂಲ ಗಂ. 4-36 (ಬೆ. 8-05) ಆಯುಃ ನಾಮ ಯೋಗ ಗಂ. 0-29 ಉಪರಿ ಸೌಭಾಗ್ಯ ನಾಮ ಯೋಗ ಗ. 52-51 ಕೌಲವ ಕರಣ ಗಂ. 15-24 ವಿಷ ಗಂ. 0-50 ಪುರ್ಷ್ಠಿಷ ಗಂ. 27-13 ಅಮೃತ ಗಂ 49-50: ರಾಹುಕಾಲ: ಮ. ಗಂ. 12-00 ರಿಂದ 1-30 ಗುಳಿಕ ಕಾಲ ಬೆ. ಗಂ 10-30 ರಿಂದ 12-00 ಯಮಗಂಡ ಕಾಲ ಬೆ. ಗಂ 7-30 ರಿಂದ 9-00: ಸೂರ್ಯೋದಯ: 6-12 ಸೂರ್ಯಾಸ್ತ: 6-17 ಅದೃಷ್ಟ ಸಂಖ್ಯೆ 3, 6

ಮೇಷ: ಬೇಜವಾಬ್ದಾರಿ ವರ್ತನೆಯಿಂದಾಗಿ ಇಕ್ಕಟ್ಟಿಗೆ ಸಿಲುಕುವ ಸಾಧ್ಯತೆ. ಹಣಕಾಸಿನ ವಿಚಾರದಲ್ಲಿ ಹೆಚ್ಚಿನ ಲಾಭದ ನಿರೀಕ್ಷೆ. ಆರೋಗ್ಯದಲ್ಲಿ ಸುಧಾರಣೆ. ಸಹೋದ್ಯೋಗಿಗಳಿಂದ ನಿಂದನೆಗೊಳಗಾಗುವ ಸಾಧ್ಯತೆ.

ವೃಷಭ: ಕಚೇರಿ ಕೆಲಸಗಳಲ್ಲಿ ಜಾಗರೂಕರಾಗಿ ವ್ಯವಹರಿಸಿ. ಸಹೋದ್ಯೋಗಿಗಳಿಂದ ಸಕಾಲಿಕ ಸಲಹೆಗಳು ದೊರೆಯುವವು. ಬೇರೆಯವರ ಒತ್ತಡಕ್ಕೆ ದುಂದು ವೆಚ್ಚ ಮಾಡುವ ಸಾಧ್ಯತೆ. ಆರೋಗ್ಯದಲ್ಲಿ ಏರುಪೇರು.

ಮಿಥುನ: ಅಡ್ಡಿ ಆತಂಕಗಳಿಲ್ಲದೆ ಕೆಲಸ–ಕಾರ್ಯಗಳು ನೆರವೇರುವವು. ಮಧ್ಯವರ್ತಿಗಳ ಸಹಾಯದಿಂದ ವಿವಾಹಾದಿ ಕಾರ್ಯಗಳು ಸುಸೂತ್ರವಾಗಿ ನೆರವೇರುವವು. ಬಂಧುಗಳ ಆಗಮನ ಸಾಧ್ಯತೆ.

ಕರ್ಕಾಟಕ: ವ್ಯವಹಾರದಲ್ಲಿ ಮಿತವ್ಯಯ ಸಾಧಿಸಲಿದ್ದೀರಿ. ವದಂತಿಗಳ ಬಗ್ಗೆ ತಲೆಕೆಡಿಸಿಕೊಳ್ಳುವ ಅಗತ್ಯವಿಲ್ಲ. ಜವಾಬ್ದಾರಿಗಳನ್ನು ನಿಭಾಯಿಸುವಲ್ಲಿ ನೈಪುಣ್ಯತೆ. ಕಾರ್ಯನಿಮಿತ್ತ ದೂರ ಪ್ರಯಾಣ ಸಾಧ್ಯತೆ.

ಸಿಂಹ: ಸೌಜನ್ಯದಿಂದ ಘನತೆ ಗೌರವಗಳನ್ನು ಪಡೆಯುವಿರಿ. ಸಾಮಾಜಿಕ ಕಾರ್ಯಗಳಲ್ಲಿ ಹೆಚ್ಚಿನ ಯಶಸ್ಸು. ಕಳೆದು ಹೋದುದನ್ನು ಪುನಃ ಪಡೆದುಕೊಳ್ಳುವ ಸಾಧ್ಯತೆ. ಬಂಧುವರ್ಗದವರಿಂದ ಪ್ರಶಂಸೆ.

ಕನ್ಯಾ: ನೈತಿಕ ಬಲದಿಂದಾಗಿ ಸುತ್ತಮುತ್ತಲೂ ಉತ್ತಮ ವಾತಾವರಣ ಸೃಷ್ಟಿ ಮಾಡುವಿರಿ. ಸಾರ್ವಜನಿಕವಾಗಿ ಪ್ರಶಂಸೆಗಳು ಕೇಳಿಬರಲಿವೆ. ಹಿತ ಶತ್ರುಗಳಿಂದ ತೊಂದರೆ.

ತುಲಾ: ಆಕಸ್ಮಿಕ ಧನ ಪ್ರಾಪ್ತಿ. ಕಳೆದು ಹೋದ ವಸ್ತುವನ್ನು ಮರಳಿ ಪಡೆಯಲಿದ್ದೀರಿ. ಮಹಿಳೆಯರಿಗೆ ಸಾಮಾಜಿಕ ಕಾರ್ಯಗಳಲ್ಲಿ ಬಿಡುವಿಲ್ಲದ ಕೆಲಸ. ಗುರು ದೇವತಾ ಆರಾಧನೆಯಿಂದ ನಿರಾಳ.

ವೃಶ್ಚಿಕ: ಯಾಂತ್ರಿ ಸಲಕರಣೆಗಳ ಮಾರಾಟ ವ್ಯವಹಾರದಿಂದಾಗಿ ಉತ್ತಮ ಲಾಭ. ದಕ್ಷತೆಯಿಂದಾಗಿ ವ್ಯವಹಾರದಲ್ಲಿ ಸುಧಾರಣೆ. ಕಾರ್ಯಬಾಹುಳ್ಯದಿಂದಾಗಿ ಅತಿಯಾದ ಆಯಾಸ. ಆಪ್ತರಿಂದ ಸಮಾಧಾನ.

ಧನು: ಕ್ರೀಡಾಪಟುಗಳಿಗೆ ವಿಶೇಷ ಸಾಧನೆ ಮಾಡುವ ಅವಕಾಶ. ಅನುಭವಿಕರಿಂದ ಸಹಾಯ ದೊರಕಲಿದೆ. ಯೋಜನೆಗಳನ್ನು ಕಾರ್ಯಗತಗೊಳಿಸುವಲ್ಲಿ ಅನೇಕ ಮಾರ್ಗಗಳು ಕಂಡುಬರಲಿವೆ. ಮನೆಯಲ್ಲಿ ಸಂಭ್ರಮ.

ಮಕರ: ತೊಗರಿ, ಕಡಲೆ ಮುಂತಾದ ಹಳದಿಕಾಳುಗಳ ವ್ಯಾಪಾರಿಗಳಿಗೆ ಲಾಭ. ಕಲಾವಿದರಿಗೆ ಉತ್ತಮ ಪ್ರಶಂಸೆ. ಕೆಲಸ ಕಾರ್ಯಗಳಲ್ಲಿ ಆಸಕ್ತಿ ಕಡಿಮೆಯಾಗಿ ನಷ್ಟ ಸಾಧ್ಯತೆ.

ಕುಂಭ: ಸರ್ಕಾರಿ ನೌಕರಿಯಲ್ಲಿರುವವರಿಗೆ ಕಾರ್ಯ ನೈಪುಣ್ಯತೆಯಿಂದ ಪ್ರಶಂಸೆ. ಒಪ್ಪಿಕೊಂಡ ಕೆಲಸ ಕಾರ್ಯಗಳನ್ನು ನಿರ್ಲಕ್ಷಿಸದೆ ಶ್ರದ್ಧೆಯಿಂದ ನಿರ್ವಹಿಸಿ. ಮಾನಸಿಕ ಸ್ಥಿರತೆ.

ಮೀನ: ವಿಶೇಷ ಸಮಾರಂಭವೊಂದರಲ್ಲಿ ಭಾಗವಹಿಸಲಿದ್ದೀರಿ. ವರ್ತಮಾನದ ವಿಷಯಗಳನ್ನು ಅವಲೋಕಿಸಿ ಕಾರ್ಯ ಮಗ್ನರಾಗುವುದು ಉಚಿತ. ಆರ್ಥಿಕ ಸಮೃದ್ಧಿಯ ದಿನವಾಗಿದ್ದು ಪರರಿಂದ ಸಹಾಯ ಸಹಕಾರಗಳು ದೊರಕುವುದು.

ನಿಮ್ಮ ಜನ್ಮದಿನ 15-ಸೆಪ್ಟೆಂಬರ್ ಇಂದು ಅತ್ಯಂತ ಶುಭದಾಯಕ. ಎಲ್ಲ ಕ್ಷೇತ್ರಗಳಲ್ಲಿ ಜಯ ನಿಮ್ಮದಾಗಲಿದೆ. ಕೃಷಿಯಲ್ಲಿಯ ಸಾಧನೆಗಾಗಿ ಉತ್ತಮ ಪ್ರಶಂಸೆಗೆ ಪಾತ್ರರಾಗುವಿರಿ. ದೈಹಿಕ ಸಬಲತೆ ವೃದ್ಧಿಯಾಗುವುದರೊಂದಿಗೆ ಆತ್ಮಸ್ಥೈರ್ಯವು ಇಮ್ಮಡಿಗೊಳ್ಳಲಿದೆ. ಧಾನ್ಯಗಳ ವ್ಯವಹಾರದಲ್ಲಿ ಉತ್ತಮ ಲಾಭ.

ಪದಬಂಧ 4719

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಒಣ ಆಡಂಬರ (2)
3.ಆಯಾಳಿಗೆ ಆಗಿರುವ ಸುಸ್ತು (3)
5.ವನದೊಳಗಿರುವ ಬಟ್ಟೆ ಕಾಣುತ್ತಿದೆಯೇ? (3)
7.ಕಣ್ಣ ಕೊನೆಯ ನೋಟ (4)
9.ಯಾವುದೇ ವಿಷಯದ ಕ್ರಮಬದ್ಧವಾದ ನಿರೂಪಣೆ (3)
10.ಸಾಲ ಪಡೆದು ನೋಡಿರುವ ಸಮುದ್ರ (3)
11.ಜೀರ್ಣೋದ್ಧಾರ ಮಾಡಿದುದು (4)
13.ಪ್ರಾಯಕ್ಕೆ ಬರುತ್ತಿರುವ ಹಸು (3)
15.ಈತ ವಿಷಯಾಸಕ್ತ (3)
16.ಎದೆಯನ್ನು ಹೊಟ್ಟೆಯಿಂದ ಬೇರ್ಪಡಿಸುವ ಸೂಕ್ಷ್ಮ ಅಂಗ (2)

ಮೇಲಿಂದ ಕೆಳಕ್ಕೆ
2.ಈತ ದುಡ್ಡಿಲ್ಲದವ (3)
3.ಅವನ ಮುಖ ಇಲ್ಲಿ ಕಾಣುತ್ತಿದೆಯಲ್ಲಾ! (3)
4.ಸರಕ್ಕನೆ ಹೋಗಿ ತಂದಿರುವ ಸಾಮಾನು (3)
6.ಸರ ಧರಿಸಿದವನ ಪಾಳಿ (3)
8.ಪಾಲು ಕೇಳಿ ಬರೆದ ಪತ್ರ (3)
9.ವನದೊಳಗೆ ಮಾಡಿದ ಕ್ಷೌರ (3)
10.ಇದು ಶ್ರೇಯಸ್ಕರವಾದುದು (3)
12.ಆಸಕ್ತನಾದವನು ಇಲ್ಲಿದ್ದಾನೆ (3)
13.ದಶಕದಿಂದಲೂ ನಿರ್ನಾಮವಾಗದ ಸೊಳ್ಳೆ (3)
14.ವ್ಯಾಪಾರಿ ಏಕೋ ತಿರುಗಿದ್ದಾನಲ್ಲಾ? (3)



4718ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಜವಾಬ್ದಾರಿ 3.ಜಟಿಲ 4.ಪುರೋಹಿತ 6.ಜುಲುಮೆ 8.ಕಾರಣ 9.ಅಗುಳು 10.ಕಪ್ತಾನ 12.ಕಸರತ್ತು 14.ಕತ್ತರಿ 15.ನವಿರೆಳೆ
ಮೇಲಿಂದ ಕೆಳಕ್ಕೆ: 1.ಜಲ 2.ರಿಪು 3.ಜಹಜು 5.ತರುಣ 7.ಮೆದುಳು 8.ಕಾಲಿಕ 9.ಅಳ್ಳಕ 11.ನಸರಿ 13.ತ್ತುನ 14.ಕಳೆ

ಸುಡೊಕು 5105

		7		6			1	
	8		5		2	3		
6				4		7		8
	7				9			
5		9		1			3	7
	6		7					4
2		3	8		4	6		
		6		2			8	9
8	1		6		7	4		3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5104 ಸುಡೊಕು

8	7	9	4	6	1	2	5	3
2	4	3	9	8	5	7	6	1
6	5	1	2	7	3	4	8	9
7	9	2	1	5	8	3	4	6
4	3	8	7	9	6	1	2	5
5	1	6	3	4	2	9	7	8
3	2	5	6	1	4	8	9	7
1	6	7	8	2	9	5	3	4
9	8	4	5	3	7	6	1	2

ಹಿಂಸಾಚಾರ: ಬಂದಿಗಳ ಗುರುತಿಸುವಿಕೆಗೆ ತಿದ್ದುಪಡಿ ಮಸೂದೆ ಮಂಡನೆ

ಆರೋಪಿಗಳ ರಕ್ತ, ಡಿಎನ್‌ಎ ಮಾದರಿ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಂತಿ ಭಂಗ ಮತ್ತು ಹಿಂಸಾಚಾರದ ಪ್ರಕರಣಗಳಲ್ಲಿ ಆರೋಪಿಗಳ ರಕ್ತ, ಡಿಎನ್‌ಎ, ಧ್ವನಿ ಮಾದರಿ ಮತ್ತು ಕಣ್ಣಿನ ಪಾಪೆಯ ಸ್ಕ್ಯಾನಿಂಗ್ ಮಾದರಿಯನ್ನು ಪಡೆದುಕೊಳ್ಳುವ ಸಂಬಂಧ 'ಬಂದಿಗಳ ಗುರುತಿಸುವಿಕೆ(ತಿದ್ದುಪಡಿ) ಮಸೂದೆ' 2021 ಅನ್ನು ವಿಧಾನಸಭೆಯಲ್ಲಿ ಮಂಗಳವಾರ ಮಂಡಿಸಲಾಯಿತು.

ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಮಸೂದೆ ಮಂಡಿಸಿದರು.

ಈ ಹಿಂದೆ ಆರೋಪಿಗಳ ಭಾವ ಚಿತ್ರ ಮತ್ತು ನೆಗೆಟಿವ್ ಮಾತ್ರ ಸಂಗ್ರಹಿಸಲಾಗುತ್ತಿತ್ತು. ಈಗ ಅಪರಾಧ ಪತ್ತೆ ತಂತ್ರಜ್ಞಾನ ಮುಂದುವರಿದಿರುವುದರಿಂದ ಈ ಅಂಶಗಳನ್ನು ಸೇರಿಸಲಾಗಿದೆ.

ಅಲ್ಲದೆ, ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟರ ಜತೆಗೆ ಎಸ್ಪಿ, ಪೊಲೀಸ್ ಉಪ ಆಯುಕ್ತರಿಗೆ ಈ ಮಾದರಿಗಳನ್ನು ಸಂಗ್ರಹಿಸುವ ಅಧಿಕಾರ ನೀಡಲಾಗುವುದು.

ಆರಗ ಜ್ಞಾನೇಂದ್ರ

ನ್ಯಾಯಾಲಯ, ಜಿಲ್ಲಾ ಮ್ಯಾಜಿಸ್ಟ್ರೇಟ್ ಮತ್ತು ಪೊಲೀಸ್ ಉಪ ಆಯುಕ್ತರಿಂದ ನಿರ್ದಿಷ್ಟ ನಿರ್ದೇಶನ ಅಥವಾ ಆದೇಶ ಇಲ್ಲದಿದ್ದರೆ 10 ವರ್ಷಗಳ ಬಳಿಕ ಈ ಮಾದರಿಗಳನ್ನು ನಾಶ ಪಡಿಸಲು ಎಸ್ಪಿ ಮತ್ತು ಪೊಲೀಸ್ ಉಪ ಆಯುಕ್ತರಿಗೆ ಅಧಿಕಾರ ನೀಡಲಾಗಿದೆ.

ಮಂಡನೆಯಾದ ಇತರ ಮಸೂದೆಗಳು:

- ಸಾಕ್ಷಿಯ ಸಾಕ್ಷ್ಯವನ್ನು ಪಡೆಯುವಾಗ ಶ್ರವ್ಯ-ದೃಶ್ಯ ವಿದ್ಯುನ್ಮಾನ ವಿಧಾನಗಳ ಮೂಲಕವೂ ದಾಖಲಿಸಿಕೊಳ್ಳಲು ಅನುಕೂಲವಾಗಲು 'ದಂಡ ಪ್ರಕ್ರಿಯಾ ಸಂಹಿತೆ ಮಸೂದೆ' 2021 ಮಂಡಿಸಲಾಯಿತು.
- ಬೆಂಗಳೂರು ನಗರದಲ್ಲಿ 1,200 ಚದರಡಿಗಳಿಗೆ ಕಡಿಮೆ ಇಲ್ಲದ ನಿವೇಶನದಲ್ಲಿ ಪ್ರತಿಯೊಬ್ಬರು ಮಳೆನೀರು ಕೊಯ್ಲು ವ್ಯವಸ್ಥೆ ಹೊಂದುವುದನ್ನು ಕಡ್ಡಾಯಗೊಳಿಸಲು 'ಬೆಂಗಳೂರು ನೀರು ಸರಬರಾಜು ಮತ್ತು ಗ್ರಾಮಸಾರ ಚರಂಡಿ ವ್ಯವಸ್ಥೆ ಮಸೂದೆ' 2021 ಮಂಡಿಸಲಾಗಿದೆ.
- ಕರ್ನಾಟಕ ಸ್ಥಳೀಯ ನಿಧಿ ಪ್ರಾಧಿಕಾರಗಳ ಆರ್ಥಿಕ ಹೊಣೆಗಾರಿಕೆ ಅಧಿನಿಯಮದ ಪಾಲನೆ, ಮೇಲ್ವಿಚಾರಣೆ ಮಾಡಲು ಮತ್ತು ನಿಯಮಿತವಾಗಿ ಪುನರ್ ಪರಿಶೀಲನಾ ವರದಿಯನ್ನು ಸಲ್ಲಿಸುವ ಕಾರ್ಯವನ್ನು ರಾಜ್ಯ ಲೆಕ್ಕಪತ್ರಗಳ ಇಲಾಖೆ ಬದಲಿಗೆ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಇಲಾಖೆ, ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದಂತೆ ನಗರಾಭಿವೃದ್ಧಿ ಇಲಾಖೆಯನ್ನು ಸಕ್ಷಮ ಪ್ರಾಧಿಕಾರವನ್ನಾಗಿ ಮಾಡುವುದಕ್ಕೆ ಮಸೂದೆ ಮಂಡಿಸಲಾಯಿತು.
- 'ಬಂದೀಖಾನೆ ಮಂಡಳಿ' ಸ್ಥಾಪನೆಗಾಗಿ 'ಕರ್ನಾಟಕ ಬಂದೀಖಾನೆ ಅಭಿವೃದ್ಧಿ ಮಂಡಳಿ ಮಸೂದೆ' 2021 ಮಂಡಿಸಲಾಯಿತು.
- ಖಾದಿ ಮತ್ತು ಗ್ರಾಮೋದ್ಯೋಗ ಸಂಸ್ಥೆಗಳಲ್ಲಿ ಆರ್ಥಿಕ ಹೊರೆಯನ್ನು ತಗ್ಗಿಸಲು ನಿರ್ದೇಶಕ ಮಂಡಳಿಯಲ್ಲಿ ಸರ್ಕಾರೇತರ ಸದಸ್ಯರ ಸಂಖ್ಯೆಯನ್ನು ಕಡಿಮೆ ಮಾಡಲು ಉದ್ದೇಶಿಸಲಾಗಿದೆ. ಜಿಲ್ಲೆಯಿಂದ ಒಬ್ಬ ವ್ಯಕ್ತಿಗೆ ಬದಲು, ಪ್ರತಿ ಕಂದಾಯ ವಲಯದಿಂದ ಮೂವರು ವ್ಯಕ್ತಿಗಳಂತೆ, ಆದರೆ ಒಂದು ಜಿಲ್ಲೆಯಿಂದ ಒಬ್ಬ ವ್ಯಕ್ತಿಗಿಂತ ಹೆಚ್ಚು ಇರದಂತೆ ಸರ್ಕಾರೇತರ ಸದಸ್ಯರ ಒಟ್ಟು ಸಂಖ್ಯೆ 12 ಕ್ಕೆ ಕಡಿತಗೊಳಿಸಲು ಮಸೂದೆ ಮಂಡಿಸಲಾಯಿತು.

ಪಂಚಾಯಿತಿ ಕ್ಷೇತ್ರ ಪುನರ್‌ವಿಂಗಡಣೆಗೆ ಆಯೋಗ

ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮಪಂಚಾಯಿತಿ ಹಂತದಲ್ಲಿ ಕ್ಷೇತ್ರಗಳ ವಿಂಗಡಣೆಗೆ ಸಂಬಂಧಿಸಿದಂತೆ 'ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ' ರಚಿಸಲು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್(ತಿದ್ದುಪಡಿ) ಮಸೂದೆ 2021 ಸರ್ಕಾರ ಮಂಡಿಸಿದೆ.

ಚುನಾವಣಾ ಆಯೋಗಕ್ಕಿದ್ದ ಈ ಅಧಿಕಾರ ಹಿಂದಕ್ಕೆ ಪಡೆದು ಆಯೋಗಕ್ಕೆ ನೀಡಲು ಈ ತಿದ್ದುಪಡಿ ತರಲಾಗುತ್ತಿದೆ.

ಮುದ್ರಾಂಕ ಸುಂಕ ಇಳಿಕೆಗೆ ಮಸೂದೆ

ರಾಜ್ಯದಲ್ಲಿ ₹35 ಲಕ್ಷದಿಂದ ₹45 ಲಕ್ಷ ನಡುವಿನ ಮೌಲ್ಯದ ಅಪಾರ್ಟ್‌ಮೆಂಟ್‌ಗಳ ಮೊದಲ ನೋಂದಣಿಗೆ ಮುದ್ರಾಂಕ ಸುಂಕವನ್ನು ಶೇ 5 ರಿಂದ ಶೇ 3 ಕ್ಕೆ ಇಳಿಸಲು ಕರ್ನಾಟಕ ಸ್ಟಾಂಪು (ತಿದ್ದುಪಡಿ)ಮಸೂದೆ ಮಂಡಿಸಲಾಯಿತು. ಕಳೆದ ಆಯವ್ಯಯದಲ್ಲಿ ಈ ಅಂಶವನ್ನು ಪ್ರಸ್ತಾಪಿಸಲಾಗಿತ್ತು.

ಸಿದ್ದರಾಮಯ್ಯಗೆ ಕುಟುಕಿದ ಮುಖ್ಯಮಂತ್ರಿ ಬೊಮ್ಮಾಯಿ

ಬೆಂಗಳೂರು: 'ಅಗತ್ಯ ವಸ್ತುಗಳ ಬೆಲೆ ಏರಿಕೆ ಬಗ್ಗೆ ವಿರೋಧ ಪಕ್ಷದ ನಾಯಕರಾಗಿ ನೀವೆಷ್ಟು ಮಾತನಾಡಿದರೂ ನಮ್ಮ ಆಕ್ಷೇಪ ಇಲ್ಲ. ಅದಕ್ಕೆ ಸಿದ್ದರಾಮಯ್ಯ ಅವರ ಭಾವನೆಗಳನ್ನೂ ಸೇರಿಸಿ ಮಾತನಾಡಬೇಡಿ'.

ಹೀಗೆಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಉದ್ದೇಶಿಸಿ ಹೇಳಿದ್ದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ.

ಬೆಲೆ ಏರಿಕೆ ಕುರಿತು ಸಿದ್ದರಾಮಯ್ಯ ಮಂಡಿಸಿದ್ದ ನಿಲುವಳಿ ಸೂಚನೆಯನ್ನು ನಿಯಮ 69ರಡಿ ಪರಿವರ್ತಿಸಿ ಬುಧವಾರ ಚರ್ಚೆಗೆ ಅವಕಾಶ ನೀಡುವುದಾಗಿ ವಿಧಾನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು. 'ಎಲ್ಲರೂ ಸಾಧ್ಯವಾದಷ್ಟು ಕಡಿಮೆ ಮಾತನಾಡಿ. ಬುಧವಾರವೇ ಸರ್ಕಾರದಿಂದ ಉತ್ತರ ಕೊಡಿಸುವೆ' ಎಂದು ಕಾಗೇರಿ ಹೇಳಿದರು.

'ಇದೊಂದು ಜ್ವಲಂತ ಸಮಸ್ಯೆ. ಇದರ ಬಗ್ಗೆ ವಿಸ್ತೃತವಾಗಿ ಚರ್ಚೆ ನಡೆಯಬೇಕಿದೆ. ವಿರೋಧ ಪಕ್ಷದ ನಾಯಕರ ಮಾತಿಗೂ ಕಾಲಮಿತಿ ನಿಗದಿ ಮಾಡುವುದು ಸರಿಯಲ್ಲ' ಎಂದು ಸಿದ್ದರಾಮಯ್ಯ ಆಕ್ಷೇಪಿಸಿದರು.

'ನೀವು ವಿಷಯ ಮಂಡಿಸುವುದಕ್ಕೆ ಆಕ್ಷೇಪ ಇಲ್ಲ. ನೀವು ಹೆಚ್ಚು ಮಾತನಾಡಿದರೆ ಉಳಿದ ಸದಸ್ಯರಿಗೆ ಅವಕಾಶ ಹೆಚ್ಚು ಸಿಗುವುದಿಲ್ಲ ಎಂದೆ ಅಷ್ಟೇ' ಎಂದು ಕಾಗೇರಿ ಸ್ಪಷ್ಟಪಡಿಸಿದರು. ಆಗ ಬಸವರಾಜ ಬೊಮ್ಮಾಯಿ, 'ಸಿದ್ದರಾಮಯ್ಯನಾಗಿ ಜಾಸ್ತಿ ಮಾತನಾಡುವುದು ಬೇಡ ಎಂಬುದು ನಮ್ಮೆಲ್ಲರ ಬಯಕೆ' ಎಂದಾಗ ಸದನದಲ್ಲಿ ನಗೆಯ ಅಲೆ ಎದ್ದಿತು.

₹10,265 ಕೋಟಿ ಪೂರಕ ಅಂದಾಜು ಮಂಡನೆ

ಕೋವಿಡ್‌ಗೆ ₹1,400 ಕೋಟಿ ಹೆಚ್ಚುವರಿ ವೆಚ್ಚ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2021–22 ನೇ ಸಾಲಿಗೆ ₹10,265.33 ಕೋಟಿ ಮೊತ್ತದ ಪೂರಕ ಅಂದಾಜುಗಳ ಮೊದಲ ಕಂತಿನ ಪ್ರಸ್ತಾವನೆಯನ್ನು ವಿಧಾನಸಭೆಯಲ್ಲಿ ಮಂಗಳವಾರ ಮಂಡಿಸಿದ್ದು, ಇದರಲ್ಲಿ ಕೋವಿಡ್ ನಿರ್ವಹಣೆಗಾಗಿ ಸುಮಾರು ₹1,400 ಕೋಟಿಗೂ ಹೆಚ್ಚು ಮೊತ್ತ ನೀಡಲಾಗಿದೆ.

ಮುಖ್ಯವಾಗಿ, 1 ಕೋಟಿ ಡೋಸ್ ಕೋವಿಶೀಲ್ಡ್ ಲಸಿಕೆ ಖರೀದಿಗೆ ₹300 ಕೋಟಿ, ಔಷಧ ಮತ್ತು ಪರಿಕರಗಳ ಖರೀದಿಗೆ ₹60 ಕೋಟಿ, ಪಿಪಿಇ ಕಿಟ್ ಮತ್ತು ಎನ್–95 ಮಾಸ್ಕ್ ಖರೀದಿಗೆ ₹100 ಕೋಟಿ, ಕೋವಿಡ್ ಪರೀಕ್ಷೆಯ ಕಿರು ಪರಿಕರಗಳನ್ನು ಖರೀದಿಗೆ ₹17.72 ಕೋಟಿ ಒದಗಿಸಿದ್ದು, ಕೋವಿಡ್ ಔಷಧಿಯ ಹೆಚ್ಚುವರಿ ಖರೀದಿಗಾಗಿ ₹140 ಕೋಟಿ ಒದಗಿಸಲಾಗಿದೆ.

ವಿಧಾನಸಭೆ ಅಧಿವೇಶನದಲ್ಲಿ ಸೋಮವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿದರು– ಪ್ರಜಾವಾಣಿ ಚಿತ್ರ

- ಕೇಂದ್ರ ಪುರಸ್ಕೃತ ಗ್ರಾಮೀಣ ಕುಡಿಯುವ ನೀರು (ಜಲ್ ಜೀವನ್ ಮಿಷನ್) ಯೋಜನೆ ಸೇರಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ವಿವಿಧ ಯೋಜನೆಗಳಿಗೆ ₹2,858.05 ಕೋಟಿ ಒದಗಿಸಲಾಗಿದೆ.
- ಅನ್ನ ಭಾಗ್ಯ ಯೋಜನೆಗಾಗಿ ₹720 ಕೋಟಿ, ಪ್ರಧಾನಮಂತ್ರಿ ಗರೀಬ್ ಕಲ್ಯಾಣ್ ಯೋಜನೆಗೆ ₹559 ಕೋಟಿ ಮತ್ತು ಕರ್ನಾಟಕ ಆಹಾರ ನಿಗಮವು ಪಡೆದ ನಗದು ಸಾಲದ ಮೇಲಿನ ಬಡ್ಡಿ ಮರುಪಾವತಿಗೆ ₹60 ಕೋಟಿ ಸೇರಿ ₹1,339 ಕೋಟಿ ಒದಗಿಸಲಾಗಿದೆ.
- ಬೆಳಗಾವಿ ಲೋಕಸಭಾ ಉಪಚುನಾವಣೆ ಮತ್ತು ವಿಧಾನಸಭಾ ಉಪಚುನಾವಣೆಗಳಿಗಾಗಿ ₹10.37 ಕೋಟಿ ಹೆಚ್ಚುವರಿ ಅನುದಾನ ಒದಗಿಸಲಾಗಿದೆ.
- ಪುಷ್ಪಗಿರಿ ಮಹಾಸಂಸ್ಥಾನ, ಹಳೇಬೀಡು ಸಂಸ್ಥೆಗೆ ಅನುದಾನ ಬಿಡುಗಡೆ ಮಾಡಲು ₹5 ಕೋಟಿ ಹೆಚ್ಚುವರಿಯಾಗಿ ನೀಡಲಾಗಿದೆ.
- ಕೋವಿಡ್‌ನಿಂದಾಗಿ ಪೋಷಕರನ್ನು ಕಳೆದುಕೊಂಡ ಮಕ್ಕಳಿಗೆ 'ಮುಖ್ಯಮಂತ್ರಿ ಬಾಲ ಸೇವಾ ಯೋಜನೆ'ಯಡಿ ತಿಂಗಳಿಗೆ ₹3,500 ಪಾವತಿಸಲು ₹168 ಕೋಟಿ ಹೆಚ್ಚುವರಿಯಾಗಿ ನೀಡಲಾಗಿದೆ.
- ಮುಖ್ಯಮಂತ್ರಿ ಬೊಮ್ಮಾಯಿಯವರ ತವರು ಜಿಲ್ಲೆ ಹಾವೇರಿಯಲ್ಲಿ ವಿವಿಧ ದೇವಸ್ಥಾನ, ಟ್ರಸ್ಟ್, ಮಠಗಳ ವಿವಿಧ ಕಾಮಗಾರಿಗಳಿಗಾಗಿ ₹1.18 ಕೋಟಿ ಅನುದಾನ ನೀಡಲಾಗಿದೆ.
- ಬೆಂಗಳೂರಿನಲ್ಲಿರುವ ಮೈಸೂರು ಲ್ಯಾಂಪ್ಸ್‌ಗೆ ಸೇರಿದ ಭೂಮಿಯಲ್ಲಿ ನಿರ್ಮಾಣವಾಗಲಿರುವ 'ಬೆಂಗಳೂರು ಹೆರಿಟೇಜ್ ಅಂಡ್ ಎನ್‌ವಿರಾನ್‌ಮೆಂಟ್ ಟ್ರಸ್ಟ್‌ನ ಕಾರ್ಯಕ್ರಮಗಳಿಗಾಗಿ ₹ 5 ಕೋಟಿ ಹೆಚ್ಚುವರಿಯಾಗಿ ಒದಗಿಸಲಾಗಿದೆ.
- 'ಕನ್ನಡ ಕಾಯಕ ವರ್ಷಾಚರಣೆ' ಕಾರ್ಯಕ್ರಮಗಳಿಗೆ ₹ 20 ಕೋಟಿ, ಚಿತ್ರದುರ್ಗದಲ್ಲಿ ಬಸವಣ್ಣನವರ 380 ಅಡಿ ಎತ್ತರದ ಲೋಹದ ಪುತ್ಥಳಿ ನಿರ್ಮಾಣಕ್ಕೆ ₹10 ಕೋಟಿ ಹೆಚ್ಚುವರಿಯಾಗಿ ಬಿಡುಗಡೆ ಮಾಡಲಾಗಿದೆ.

3ಂಗಳಿಗೆ ಮೂರು ಲೀಟರ್ ಸೀಮೆಎಣ್ಣೆ ವಿತರಣೆ: ಕತ್ತಿ

ಬೆಂಗಳೂರು: ಸಮರ್ಪಕ ವಿದ್ಯುತ್ ಸಂಪರ್ಕ ಹೊಂದಿಲ್ಲದ ಗ್ರಾಮೀಣ ಹಾಗೂ ಬುಡಕಟ್ಟು ಪ್ರದೇಶಗಳಲ್ಲಿ ವಾಸಿಸುತ್ತಿರುವ ಪಡಿತರ ಕುಟುಂಬಗಳಿಗೆ ದೀಪ ಉರಿಸುವ ಉದ್ದೇಶಕ್ಕೆ ವಿತರಿಸುತ್ತಿರುವ ಸೀಮೆಎಣ್ಣೆ ಪ್ರಮಾಣವನ್ನು 3 ಲೀಟರ್‌ಗಳಿಗೆ ಹೆಚ್ಚಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವ ಉಮೇಶ ಕತ್ತಿ ತಿಳಿಸಿದರು.

ಪರಿಷತ್‌ನಲ್ಲಿ ಬಿಜೆಪಿಯ ಶಾಂತರಾಮ ಸಿದ್ದಿ ಮಂಡಿಸಿದ ಗಮನ ಸೆಳೆಯುವ ಸೂಚನೆಗೆ ಪ್ರತಿಕ್ರಿಯಿಸಿದ ಅವರು, 'ಅಡುಗೆ ಅನಿಲ ಸಂಪರ್ಕ ಹೊಂದಿಲ್ಲದ ಪಡಿತರ ಕುಟುಂಬಗಳಿಗೆ ಅಡುಗೆಗಾಗಿ ತಿಂಗಳಿಗೆ ತಲಾ 3 ಲೀಟರ್ ಸೀಮೆಎಣ್ಣೆ ವಿತರಿಸಲಾಗುತ್ತಿದೆ. ಬೆಳಕಿಗಾಗಿ ದೀಪ ಉರಿಸಲು ಸದ್ಯ ತಲಾ ಒಂದು ಲೀಟರ್ ಸೀಮೆಎಣ್ಣೆ ನೀಡಲಾಗುತ್ತಿದ್ದು, ರಾಜ್ಯದಲ್ಲಿ 24,87,116 ಕುಟುಂಬಗಳು ಸೀಮೆಎಣ್ಣೆ ಪಡೆಯುತ್ತಿವೆ' ಎಂದರು.

'ಗ್ರಾಮೀಣ ಮತ್ತು ಬುಡಕಟ್ಟು ಪ್ರದೇಶಗಳಿಗೆ ಸಮರ್ಪಕ ವಿದ್ಯುತ್ ಸಂಪರ್ಕ ಕಲ್ಪಿಸಲು ಕ್ರಮ ವಹಿಸಲಾಗುವುದು. ಖಾಸಗಿ ಪರವಾನಗಿದಾರರ ಮೂಲಕ ₹35ರ ದರದಲ್ಲೇ ಸೀಮೆಎಣ್ಣೆ ವಿತರಿಸಲಾಗುವುದು. ಉಜ್ವಲ ಮತ್ತು ಅನಿಲ ಭಾಗ್ಯ ಯೋಜನೆಯಡಿ ಎಲ್ಲ ಪಡಿತರ ಕುಟುಂಬಗಳಿಗೆ ಅನಿಲ ಸಂಪರ್ಕ ಕಲ್ಪಿಸಲಾಗುವುದು' ಎಂದು ತಿಳಿಸಿದರು.

ಬಸ್ ಪಾಸ್ ಅವಧಿ ವಿಸ್ತರಣೆ

ಬೆಂಗಳೂರು: ವಿದ್ಯಾರ್ಥಿ ಬಸ್ ಪಾಸ್ ವಿತರಣೆ ಅವಧಿ ವಿಸ್ತರಿಸಿರುವ ಕೆಎಸ್‌ಆರ್‌ಟಿಸಿ, ವಿದ್ಯಾರ್ಥಿಗಳಿಗೆ ಆಗುವ ತೊಂದರೆ ತಪ್ಪಿಸಲು 2020–21ನೇ ಸಾಲಿನ ಪಾಸ್ ಅವಧಿಯನ್ನು ಸೆ.25ರವರೆಗೆ ವಿಸ್ತರಿಸಿದೆ.

ಸೇವಾ ಸಿಂಧು ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಿ ಪಾಸ್ ಪಡೆಯಬೇಕಿದೆ. ಅಲ್ಲಿಯ ತನಕ ಹಿಂದಿನ ವರ್ಷದ ಪಾಸ್ ಬಳಸಿ ಪ್ರಯಾಣಿಸಬಹುದು. ಪಾಸ್ ಪಡೆಯದಿರುವ ವಿದ್ಯಾರ್ಥಿಗಳು ಶಾಲಾ–ಕಾಲೇಜುಗಳಿಂದ ನೀಡಿರುವ ಗುರುತಿನ ಚೀಟಿ, ಶುಲ್ಕ ಪಾವತಿಸಿರುವ ರಸೀದಿ ತೋರಿಸಿ ಉಚಿತವಾಗಿ ಪ್ರಯಾಣಿಸಬಹುದು ಎಂದು ಕೆಎಸ್‌ಆರ್‌ಟಿಸಿ ತಿಳಿಸಿದೆ.

ಕೋವಿಡ್: 559ಕ್ಕೆ ಇಳಿದ ಹೊಸ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಇಳಿಮುಖ ಕಂಡಿದ್ದು, 559 ಮಂದಿ ಕೊರೊನಾ ಸೋಂಕಿತರಾಗಿರುವುದು ಮಂಗಳವಾರ ದೃಢಪಟ್ಟಿದೆ.

ಆರೂವರೆ ತಿಂಗಳಲ್ಲಿ ವರದಿಯಾದ ಕನಿಷ್ಠ ಪ್ರಕರಣಗಳು ಇವಾಗಿವೆ. ಐದು ದಿನಗಳಿಂದ ಹೊಸ ಪ್ರಕರಣಗಳು ಸಾವಿರದ ಗಡಿಯೊಳಗೆ ಇವೆ. ಈವರೆಗೆ ವರದಿಯಾದ ಕೋವಿಡ್ ಪ್ರಕರಣಗಳ ಒಟ್ಟು ಸಂಖ್ಯೆ 29.62 ಲಕ್ಷ ದಾಟಿದೆ. ಕೋವಿಡ್ ಪರೀಕ್ಷೆಗಳ ಸಂಖ್ಯೆ ಇಳಿಮುಖ ಮಾಡಿದ್ದು, ಒಂದು ದಿನದ ಅವಧಿಯಲ್ಲಿ 1.05 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ.

ಸೋಂಕು ದೃಢ ಪ್ರಮಾಣವು ಶೇ 0.52 ರಷ್ಟು ವರದಿಯಾಗಿದೆ. 9 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 17 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ರಾಮನಗರ, ಗದಗ ಹಾಗೂ ಬಾಗಲಕೋಟೆಯಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ.

ಬೆಂಗಳೂರಿನಲ್ಲಿ 231, ದಕ್ಷಿಣ ಕನ್ನಡದಲ್ಲಿ 87 ಹಾಗೂ ಉಡುಪಿಯಲ್ಲಿ 57 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 50ರ ಗಡಿಯೊಳಗೆ ಇವೆ. ಸೋಂಕಿತರಲ್ಲಿ 1,034 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29.09 ಲಕ್ಷ ದಾಟಿದೆ.

ಸಕ್ರಿಯ ಪ್ರಕರಣಗಳ ಸಂಖ್ಯೆ ಇಳಿಕೆ ಕಂಡಿದ್ದು, ಸದ್ಯ 15,754 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಕೋವಿಡ್ ಪೀಡಿತರಲ್ಲಿ 12 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. 5 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ದಕ್ಷಿಣ ಕನ್ನಡದಲ್ಲಿ 5, ಬೆಂಗಳೂರಿನಲ್ಲಿ 4, ಕೊಡಗು, ಶಿವಮೊಗ್ಗ ಹಾಗೂ ಉತ್ತರ ಕನ್ನಡದಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಮರಣ ಪ್ರಮಾಣ ದರವು ಶೇ 2.14 ರಷ್ಟು ವರದಿಯಾಗಿದೆ. ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 37,529ಕ್ಕೆ ತಲುಪಿದೆ.

ಬಾಲ್ಯವಿವಾಹ ತಡೆಗೆ ಕಠಿಣ ಕ್ರಮ: ಹಾಲಪ್ಪ ಆಚಾರ್

ಬೆಂಗಳೂರು: 'ರಾಜ್ಯದಲ್ಲಿ ಬಾಲ್ಯವಿವಾಹ ತಡೆಗೆ ಮತ್ತಷ್ಟು ಕಠಿಣ ಕ್ರಮಗಳನ್ನು ಕೈಗೊಳ್ಳಲಾಗುವುದು. ಬಾಲ್ಯವಿವಾಹ ಗುರುತಿಸಲು ಹಾಗೂ ತಡೆಯಲು ಮತ್ತು ಮಕ್ಕಳ ರಕ್ಷಣೆಗೆ ಅಗತ್ಯವಿರುವ ಕಾರ್ಯಸೂಚಿಗಳನ್ನು (ಎಸ್‌ಒಪಿ) ಸಿದ್ಧಪಡಿಸುವ ಕಾರ್ಯ ಪ್ರಗತಿಯಲ್ಲಿದೆ' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವ ಹಾಲಪ್ಪ ಆಚಾರ್ ಹೇಳಿದರು.

ಕೋವಿಡ್ ಸಂದರ್ಭದಲ್ಲಿ ಬಾಲ್ಯವಿವಾಹಗಳ ಸಂಖ್ಯೆ ಹೆಚ್ಚಾಗಿದ್ದರ ಕುರಿತು 'ಪ್ರಜಾವಾಣಿ'ಯಲ್ಲಿ ಪ್ರಕಟವಾದ ವರದಿಯನ್ನು ಬಿಜೆಪಿಯ ಮಹಾಂತೇಶ್ ಕವಟಗಿಮಠ ಸದನದಲ್ಲಿ ಪ್ರಸ್ತಾಪಿಸಿದರು. ಈ ಬಗ್ಗೆ ಪ್ರತಿಕ್ರಿಯಿಸಿದ ಸಚಿವರು, 'ಬಾಲ್ಯವಿವಾಹ ತಡೆ ಕುರಿತು ಕಿರುಚಿತ್ರಗಳನ್ನು ಸಿದ್ಧಪಡಿಸಿ, ಇವುಗಳನ್ನು ಸಾಮಾಜಿಕ ಜಾಲತಾಣ ಮತ್ತು ಮಾಧ್ಯಮಗಳ ಮೂಲಕ ಪ್ರಸಾರ ಮಾಡುವ ಬಗ್ಗೆ ಕ್ರಿಯಾಯೋಜನೆ ರೂಪಿಸಲಾಗುತ್ತಿದೆ' ಎಂದೂ ಮಾಹಿತಿ ನೀಡಿದರು.

'2020–21ನೇ ಸಾಲಿನಲ್ಲಿ 296 ಬಾಲ್ಯವಿವಾಹ ಪ್ರಕರಣಗಳು ದಾಖಲಾಗಿವೆ' ಎಂದೂ ಅವರು ತಿಳಿಸಿದರು.

ಪಿಟಿಸಿಎಲ್ ಕಾಯ್ದೆ ತಿದ್ದುಪಡಿಗೆ ಆಗ್ರಹಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಭೂ ಪರಭಾರೆ ನಿಷೇಧ ಕಾಯ್ದೆಗೆ (ಪಿಟಿಸಿಎಲ್) ಸಮಗ್ರ ತಿದ್ದುಪಡಿ ತರಬೇಕು ಎಂದು ಆಗ್ರಹಿಸಿ ದಲಿತ ಸಂಘಟನೆಗಳ ಒಕ್ಕೂಟ ನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿತು.

ಕೆಎಸ್‌ಆರ್ ರೈಲು ನಿಲ್ದಾಣದಿಂದ ಮೆರವಣಿಗೆ ಹೊರಟ ವಿವಿಧ ಸಂಘಟನೆಗಳ ಹೋರಾಟಗಾರರು, ಮೌರ್ಯ ವೃತ್ತದಲ್ಲಿ ಸಭೆ ನಡೆಸಿದರು. ಈ ಸಂದರ್ಭದಲ್ಲಿ ಮಾತನಾಡಿದ ದಲಿತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಎಂ. ವೆಂಕಟಸ್ವಾಮಿ, 'ಪಿಟಿಸಿಎಲ್ ಕಾಯ್ದೆಗೆ ತಿದ್ದುಪಡಿ ತಂದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಭೂಮಿ ಉಳಿಸದಿದ್ದರೆ ದಲಿತ ಸಂಘಟನೆಗಳಿಂದ ದೊಡ್ಡ ಮೊಟ್ಟದ ಹೋರಾಟವನ್ನು ಸರ್ಕಾರ ಎದುರಿಸಬೇಕಾಗುತ್ತದೆ' ಎಂದು ಎಚ್ಚರಿಸಿದರು.

ಪಿಟಿಸಿಎಲ್ ಕಾಯ್ದೆ ತಿದ್ದುಪಡಿಗೆ ಆಗ್ರಹಿಸಿ ದಲಿತ ಸಂಘಟನೆಗಳ ಒಕ್ಕೂಟದಿಂದ ನಡೆದ ಮೆರವಣಿಗೆ –ಪ್ರಜಾವಾಣಿ ಚಿತ್ರ

'ದಲಿತರ ಭೂಮಿ ಬಲಾಢ್ಯರ ಪಾಲಾಗುವುದನ್ನು ತಪ್ಪಿಸಲು ಡಿ. ದೇವರಾಜ ಅರಸು ಮತ್ತು ಬಿ. ಬಸವಲಿಂಗಪ್ಪ ಅವರ ದಲಿತ ಪರ ಕಾಳಜಿಯಿಂದಾಗಿ ಈ ಕಾಯ್ದೆ 1978ರಲ್ಲಿ ಜಾರಿಗೆ ಬಂದಿತ್ತು. ಕಾಯ್ದೆಯ ಲೋಪಗಳನ್ನೇ ಮುಂದಿಟ್ಟುಕೊಂಡು ಸರ್ಕಾರ ಆದೇಶಗಳನ್ನು ಹೊರಡಿಸುತ್ತಿದೆ. ನ್ಯಾಯಾಲಯಗಳು ತೀರ್ಪುಗಳನ್ನು ನೀಡುತ್ತಿವೆ' ಎಂದು ಹೇಳಿದರು.

'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕೂಡಲೇ ಉನ್ನತ ಮಟ್ಟದ ಸಭೆ ನಡೆಸಬೇಕು. ದಲಿತ ಸಂಘಟನೆಗಳ ಮುಖಂಡರ ಅಭಿಪ್ರಾಯ ಪಡೆಯಬೇಕು' ಎಂದು ಒತ್ತಾಯಿಸಿದರು.

ಸಾಂಕೇತಿಕವಾಗಿ ಪ್ರತಿಭಟನೆ ನಡೆಸಲಾಗುತ್ತಿದ್ದು, ಸರ್ಕಾರ ನಿರ್ಲಕ್ಷ್ಯ ವಹಿಸಿದರೆ ಮುಂದಿನ ದಿನಗಳಲ್ಲಿ ಮುಖ್ಯಮಂತ್ರಿ, ಎಲ್ಲಾ ಸಚಿವರು ಮತ್ತು ಶಾಸಕರಿಗೆ ಘೇರಾವ್ ಮಾಡಲಾಗುವುದು ಎಂದು ಎಚ್ಚರಿಸಿದರು.

'ಪಢನಾ ಲಿಖನಾ' ಅಭಿಯಾನಕ್ಕೆ ಚಾಲನೆ

ಕೋವಿಡ್ ಕಾರಣ ಒಂದೂವರೆ ವರ್ಷದಿಂದ ಸ್ಥಗಿತಗೊಂಡಿದ್ದ ವಯಸ್ಕರ ಶಿಕ್ಷಣ, ಸಾಕ್ಷರತೆ ಯೋಜನೆಗಳನ್ನು ಮತ್ತೆ ಆರಂಭಿಸಲಾಗಿದೆ.

ಸಂಪೂರ್ಣ ಸಾಕ್ಷರ ರಾಜ್ಯ ಶೀಘ್ರ: ಸಚಿವ ನಾಗೇಶ್

ಬೆಂಗಳೂರು: 'ಕೇಂದ್ರ, ರಾಜ್ಯ ಸರ್ಕಾರದ ಲೋಕಶಿಕ್ಷಣ ನಿರ್ದೇಶನಾಲಯದ ಜೊತೆಗೆ ಶಿಕ್ಷಣ ಇಲಾಖೆಯ ವಿವಿಧ ವಿಭಾಗಗಳ ಸಂಯೋಜನೆಯೊಂದಿಗೆ, ಸರ್ಕಾರೇತರ ಸಂಸ್ಥೆಗಳು, ಸ್ವಯಂಸೇವಕರ ನೆರವಿನಲ್ಲಿ ಕರ್ನಾಟಕವನ್ನು 'ಸಂಪೂರ್ಣ ಸಾಕ್ಷರ ನಾಡು' ಆಗಿ ಪರಿವರ್ತಿಸುವ ಗುರಿ ಹೊಂದಲಾಗಿದೆ' ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಬಿ.ಸಿ. ನಾಗೇಶ್ ತಿಳಿಸಿದರು.

ಲೋಕಶಿಕ್ಷಣ ನಿರ್ದೇಶನಾಲಯ, ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರ ವತಿಯಿಂದ ಮಂಗಳವಾರ ನಡೆದ 55ನೇ ಅಂತರರಾಷ್ಟ್ರೀಯ ಸಾಕ್ಷರತಾ ದಿನಾಚರಣೆ ಸಪ್ತಾಹ-2021ಕ್ಕೆ ಚಾಲನೆ ನೀಡಿ ಮಾತನಾಡಿದರು.



'ಸಾಕ್ಷರತೆ ಕಾರ್ಯಕ್ರಮಗಳ ಯಶಸ್ಸಿಗೆ ಈ ವರ್ಷ ವಿಶೇಷ ಒತ್ತು ನೀಡಲಾಗುತ್ತಿದೆ. ನಾಲ್ಕು ತಿಂಗಳ ಅವಧಿಯಲ್ಲಿ ಒಟ್ಟು 120 ತಾಸುಗಳ ಅವಧಿಗೆ ತರಗತಿಗಳನ್ನು ತೆಗೆದುಕೊಳ್ಳಲಾಗುತ್ತದೆ. ಅನಕ್ಷರಸ್ಥರು ಹೆಚ್ಚಿರುವ ರಾಯಚೂರು, ಯಾದಗಿರಿ, ಕಲಬುರ್ಗಿ, ವಿಜಯಪುರ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ 'ಪಢನಾ, ಲಿಖನಾ' (ಓದು, ಬರಹ) ಅಭಿಯಾನಕ್ಕೆ ಆಯ್ಕೆ ಮಾಡಲಾಗಿದೆ' ಎಂದು ಸಚಿವರು ತಿಳಿಸಿದರು.

'ಬಾಳಿಗೆ ಬೆಳಕು' ಮತ್ತು 'ಬರೆಯೋಣ ಬನ್ನಿ' ಅಭ್ಯಾಸ ಪುಸ್ತಕ ಬಿಡುಗಡೆ, ಪರಿಷ್ಕೃತ ಬೋಧನಾ ಸಾಮಗ್ರಿಗಳ ಅರ್ಪಣೆ ಮತ್ತು ಕೇಂದ್ರ ಸರ್ಕಾರದ 'ಪಢನಾ ಲಿಖನಾ' (ಓದು, ಬರಹ) ಅಭಿಯಾನ ಹಾಗೂ 2021-22ನೇ ಸಾಲಿನ ಜಿಲ್ಲಾ ವಲಯದ ಸಾಕ್ಷರತಾ ಕಾರ್ಯಕ್ರಮಗಳಿಗೆ ಸಚಿವರು ಚಾಲನೆ ನೀಡಿದರು.

77 ಎಕರೆ 18 ಗುಂಟೆ ಸುತ್ತಲೂ ಬೇಲಿ ನಿರ್ಮಾಣ

ಈಗಲ್‌ಟನ್ ಒತ್ತುವರಿ ಜಾಗ ಜಿಲ್ಲಾಡಳಿತದ ವಶಕ್ಕೆ

ಪ್ರಜಾವಾಣಿ ವಾರ್ತೆ

ರಾಮನಗರ: ಬಿಡದಿ ಬಳಿ ಈಗಲ್‌ಟನ್ ರೆಸಾರ್ಟ್ ಒತ್ತುವರಿ ಮಾಡಿಕೊಂಡಿದ್ದ 77 ಎಕರೆ 18 ಗುಂಟೆ ಜಾಗವನ್ನು ಜಿಲ್ಲಾಡಳಿತ ಮಂಗಳವಾರ ವಶಕ್ಕೆ ಪಡೆದಿದ್ದು, ಬೇಲಿ ನಿರ್ಮಿಸಲಾಗುತ್ತಿದೆ.

ಚಾಮುಂಡೇಶ್ವರಿ ಬಿಲ್ಡ್‌ಟೆಕ್ ಪ್ರೈ.ಲಿಮಿಟೆಡ್ ಎಂಬ ಸಂಸ್ಥೆಯು ಗೋಮಾಳಕ್ಕೆ ಸೇರಿದ ಜಾಗವನ್ನು ಒತ್ತುವರಿ ಮಾಡಿಕೊಂಡು ರೆಸಾರ್ಟ್ ಸಮೀಪ ಗಾಲ್ಫ್ ಅಂಕಣ ಹಾಗೂ ರಸ್ತೆ ನಿರ್ಮಿಸಿಕೊಂಡಿತ್ತು. ಈ ಒತ್ತುವರಿ ಪ್ರಕರಣ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದು, ಈಗಿನ ಮಾರುಕಟ್ಟೆ ಮೌಲ್ಯದಲ್ಲಿ ದಂಡ ವಸೂಲಿ ಮಾಡುವಂತೆ 2014ರಲ್ಲಿ ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು.

ಅದರಂತೆ ರಾಜ್ಯ ವಿಧಾನಮಂಡಲ ಉಪ ಸಮಿತಿಯು ಪರಿಶೀಲನೆ ನಡೆಸಿ ಜಮೀನಿನ ಮಾರುಕಟ್ಟೆ ಮೌಲ್ಯ ನಿಗದಿ ಮಾಡಿದ್ದು, 77 ಎಕರೆಗೆ ₹920 ಕೋಟಿ ದಂಡ ವಾಪತಿಸುವಂತೆ ರಾಜ್ಯ ಸರ್ಕಾರ ಸೂಚಿಸಿತ್ತು. ಆದರೆ ಇದಕ್ಕೆ ಒಪ್ಪದ ಒತ್ತುವರಿದಾರರು 77 ಎಕರೆಗೆ ₹12.35 ಕೋಟಿ ಮಾತ್ರವೇ ಪಾವತಿಸುವುದಾಗಿ ತಿಳಿಸಿದ್ದರು. ಇದಕ್ಕೆ ಸರ್ಕಾರ ಒಪ್ಪದಿದ್ದಾಗ ಹೈಕೋರ್ಟ್ ಮೆಟ್ಟಿಲೇರಿದ್ದರು. ಕಳೆದ ತಿಂಗಳಷ್ಟೇ ಹೈಕೋರ್ಟ್ ಅರ್ಜಿದಾರರ ಮನವಿಯನ್ನು ವಜಾ ಮಾಡಿತ್ತು.

ಒತ್ತುವರಿ ಮಾಡಿಕೊಂಡಿದ್ದ ಜಾಗಕ್ಕೆ ಬೇಲಿ ಹಾಕುವಲ್ಲಿ ನಿರತರಾಗಿದ್ದ ಕಾರ್ಮಿಕರು

'ಸಂಬಂಧಿಸಿದ ಜಮೀನಿಗೆ ಸರ್ಕಾರ ನಿಗದಿಪಡಿಸಿದ ದಂಡ ಪಾವತಿಸುವಂತೆ 2017ರಲ್ಲೇ ನೋಟಿಸ್ ನೀಡಿದ್ದೆವು. ಆದರೆ ಈವರೆಗೂ ದಂಡ ಕಟ್ಟದ ಹಿನ್ನೆಲೆಯಲ್ಲಿ ಜಮೀನನ್ನು ವಶಕ್ಕೆ ಪಡೆದಿದ್ದು, ಸುತ್ತಲೂ ಬೇಲಿ ನಿರ್ಮಿಸಲಾಗುವುದು' ಎಂದು ರಾಮನಗರ ಜಿಲ್ಲಾಧಿಕಾರಿ ರಾಕೇಶ್‌ಕುಮಾರ್ ತಿಳಿಸಿದರು.

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ಮಾತೃ ಸಂಸ್ಥೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸ್ಥಾಪಿಸಿರುವ ಟ್ರಸ್ಟ್ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ಅರ್ಹ ಬಡ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ಧನ ಸಹಾಯ ಮಾಡುತ್ತಾ ಬಂದಿದೆ. ಸಾರ್ವಜನಿಕರು ಮತ್ತು ದಾನಿಗಳು ಸಂಸ್ಥೆಯ ಈ ಉದ್ದೇಶಕ್ಕೆ ನೆರವಾಗಬೇಕೆಂದು ಕೋರುತ್ತೇವೆ. ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು 'Deccan Herald-Prajavani Relief Trust' ಹೆಸರಿಗೆ ಕಳುಹಿಸಬಹುದು. ಹಣ ಸಂದಾಯ ಮಾಡಿದ ವಿವರ, ಹೆಸರು, ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು dept.finc@printersmysore.co.in ಮೇಲ್ ಮುಖಾಂತರ ತಿಳಿಸಿ.

ಆನ್‌ಲೈನ್ ಅಥವಾ ಚೆಕ್ ಮೂಲಕವೂ ಹಣ ವರ್ಗಾಯಿಸುವ ಸೌಲಭ್ಯ ಇದೆ. (ವಿವರ ಕೆಳಗೆ ಕೊಡಲಾಗಿದೆ) ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಆದಾಯ ತೆರಿಗೆ ಸೆಕ್ಷನ್ 80 ಜಿ ಅನ್ವಯ ಶೇ 50 ರಷ್ಟು ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ

'Deccan Herald-Prajavani Relief Trust'
Canara Bank, Cantonment Branch
A/c no. - 0404101200385
IFSC code - CNRB0000404
MICR Code - 560015009

ಸೂಚನೆ: ದೇಣಿಗೆ ನೀಡುವವರು ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಕೊಡುಗೆ' ಎಂದು ನಮೂದಿಸಲು ಮನವಿ.

ವಿಳಾಸ: ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2021ರ ಎಸ್‌ಎಸ್‌ಎಲ್‌ಸಿಯಲ್ಲಿ ಅಧಿಕ ಅಂಕ ಗಳಿಸಿದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಮಾತ್ರ ಈ ನೆರವು ಕೋರಿ ಮೇಲ್ಕಂಡ ವಿಳಾಸಕ್ಕೆ ಅರ್ಜಿ ಸಲ್ಲಿಸಬಹುದು. ಅರ್ಜಿಯಲ್ಲಿ ವಿಳಾಸ, ಮೊಬೈಲ್ ಸಂಖ್ಯೆ ಮತ್ತಿತರ ವಿವರಗಳಿರಬೇಕು. ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಅರ್ಜಿ' ಎಂದು ಬರೆಯಬೇಕು. ಅರ್ಜಿಯ ಜೊತೆ ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು.

ಪ್ರಜಾವಾಣಿ DH DECCAN HERALD

ಡಿಎಚ್–ಪಿವಿ ಬಡ ವಿದ್ಯಾರ್ಥಿಗಳ ಶೈಕ್ಷಣಿಕ ನಿಧಿ

ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	ದೇಣಿಗೆ ₹ಗಳಲ್ಲಿ
1	**ಜಯಪ್ರಕಾಶ್ ಪಾಟೀಲ್,** ಬೆಟ್ಟದೂರು ಹಾಸ್ಪಿಟಲ್, ರಾಯಚೂರು	25,000
2	**ಎ.ಆರ್.ನರಸಿಂಹ ಸ್ವಾಮಿ,** ವಿಜಯ ಬ್ಯಾಂಕ್ ಲೇಔಟ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು	10,000
3	**ಲಕ್ಷ್ಮಿನಾರಾಯಣ ಹೆಗಡೆ,** 241, 1ನೇ ಅಡ್ಡರಸ್ತೆ, ಟಿಜಿಎನ್ ಲೇಔಟ್, ಮೀನಾಕ್ಷಿ ಭವನ ಹಿಂಭಾಗ, ಶಿವಮೊಗ್ಗ	10,000
4	**ವಿನಯ್ ಹಿರೇಮಠ,** ಎಂಐಜಿ 1–295, ಹುಡ್ಕೊ ಕಾಲೊನಿ, ಸಿದ್ಧಲಿಂಗ ನಗರ, ಗದಗ	5,001
5	**ಎಸ್.ಪಿ.ಶಾನ್‌ಭಾಗ್,** ಅಟ್ ಎಸಳೆ (ಲಂಡಕನಹಳ್ಳಿ) ಅಂಚೆ, ಚಿಪಗಿ, ಶಿರಸಿ	5000
6	**ಡಾ.ಕೆ.ಎಂ.ಶ್ರೀನಿವಾಸಗೌಡ,** 452, 39ನೇ ಎ ಅಡ್ಡರಸ್ತೆ, 9ನೇ ಮುಖ್ಯರಸ್ತೆ, ಜಯನಗರ, 5ನೇ ಬ್ಲಾಕ್, ಬೆಂಗಳೂರು	5000
7	**ಆರ್.ಸೌಂದರ್ ರಾಜನ್,** 574, ಡಿ ಗ್ರೂಪ್ ಲೇಔಟ್, ಶ್ರೀಗಂಧದ ಕಾವಲ್, ಬೆಂಗಳೂರು	5000
8	**ವಿಷ್ಣು ಎಂ,** 26, 6ನೇ ಅಡ್ಡರಸ್ತೆ, ಶಾರದಾಂಬಾ ನಗರ, ಜಾಲಹಳ್ಳಿ, ಬೆಂಗಳೂರು	5000
9	**ವಿಜಯ್ ಎಚ್.ವಿ.** ಸಿ537, ಬ್ರಿಗೇಡ್ ಸಿಂಫನಿ, ಕೆಆರ್‌ಎಸ್ ರಸ್ತೆ, ಮೇಟಗಳ್ಳಿ, ಮೈಸೂರು	5000
10	**ಗುರುಲಿಂಗಪ್ಪ ಎಂ.ಅಮ್ಮಣಗಿ,** ಫ್ಲ್ಯಾಟ್ ಎಫ್1, ರಕ್ಷಾ ಹೋಮ್ಸ್, 62/2, 6ನೇ ಮುಖ್ಯರಸ್ತೆ, ಬಿಸಿಸಿ ಲೇಔಟ್, ವಿಜಯನಗರ, ಬೆಂಗಳೂರು	5000
11	**ಮನೋಜ್ ಎಸ್,** 626/ಬಿ, 3ನೇ ಮುಖ್ಯರಸ್ತೆ ಇ ಅಡ್ಡರಸ್ತೆ, ಮತ್ತಿಕೆರೆ, ಬೆಂಗಳೂರು	3000
12	**ಸರಸ್ವತಿ,** ಗಿರಿನಗರ, ಬೆಂಗಳೂರು	3000
13	**ಆನಂದ್ ದೊಡ್ಡಮನಿ,** ಪರಶುರಾಂ ಅಪಾರ್ಟ್‌ಮೆಂಟ್, ಮಂಗಳೂರು	2001
14	**ಮಂಜುನಾಥ ಸುಜಾತಾ,** 2ನೇ ಅಡ್ಡರಸ್ತೆ, ಜೆ.ಸಿ.ಆರ್. ಎಕ್ಸ್‌ಟೆನ್ಷನ್, ಶ್ರೀ ಗುರು ಕೊಟ್ಟೂರೇಶ್ವರ ನಿಲಯ, ಚಿತ್ರದುರ್ಗ	2000
15	**ಗೀತಾ,** 516, 27ನೇ ಅಡ್ಡರಸ್ತೆ, ಐ.ಎಚ್.ಲೇಔಟ್, ರಾಜರಾಜೇಶ್ವರಿ ನಗರ, ಬೆಂಗಳೂರು	2000
16	**ಸುಲೋಚನಾ ಸೊರಟೂರು,** ಚೇತನ್ ಕಾಲೊನಿ, ಹುಬ್ಬಳ್ಳಿ	2000
17	**ಎಚ್.ಎನ್.ಆನಂದ,** 49, ಎಇಸಿಎಸ್ ಲೇಔಟ್, 2ನೇ ಹಂತ, 3ನೇ ಮುಖ್ಯರಸ್ತೆ, ರಾಮನ್ ಆಡಿಟೋರಿಯಂ ಸಮೀಪ, ಸಂಜಯನಗರ, ಬೆಂಗಳೂರು	2000
18	**ಶ್ರೀರಾಂ ಎಂ.ಎಸ್.** 211, ಡಿಸ್ ಮ್ಯಾಕ್ಸ್, ಸ್ಟರ್ಲಿಂಗ್, ರಾಜಭಾವಿ ರಸ್ತೆ, ವರ್ತೂರು, ಬೆಂಗಳೂರು	2000
19	**ಎಚ್.ಎನ್.ದಶರಥ,** ಲಕ್ಷ್ಮಿ ನಿಲಯ, ಬಿ175, 3ನೇ ಹಂತ, 2ನೇ ಅಡ್ಡರಸ್ತೆ, ಸಿಡಿಎ ಲೇಔಟ್, ಕಲ್ಯಾಣ ನಗರ, ಬೈಪಾಸ್ ರಸ್ತೆ, ಚಿಕ್ಕಮಗಳೂರು	1500
20	**ರವೀಂದ್ರ ಎಸ್.ರಡ್ಡೇರ,** ರಾಜು ನಿಲಯ, ಪ್ಲಾಟ್ 93, ವಜ್ರ ಹನುಮಾನ್ ನಗರ, ಬಾಗಲಕೋಟೆ ರಸ್ತೆ, ವಿಜಯಪುರ	1500
21	**ಟಿ.ಬಾಲಯ್ಯ ಕಬ್ಬೇರ,** ನಂ. 7–4–80, ಗಜ್ಗರ್ ಪೇಟೆ, ರಾಯಚೂರು	1275
22	**ಹೆಸರು ನಮೂದಿಸಿಲ್ಲ,** ಸಾಯಿನಗರ, ಹುಬ್ಬಳ್ಳಿ	1111
23	**ಜಿ.ಮೃತ್ಯುಂಜಯ,** 7047, ಪ್ರೆಸ್ಟೀಜ್ ಬಾಗಮನೆ, ಟೆಂಪಲ್ ಬೆಲ್ಸ್, ಆರ್.ಆರ್.ನಗರ, ಬೆಂಗಳೂರು	1100
24	**ಶ್ರೀಧರ ಮೂರ್ತಿ,** 26, ಶ್ರೀರಂಗ, ಸೂರ್ಯ ಲೇಔಟ್, ಬೆಮೆಲ್ ನಗರ ಸಮೀಪ,, ಶ್ರೀರಾಮಪುರಂ, 2ನೇ ಹಂತ, ಮೈಸೂರು	1010
25	**ವಿಶ್ವನಾಥ್ ಟಿ.ಎನ್,** 22, ದ.ರಾ.ಬೇಂದ್ರೆ ನಗರ, ಬಿ.ಎನ್.ರಸ್ತೆ, ಗುಂಡ್ಲುಪೇಟೆ	1001
26	**ಎ.ಕೆ.ಅಪಸಂಗಿ,** 2487, ಇ. ಬ್ಲಾಕ್, 13ನೇ ಮುಖ್ಯರಸ್ತೆ, 9ನೇ ಬಿ ಅಡ್ಡರಸ್ತೆ, ಸಹಕಾರ ನಗರ, ಬೆಂಗಳೂರು	1000
27	**ಪ್ರವೀಣ್ ಪೂಜೇರ್,** ಗುರುಕುಲ್ ಬಿಲ್ಡಿಂಗ್, ಎಸ್.ವಿ.ರಸ್ತೆ, ಚಿದಂಬರ ನಗರ, ಬೆಳಗಾವಿ	1000
28	**ಸಿ.ಎಸ್.ಸತ್ಯನಾರಾಯಣ,** 112, ಫ್ಲ್ಯಾಟ್ ಎಸ್‌ಎಫ್, ಶ್ರವಂತಿ ಕಂಫರ್ಟ್ಸ್, 20ನೇ ಮುಖ್ಯರಸ್ತೆ, ಜೆ.ಪಿ.ನಗರ, 2ನೇಹಂತ, ಬೆಂಗಳೂರು	1000
29	**ಡಾ.ಎಚ್.ಬಿ.ಚಂದ್ರಶೇಖರ್,** ಹಿರಿಯ ಸಹಾಯಕ ನಿರ್ದೇಶಕ, ಡಿಎಸ್‌ಇಆರ್‌ಟಿ, ಬೆಂಗಳೂರು	1000
30	**ಈರಣ್ಣ ಬಸವಣ್ಣೆಪ್ಪ ಎಲಿ,** ಎಲಿ ಚಾವೆಲ್, ಗುಪ್ತಾ ಹೈಸ್ಕೂಲ್ ಸಮೀಪ, ಹೊಸನಗರ ಪೋಸ್ಟ್, ರಾಣೆಬೆನ್ನೂರು, ಹಾವೇರಿ	1000
	ಒಟ್ಟು	1,11,499

* ಈಗಾಗಲೇ ಹಣ ನೀಡಿರುವ ದಾನಿಗಳು ತಮ್ಮ ಹೆಸರು, ವಿಳಾಸ, ಮೊತ್ತದ ವಿವರವನ್ನು dept.finc@printersmysore.co.in ಇ–ಮೇಲ್‌ಗೆ ಕಳುಹಿಸಲು ವಿನಂತಿ.

'ಮುಷ್ಕರ ನಷ್ಟ ವಸೂಲಿಗೆ ಸಾರಿಗೆ ನೌಕರರ ವಿರುದ್ಧ ದಾವೆ'

ಬೆಂಗಳೂರು: ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ನೌಕರರು ನಡೆಸಿದ ಮುಷ್ಕರದಿಂದ ಆಗಿರುವ ನಷ್ಟ ವಸೂಲಿ ಸಂಬಂಧ ಸಿಟಿ ಸಿವಿಲ್ ಕೋರ್ಟ್‌ನಲ್ಲಿ ದಾವೆ ಹೂಡಲಾಗಿದೆ ಎಂದು ಸಾರಿಗೆ ಸಂಸ್ಥೆಗಳ ಪರ ವಕೀಲರು ಹೈಕೋರ್ಟ್‌ಗೆ ಮಾಹಿತಿ ನೀಡಿದ್ದಾರೆ.

ನಷ್ಟವನ್ನು ನೌಕರರಿಂದಲೇ ವಸೂಲಿ ಮಾಡುವಂತೆ ಕೋರಿ ಸಮಪರ್ಣಾ ಸಂಸ್ಥೆ ಸಲ್ಲಿಸಿದ್ದ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತು.

ಆಕ್ಷೇಪಣೆ ಸಲ್ಲಿಸಿದ ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ಪರ ವಕೀಲರು, '3,676 ನೌಕರರು ಮುಷ್ಕರದಲ್ಲಿ ಭಾಗಿಯಾಗಿದ್ದು, 23 ಬಸ್‌ಗಳಿಗೆ ಹಾನಿಯಾಗಿದೆ. 12 ಎಫ್‌ಐಆರ್ ಮತ್ತು 11 ಎನ್‌ಸಿಆರ್ ದಾಖಲಾಗಿವೆ. ₹2.66 ಕೋಟಿ ನಷ್ಟವಾಗಿದ್ದು, ವಸೂಲು ಮಾಡಲು ದಾವೆ ಹೂಡಲಾಗಿದೆ' ಎಂದು ವಿವರಿಸಿದರು.

'ಒಟ್ಟು 2,494 ನೌಕರರನ್ನು ಅಮಾನತು ಮಾಡಲಾಗಿತ್ತು. 2,421 ನೌಕರರ ಅಮಾನತು ಆದೇಶ ಹಿಂಪಡೆಯಲಾಗಿದೆ. ಮುಷ್ಕರದಲ್ಲಿ ಭಾಗಿಯಾದ ನೌಕರರ ವಿರುದ್ಧ ಶಿಸ್ತು ಕ್ರಮ ಪ್ರಕ್ರಿಯೆ ಮುಂದುವರಿಸಲಾಗಿದೆ' ಎಂದು ತಿಳಿಸಿದರು. ಆಕ್ಷೇಪಣೆ ಪರಿಶೀಲಿಸಿದ ಪೀಠ, ಅರ್ಜಿ ಇತ್ಯರ್ಥಪಡಿಸಿತು.

ಕೋವಿಡ್: ನೆಲ ಕಚ್ಚಿದ ಹೋಟೆಲ್ ಉದ್ಯಮ • ಒಂದೂವರೆ ವರ್ಷ ಕಳೆದರೂ ಹಳಿಗೆ ಬಾರದ ಬದುಕು

ಕಾರ್ಮಿಕ, ಮಾಲೀಕ ಇಬ್ಬರೂ ಕಂಗಾಲು

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ಕೋವಿಡ್ ಬಿಕ್ಕಟ್ಟಿನ ಹೊಡೆತಕ್ಕೆ ಸಿಲುಕಿ ರಾಜ್ಯ ಹೋಟೆಲ್ ಉದ್ಯಮ ನಲುಗಿಹೋಗಿದೆ. ಲಕ್ಷಾಂತರ ಮಂದಿ ಉದ್ಯೋಗ ಕಳೆದುಕೊಂಡು ಬೀದಿ ಪಾಲಾಗಿದ್ದರೆ, ಸಾವಿರಾರು ಹೋಟೆಲ್ ಮಾಲೀಕರು ನಷ್ಟದ ಭಾರ ತಾಳಲಾರದೇ ತಾವು ಕಟ್ಟಿದ ಸಂಸ್ಥೆಗಳ ಬಾಗಿಲು ಮುಚ್ಚಿ ನೇಪಥ್ಯಕ್ಕೆ ಸೇರಿದ್ದಾರೆ. ಕೋವಿಡ್ ಸಾಂಕ್ರಾಮಿಕ ಹೋಟೆಲ್ ಕಾರ್ಮಿಕರು ಮತ್ತು ಮಾಲೀಕರು ಇಬ್ಬರ ನೆಮ್ಮದಿಯನ್ನೂ ಏಕಕಾಲಕ್ಕೆ ಕಿತ್ತುಕೊಂಡಿದೆ.

ರಾಜ್ಯದ ವಿವಿಧೆಡೆಯ ಪಬ್‌ಗಳು ಮತ್ತು ಕೆಲವು ಐಷಾರಾಮಿ ರೆಸ್ಟೋರೆಂಟ್‌ಗಳು ಇನ್ನೂ ಬಾಗಿಲು ತೆರೆದಿಲ್ಲ. ಬಾರ್ ಮತ್ತು ರೆಸ್ಟೋರೆಂಟ್‌ಗಳಲ್ಲೂ ಸಮಯದ ಮಿತಿ, ರಾತ್ರಿ ಕರ್ಫ್ಯೂ ಮತ್ತಿತರ ಕಾರಣಗಳಿಂದ ವಹಿವಾಟು ಕುಸಿದಿದೆ. ವಸತಿ ವ್ಯವಸ್ಥೆ ಇರುವ ಐಷಾರಾಮಿ ಹೋಟೆಲ್‌ಗಳತ್ತ ಗ್ರಾಹಕರು ಪೂರ್ಣ ಪ್ರಮಾಣದಲ್ಲಿ ಮುಖ ಮಾಡಿಲ್ಲ. ಈ ಎಲ್ಲವೂ ಹೋಟೆಲ್ ಉದ್ಯಮದ ಭವಿಷ್ಯವನ್ನೇ ಇಕ್ಕಟ್ಟಿನಲ್ಲಿ ಸಿಲುಕಿಸಿವೆ.

ರಾಜ್ಯದ ಜನರಷ್ಟೇ ಅಲ್ಲ, ಒಡಿಶಾ, ಬಿಹಾರ, ಅಸ್ಸಾಂ ಸೇರಿದಂತೆ ಉತ್ತರ ಭಾರತದ ಹಲವು ರಾಜ್ಯಗಳ ಜನರು ಕರ್ನಾಟಕದ ಹೋಟೆಲ್ ಉದ್ಯಮದಲ್ಲಿ ದುಡಿಯುತ್ತಿದ್ದರು. ನೇಪಾಳದಿಂದಲೂ ಇಲ್ಲಿಗೆ ನುರಿತ ಬಾಣಸಿಗರು, ಸಹಾಯಕರು ಬರುತ್ತಿದ್ದರು. ಈಗ ಇರುವ ಕಾರ್ಮಿಕರಿಗೇ ಕೈತುಂಬಾ ಕೆಲಸ ನೀಡಲಾಗದ ಸ್ಥಿತಿಗೆ ಹೋಟೆಲ್ ಮಾಲೀಕರು ತಲುಪಿದ್ದಾರೆ.

ಕೋವಿಡ್ ಮೊದಲ ಅಲೆ ಆರಂಭವಾಗುತ್ತಿದ್ದಂತೆ ಸ್ವಗ್ರಾಮಗಳಿಗೆ ಮರಳಿದ ಹೋಟೆಲ್ ಕಾರ್ಮಿಕರ ಪೈಕಿ ಅರ್ಧದಷ್ಟು ಮಂದಿ ಇನ್ನೂ ಮರಳಿಲ್ಲ.

ಅಂಕಿ-ಅಂಶಗಳು

60,000 ರಾಜ್ಯದಲ್ಲಿ ಒಟ್ಟು ಹೋಟೆಲ್‌ಗಳು (ನೋಂದಾಯಿತ)

24,000 ಬೆಂಗಳೂರಿನಲ್ಲಿ ಒಟ್ಟು ಹೋಟೆಲ್‌ಗಳು (ನೋಂದಾಯಿತ)

ಅಂದಾಜು **75** ಲಕ್ಷ ಹೋಟೆಲ್ ಉದ್ಯಮದ ಕಾರ್ಮಿಕರ ಸಂಖ್ಯೆ

ಪಿ.ಸಿ. ರಾವ್

ಚಂದ್ರಶೇಖರ್ ಶೆಟ್ಟಿ

ಹೋಟೆಲ್‌ಗಳು ಆರಂಭವಾಗಿದ್ದರೂ ಹೆಚ್ಚು ವೇತನ ಬಯಸುವ ಕಾರ್ಮಿಕರಿಗೆ ಮತ್ತೆ ಉದ್ಯೋಗ ನೀಡುವ ಸ್ಥಿತಿಯಲ್ಲಿ ಮಾಲೀಕರು ಉಳಿದಿಲ್ಲ. ಹೀಗಾಗಿ ಈ ಉದ್ಯಮವನ್ನೇ ನೆಚ್ಚಿಕೊಂಡು ಬದುಕು ಕಟ್ಟಿಕೊಂಡಿದ್ದ ಸಾವಿರಾರು ಮಂದಿ ಈಗ ದುಡಿಮೆಯ ಆಸರೆಯೇ ಇಲ್ಲದೆ ಸಂಕಷ್ಟಕ್ಕೆ ಸಿಲುಕಿದ್ದಾರೆ.

ದಿಕ್ಕು ತೋಚದಂತಹ ಸ್ಥಿತಿ: 'ಬೆಂಗಳೂರಿನಲ್ಲಿ ಅಂತರರಾಷ್ಟ್ರೀಯ ಹೋಟೆಲ್ ಸಮೂಹವೊಂದರಲ್ಲಿ ಮಾರುಕಟ್ಟೆ ವಿಭಾಗದ ಸಹ ನಿರ್ದೇಶಕನ ಹುದ್ದೆಯಲ್ಲಿದ್ದೆ. ಸಣ್ಣ ನೌಕರಿಯಿಂದ ಹಂತ ಹಂತವಾಗಿ ಮೇಲಕ್ಕೆ ಹೋಗಿದ್ದೆ. ತಿಂಗಳಿಗೆ ವೇತನ ಮತ್ತು ಭತ್ಯೆ ಸೇರಿ ₹ 1ಲಕ್ಷ ಸಿಗುತ್ತಿತ್ತು. ಆದರೆ, 2020ರ ಲಾಕ್‌ಡೌನ್ ಬಳಿಕ ಒಂದು ದಿನ ಕೆಲಸದಿಂದ ಕಿತ್ತು ಹಾಕಿದರು. ನನ್ನಂತೆಯೇ ಹೋಟೆಲ್ ಉದ್ಯಮದಲ್ಲಿದ್ದ ಹತ್ತಾರು ಸಾವಿರ ಮಂದಿ ಈ ರೀತಿಯಲ್ಲೇ ಉದ್ಯೋಗ ಕಳೆದುಕೊಂಡರು' ಎಂದು ಕೋವಿಡ್ ಸೃಷ್ಟಿಸಿದ ಸಂಕಷ್ಟವನ್ನು ಬಿಚ್ಚಿಡುತ್ತಾರೆ ತೀರ್ಥಹಳ್ಳಿ ತಾಲ್ಲೂಕಿನ ಸಣ್ಣ ಹಳ್ಳಿಯೊಂದರ ಯುವಕ ಎಚ್‌.ಜಿ. ಸಂತೋಷ್ ಕುಮಾರ್.

'ಲಕ್ಷ ರೂಪಾಯಿ ಸಂಬಳದ ಕೆಲಸ ಹೋದ ಬಳಿಕ ಎಲ್ಲಿಯೂ ಕೆಲಸ ಸಿಗಲಿಲ್ಲ. ಕಾರಿನ ಸಾಲ, ಮನೆ ನಿರ್ವಹಣೆ ಸೇರಿದಂತೆ ದುಬಾರಿ ಖರ್ಚು ಇತ್ತು. ಮುಂದೇನು ಎಂಬುದು ಅರಿಯದಂತೆ ಆಗಿತ್ತು. ಗೂಡ್ಸ್ ಆಟೊ ಖರೀದಿಸಿ ಕೋಳಿ ಮೊಟ್ಟೆ ವ್ಯಾಪಾರ ಆರಂಭಿಸಿ, ಅದರಲ್ಲೇ ನಿಧಾನಕ್ಕೆ ಸುಧಾರಿಸಿಕೊಳ್ಳುತ್ತಿದ್ದೇನೆ' ಎಂದು ನೋವು ನುಂಗಿಕೊಂಡೇ ಹೇಳಿದರು.

ಇದು ಒಬ್ಬಿಬ್ಬರ ಕತೆಯಲ್ಲ. ರಾಜ್ಯದ ಮೂಲೆ ಮೂಲೆಯ ಹಳ್ಳಿಗಳಲ್ಲಿ ಇಂತಹ ಹತ್ತಾರು ಮಂದಿ ಕಾಣಸಿಗುತ್ತಾರೆ. ಕೆಲವರು ಪರ್ಯಾಯ ಉದ್ಯೋಗ ಕಂಡುಕೊಂಡಿದ್ದರೆ, ಬಹುಪಾಲು ಮಂದಿ ಈಗಲೂ ನಿರುದ್ಯೋಗಿಗಳಾಗಿಯೇ ಉಳಿದಿದ್ದಾರೆ. ಮೊದಲ ಲಾಕ್‌ಡೌನ್ ಮುಗಿದ ಬಳಿಕ ಮತ್ತೆ ನಗರಗಳಿಗೆ ಮರಳಿದ್ದ ಕೆಲವರು, 2021ರ ಲಾಕ್‌ಡೌನ್‌ನಲ್ಲಿ ಮತ್ತೆ ನೌಕರಿ ಕಳೆದುಕೊಂಡಿದ್ದಾರೆ. ಅವರ ಬದುಕು ಮತ್ತೆ ಹಳಿಗೆ ಬರಲಾರದಂತಹ ಸ್ಥಿತಿಗೆ ತಲುಪಿದೆ.

ನಷ್ಟದ ಸುಳಿಯಲ್ಲಿ ಮಾಲೀಕರು: 'ರಾಜ್ಯದಲ್ಲಿ ನೋಂದಾಯಿತ ಹೋಟೆಲ್‌ಗಳು, ನೋಂದಣಿ ಆಗದ ಉದ್ದಿಮೆಗಳು, ಸಣ್ಣ ಹೋಟೆಲ್‌ಗಳನ್ನೂ ಗಣನೆಗೆ ತೆಗೆದುಕೊಂಡರೆ 50 ಲಕ್ಷಕ್ಕೂ ಹೆಚ್ಚು ಮಂದಿ ಹೋಟೆಲ್ ಉದ್ಯಮದಲ್ಲಿನ ದುಡಿಮೆಯನ್ನೇ ನೆಚ್ಚಿಕೊಂಡಿದ್ದಾರೆ. ಕೋವಿಡ್‌ನಿಂದ ಹೋಟೆಲ್ ಮುಚ್ಚುವ ಸ್ಥಿತಿ ಬಂದಿರುವಾಗ ಕಾರ್ಮಿಕರ ಗೋಳು ಕೇಳಲು ಯಾರಿದ್ದಾರೆ' ಎಂದು ಹೇಳುತ್ತಾರೆ ಕರ್ನಾಟಕ ಕಾರ್ಮಿಕ ಪರಿಷತ್‌ನ ಹೋಟೆಲ್ ವಿಭಾಗದ ಅಧ್ಯಕ್ಷರೂ ಆಗಿರುವ ಚಂದ್ರಶೇಖರ್ ಶೆಟ್ಟಿ.

'ಹೋಟೆಲ್ ಉದ್ಯಮ ತೀವ್ರವಾದ ಬಿಕ್ಕಟ್ಟಿನಲ್ಲಿದೆ. ಬೆಂಗಳೂರು ನಗರದಲ್ಲೇ 1,000ಕ್ಕೂ ಹೆಚ್ಚು ಹೋಟೆಲ್‌ಗಳು ಬಂದ್ ಆಗಿವೆ. ಇನ್ನೂ 500 ಹೋಟೆಲ್‌ಗಳ ಭವಿಷ್ಯ ತೂಗುಯ್ಯಾಲೆಯಲ್ಲಿದೆ. ಬಹುತೇಕ ಹೋಟೆಲ್‌ಗಳ ವಹಿವಾಟು ಹಿಂದಿನ ವರ್ಷಗಳಿಗೆ ಹೋಲಿಸಿದರೆ ಶೇಕಡ 50ರಷ್ಟನ್ನೂ ಮುಟ್ಟಿಲ್ಲ. ಹೋಟೆಲ್ ಮಾಲೀಕರಿಗಾಗಲಿ, ಕಾರ್ಮಿಕರಿಗಾಗಲಿ ಸರ್ಕಾರದಿಂದ ಬಿಡಿಗಾಸಿನ ನೆರವೂ ಸಿಕ್ಕಿಲ್ಲ' ಎನ್ನುತ್ತಾರೆ ಬೆಂಗಳೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಪಿ.ಸಿ. ರಾವ್.

ಕೋವಿಡ್‌ನಿಂದ ಬಾರ್ ಮತ್ತು ರೆಸ್ಟೋರೆಂಟ್‌ಗಳ ವಹಿವಾಟೂ ಕುಸಿದಿದೆ. ಕೆಲವೆಡೆ ಶುಲ್ಕ ಪಾವತಿಸಲಾಗದೇ ಸನ್ನದು ನವೀಕರಿಸದ ಮದ್ಯದಂಗಡಿ ಮಾಲೀಕರು ಇದ್ದಾರೆ.

ಗೋವಿಂದರಾಜ ಹೆಗ್ಡೆ, ಪ್ರಧಾನ ಕಾರ್ಯದರ್ಶಿ, ಕರ್ನಾಟಕ ಮದ್ಯ ಮಾರಾಟಗಾರರ ಒಕ್ಕೂಟ

ಎಲ್ಲ ಹಂತದ ಹೋಟೆಲ್‌ಗಳಲ್ಲಿ ಶೇಕಡ 40ರಷ್ಟು ಕಾರ್ಮಿಕರನ್ನು ಕಿತ್ತು ಹಾಕಲಾಗಿದೆ. ಉಳಿಸಿಕೊಂಡ ನೌಕರರ ವೇತನವನ್ನು ದೊಡ್ಡ ಪ್ರಮಾಣದಲ್ಲಿ ಕಡಿತಗೊಳಿಸಲಾಗಿದೆ.

ಎಚ್‌.ಜಿ. ಸಂತೋಷ್ ಕುಮಾರ್, ಉದ್ಯೋಗ ಕಳೆದುಕೊಂಡ ಯುವಕ

ಬದುಕು ಬೀದಿಗೆ ತಂದ ಕೋವಿಡ್

ನೆಲಕ್ಕೆ ಬಿದ್ದಾಗ ಕೈ ಹಿಡಿಯುವವರಿಲ್ಲ

ಶೇಷಾದ್ರಿ ರಾವ್ ಆರ್. ಸಾಹೇಬ್

'ವರ್ಷಗಳ ಕಾಲ ಪರಿಶ್ರಮ ವಹಿಸಿ ಕಟ್ಟಿದ ನಮ್ಮ ಉದ್ಯಮಗಳು ಕೋವಿಡ್ ಕಾರಣದಿಂದ ನೆಲ ಕಚ್ಚಿವೆ. ಕಾರ್ಮಿಕರ ಸಂಖ್ಯೆಯನ್ನು 500ರಿಂದ 220ಕ್ಕೆ ಇಳಿಸಿದ್ದೇವೆ. ಇಂತಹ ಸ್ಥಿತಿಯಲ್ಲಿ ನೆಲಕ್ಕೆ ಬಿದ್ದ ಉದ್ಯಮಿಗಳನ್ನು ಕೈಹಿಡಿಯಲು ಸರ್ಕಾರ ಯಾವ ಪ್ರಯತ್ನವನ್ನೂ ಮಾಡುತ್ತಿಲ್ಲ' ಎಂದು ನೋವು ತೋಡಿಕೊಳ್ಳುತ್ತಾರೆ ಉಡುಪಿ ರುಚಿ ಸಮೂಹದ ಅಧ್ಯಕ್ಷ ಶೇಷಾದ್ರಿ ರಾವ್ ಆರ್. ಸಾಹೇಬ್.

'ಕೋವಿಡ್‌ನಿಂದ ವಹಿವಾಟು ಗಣನೀಯವಾಗಿ ಕುಸಿದಿದೆ. ಆದರೆ, ಬಾಡಿಗೆ, ತೆರಿಗೆ, ವಿದ್ಯುತ್ ಶುಲ್ಕ, ವೇತನ ಯಾವುದೂ ಕಡಿಮೆಯಾಗಿಲ್ಲ. ತೆರಿಗೆಯನ್ನು ಸುಲಭ ಕಂತುಗಳಲ್ಲಿ ಪಾವತಿಸುವುದಕ್ಕೆ ಮತ್ತು ಸಾಲ ಮರುಪಾವತಿಗಾಗಿ ಆಸ್ತಿ ಮಾರುವ ಉದ್ಯಮಿಗಳ ಮೇಲೆ ಮೇಲುತೆರಿಗೆ ವಿಧಿಸಬಾರದು ಎಂಬ ನಮ್ಮ ಆಗ್ರಹಕ್ಕೆ ಯಾರೊಬ್ಬರೂ ಕಿವಿಗೊಡುತ್ತಿಲ್ಲ' ಎಂಬುದು ಅವರ ಬೇಸರ.

'ಅನ್ನದಾತರು ಅನಾಥ'

ಚಂದ್ರಶೇಖರ್ ಹೆಬ್ಬಾರ್

'ಹೋಟೆಲ್ ಉದ್ಯಮ ಹಳೆಯ ಕಾರಿನಂತಾಗಿದೆ. ಮುಚ್ಚಿಹೋದ ಹೋಟೆಲ್‌ಗಳನ್ನು ಕೊಳ್ಳುವವರೂ ಇಲ್ಲ. ಹೋಟೆಲ್ ಮಾಲೀಕರೇ ನಷ್ಟದ ಸುಳಿಯಲ್ಲಿ ಸಿಲುಕಿ ನರಳುತ್ತಿರುವುದರಿಂದ ಅನ್ನದಾತರೇ ಅನಾಥರಾದಂತಹ ಸ್ಥಿತಿ ನಿರ್ಮಾಣವಾಗಿದೆ' ಎನ್ನುತ್ತಾರೆ ಕರ್ನಾಟಕ ಪ್ರದೇಶ ಹೋಟೆಲ್ ಮತ್ತು ರೆಸ್ಟೋರೆಂಟ್ ಮಾಲೀಕರ ಸಂಘದ ಅಧ್ಯಕ್ಷ ಚಂದ್ರಶೇಖರ್ ಹೆಬ್ಬಾರ್.

'ಕೋವಿಡ್ ನಿಯಂತ್ರಣದ ಹೆಸರಿನಲ್ಲಿ ಹೆಚ್ಚು ಸಮಸ್ಯೆ ಅನುಭವಿಸಿದ್ದೇ ಹೋಟೆಲ್ ಮತ್ತು ರೆಸ್ಟೋರೆಂಟ್ ಮಾಲೀಕರು ಹಾಗೂ ಕಾರ್ಮಿಕರು. ಈಗಲೂ ರಾತ್ರಿ ಕರ್ಫ್ಯೂ ಹೆಸರಿನಲ್ಲಿ ಹೋಟೆಲ್ ಉದ್ಯಮಕ್ಕೆ ಅಡಚಣೆ ಮಾಡಲಾಗುತ್ತಿದೆ. ಅತ್ತ ನೆರವೂ ಇಲ್ಲ, ಇತ್ತ ಸುಗಮ ವಹಿವಾಟಿಗೆ ಅವಕಾಶವೂ ಇಲ್ಲ. ಇದೇ ಸ್ಥಿತಿ ಮುಂದುವರಿದರೆ ಇನ್ನಷ್ಟು ಹೋಟೆಲ್‌ಗಳು ಮುಚ್ಚುತ್ತವೆ' ಎಂದರು.

ಬಹು ಮಾಧ್ಯಮ ಪ್ರಜಾವಾಣಿ www.prajavani.net LIVE

Prajavani.net Prajavani Prajavani

ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಗ್ರೀನ್ ಟಾಕ್

ಕಾಂಕ್ರೀಟ್ ನಗರಿ ಮಧ್ಯೆ ಕಾಡು

https://bit.ly/3nxGQEi

ಪಾಡ್‌ಕಾಸ್ಟ್: ಈದಿನದ ವಿಶೇಷ: ಸಂಜೆ 4 **ಝಣ ಝಣ ಕಾಂಚಾಣ**, ಪ್ರತೀ ದಿನ: ಬೆಳಿಗ್ಗೆ 7 **ವಚನವಾಣಿ**, ಬೆ. 7.30 **ದಿನದ ಸೂಕ್ತಿ**, ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 **ಪ್ರಜಾವಾಣಿ ವಾರ್ತೆ ಬುಲೆಟಿನ್**, ಬೆಳಿಗ್ಗೆ 9.30 **ಸಂಪಾದಕೀಯ**, ಬೆಳಿಗ್ಗೆ 9 **ಪ್ರಚಲಿತ**

ಪ್ರಜಾವಾಣಿ ಕನ್ನಡ ಧ್ವನಿ

ನಾಳೆ

ಪೆಗಾಸಿಸ್ ಗೂಢಚರ್ಯೆ: ಕೇಂದ್ರ ಸರ್ಕಾರದ ನಿಲುವು ಸರಿಯೆ?

ಭಾಗವಹಿಸುವವರು:
ಡಿ.ವಿ.ಗುರುಪ್ರಸಾದ್, ನಿವೃತ್ತ ಡಿಜಿಪಿ.
ರವಿವರ್ಮ ಕುಮಾರ್, ನಿವೃತ್ತ ಅಡ್ವೊಕೇಟ್ ಜನರಲ್.
ಗೋ. ಮಧುಸೂಧನ್, ಮಾಜಿ ಶಾಸಕ, ಬಿಜೆಪಿ.
ಬಿ.ಆರ್. ಮಂಜುನಾಥ್, ಸಾಮಾಜಿಕ ಕಾರ್ಯಕರ್ತ

ಸಂವಾದ ಬೆಳಿಗ್ಗೆ 11ರಿಂದ 12

ಜೊಮ್ಯಾಟೊ ತೊರೆದ ಸಹ ಸಂಸ್ಥಾಪಕ ಗೌರವ್ ಗುಪ್ತಾ

ನವದೆಹಲಿ: ಜೊಮ್ಯಾಟೊ ಕಂಪನಿಯ ಸಹ ಸಂಸ್ಥಾಪಕ ಗೌರವ್ ಗುಪ್ತಾ ಕಂಪನಿಯನ್ನು ತೊರೆದಿದ್ದಾರೆ. ಜುಲೈನಲ್ಲಿ ಕಂಪನಿಯ ಐಪಿಒ ನಿರ್ವಹಣೆಯಲ್ಲಿ ಇವರು ಪ್ರಮುಖ ಪಾತ್ರ ವಹಿಸಿದ್ದರು.

'ನಾನು ನನ್ನ ಜೀವನದಲ್ಲಿ ಹೊಸ ತಿರುವು ಪಡೆಯುತ್ತಿದ್ದೇನೆ ಮತ್ತು ಹೊಸ ಅಧ್ಯಾಯವನ್ನು ಆರಂಭಿಸುತ್ತಿದ್ದೇನೆ. ಜೊಮ್ಯಾಟೊದಲ್ಲಿ ಕಳೆದ ಆರು ವರ್ಷಗಳಲ್ಲಿ ಬಹಳಷ್ಟು ಕಲಿತಿದ್ದೇನೆ. ಜೊಮ್ಯಾಟೊವನ್ನು ಮುಂದಕ್ಕೆ ಕೊಂಡೊಯ್ಯಲು ನಮ್ಮಲ್ಲಿ ಈಗ ಉತ್ತಮ ತಂಡವಿದೆ. ನನ್ನ ಪ್ರಯಾಣದಲ್ಲಿ ನಾನು ಪರ್ಯಾಯ ಮಾರ್ಗವನ್ನು ತೆಗೆದುಕೊಳ್ಳುವ ಸಮಯ ಬಂದಿದೆ' ಎಂದು ಅವರು ಕಂಪನಿಯ ಸಿಬ್ಬಂದಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

ಕ್ವಾಡ್ ರಾಷ್ಟ್ರಗಳ ಸಭೆಯಲ್ಲಿ ಮೋದಿ ಭಾಗಿ

ನವದೆಹಲಿ (ಪಿಟಿಐ): ಪ್ರಧಾನಮಂತ್ರಿ ಮೋದಿ ಅವರು ಮುಂದಿನ ವಾರ ಅಮೆರಿಕಕ್ಕೆ ಭೇಟಿ ನೀಡಲಿದ್ದು, ವಾಷಿಂಗ್ಟನ್‌ನಲ್ಲಿ ಸೆ. 24ರಂದು ನಡೆಯಲಿರುವ ಕ್ವಾಡ್ ರಾಷ್ಟ್ರಗಳ ಶೃಂಗಸಭೆಯಲ್ಲಿ ಭಾಗವಹಿಸಲಿದ್ದಾರೆ. ಅಫ್ಗಾನಿಸ್ತಾನ ಬಿಕ್ಕಟ್ಟು, ಕೋವಿಡ್ ಸಂಕಷ್ಟ ಸೇರಿದಂತೆ ವಿವಿಧ ವಿಷಯಗಳು ಸಭೆಯಲ್ಲಿ ಚರ್ಚೆಯಾಗುವ ನಿರೀಕ್ಷೆಯಿದೆ.

ಜಾಟ್ ದೊರೆ ಹೆಸರಲ್ಲಿ ವಿಶ್ವವಿದ್ಯಾಲಯ

ಉ.ಪ್ರ ವಿಧಾನಸಭೆ ಚುನಾವಣೆ ಹೊಸ್ತಿಲಲ್ಲಿ ಕ್ರಮ: ಪ್ರತಿಭಟನೆನಿರತ ರೈತರ ಮನವೊಲಿಕೆ ಯತ್ನ

ಪ್ರಜಾವಾಣಿ ವಾರ್ತೆ

ಲಖನೌ: ಜಾಟ್ ಸಮುದಾಯದ ದೊರೆ ರಾಜಾ ಮಹೇಂದ್ರ ಪ್ರತಾಪ್ ಸಿಂಗ್ ಅವರ ಗುಣಗಾನ ಮಾಡಿದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ರಾಜಕೀಯವಾಗಿ ಪ್ರಭಾವಶಾಲಿ ಎನಿಸಿರುವ ಸಮುದಾಯದ ಕೋಪ ನಿವಾರಿಸುವ ಯತ್ನ ಮಾಡಿದ್ದಾರೆ.

ರಾಜಾ ಮಹೇಂದ್ರ ಪ್ರತಾಪ್ ಸಿಂಗ್ ವಿಶ್ವವಿದ್ಯಾಲಯಕ್ಕೆ ಮಂಗಳವಾರ ಶಂಕುಸ್ಥಾಪನೆ ನೆರವೇರಿಸಿದ ಪ್ರಧಾನಿ, ಉತ್ತರ ಪ್ರದೇಶದ ಅಲಿಗಡ ಪಟ್ಟಣದಲ್ಲಿ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಸ್ವಾತಂತ್ರ್ಯ ಸಂಗ್ರಾಮಕ್ಕೆ ರಾಜಾ ಮಹೇಂದ್ರ ಪ್ರತಾಪ್ ಸಿಂಗ್ ಅವರ ಕೊಡುಗೆ ಸ್ಮರಿಸಿದ ಪ್ರಧಾನಿ, ಅವರ ಆದರ್ಶಗಳನ್ನು ಯುವಕರು ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಮಹೇಂದ್ರ ಪ್ರತಾಪ್ ಸಿಂಗ್ ಅವರು ರಾಜ್ಯದ ಪಶ್ಚಿಮ ಭಾಗದ ಜಾಟ್ ಸಮುದಾಯದ ಅತ್ಯಂತ ಗೌರವಾನ್ವಿತ ನಾಯಕ. ಅವರ ಹೆಸರಿನಲ್ಲಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ನಿರ್ಧಾರವನ್ನು ಸಮುದಾಯದಲ್ಲಿನ ಕೋಪವನ್ನು ತಗ್ಗಿಸುವ ಪ್ರಯತ್ನವೆಂದು ಪರಿಗಣಿಸಲಾಗಿದೆ.

'ಸ್ವಾತಂತ್ರ್ಯ ಹೋರಾಟದಲ್ಲಿ ಸಾಕಷ್ಟು ಕೊಡುಗೆ ನೀಡಿದ ಅನೇಕರು ಇದ್ದಾರೆ. ಆದರೆ ಅವರ ಬಗೆಗಿನ ಮಾಹಿತಿ ಅಸ್ಪಷ್ಟವಾಗಿದೆ. ಹಿಂದೆ ಮಾಡಿದ ತಪ್ಪುಗಳಿಂದಾಗಿ ಅನೇಕ ತಲೆಮಾರುಗಳಿಗೆ ಅವರ ಬಗ್ಗೆ ತಿಳಿದುಕೊಳ್ಳಲು ಸಾಧ್ಯವಾಗಲಿಲ್ಲ. 20ನೇ ಶತಮಾನದ ತಪ್ಪುಗಳನ್ನು 21ನೇ ಶತಮಾನದಲ್ಲಿ ಸರಿಪಡಿಸಲಾಗುತ್ತಿದೆ' ಎಂದು ಮೋದಿ ಹೇಳಿದರು.

ಪ್ರಧಾನಿ ಅವರು ಜಾಟರ ದೊರೆಯನ್ನು ಶ್ಲಾಘಿಸಿದ್ದು ಹಾಗೂ ಅವರ ಕೊಡುಗೆಯನ್ನು ಸ್ಮರಿಸಿದ್ದನ್ನು ಗಮನಿಸಿದರೆ, ಜಾಟ್ ಸಮುದಾಯದವರೇ ಮುಂಚೂಣಿಯಲ್ಲಿರುವ ರೈತರ ಪ್ರತಿಭಟನೆಯ ಬಗ್ಗೆ ಬಿಜೆಪಿಗೆ ಭೀತಿ ಇದ್ದಂತೆ ತೋರುತ್ತದೆ ಎಂದು ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ಭಾರತೀಯ ಕಿಸಾನ್ ಯೂನಿಯನ್‌ನ ಪದಾಧಿಕಾರಿಗಳು ಹಾಗೂ ಪ್ರಮುಖ ರೈತ ನಾಯಕರು ಜಾಟ್ ಸಮುದಾಯದವರೇ ಆಗಿದ್ದಾರೆ. ಮುಂಬರುವ ಉತ್ತರ ಪ್ರದೇಶ, ಉತ್ತರಾಖಂಡ ಮತ್ತು ಪಂಜಾಬ್ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ವಿರುದ್ಧ ಪ್ರಚಾರ ನಡೆಸುವುದಾಗಿ ಈಗಾಗಲೇ ರೈತ ಸಂಘಟನೆಗಳು ಎಚ್ಚರಿಸಿವೆ.

ಮಹೇಂದ್ರ ಸಿಂಗ್ ದಾನ ಮಾಡಿದ ಭೂಮಿಯಲ್ಲಿ ಅಲಿಗಡ ಮುಸ್ಲಿಂ ವಿಶ್ವವಿದ್ಯಾಲಯ (ಎಎಂಯು) ನಿರ್ಮಿಸಲಾಗಿದೆ ಎಂದು ಹೇಳಲಾಗಿದೆ. ವಿಶ್ವವಿದ್ಯಾಲಯಕ್ಕೆ ಮರುನಾಮಕರಣ ಮಾಡಬೇಕು ಎಂದಿ ಹಿಂದೂಪರ ಸಂಘಟನೆಗಳು ಹಾಗೂ ಬಿಜೆಪಿ ನಾಯಕರು ಒತ್ತಾಯಿಸುತ್ತಿದ್ದಾರೆ.

ಅಲಿಗಡ ಜಿಲ್ಲೆಯ ಲೋಧಾ ಗ್ರಾಮ ಮತ್ತು ಮುಸೇಪುರ್ ಕರೀಮ್ ಜರೌಲಿ ಗ್ರಾಮಗಳ ವ್ಯಾಪ್ತಿಯ 92 ಎಕರೆ ಪ್ರದೇಶದಲ್ಲಿ ವಿಶ್ವವಿದ್ಯಾಲಯ ತಲೆ ಎತ್ತಲಿದೆ. ಮಹೇಂದ್ರ ಸಿಂಗ್ ಸ್ಮರಣೆ ಹಾಗೂ ಗೌರವಾರ್ಥ ರಾಜ್ಯ ಸರ್ಕಾರವು ಇದನ್ನು ನಿರ್ಮಿಸುತ್ತಿದೆ.

ಉತ್ತರ ಪ್ರದೇಶ ರಕ್ಷಣಾ ಕೈಗಾರಿಕಾ ಕಾರಿಡಾರ್ ಅನ್ನು ಪ್ರಧಾನಿ ಇದೇ ವೇಳೆ ವೀಕ್ಷಿಸಿದರು. ರಕ್ಷಣಾ ಸಲಕರಣೆಗಳ ಆಮದುದಾರ ಆಗಿದ್ದ ಭಾರತ ಈಗ ಪ್ರಮುಖ ರಫ್ತುದಾರ ದೇಶವಾಗಿದೆ ಎಂದು ಹೇಳಿದರು.

ವಿಶ್ವವಿದ್ಯಾಲಯದ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ಜನರತ್ತ ಕೈಬೀಸಿದರು. ಉತ್ತರ ಪ್ರದೇಶ ರಾಜ್ಯಪಾಲೆ ಆನಂದಿಬೆನ್ ಪಟೇಲ್, ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಕಾರ್ಯಕ್ರಮದಲ್ಲಿ ಇದ್ದರು ಪಿಟಿಐ ಚಿತ್ರ

ಉತ್ತರ ಪ್ರದೇಶದ ಅಪರಾಧಗಳ ಬಗ್ಗೆ ಸಚಿವಾಲಯದ ದತ್ತಾಂಶಗಳನ್ನು ಪರಿಶೀಲಿಸಿ ಪ್ರಧಾನಿ ಮಾತನಾಡಲಿ

ಅಖಿಲೇಶ್ ಯಾದವ್, ಎಸ್‌ಪಿ ಮುಖ್ಯಸ್ಥ

ಗೂಂಡಾರಾಜ್ಯ ಈಗಿಲ್ಲ: ಯೋಗಿಗೆ ಪ್ರಧಾನಿ ಶ್ಲಾಘನೆ

ರಾಜ್ಯದಲ್ಲಿ ಮಾಫಿಯಾ ಗುಂಪುಗಳನ್ನು ಮಟ್ಟಹಾಕಿ, ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ನೇತೃತ್ವದ ಸರ್ಕಾರ ಯಶಸ್ವಿಯಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಶ್ಲಾಘಿಸಿದರು.

'2017ಕ್ಕೂ ಮುನ್ನ ಉತ್ತರ ಪ್ರದೇಶವನ್ನು ಗ್ಯಾಂಗ್‌ಸ್ಟರ್‌ಗಳು, ಮಾಫಿಯಾ ದೊರೆಗಳು ಆಳುತ್ತಿದ್ದರು. ಅಂತಹವರೆಲ್ಲ ಯೋಗಿ ಸರ್ಕಾರದಲ್ಲಿ ಕಂಬಿ ಹಿಂದಿದ್ದಾರೆ' ಎಂದು ಪ್ರಧಾನಿ ಹೇಳಿದರು.

'ಈ ಮೊದಲು ಹೆಣ್ಣುಮಕ್ಕಳು ಮನೆಯಿಂದ ಹೊರಹೋಗಲು ಭಯಪಡುತ್ತಿದ್ದರು. ಹಲವರು ವಾಸಸ್ಥಾನವನ್ನು ಬದಲಿಸಿದರು. ಆದರೆ ರಾಜ್ಯದ ಪರಿಸ್ಥಿತಿ ಈಗ ಬದಲಾಗಿದೆ' ಎಂದರು.

ತಯಾರಿಕಾ ಉತ್ಪನ್ನಗಳ ಬೆಲೆ ಏರಿಕೆ ಪರಿಣಾಮ

ಐದು ತಿಂಗಳಿನಿಂದ ಎರಡಂಕಿ ಮಟ್ಟದಲ್ಲಿ ಸಗಟು ಹಣದುಬ್ಬರ

ನವದೆಹಲಿ (ಪಿಟಿಐ): ಸಗಟು ದರ ಸೂಚ್ಯಂಕ (ಡಬ್ಲ್ಯುಪಿಐ) ಆಧರಿಸಿದ ಹಣದುಬ್ಬರವು ಆಗಸ್ಟ್‌ನಲ್ಲಿ ಶೇಕಡ 11.39ಕ್ಕೆ ಏರಿಕೆ ಕಂಡಿದೆ. ಇದು ಜುಲೈನಲ್ಲಿ ಶೇ 11.16ರಷ್ಟಿತ್ತು.

ಎರಡು ತಿಂಗಳಿನಿಂದ ಇಳಿಮುಖವಾಗಿದ್ದ ಸಗಟು ಹಣದುಬ್ಬರವು ಆಗಸ್ಟ್‌ನಲ್ಲಿ ಮತ್ತೆ ಏರಿಕೆ ಹಾದಿಗೆ ಮರಳಿದಂತೆ ಆಗಿದೆ. ಅಲ್ಲದೆ, ಸತತ ಐದನೇ ತಿಂಗಳಿನಲ್ಲಿಯೂ ಎರಡಂಕಿ ಮಟ್ಟದಲ್ಲಿಯೇ ಮುಂದುವರಿದಿದೆ. 2020ರ ಆಗಸ್ಟ್‌ನಲ್ಲಿ ಹಣದುಬ್ಬರವು ಶೇ 0.41 ರಷ್ಟಿತ್ತು.

ಆಹಾರ ವಸ್ತುಗಳ ಬೆಲೆ ತಗ್ಗಿದ್ದರೂ ತಯಾರಿಕಾ ವಲಯದ ಉತ್ಪನ್ನಗಳ ಬೆಲೆಯಲ್ಲಿ ಏರಿಕೆ ಕಂಡು ಬಂದಿರುವುದೇ ಆಗಸ್ಟ್‌ನಲ್ಲಿ ಸಗಟು ಹಣದುಬ್ಬರ ಹೆಚ್ಚಾಗಲು ಕಾರಣ. ತಯಾರಿಕಾ ವಲಯದ ಉತ್ಪನ್ನಗಳ ಹಣದುಬ್ಬರ ಪ್ರಮಾಣವು ಜುಲೈನಲ್ಲಿ ಶೇ 11.20ರಷ್ಟು ಇದ್ದಿದ್ದು, ಆಗಸ್ಟ್‌ನಲ್ಲಿ ಶೇ 11.39ಕ್ಕೆ ಏರಿಕೆ ಆಗಿದೆ.

ಆಹಾರೇತರ ಉತ್ಪನ್ನಗಳು, ಖನಿಜ ತೈಲಗಳು, ಕಚ್ಚಾ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ, ಆಹಾರ ಉತ್ಪನ್ನಗಳು, ಜವಳಿ, ರಾಸಾಯನಿಕ ಮತ್ತು ರಸಗೊಬ್ಬರ ಉತ್ಪನ್ನಗಳು ಇತ್ಯಾದಿಗಳ ಬೆಲೆಯು ಜುಲೈಗೆ ಹೋಲಿಸಿದರೆ ಆಗಸ್ಟ್‌ನಲ್ಲಿ ಏರಿಕೆ ಆಗಿದೆ. ಹೀಗಾಗಿ ಸಗಟು ಹಣದುಬ್ಬರ ದರ ಹೆಚ್ಚಾಗಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಆಹಾರ ವಸ್ತುಗಳ ಹಣದುಬ್ಬರವು ಸತತ ನಾಲ್ಕನೇ ತಿಂಗಳಿನಲ್ಲಿಯೂ ಇಳಿಕೆ ಕಂಡಿದೆ. ಜುಲೈನಲ್ಲಿ ಶೂನ್ಯ ಮಟ್ಟದಲ್ಲಿ ಇದ್ದಿದ್ದು ಆಗಸ್ಟ್‌ನಲ್ಲಿ ಶೇ (–) 1.29ಕ್ಕೆ ತಲುಪಿದೆ. ಈರುಳ್ಳಿ ಮತ್ತು ಬೇಳೆಕಾಳು ಬೆಲೆ ಹೆಚ್ಚಾಗಿದ್ದೂ ಈ ಇಳಿಕೆ ಆಗಿದೆ ಎಂದು ಪ್ರಕಟಣೆ ಹೇಳಿದೆ. ಈರುಳ್ಳಿ ಹಣದುಬ್ಬರವು ಶೇ 62.78ರಷ್ಟು, ಬೇಳೆಕಾಳುಗಳ ಹಣದುಬ್ಬರ ಶೇ 9.41ರಷ್ಟು ಆಗಿದೆ. ಕಚ್ಚಾ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲದ ಹಣದುಬ್ಬರವು ಶೇ 40.03ರಷ್ಟಾಗಿದೆ.

ಡಬ್ಲ್ಯುಪಿಐ ಹಾದಿ



ಸ್ವಿಫ್ಟ್, ಸಾನೆಟ್ ಮಾರಾಟ ದಾಖಲೆ

ನವದೆಹಲಿ (ಪಿಟಿಐ): ಪ್ರೀಮಿಯಂ ಹ್ಯಾಚ್‌ಬ್ಯಾಕ್ ಕಾರು ಸ್ವಿಫ್ಟ್‌ನ ಒಟ್ಟು ಮಾರಾಟವು 25 ಲಕ್ಷದ ಮೈಲಿಗಲ್ಲು ದಾಟಿದೆ ಎಂದು ಮಾರುತಿ ಸುಜುಕಿ ಇಂಡಿಯಾ ಕಂಪನಿ ಮಂಗಳವಾರ ತಿಳಿಸಿದೆ. ದೇಶದಲ್ಲಿ ಈ ಕಾರು ಬಿಡುಗಡೆ ಆದ 16 ವರ್ಷಗಳಲ್ಲಿ ಈ ಸಾಧನೆ ಆಗಿದೆ ಎಂದು ಹೇಳಿದೆ.

ಹಿಂದಿನ ಹಣಕಾಸು ವರ್ಷದಲ್ಲಿ ಮಾರಾಟದಲ್ಲಿ ಸ್ವಿಫ್ಟ್ ಕಾರು ಮೊದಲ ಸ್ಥಾನ ಪಡೆದಿತ್ತು. ಸ್ವಿಫ್ಟ್ ಮಾದರಿಯು 1.2 ಲೀಟರ್ ಪೆಟ್ರೋಲ್ ಎಂಜಿನ್‌ನೊಂದಿಗೆ ಮ್ಯಾನುಯಲ್ ಮತ್ತು ಆಟೊ ಗಿಯರ್ ಶಿಫ್ಟ್ ಟ್ರಾನ್ಸ್‌ಮಿಷನ್ ಆಯ್ಕೆಗಳಲ್ಲಿ ಲಭ್ಯವಿದೆ.

ಸ್ವಿಫ್ಟ್ ಬಳಸುತ್ತಿರುವವರಲ್ಲಿ ಶೇಕಡಾ 52ಕ್ಕಿಂತ ಹೆಚ್ಚು ಗ್ರಾಹಕರು 35 ವರ್ಷಕ್ಕಿಂತ ಕಡಿಮೆ ವಯಸ್ಸಿನವರು. ಹೊಸ ಯುವ ಗ್ರಾಹಕರ ಬದಲಾಗುತ್ತಿರುವ ಆಕಾಂಕ್ಷೆಗಳನ್ನು ಈಡೇರಿಸಲು ಸ್ವಿಫ್ಟ್ ನಿರಂತರವಾಗಿ ಹೊಸ ವೈಶಿಷ್ಟ್ಯಗಳನ್ನು ಮೈಗೂಡಿಸಿಕೊಳ್ಳುತ್ತಿದೆ ಎಂದು ಕಂಪನಿಯ ಕಾರ್ಯನಿರ್ವಾಹಕ ನಿರ್ದೇಶಕ ಶಶಾಂಕ್ ಶ್ರೀವಾಸ್ತವ ಹೇಳಿದ್ದಾರೆ.

ಕಿಯಾ ಸಾನೆಟ್ ದಾಖಲೆ: ತನ್ನ ಕಾಂಪ್ಯಾಕ್ಟ್ ಎಸ್‌ಯುವಿ 'ಸಾನೆಟ್' ಮಾರುಕಟ್ಟೆಗೆ ಬಿಡುಗಡೆ ಆದ ಒಂದು ವರ್ಷದ ಒಳಗಾಗಿ 1 ಲಕ್ಷದಷ್ಟು ಮಾರಾಟ ಆಗಿದೆ ಎಂದು ಕಿಯಾ ಇಂಡಿಯಾ ಕಂಪನಿ ಮಂಗಳವಾರ ತಿಳಿಸಿದೆ.

ಈ ಅವಧಿಯಲ್ಲಿ ದೇಶದಲ್ಲಿ ಅತಿ ಹೆಚ್ಚು ಮಾರಾಟ ಕಂಡ ಎಸ್‌ಯುವಿಗಳ ಸಾಲಿನಲ್ಲಿ ಸಾನೆಟ್ ನಾಲ್ಕನೇ ಸ್ಥಾನ ಪಡೆದುಕೊಂಡಿದೆ ಎಂದು ಪ್ರಕಟಣೆಯಲ್ಲಿ ಹೇಳಿದೆ. 2020ರ ಸೆಪ್ಟೆಂಬರ್‌ನಲ್ಲಿ ಸಾನೆಟ್ ಬಿಡುಗಡೆ ಮಾಡಲಾಯಿತು. 1.5 ಲೀಟರ್ ಡೀಸೆಲ್ ಎಂಜಿನ್ ಆಟೊಮ್ಯಾಟಿಕ್ ಟ್ರಾನ್ಸ್‌ಮಿಷನ್ ಆಯ್ಕೆ ಇದರಲ್ಲಿದೆ.

ಬಡ್ತಿ ಮೀಸಲು: ಹೊಸ ನೀತಿ ಇಲ್ಲ – ಸುಪ್ರೀಂ ಕೋರ್ಟ್

ಒಂದನೇ ಪುಟದಿಂದ

ಪ್ರಾತಿನಿಧ್ಯದಲ್ಲಿ ಕೊರತೆ, ಆಡಳಿತದ ಒಟ್ಟು ದಕ್ಷತೆಯ ಮೇಲೆ ಪರಿಣಾಮ, ಕೆನೆಪದರವನ್ನು ಹೊರಗೆ ಇರಿಸುವುದು ಮುಂತಾದ ವಿಷಯಗಳನ್ನು ಗಣನೆಗೆ ತೆಗೆದುಕೊಂಡು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಸರ್ಕಾರಿ ನೌಕರರಿಗೆ ಬಡ್ತಿಯಲ್ಲಿ ಮೀಸಲಾತಿಯನ್ನು ನಿರ್ಧರಿಸಬೇಕು ಎಂದು ನಾಗರಾಜ್ ಮತ್ತು ಜರ್ನೈಲ್ ಸಿಂಗ್ ಪ್ರಕರಣದಲ್ಲಿ ಕೋರ್ಟ್ ಹೇಳಿತ್ತು.

ರಾಜ್ಯಗಳಿಗೆ ವಿಶಿಷ್ಟವಾದ ಪ್ರಕರಣಗಳು ಇವೆಯೇ, ಇದ್ದರೆ ಅವುಗಳನ್ನು ಗುರುತಿಸಿ ವಿವರಗಳನ್ನು ಎರಡು ವಾರಗಳಲ್ಲಿ ಸಲ್ಲಿಸಿ ಎಂದು ರಾಜ್ಯಗಳಿಗೆ ಸುಪ್ರೀಂ ಸೂಚಿಸಿದೆ. ಅಕ್ಟೋಬರ್ 5ರಂದು ಮುಂದಿನ ವಿಚಾರಣೆ ನಡೆಯಲಿದೆ.

'ಗೊಂದಲ ಪರಿಹರಿಸಿ': ನಾಗರಾಜ್ ಪ್ರಕರಣದಲ್ಲಿ ನೀಡಿದ ತೀರ್ಪಿನಲ್ಲಿ ಹಲವು ದ್ವಂದ್ವಗಳಿವೆ. ಇಲಾಖೆಗಳ ಕಾರ್ಯನಿರ್ವಹಣೆಗೆ ತೊಂದರೆ ಆಗುವುದನ್ನು ತಪ್ಪಿಸುವುದಕ್ಕಾಗಿ 1,400 ಹುದ್ದೆಗಳಿಗೆ ತಾತ್ಕಾಲಿಕ ಬಡ್ತಿಯನ್ನು ಕೇಂದ್ರವು ಅನಿವಾರ್ಯವಾಗಿ ನೀಡಿದೆ. ಸೇವಾ ಜ್ಯೇಷ್ಠತೆಯನ್ನು ಪರಿಗಣಿಸಿದ್ದರೂ ಬಡ್ತಿ ಮೀಸಲಾತಿಯ ನಿಯಮಗಳನ್ನು ಗಣನೆಗೆ ತೆಗೆದುಕೊಂಡಿಲ್ಲ. ಹಾಗಾಗಿ, ಈ ವಿಚಾರಗಳಲ್ಲಿ ಸ್ಪಷ್ಟತೆ ಬೇಕಿದೆ ಎಂದು ಅಟಾರ್ನಿ ಜನರಲ್ ಕೆ.ಕೆ. ವೇಣುಗೋಪಾಲ್ ಹೇಳಿದರು.

149 ಅಧಿಕಾರಿಗಳಿಗೆ ಬಡ್ತಿ ನೀಡಿದ ವಿಚಾರದಲ್ಲಿ ಕೇಂದ್ರ ಗೃಹ ವ್ಯವಹಾರಗಳ ಕಾರ್ಯದರ್ಶಿಗೆ ನೀಡಿದ್ದ ನ್ಯಾಯಾಂಗ ನಿಂದನೆ ನೋಟಿಸ್ ಅನ್ನು ರದ್ದುಪಡಿಸುವಂತೆಯೂ ವೇಣುಗೋಪಾಲ್ ಕೋರಿದರು. ಯಥಾಸ್ಥಿತಿ ಕಾಯ್ದುಕೊಳ್ಳುವಂತೆ 2019ರ ಏಪ್ರಿಲ್‌ನಲ್ಲಿ ನೀಡಿದ್ದ ಆದೇಶವನ್ನು ಉಲ್ಲಂಘಿಸಲಾಗಿದೆ ಎಂಬ ಆರೋಪದಲ್ಲಿ ಈ ನೋಟಿಸ್ ನೀಡಲಾಗಿದೆ. ನೋಟಿಸ್ ಹಿಂದಕ್ಕೆ ಪಡೆಯಲು ಪೀಠವು ಒಪ್ಪಲಿಲ್ಲ.

ಮುಖ್ಯ ಪ್ರಕರಣದ ಜತೆಗೆ ಈ ಪ್ರಕರಣದ ವಿಚಾರಣೆಯನ್ನೂ ನಡೆಸಲಾಗುವುದು ಎಂದಿತು. ನಾಗರಾಜ್ ಪ್ರಕರಣದಲ್ಲಿ ಇರುವ ಗೊಂದಲಗಳ ಬಗ್ಗೆ ಹಿರಿಯ ವಕೀಲರಾದ ಇಂದಿರಾ ಜೈಸಿಂಗ್ ಮತ್ತು ಪಿ.ಎಸ್. ಪಟವಾಲಿಯಾ ಅವರು ಪೀಠದ ಗಮನ ಸೆಳೆದರು. ಬಡ್ತಿ ಮೀಸಲಾತಿಗಾಗಿ ವಿವಿಧ ರಾಜ್ಯಗಳು ರೂಪಿಸಿರುವ ನೀತಿಯ ವಿಚಾರದಲ್ಲಿ ಹೈಕೋರ್ಟ್‌ಗಳು ಮಧ್ಯಪ್ರವೇಶಿಸಿವೆ ಎಂಬುದನ್ನೂ ಅವರು ತಿಳಿಸಿದರು.

'ಬಡ್ತಿ ಮೀಸಲಾತಿ ವಿಚಾರದಲ್ಲಿ ಸಮರ್ಪಕ ಪ್ರಾತಿನಿಧ್ಯ ಎಂದರೇನು? ರಾಜ್ಯಗಳು ತಮಗೆ ತೋಚಿದಂತೆ ಮಾಡುತ್ತಿವೆ. ಕೆಲವು ಹೈಕೋರ್ಟ್‌ಗಳು ಅವನ್ನು ಎತ್ತಿ ಹಿಡಿದರೆ, ಕೆಲವು ಹೈಕೋರ್ಟ್‌ಗಳು ಕೆಲವು ತಡೆ ನೀಡಿವೆ' ಎಂದು ಇಂದಿರಾ ಜೈಸಿಂಗ್ ಹೇಳಿದರು.

ನಾಗರಾಜ್ ಪ್ರಕರಣದಲ್ಲಿ ರೂಪಿಸಲಾದ ಷರತ್ತುಗಳನ್ನು ಎಲ್ಲ ರಾಜ್ಯಗಳು ಕಟ್ಟುನಿಟ್ಟಾಗಿ ಪಾಲಿಸುವಂತೆ ನಿರ್ದೇಶನ ನೀಡಬೇಕು ಎಂದು ಕೆಲವು ನೌಕರರ ಪರವಾಗಿ ಹಾಜರಿದ್ದ ಹಿರಿಯ ವಕೀಲರಾದ ರಾಜೀವ್ ಧವನ್ ಮತ್ತು ಕುಮಾರ್ ಪರಿಮಳ್ ಒತ್ತಾಯಿಸಿದರು.

'ಉದ್ಯೋಗಿಯ ವಿಚ್ಛೇದಿತ ಪುತ್ರಿಗೆ ಅನುಕಂಪ ಆಧಾರದ ನೌಕರಿ ಇಲ್ಲ'

ಒಂದನೇ ಪುಟದಿಂದ

ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಪೀಠ, ಸೌಮ್ಯಶ್ರೀ ಅವರು ಅನುಕಂಪದ ಆಧಾರದಲ್ಲಿ ಉದ್ಯೋಗ ಪಡೆಯಲು ಅರ್ಹರಲ್ಲ ಎಂದು ಹೇಳಿದೆ.

'ಕರ್ನಾಟಕ ನಾಗರಿಕ ಸೇವಾ (ಅನುಕಂಪ ಆಧಾರದ ನೇಮಕಾತಿ) ನಿಯಮಗಳು – 1996' ಅನ್ನು ಉಲ್ಲೇಖಿಸಿದ ನ್ಯಾಯಪೀಠ, ಆಗಿನ ಸಂದರ್ಭದಲ್ಲಿ ಜಾರಿಯಲ್ಲಿದ್ದ ನಿಯಮಗಳ ಪ್ರಕಾರ, ಸರ್ಕಾರಿ ಉದ್ಯೋಗಿಯ ನಿಧನದ ನಂತರ, ವಿಚ್ಛೇದಿತ ಪುತ್ರಿಗೆ ಅನುಕಂಪದ ಆಧಾರದಲ್ಲಿ ಉದ್ಯೋಗ ನೀಡಲು ಅವಕಾಶವಿಲ್ಲ. ಉದ್ಯೋಗಿಯನ್ನೇ ಅವಲಂಬಿಸಿದ್ದ ಹಾಗೂ ಅವರೊಂದಿಗೆ ವಾಸಿಸುತ್ತಿದ್ದ ಅವಿವಾಹಿತ ಅಥವಾ ವಿಧವಾ ಪುತ್ರಿಗೆ ಮಾತ್ರ ಅನುಕಂಪದ ಆಧಾರದಲ್ಲಿ ಉದ್ಯೋಗ ನೀಡಬಹುದಾಗಿದೆ ಎಂದು ಪೀಠ ಹೇಳಿದೆ.

'ಭಾಗ್ಯಮ್ಮ ಅವರು ನಿಧನ ಹೊಂದಿದ ಸಂದರ್ಭದಲ್ಲಿ ಸೌಮ್ಯಶ್ರೀ ಅವರು ವಿವಾಹಿತೆಯಾಗಿದ್ದರು' ಎಂದು ನ್ಯಾಯಪೀಠ ಹೇಳಿದೆ. 2012ರ ಸೆಪ್ಟೆಂಬರ್ 12ರಂದು ಸೌಮ್ಯಶ್ರೀ ಅವರು ಪರಸ್ಪರ ಸಮ್ಮತಿಯೊಂದಿಗೆ ವಿಚ್ಛೇದನ ಪಡೆದಿದ್ದರು. ಅವರ ವಿಚ್ಛೇದನವನ್ನು 2013ರ ಮಾರ್ಚ್ 20ರಂದು ಮಂಡ್ಯದ ನ್ಯಾಯಾಲಯವು ಊರ್ಜಿತಗೊಳಿಸಿತ್ತು. ಇದಾದ ಮರುದಿನವೇ, ಅಂದರೆ 2013ರ ಮಾರ್ಚ್ 21ರಂದು ಸೌಮ್ಯಶ್ರೀ ಅವರು ಅನುಕಂಪದ ಆಧಾರದ ಉದ್ಯೋಗಕ್ಕೆ ಅರ್ಜಿ ಸಲ್ಲಿಸಿದ್ದರು.

ಸುಶ್ಮಿತಾ ದೇವ್‌ಗೆ ಟಿಎಂಸಿ ಟಿಕೆಟ್

ಕೋಲ್ಕತ್ತ: ಕಳೆದ ತಿಂಗಳಷ್ಟೇ ಕಾಂಗ್ರೆಸ್ ತೊರೆದು ಟಿಎಂಸಿಗೆ ಸೇರ್ಪಡೆಯಾಗಿರುವ ಸುಶ್ಮಿತಾ ದೇವ್ ಅವರನ್ನು ರಾಜ್ಯಸಭಾ ಉಪಚುನಾವಣೆಯಲ್ಲಿ ಕಣಕ್ಕೆ ಇಳಿಸಲು ತೃಣಮೂಲ ಕಾಂಗ್ರೆಸ್ ಪಕ್ಷ ನಿರ್ಧರಿಸಿದೆ.

ಪಿಎಂಎಲ್‌ಎ ಮೇಲ್ಮನವಿ ನ್ಯಾಯಮಂಡಳಿ ಕಾರ್ಯಾರಂಭಕ್ಕೆ ಕಾಲಮಿತಿ

ನವದೆಹಲಿ (ಪಿಟಿಐ): ರಾಜಧಾನಿಯಲ್ಲಿ ಪಿಎಂಎಲ್‌ಎ (ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ) ಮೇಲ್ಮನವಿ ನ್ಯಾಯಮಂಡಳಿ ಕಾರ್ಯಾರಂಭ ಮಾಡುವ ಸಂಬಂಧ ಸ್ಪಷ್ಟ ಕಾಲಮಿತಿಯನ್ನು ನಿಗದಿಪಡಿಸುವಂತೆ ಕೇಂದ್ರ ಸರ್ಕಾರಕ್ಕೆ ದೆಹಲಿ ಹೈಕೋರ್ಟ್ ಮಂಗಳವಾರ ನಿರ್ದೇಶನ ನೀಡಿದೆ. ಜೊತೆಗೆ ಅಧ್ಯಕ್ಷರು ಮತ್ತು ಸದಸ್ಯರ ಹುದ್ದೆಗಳ ಭರ್ತಿ ಕುರಿತೂ ಮಾಹಿತಿ ಕೇಳಿದೆ.

ಕೇಂದ್ರವು ಸಲ್ಲಿಸಿದ ವಸ್ತುಸ್ಥಿತಿ ವರದಿಯನ್ನು ಪರಿಶೀಲಿಸಿದ ನ್ಯಾಯಮೂರ್ತಿ ರೇಖಾ ಪಲ್ಲಿ ಅವರು, ನ್ಯಾಯಮಂಡಳಿಯನ್ನು ಆದಷ್ಟು ಬೇಗ ಕಾರ್ಯನಿರ್ವಹಿಸುವಂತೆ ಮಾಡಲು ಯಾವುದೇ ಕಾಲಮಿತಿಯನ್ನು ನಿಗದಿಪಡಿಸದಿರುವುದು ದುರದೃಷ್ಟಕರ ಎಂದರು.

ನ್ಯಾಯಮಂಡಳಿ ಕಾರ್ಯನಿರ್ವಹಿಸಲು ಹಾಗೂ ಅಧ್ಯಕ್ಷರು, ಸದಸ್ಯರ ಹುದ್ದೆಗಳನ್ನು ಭರ್ತಿ ಮಾಡಲು ಕಾಲಮಿತಿಯನ್ನು ಸ್ಪಷ್ಟವಾಗಿ ನಮೂದಿಸಿ ವಸ್ತುಸ್ಥಿತಿ ವರದಿ ಸಲ್ಲಿಸಲು ಪ್ರತಿವಾದಿಗಳಿಗೆ ಎರಡು ವಾರಗಳ ಕಾಲಾವಕಾಶ ನೀಡಲಾಗಿದೆ. ಮುಂದಿನ ವಿಚಾರಣೆಯನ್ನು ಅಕ್ಟೋಬರ್ 7ಕ್ಕೆ ಮುಂದೂಡಲಾಗಿದೆ.

ಆಂತರಿಕ ಸಂಘರ್ಷ ಸುದ್ದಿಯನ್ನು ಅಲ್ಲಗಳೆದ ತಾಲಿಬಾನ್

ಬರದರ್ ಸತ್ತಿಲ್ಲ: ತಾಲಿಬಾನ್ ಸ್ಪಷ್ಟನೆ

ಕಾಬೂಲ್ (ರಾಯಿಟರ್ಸ್): ತಾಲಿಬಾನ್ ಮುಖಂಡ ಮುಲ್ಲಾ ಅಬ್ದುಲ್ ಘನಿ ಬರದರ್ ಮೃತಪಟ್ಟಿದ್ದಾರೆ ಎಂಬ ಸುದ್ದಿಯನ್ನು ತಾಲಿಬಾನ್ ಮಂಗಳವಾರ ಅಲ್ಲಗಳೆದಿದೆ.

ಮುಲ್ಲಾ ಅಬ್ದುಲ್ ಘನಿ ಬರದರ್

ಕಳೆದ ವಾರ ಅಫ್ಗನ್ ಸರ್ಕಾರದ ಉಪಪ್ರಧಾನಿ ಹುದ್ದೆಗೆ ಹೆಸರಿಸಲಾಗಿದ್ದ ಬರದರ್, ವಿರೋಧಿಗಳ ಮಧ್ಯೆ ನಡೆದಿದೆ ಎನ್ನಲಾದ ಗುಂಡಿನ ಕಾಳಗದಲ್ಲಿ ಮೃತಪಟ್ಟಿದ್ದಾರೆ ಎಂಬ ವದಂತಿ ಹಬ್ಬಿತ್ತು.

ಸಂಘರ್ಷದಲ್ಲಿ ಹತ್ಯೆಯಾಗಿರುವ ಅಥವಾ ಗಾಯಗೊಂಡಿರುವ ಸುದ್ದಿಯನ್ನು ಬರದರ್ ಅಲ್ಲಗಳೆದಿದ್ದು, ಧ್ವನಿ ಸಂದೇಶ ಕಳುಹಿಸಿದ್ದಾರೆ ಎಂದು ತಾಲಿಬಾನ್ ವಕ್ತಾರ ಸುಲೇಲ್ ಶಹೀನ್ ತಿಳಿಸಿದ್ದು, ಹತ್ಯೆ ಸುದ್ದಿ ಸುಳ್ಳು ಮತ್ತು ಆಧಾರವಿಲ್ಲದ್ದು ಎಂದು ಟ್ವೀಟ್ ಮಾಡಿದ್ದಾರೆ.

ಕಂದಹಾರ್‌ನಲ್ಲಿ ಬರದರ್ ಸಭೆ ನಡೆಸುತ್ತಿರುವ ವಿಡಿಯೊವೊಂದನ್ನೂ ಸಹ ತಾಲಿಬಾನ್ ಬಿಡುಗಡೆ ಮಾಡಿದೆ. ಇತ್ತೀಚೆಗೆ ಹಖ್ಖಾನಿ ಸಂಘಟನೆ ಮುಖ್ಯಸ್ಥ ಸಿರಾಜುದ್ದೀನ್ ಹಖ್ಖಾನಿ ಮತ್ತು ಬರದರ್ ಬೆಂಬಲಿಗರ ನಡುವೆ ಪಾಕಿಸ್ತಾನದ ಗಡಿಯಲ್ಲಿ ಸಂಘರ್ಷ ನಡೆದಿದೆ ಎಂಬ ವರದಿಗಳ ಹಿನ್ನೆಲೆಯಲ್ಲಿ ಈ ಸ್ಪಷ್ಟನೆ ಹೊರಬಿದ್ದಿದೆ.

ಉಗ್ರಗಾಮಿ ಸಂಘಟನೆಯ ಕಮಾಂಡರ್ ಆಗಿರುವ ಹಖ್ಖಾನಿ ಹಾಗೂ ದೋಹಾದ ರಾಜಕೀಯ ಕಚೇರಿ ಮೂಲಕ ಅಮೆರಿಕದ ಜೊತೆ ಒಪ್ಪಂದ ಮಾಡಿಕೊಂಡ ಬರದರ್ ಮೊದಲಾದ ಮುಖಂಡರ ನಡುವೆ ವೈರತ್ವ ಮೂಡಿದೆ ಎನ್ನುವ ವರದಿಗಳಿಂದಾಗಿ ಗುಂಡಿನ ಕಾಳಗದ ವದಂತಿ ಹಬ್ಬಿತ್ತು.

ಆದರೆ ಆಂತರಿಕ ಸಂಘರ್ಷ ನಡೆಯುತ್ತಿದೆ ಎಂಬ ಅಂಶವನ್ನು ತಾಲಿಬಾನ್ ಪದೇ ಪದೇ ಅಲ್ಲಗಳೆಯುತ್ತಾ ಬಂದಿದೆ.

ತಾಲಿಬಾನ್ ಸರ್ಕಾರದ ನೇತೃತ್ವ ವಹಿಸಲಿದ್ದಾರೆ ಎಂದು ಬಿಂಬಿತವಾಗಿದ್ದ ಬರದರ್, ಇತ್ತೀಚೆಗೆ ಸಾರ್ವಜನಿಕವಾಗಿ ಎಲ್ಲಿಯೂ ಕಾಣಿಸಿಕೊಂಡಿಲ್ಲ. ಅಲ್ಲದೆ, ಕತಾರ್ ವಿದೇಶಾಂಗ ಸಚಿವ ಶೇಕ್ ಮೊಹಮ್ಮದ್ ಬಿನ್ ಅಬ್ದುಲ್‌ರಹಮಾನ್ ಅಲ್ ಥಾನಿ ಅವರನ್ನು ಭಾನುವಾರ ಭೇಟಿ ಮಾಡಿದ ಸಚಿವರ ನಿಯೋಗದಲ್ಲಿಯೂ ಇರಲಿಲ್ಲ.

ತಾಲಿಬಾನ್‌ನ ಪರಮೋಚ್ಚ ನಾಯಕ ಮುಲ್ಲಾ ಹೈಬತ್ ಉಲ್ಲಾ ಅಖುಂಜಾದಾ ಸಹ ಅಫ್ಗಾನಿಸ್ತಾನವನ್ನು ತಾಲಿಬಾನ್ ವಶಪಡಿಸಿಕೊಂಡ ಬಳಿಕ ಸಾರ್ವಜನಿಕವಾಗಿ ಕಾಣಿಸಿಕೊಂಡಿಲ್ಲ. ಆದರೆ ಕಳೆದ ವಾರ ಸರ್ಕಾರ ರಚನೆ ವೇಳೆ ಹೇಳಿಕೆ ಬಿಡುಗಡೆ ಮಾಡಿದ್ದ. ಸಂಘಟನೆಯ ಸ್ಥಾಪಕ ಮುಲ್ಲಾ ಒಮರ್ 2013ರಲ್ಲಿ ಹತ್ಯೆಯಾಗಿದ್ದರೂ, ಅದಾದ ಎರಡು ವರ್ಷಗಳ ನಂತರ ಸುದ್ದಿ ಖಚಿತಪಟ್ಟಿತ್ತು.

ಕಾಲೊನಿ ತೆರವು: ಪ್ರತಿಭಟನೆ

ಕಂದಹಾರ್: ಇಲ್ಲಿನ ಸೇನಾ ಕಾಲೊನಿ ತೆರವು ಮಾಡುವಂತೆ ತಾಲಿಬಾನ್ ಸೂಚಿಸಿರುವುದನ್ನು ಖಂಡಿಸಿ ಸಾವಿರಾರು ಅಫ್ಗನ್ನರು ಗವರ್ನರ್ ಕಚೇರಿ ಎದುರು ಮಂಗಳವಾರ ಪ್ರತಿಭಟನೆ ನಡೆಸಿದರು.

ಸುಮಾರು 30 ವರ್ಷಗಳಿಂದ ವಾಸಿಸುತ್ತಿರುವ 3000 ಕುಟುಂಬಗಳಿಗೆ ಮೂರು ದಿನದೊಳಗೆ ಕಾಲೊನಿ ತೆರವು ಮಾಡುವಂತೆ ಸೂಚಿಸಲಾಗಿತ್ತು. ಇದನ್ನು ಖಂಡಿಸಿ ರಸ್ತೆಗಿಳಿದ ಜನರು ರಸ್ತೆ ತಡೆ ನಡೆಸಿದರು ಎಂದು ಮಾಜಿ ಸರ್ಕಾರಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಜನರು ರಸ್ತೆಯನ್ನು ಬಂದ್ ಮಾಡಿರುವ ದೃಶ್ಯಗಳು ಸ್ಥಳೀಯ ಮಾಧ್ಯಮಗಳಲ್ಲಿ ಪ್ರಸಾರವಾಗಿವೆ.

ಅಫ್ಗನ್ ಭದ್ರತಾಪಡೆಗಳ ನಿವೃತ್ತ ಸೇನಾ ಜನರಲ್‌ಗಳು ಹಾಗೂ ಇತರ ಅಧಿಕಾರಿಗಳು ಈ ಕಾಲೊನಿಗಳಲ್ಲಿ ವಾಸಿಸುತ್ತಿದ್ದಾರೆ. ತೆರವು ವಿಚಾರದ ಬಗ್ಗೆ ತಾಲಿಬಾನ್ ಪ್ರತಿಕ್ರಿಯೆ ಲಭ್ಯವಾಗಿಲ್ಲ.

ಮುಂಬೈ ಧಾರಣೆ

ಶೇಂಗಾ

14-9-2021

ಜಾವಾ 70/80(ಹೊಸ)	10300-10350
ಜಾವಾ 80/90(ಹೊಸ)	9500-9550
ದಪ್ಪ ಮಧ್ಯಪ್ರದೇಶ(ಹೊಸ)	10250-10300
ದಪ್ಪ ಗುಜರಾತ್(ಹೊಸ)	9400-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1565 (1570)
ಒಂದು ವಾರದ ಡೆಲಿವರಿ	1560 (1565)
ಸೋಯಾ ಕಚ್ಚಾ	1307 (1315)
ಪಾಮ್ ವಾರದ ಡೆಲಿವರಿ	1213 (1223)
ಸೂರ್ಯಕಾಂತಿ ಎಣ್ಣೆ ಕಚ್ಚಾ	1300 (1330)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
47,000 (46,850)
ಬೆಳ್ಳಿ ಕೆ.ಜಿ 63,050 (62,775)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಷೇರುಪೇಟೆ ವಹಿವಾಟು

69



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,355
ಇಂದಿನ ಅಂತ್ಯ	17,380
▲	25
ದಿನದ ಗರಿಷ್ಠ	17,438

ವಿನಿಮಯ ದರ

$ ಡಾಲರ್	73.68
£ ಪೌಂಡ್	102.14
€ ಯುರೊ	87.06
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹450
12 ಮೊಟ್ಟೆಗೆ	₹60

ಮೈಸೂರು

100 ಮೊಟ್ಟೆಗೆ	₹452

ಎಫ್‌ಡಿಐಗೆ ಭಾರತ ನೆಚ್ಚಿನ ತಾಣ: ಡೆಲಾಯ್ಟ್

ನವದೆಹಲಿ (ಪಿಟಿಐ): ವಿದೇಶಿ ನೇರ ಬಂಡವಾಳ ಹೂಡಿಕೆಯ (ಎಫ್‌ಡಿಐ) ವಿಚಾರದಲ್ಲಿ ಭಾರತವು ಆಕರ್ಷಕ ತಾಣವಾಗಿ ಉಳಿದಿದೆ. ಆರೋಗ್ಯಕರ ಆರ್ಥಿಕ ಬೆಳವಣಿಗೆಯ ಸಾಧ್ಯತೆ ಇರುವುದು, ಕುಶಲ ಕೆಲಸಗಾರರು ಲಭ್ಯವಿರುವುದು ಇದಕ್ಕೆ ಕಾರಣ ಎಂದು ಡೆಲಾಯ್ಟ್ ಸಂಸ್ಥೆ ನಡೆಸಿರುವ ಸಮೀಕ್ಷೆಯೊಂದು ಹೇಳಿದೆ.

ಅಲ್ಪಾವಧಿಯಲ್ಲಿ ಹಾಗೂ ದೀರ್ಘಾವಧಿಯಲ್ಲಿ ಭಾರತವು ತೋರಲಿರುವ ಸಾಧನೆ ಬಗ್ಗೆ ಅಂತರರಾಷ್ಟ್ರೀಯ ಮಟ್ಟದ ಉದ್ಯಮಿಗಳು ಭರವಸೆ ವ್ಯಕ್ತಪಡಿಸಿದ್ದಾರೆ. ಅವರು ಹೆಚ್ಚುವರಿ ಹೂಡಿಕೆ ಮಾಡಲು ಹಾಗೂ ಹೊಸದಾಗಿ ಹೂಡಿಕೆ ಮಾಡಲು ಯೋಜನೆಗಳನ್ನು ಸಿದ್ಧಪಡಿಸುತ್ತಿದ್ದಾರೆ ಎಂದು ಸಮೀಕ್ಷೆಯು ಹೇಳಿದೆ.

‘ಸಮೀಕ್ಷೆಯು ಅಮೆರಿಕ, ಬ್ರಿಟನ್, ಜಪಾನ್ ಮತ್ತು ಸಿಂಗಪುರದ ಉದ್ಯಮ ವಲಯದ 1,200 ಪ್ರಮುಖರಿಂದ ಅಭಿಪ್ರಾಯ ಸಂಗ್ರಹಿಸಿದೆ’ ಎಂದು ‘ಭಾರತದಲ್ಲಿನ ಎಫ್‌ಡಿಐ ಅವಕಾಶ’ ಎನ್ನುವ ಈ ವರದಿ ಹೇಳಿದೆ. ಜವಳಿ ಮತ್ತು ವಸ್ತ್ರ, ಆಹಾರ ಸಂಸ್ಕರಣೆ, ಎಲೆಕ್ಟ್ರಾನಿಕ್ಸ್, ಔಷಧ ಉದ್ಯಮ, ವಾಹನ ಮತ್ತು ಬಿಡಿಭಾಗಗಳು, ರಾಸಾಯನಿಕಗಳು ಸೇರಿದಂತೆ ಹೆಚ್ಚು ಬಂಡವಾಳ ಬೇಕಾಗುವ ಏಳು ವಲಯಗಳಲ್ಲಿ ಭಾರತವು ಹೆಚ್ಚು ಎಫ್‌ಡಿಐ ಆಕರ್ಷಿಸುವ ಗುರಿ ಹೊಂದಬಹುದು ಎಂದು ಸಮೀಕ್ಷೆ ವಿವರಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ

ಸಕಲೇಶಪುರ

ಕೂಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	390

ಅಡಿಕೆ

ಚಿತ್ರದುರ್ಗ

ಆಪಿ	53739-54169
ಬೆಟ್ಟೆ	39619-40000
ಕೆಂಪುಗೋಟು	32610-33099
ರಾಶಿ	53229-53679

ಸಿದ್ದಾಪುರ

ಬಿಳಿಗೋಟು	32899-38399
ಚಾಲಿ	40959-46109
ಕೋಕ	27799-38099
ಕೆಂಪುಗೋಟು	33699-34099
ರಾಶಿ	47169-51133
ತಟ್ಟಿಬೆಟ್ಟೆ	34099-47489

ಶಿರಸಿ

ಬೆಟ್ಟೆ	35869-48999
ಬಿಳಿಗೋಟು	26099-42676
ಚಾಲಿ	41299-46098
ರಾಶಿ	43619-52399

ಯಲ್ಲಾಪುರ

ಬಿಳಿಗೋಟು	35212-39809
ಚಾಲಿ	41312-45969
ಕೋಕ	24799-35709
ಕೆಂಪುಗೋಟು	30099-36700
ರಾಶಿ	48989-52899
ತಟ್ಟಿಬೆಟ್ಟೆ	41000-48669

ರಾಮನಗರ ರೇಷ್ಮೆ ಧಾರಣೆ

ಮಿಶ್ರತಳಿ (ಸಿ.ಬಿ)	330-480
ದ್ವಿತಳಿ (ಬಿ.ವಿ)	405-596

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13800	13000	12950	186.80ಸೆಂಟ್ಸ್
ಎಸಿ	6300	4800	5150	
ಆರ್‌ಪಿ	6150	6100	6150	ಲಂಡನ್
ಆರ್‌ಸಿ	3535	3500	3600	2007 ಡಾಲರ್ಸ್

ಧ್ವನಿ ಆಧಾರಿತ ಪಾವತಿಗೆ ಆರ್‌ಬಿಐ ಅನುಮತಿ

ನವದೆಹಲಿ (ಪಿಟಿಐ): ಧ್ವನಿ ಆಧಾರಿತ ಹಣಕಾಸು ವಹಿವಾಟು ಶೀಘ್ರದಲ್ಲಿಯೇ ಕಾರ್ಯರೂಪಕ್ಕೆ ಬರುವ ಸಾಧ್ಯತೆ ಇದೆ. ಧ್ವನಿ ಆಧಾರಿತ ಪಾವತಿಗಳನ್ನು ನಡೆಸಲು ಬೆಂಗಳೂರು ಮೂಲದ ಟೋನ್‌ಟ್ಯಾಗ್ ಕಂಪನಿಗೆ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಒಪ್ಪಿಗೆ ನೀಡಿದೆ.

ಟೋನ್‌ಟ್ಯಾಗ್ ಕಂಪನಿಯು ಧ್ವನಿ ಆಧಾರಿತ ಪಾವತಿ ವ್ಯವಸ್ಥೆಯನ್ನು ಕರ್ನಾಟಕ ಮತ್ತು ಬಿಹಾರದ ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಪರೀಕ್ಷಿಸಿದೆ. ₹ 1,000ವರೆಗಿನ ಪಾವತಿಯನ್ನು ಈ ವ್ಯವಸ್ಥೆಯ ಮೂಲಕ ಮಾಡಲಾಗಿದೆ. ಇಂಟರ್ನೆಟ್ ಸಂಪರ್ಕವು ಸ್ಥಿರವಾಗಿ ಇಲ್ಲದ ಕಡೆಗಳಲ್ಲಿಯೂ ಟೋನ್‌ಟ್ಯಾಗ್ ಕಂಪನಿಯು ಸ್ಮಾರ್ಟ್‌ಫೋನ್ ಹಾಗೂ ಫೀಚರ್ ಫೋನ್ ಮೂಲಕ ಧ್ವನಿ ಆಧಾರಿತ ಪಾವತಿಗಳನ್ನು ಸಾಧ್ಯವಾಗಿಸಿದೆ ಎಂದು ಪ್ರಕಟಣೆ ತಿಳಿಸಿದೆ.

‘ತಂತ್ರಜ್ಞಾನವು ಲಭ್ಯವಿದೆ. ಆರ್‌ಬಿಐ ಕೂಡ ಅನುಮತಿ ನೀಡಿದೆ. ಈಗ ಅಗತ್ಯವಿರುವ ಕಂಪನಿಗಳು ಈ ತಂತ್ರಜ್ಞಾನವನ್ನು ಬಳಕೆ ಮಾಡಿಕೊಳ್ಳಬಹುದು’ ಎಂದು ಟೋನ್‌ಟ್ಯಾಗ್ ಹೇಳಿದೆ. ಡಿಜಿಟಲ್ ವಹಿವಾಟು ನಡೆಸುವುದು ಸುಲಭ ಅಲ್ಲ ಎನ್ನುವವರಿಗೆ, ಬ್ಯಾಂಕಿಂಗ್ ಅಥವಾ ಪಾವತಿ ಕೆಲಸಗಳಿಗೆ ಆ್ಯಪ್ ಬಳಸುವುದು ಕಷ್ಟ ಎನ್ನುವವರಿಗೆ ಇದು ನೆರವಾಗುತ್ತದೆ ಎಂದು ಹೇಳಿದೆ.

ಪ್ರಶ್ನೋತ್ತರ



ಯು.ಪಿ.ಪುರಾಣಿಕ್
ಬ್ಯಾಂಕಿಂಗ್-ಹಣಕಾಸು ತಜ್ಞ
uppuranik@gmail.com
ಮೊ: 9448015300

ಸೀತಾಲಕ್ಷ್ಮಿ, ಧಾರವಾಡ

- **ಪ್ರಶ್ನೆ: ಬೇರೆಯವರಿಂದ ಇನಾಮು ಅಥವಾ ಕಾಣಿಕೆ ರೂಪದಲ್ಲಿ ಸ್ಥಿರ-ಚರ ಆಸ್ತಿ ಅಥವಾ ಇನ್ನಿತರೆ ಬೆಲೆಬಾಳುವ ವಸ್ತುಗಳನ್ನು ಪಡೆದಾಗ ಬೆಲೆಗೆ ಅನುಗುಣವಾಗಿ ತೆರಿಗೆ ಕೊಡಬೇಕೇ? ವಿವರಿಸಿ.**

ಉತ್ತರ: 1998ರ ಅಕ್ಟೋಬರ್ 1ರಿಂದ ಗಿಫ್ಟ್ ಟ್ಯಾಕ್ಸ್ (ಉಡುಗೊರೆ ಮೇಲಿನ ತೆರಿಗೆ) ವಜಾ ಮಾಡಲಾಗಿದೆ. ಆದರೆ ಆದಾಯ ತೆರಿಗೆ ಸೆಕ್ಷನ್ 56 (2)(X) ಪ್ರಕಾರ ಓರ್ವ ವ್ಯಕ್ತಿ ₹ 50 ಸಾವಿರಕ್ಕೂ ಮಿಕ್ಕಿದ ಹಣ, ಸೊತ್ತು, ಆಸ್ತಿ ದಾನವಾಗಿ ಪಡೆದಾಗ ಇಂತಹ ಮೊತ್ತವನ್ನು ವ್ಯಕ್ತಿಯ ವಾರ್ಷಿಕ ಒಟ್ಟು ಆದಾಯಕ್ಕೆ ಸೇರಿಸಿ ತೆರಿಗೆ ಕೊಡಬೇಕಾಗುತ್ತದೆ. ಇದೇ ವೇಳೆ, ಕೆಳಗೆ ನಮೂದಿಸಿದ ವಿಚಾರಗಳಲ್ಲಿ ಸಂಪೂರ್ಣ ತೆರಿಗೆ ವಿನಾಯಿತಿ ಇದೆ.

1) ಹಣ ಅಥವಾ ಆಸ್ತಿ ವಹಿವಾಟು ಗಂಡ – ಹೆಂಡತಿ ನಡುವೆ ಆದಲ್ಲಿ. 2) ಅಣ್ಣ-ತಮ್ಮ, ಅಕ್ಕ-ತಂಗಿ ನಡುವೆ ನಡೆದಲ್ಲಿ. 3) ಗಂಡ-ಹೆಂಡತಿ, ಇವರ ಅಣ್ಣ-ತಮ್ಮಂದಿರು, ಅಕ್ಕ-ತಂಗಿಯರ ಜೊತೆ ಆದಲ್ಲಿ. 4) ಹೆತ್ತವರ ಅಣ್ಣ-ತಮ್ಮಂದಿರು, ಅಕ್ಕ-ತಂಗಿಯರು. 5) ವ್ಯಕ್ತಿಯ ಮದುವೆ ಸಂದರ್ಭದಲ್ಲಿ. 6) ಉಯಿಲಿನಿಂದ. 7) ವಾರಸುದಾರರ ಹಕ್ಕಿನಿಂದ ನಡೆದಲ್ಲಿ... ವಿನಾಯಿತಿ ಇರುತ್ತದೆ. ವಿನಾಯಿತಿ ಪಡೆಯಲು ಅರ್ಹತೆ ಇರುವಲ್ಲಿ ತೆರಿಗೆ ಕೊಡುವ ಅಗತ್ಯ ಇಲ್ಲ.

ಚಂದ್ರೇಗೌಡ, ರಾಜಾಜಿನಗರ, ಬೆಂಗಳೂರು

- **ಪ್ರಶ್ನೆ: ನಾನು 2012ರಲ್ಲಿ ₹ 7 ಲಕ್ಷ ಕೊಟ್ಟು ಒಂದು ನಿವೇಶನ ಕೊಂಡಿದ್ದೆ. ಈಗ ಅದನ್ನು ಮಾರಾಟ ಮಾಡಬೇಕೆಂದಿದ್ದೇನೆ. ಮಾರಾಟ ಮಾಡಿದರೆ ₹ 45 ಲಕ್ಷ ಬರಬಹುದು. ಬಂಡವಾಳ ಗಳಿಕೆ ತೆರಿಗೆ (ಕ್ಯಾಪಿಟಲ್ ಗೇನ್ ಟ್ಯಾಕ್ಸ್) ಉಳಿಸಲು ಮಾರ್ಗದರ್ಶನ ಮಾಡಿ.**

ಉತ್ತರ: ನಿಮಗೆ ನಿವೇಶನ ಮಾರಾಟ ಮಾಡಿ ಬರುವ ಮೊತ್ತದಿಂದ 2012ರಿಂದ 2021ರ ತನಕ ಬಂಡವಾಳ ಗಳಿಕೆ ತೆರಿಗೆ ಕಳೆದು ಉಳಿದ ಮೊತ್ತಕ್ಕೆ ಶೇಕಡ 20ರಂತೆ ತೆರಿಗೆ ಕೊಡುವ ಅವಕಾಶ ಇದೆ. ಸಂಪೂರ್ಣ ತೆರಿಗೆ ಉಳಿಸಲು ಸೆಕ್ಷನ್ 54ಇಸಿ ಆಧಾರದ ಮೇಲೆ ₹ 45 ಲಕ್ಷ ಎನ್‌ಎಚ್‌ಎಐ–ಆರ್‌ಇಸಿ ಬಾಂಡ್‌ಗಳಲ್ಲಿ ತೊಡಗಿಸಬೇಕಾಗುತ್ತದೆ. ಸೆಕ್ಷನ್ 54ಇಸಿಯ ಆಧಾರದ ಮೇಲೆ, ಇಲ್ಲಿ ತಿಳಿಸಿದ ಬಾಂಡ್‌ಗಳಲ್ಲಿ ಇರಿಸಬಹುದಾದ ಗರಿಷ್ಠ ಮೊತ್ತ ₹ 50 ಲಕ್ಷ (ಈ ಹಿಂದೆ ಭಾಗ್ಯಲಕ್ಷ್ಮಿ ಅವರ ಪ್ರಶ್ನೆಗೆ ಸಂಬಂಧಿಸಿದ ಉತ್ತರದಲ್ಲಿ ₹ 50 ಸಾವಿರ ಹಾಗೂ ತಿದ್ದುಪಡಿಯಲ್ಲಿ ₹ 5 ಲಕ್ಷ ಎಂದು ಉತ್ತರಿಸಿದ್ದಕ್ಕೆ ವಿಷಾದಿಸುತ್ತೇನೆ.) ನೀವು ಹೀಗೆ ಮಾರಾಟ ಮಾಡಿದ ನಿವೇಶನದಿಂದ ಬರುವ ಸಂಪೂರ್ಣ ಹಣವನ್ನು ಇನ್ನೊಂದು ಮನೆ ಅಥವಾ ಫ್ಲ್ಯಾಟ್ ಕೊಳ್ಳಲು ಬಳಸಬಹುದು. ಹೀಗೆ ಮಾಡಿದಲ್ಲಿ ಕಾಸ್ಟ್ ಆಫ್ ಇನ್‌ಫ್ಲೇಷನ್ ಲೆಕ್ಕ ಹಾಕುವಂತಿಲ್ಲ ಹಾಗೂ ಮಾರಾಟ ಮಾಡಿ ಬಂದಿರುವ ಪೂರ್ತಿ ಮೊತ್ತವನ್ನು ಮನೆ ಅಥವಾ ಫ್ಲ್ಯಾಟ್ ಕೊಳ್ಳಲು ಬಳಸಬಹುದು.

ಡಾ. ಶಶಿಧರ್, ಗಂಗಾನಗರ, ಬೆಂಗಳೂರು

- **ಪ್ರಶ್ನೆ: ನಾನು ವೃತ್ತಿಯಲ್ಲಿ ವೈದ್ಯ. ಹೆಂಡತಿ ಗೃಹಿಣಿ. ನಮಗೆ 7 ವರ್ಷ ವಯಸ್ಸಿನ ಮಗಳು, 4 ವರ್ಷ ವಯಸ್ಸಿನ ಮಗ ಇದ್ದಾರೆ. ನಮ್ಮೊಡನೆ ಒಂದು ನಿವೇಶನ ಇದೆ. ಸದ್ಯ ಬಾಡಿಗೆ ಮನೆಯಲ್ಲಿ ವಾಸ. ಸ್ವಂತ ಪ್ರಾಕ್ಟೀಸ್ ಆದ್ದರಿಂದ ತಿಂಗಳ ಆದಾಯ ಸಮನಾಗಿ ಬರುವುದಿಲ್ಲ. ಆದರೂ ಕನಿಷ್ಠ ₹ 1.25 ಲಕ್ಷ ತಿಂಗಳ ವರಮಾನ ಇದೆ. ನಿಮ್ಮ ಅಂಕಣ ನೋಡಿ ಕಳೆದ ಐದು ವರ್ಷಗಳಿಂದ ಆರ್.ಡಿ. ಮಾಡುತ್ತಾ ಬಂದು ಈಗ ಈ ಖಾತೆಯಲ್ಲಿ ₹ 15 ಲಕ್ಷ ಜಮಾ ಇದೆ. ನಮ್ಮ ಮುಂದಿನ ಗುರಿ ಮನೆ ಕಟ್ಟಿಸುವುದು. ತೆರಿಗೆ ಉಳಿಸಲು ಹಾಗು ಮಕ್ಕಳ ಭವಿಷ್ಯಕ್ಕೆ ಸಲಹೆ ನೀಡಿ.**

ಉತ್ತರ: ಆದಷ್ಟು ಬೇಗ ಗೃಹಸಾಲ ಪಡೆದು ಮನೆ ಕಟ್ಟಿಸಿರಿ. ಸಾಲದ ಅವಧಿ 20 ವರ್ಷಗಳಿರಲಿ. ₹ 50 ಲಕ್ಷ ಸಾಲ ಪಡೆದರೆ ಇಎಂಐ ₹ 50 ಸಾವಿರ ಬರಬಹುದು. ಸಾಲದ ಕಂತು ಸೆಕ್ಷನ್ 80ಸಿ, ಬಡ್ಡಿ ಸೆಕ್ಷನ್ 24(ಬಿ) ಆಧಾರದಲ್ಲಿ ಆದಾಯ ತೆರಿಗೆಯಿಂದ ವಿನಾಯಿತಿ ಪಡೆಯಬಹುದು. ಸೆಕ್ಷನ್ 80ಸಿಸಿಡಿ (1ಬಿ) ಆಧಾರದ ಮೇಲೆ ಗರಿಷ್ಠ ₹ 50 ಸಾವಿರ ಎನ್‌ಪಿಎಸ್‌ನಲ್ಲಿ ತೊಡಗಿಸಿದಲ್ಲಿ ಕೂಡಾ ತೆರಿಗೆ ವಿನಾಯಿತಿ ಪಡೆಯಬಹುದು. ಹೆಣ್ಣು ಮಗುವಿನ ಸಲುವಾಗಿ ಸುಕನ್ಯಾ ಸಮೃದ್ಧಿ ಯೋಜನೆಯಲ್ಲಿ ಹಣ ತೊಡಗಿಸಿ, ಬಂಗಾರದ ನಾಣ್ಯ ಕೊಳ್ಳಿರಿ. ಗಂಡು ಮಗುವಿನ ಸಲುವಾಗಿ ಆರ್.ಡಿ. ಮುಂದುವರಿಸಿ. ನೀವು ₹ 50 ಲಕ್ಷದ ಟರ್ಮ್ ಇನ್ಶೂರೆನ್ಸ್ ಮಾಡಿಸಿ. ಯೋಜನೆಗೆ ಬದ್ಧವಾಗಿ ನಡೆದುಕೊಳ್ಳಿ. ನಿಮಗೆ ಉಜ್ವಲ ಭವಿಷ್ಯ ಹಾರೈಸುತ್ತೇನೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001. ಇ–ಮೇಲ್: businessdesk@prajavani.co.in

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಸಾರ್ವಜನಿಕ ಪ್ರಕಟಣೆ

PUBLIC NOTICE

IN THE HIGH COURT OF KARNATAKA. AT BENGALURU
NOTICE TO THE RESPONDENT NO .4 & 7 VIDE COURT ORDER DATED 31/08/2021 WRIT PETITION NO.58490/2016 (GM-RES)

MAXWORTH NAGAR BANGALORE OWNER'S ASSOCIATION REP. BY ITS AUTHORIZED SIGNATORY PRESIDENT SRI RAMAIAH D2 SAMPURNA APARTMENTS I, 2ND MAIN, 3RD BLOCK BANGALORE-560 028 ....PETITIONER

VS

1. THE STATE OF KARNATAKA REP. BY ITS PRINCIPAL SECRETARY URBAN DEVELOPMENT, VIKASA SOUDHA, BANGALORE-560 001
2. BMRDA REP.BY ITS COMMISSIONER NO.1 ALI ASKAR ROAD BANGALORE-560 052
3. ANEKAL PLANNING AUTHORITY REP.BY ITS SECRETARY ANNA BUILDING NO.430 HENNAGARA GATE HOSUR. MAIN ROAD BANGALORE-560 099 & OTHER'S

.....RESPONDENTS
RESPONDENT NO : 4 & 7

TO :
4. KAMAKSHI LAND DEVELOPERS REP. BY ITS MANAGING DIRECTOR LUCKY PARADISE, 1ST FLOOR, 174140M, 22ND CROSS , 3RD BLOCK, JAYANAGAR, BANGALORE-560 0.11
7. SRI. S CHANDRASHEKAR R/O NO.90, 3RD MAIN, J H B S, 1ST STAGE PADMANABHANAGARA, BENGALURU-560 070

Whereas, the above mentioned Writ Petition filed by the above named petitioner under Article 226 & 227 of the Constitution of India, praying to (a) quash the Order vide Annexure-D1 passed by Respondent No.2 vide No. BMRDA/LAO/004/96-97 dt.4/2/2002 (b) quash the order vide *Annexure-E passed by Respondent No2. vide No. BMRDA/ Layout/ 04/96-97 dated 14/07/2004. (c) Quash the order vide Annexure-F vide No. AYOPA/ LAO/ 88/2008-09 dated 2/6/2009 passed by Respondent No.3
(d) Direct the respondents 2 & 3 to renew the layout plan vide Annexure- B & permit the association to complete the same and award costs, has been registered by this Court

Notice is hereby given to you to appear in this Court either in person or through counsel duly instructed or through someone authorised by law, to act for you in the above Writ Petition on 01/10/2021 at 10.30 A.M. in case you intend to contest the Writ Petition If you fail to appear, the same will be dealt with, heard and decided in your absence.

Issued under my hand and the seal of this court, on this the 31st day of august 2021.

By order of the court
Assistant registrar

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

FOND REMEMBRANCE

JAYAMMA C
15.09.2017
It is four years since you left us. "The light you lit will guide us all along our path"

FOND REMEMBRANCES
JJ FAMILY
Javare Gowda C D DCF (Retd.)
#60 Karishma Hills, Bangalore - 560061
Asha, Prakash, Ramya, Satish, Kala, Biju, Aakaash, Gargayee, Harshul, Sara
Relatives & Friends

JJ WALLS FLOORS AND MORE PVT. LTD.
01, Mithun Complex, Raghuvanahalli village, Kanakapura Main Road, Bangalore-560062

ವೈಕುಂಠ ಸಮಾರಾಧನೆ



ಶ್ರೀಯುತ ಎನ್. ಗಂಗಯ್ಯನವರು
ಶ್ರೀ ಗೋಪಿವೆಂಕಟೇಶ್ವರ ಕಲ್ಯಾಣ ಮಂಟಪದ ಮಾಲೀಕರು, ನೆಲಮಂಗಲ
ವೈಕುಂಠ ಸಮಾರಾಧನೆಯನ್ನು ದಿನಾಂಕ 15–09–2021ನೇ ಬುಧವಾರ ಬೆಳಿಗ್ಗೆ 11:00 ಕ್ಕೆ ನೆಲಮಂಗಲದ ನಮ್ಮ ಸ್ವಗೃಹದಲ್ಲಿ ಹಮ್ಮಿಕೊಂಡಿದ್ದೇವೆ.
ಇಂತಿ ದುಃಖತಪ್ತರು: ಶ್ರೀಮತಿ ಕೆ.ಜಿ. ಜಯಲಕ್ಷ್ಮಮ್ಮನವರು ಮತ್ತು ಜಿ. ಗೋಪಿನಾಥ್ ಹಾಗೂ ಕುಟುಂಬವರ್ಗ. ಮೊ. 9945236300

ಚಿರಸ್ಮರಣೆ

ಶ್ರೀಮತಿ ಸುಂದರಮ್ಮ 15–09–2017
ಶ್ರೀ ಕೆ. ಚಿಕ್ಕಣ್ಣ 15–05–1982

ಇಂದ
ಸುಂದರ್ ಕುಮಾರ್ (ಬಿಳಿಯಣ್ಣ) ಮತ್ತು ಕುಟುಂಬ

ಪ್ರಥಮ ವರ್ಷದ ಸಂಸ್ಮರಣೆ

ತೊಟ್ಟವಾಡಿ ನಂಜುಂಡಸ್ವಾಮಿ
ಜನನ: 10.02.1951 – ಮರಣ: 15.09.2020
ರಂಗಕರ್ಮಿ, ವಿಚಾರವಾದಿ, ಸಮಾಜಮುಖಿ ಲೇಖಕ ಮತ್ತು ಸ್ನೇಹ ಜೀವಿ.
ರಂಗಚೇತನ ಸಂಸ್ಕೃತಿ ಟ್ರಸ್ಟ್, ಬೆಂಗಳೂರು
ಡಾ. ಸಿ.ಎನ್. ಮಂಜುನಾಥ್, ನಿರ್ದೇಶಕರು
ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು
ಶ್ರೀಯುತ ಲಕ್ಷ್ಮಣ್, ಮಾಜಿ ಅಧ್ಯಕ್ಷರು
ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ಶ್ರೀಯುತ ಕೆ.ಹೆಚ್. ಪುಟ್ಟಸ್ವಾಮಿಗೌಡ, ಉದ್ಯಮಿಗಳು, ಬೆಂಗಳೂರು
ಕುಟುಂಬವರ್ಗದವರು ಹಾಗೂ ಹಿತೈಷಿಗಳು

ನಿಧನ

ಶ್ರೀಮತಿ ಕೆಂಪಮ್ಮ (ಕೆಂಪಿ ಚಿಕ್ಕಮ್ಮ)
(ದಿ|| ಭೈರಪ್ಪನವರ ಧರ್ಮಪತ್ನಿ)
ನಂ. 10/3, 3ನೇ ಅಡ್ಡರಸ್ತೆ, ಮುನಿರೆಡ್ಡಿ ಪಾಳ್ಯ, ಬೆಂಗಳೂರು
ಇವರು ದಿನಾಂಕ: 13.09.2021ರಂದು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಭಗವಂತನು ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತೇವೆ.
ದುಃಖತಪ್ತ:

ಮಕ್ಕಳು ಹಾಗೂ ಅಳಿಯಂದಿರು
ವಿಜಯಲಕ್ಷ್ಮೀ ಬಿ. ಸಿದ್ದಯ್ಯ ಎಸ್.
ಕುಮಾರಿ ಬಿ. ಸೂರ್ಯಪ್ರಕಾಶ್
ಶೈಲಜ ಬಿ. ಹನುಮಂತರಾಜು ಬಿ.ಹೆಚ್.
ಪ್ರತಿಮ ಬಿ. ರಾಮಕೃಷ್ಣ ಬಿ.ಎಂ.

ವಿ. ಲಕ್ಷ್ಮೀನಾರಾಯಣ್
ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು ಹಾಗೂ ಸಂಸ್ಥಾಪಕರು, ನಿರ್ಮಾಣ್ ಸಮೂಹ ಸಂಸ್ಥೆಗಳು

NAME CHANGE ANNOUNCEMENT
Log on to :
dhclassifieds.com

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಮಲ್ನಾಡ್ ಕೋಚಿಂಗ್ ಸೆಂಟರ್
#50, ಮಲ್ನಾಡ್, MHR ಬಡಾವಣೆ ಹೆಸರಘಟ್ಟ ರಸ್ತೆ, ಬೆಂಗಳೂರು–90, ಕಿರ್ಲೋಸ್ಕರ್ ಲೇಔಟ್ ಮುಖ್ಯ ರಸ್ತೆಯ Dead end Left.
ಮುಂಬರುವ PSI, FDA, KAS ಮತ್ತು KPSC ಯ ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ
ಅಕ್ಟೋಬರ್ 4 ರಿಂದ ಹೊಸ ತರಗತಿಗಳನ್ನು ಆರಂಭಿಸಲಾಗುವುದು. [ನಾವು ಬೇರೆಲ್ಲೂ ಉಪ ಶಾಖೆಗಳನ್ನು ಹೊಂದಿಲ್ಲ]
ತೀರ್ಥಹಳ್ಳಿ ಕೇಶವಮೂರ್ತಿ
ನಿರ್ದೇಶಕರು
9481100670 | 9845068233

ಉದ್ಯೋಗಾವಕಾಶ

General

TVS, ವಿಡಿಯೋಕಾನ್, TOYOTA, ಬ್ರಿಟಾನಿಯಾ MNC ಕಂಪನಿಗಳಿಗೆ SSLC, PUC, Degree, ITI ನವರು (ವಿದ್ಯಾರ್ಹತೆಯಿಲ್ಲದವರಿಗೂ) 17,800-56,000/- ವಸತಿಯೂಟವಿದೆ. 9611715755

TOYOTA, ಟಾಟಾಮೋಟರ್ಸ್, ಬಿಗ್ ಬಜಾರ್, ಬ್ರಿಟಾನಿಯಾಗಳಿಗೆ 5th,SSLC, Degree, ITI,Diploma ದವರು ನೇರನೇಮಕಾತಿಯಿದೆ.18,000-60,000 /- ವಸತಿಯೂಟವಿದೆ. 7795837319, 9901312461

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ12,000-15,000ವರೆಗೆ ಸಂಪಾದಿಸಿ.ಕನ್ನಡ/ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

ಮನೆ ಕೆಲಸಕ್ಕೆ, ಅಡುಗೆಗೆ, ಮಕ್ಕಳನ್ನು ಮತ್ತು ರೋಗಿಗಳನ್ನು ನೋಡಿಕೊಳ್ಳಲು ಮಹಿಳೆಯರು / ಹುಡುಗಿಯರು ಬೇಕಾಗಿದ್ದಾರೆ. ಉಚಿತ ಊಟ, ವಸತಿ ಸೌಲಭ್ಯವಿದೆ. ಸಂಬಳ: 15,000-20,000 ಸಾವಿರ ಸಂಪರ್ಕಿಸಿ: 9326447402, 9892396441

ಮನೆ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ. 45 ವಯಸ್ಸಿನ ಒಳಗಿನವರು.ಊಟ, ವಸತಿ, ಸಂಬಳ ಕೊಡಲಾಗುವುದು. ಕನಕಪುರ ರಸ್ತೆ, ಬೆಂಗಳೂರು. ಸಂಪರ್ಕಿಸಿ: 9606173617.

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

WORK FROM Home No Qualification Housewifes, Employes, Students, Visit our Office Near SP Circle, Bellary -8123012124, 7022121569

Wanted

ಬೆಂಗಳೂರಿನ ನಾಗರಭಾವಿಯಲ್ಲಿ ನಡೆಸಲಾಗುತ್ತಿರುವ ಗಂಡು ಮಕ್ಕಳ ಅನಾಥಾಶ್ರಮದಲ್ಲಿ ಮಕ್ಕಳನ್ನು ನೋಡಿಕೊಳ್ಳಲು ಮಹಿಳೆ ಕೇರ್ ಟೇಕರ್ ಬೇಕಾಗಿದ್ದಾರೆ. ವಿದ್ಯಾರ್ಹತೆ : 10ನೇ ತರಗತಿ ಮೇಲ್ಪಟ್ಟು, ವಯಸ್ಸು: 18 ರಿಂದ 45ರವರೆಗೆ, ಊಟ, ವಸತಿ ಉಚಿತ, ಆಕರ್ಷಕ ಸಂಬಳ ನೀಡಲಾಗುವುದು. ವಸತಿ ಬೇಡದವರು ಹತ್ತಿರದ ಪ್ರದೇಶದವರಾಗಿರಬೇಕು. ಸಂಪರ್ಕಿಸಿ: 9110846919

WANTED MALE & Female PUC/Graduates Freshers & Experience(M.Sc Chemistry or B.Sc Chemistry): 8660018006/ 9019696123

ವ್ಯಾಪಾರ

Business to Business

Finance

ಸಾಲಗಳು ನಾವು ಎಲ್ಲಾ ರೀತಿಯ ಸಾಲಗಳನ್ನು ನೀಡುತ್ತೇವೆ. ವೈಯಕ್ತಿಕ, ವ್ಯವಹಾರ, ಆಸ್ತಿ, ವಸತಿ, ಕೃಷಿ, ಸ್ವಾಧೀನ ಮತ್ತು ಆಸ್ತಿಗಾಗಿ ಸಾಲ ನೀಡಲಾಗುತ್ತದೆ. ಮೊಬೈಲ್:7837015557

Business Offers

Distributors

ಮಣಿವಿಲಾಸ್ ಫುಡ್ ಪ್ರಾಡಕ್ಟ್ ಅಂಡ್ ಕಂಪನಿಯ 'ಚಿಕ್ಕಿ' 'ಮೈಸೂರು ಪಾಕ್' ಉತ್ಪನ್ನಗಳ ಮಾರಾಟಕ್ಕೆ ಕರ್ನಾಟಕದಾದ್ಯಂತ ಡಿಸ್ಟ್ರಿಬ್ಯೂಟರ್ಸ್ ಮತ್ತು ಸೇಲ್ಸ್ ಪಾರ್ಟನರ್ಸ್ ಬೇಕಾಗಿದ್ದಾರೆ. ಸಂಪರ್ಕಿಸಿ:9986444464/ 9611110050

Finance

ಸಾಲ ಬೇಕಾಗಿದೆಯೇ? ಆಸ್ತಿ, ವ್ಯಾಪಾರ, ವ್ಯವಹಾರ, ಕೃಷಿಸಾಲ, ವೈಯಕ್ತಿಕ ಸಾಲ, ಮನೆ ಸಾಲ ಮತ್ತು ನಗದು ಸಾಲ ಬೇಕಾಗಿದೆಯೇ? 5 ಲಕ್ಷದಿಂದ 5 ಕೋಟಿಯವರೆಗೆ ಸಾಲ ಲಭ್ಯ.ಸುಲಭ ದಾಖಲೆ ಹಾಗೂ ತ್ವರಿತ ಪ್ರಕ್ರಿಯೆಯಲ್ಲಿ ಸಾಲ ಪಡೆಯಿರಿ. ಮಾಹಿತಿಗೆ: 9988022262

ಭವಿಷ್ಯ

Astrology

ಶ್ರೀರಾಘವೇಂದ್ರ ಸ್ವಾಮಿ ಜ್ಯೋತಿಷ್ಯಾಲಯ: ಪಂಡಿತ್ ರಾಘವೇಂದ್ರ ಗುರೂಜಿ. ನಿಮ್ಮಾವುದೇ ಸಮಸ್ಯೆಯಿರಲಿ 3ದಿನದಲ್ಲಿ ವಶೀಕರಣ ಸ್ಪೆಷಲಿಸ್ಟ್ ಫೋನಿನ ಮೂಲಕ ಪರಿಹಾರ ಶತಸಿದ್ಧ. ಮಂತ್ರಾಲಯ 7760909072

"ಉಚಿತ ಭವಿಷ್ಯ, ಕ್ಷಣದಲ್ಲಿ ಪರಿಹಾರ" ಶ್ರೀರಾಘವೇಂದ್ರಸ್ವಾಮಿ ಜ್ಯೋತಿಷ್ಯಾಲಯ, ಧನವಶೀಕರಣ, ಶತ್ರುವಶೀಕರಣ, ಸ್ತ್ರೀಪುರುಷವಶೀಕರಣ, ನಿಮ್ಮಲ್ಲಿ ಸಮಸ್ಯೆಯೇ?? ಪರಿಹಾರವಾಗಬೇಕೆ?? ಒಂದೇಕರೆಯಲ್ಲಿ ವಶೀಕರಣದ ವಿಶೇಷತಾಂತ್ರಿಕರಾದ ಗುರುರಾಜನ್ "ನಂಬಿದವರ ಪಾಲಿನಬೆಳಕು" 9731309181

ಕೇರಳ ಮತ್ತು ಕೊಳ್ಳೇಗಾಲದ ಪ್ರಚಂಡ ಅಮಾನುಷ ಮಾಂತ್ರಿಕ ವಿದ್ಯೆಯಿಂದ ಪ್ರೀತಿಯಲ್ಲಿ ನಂಬಿ ಮೋಸ ಇಷ್ಟಪಟ್ಟವರು ನಿಮ್ಮಂತಾಗಲುಸ್ತ್ರಿ ಸ್ತ್ರೀ/ ಪುರುಷ ವಶೀಕರಣ, ಇನ್ನೂ ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿದ್ದರೂ ಕೇವಲ 2 ದಿನಗಳಲ್ಲಿ 100% ಪರಿಹಾರ ಮಾಡುತ್ತಾರೆ. 9945530666.

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ. 7022443071

★||ವಶೀಕರಣ ಸ್ಪೆಷಲಿಸ್ಟ್||★ ಇಷ್ಟಪಟ್ಟವರು ನಿಮ್ಮಂತೆ ಆಗಲು ನೋಡುವ_ಮೂಲಕ ಮಾತನಾಡುವ ಮೂಲಕ ಹೆಸರಿನ ಮೂಲಕ ಸ್ತ್ರೀವಶೀಕರಣ 27ನಿಮಿಷಗಳಲ್ಲಿ ಶಾಶ್ವತ ಪರಿಹಾರ. 9900511008"

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

★||ಶ್ರೀಶಾಕಾಂಬರಿದೇವಿ||★ ಆರಾಧಕರು ಸ್ತ್ರೀ_ಪುರುಷ_ವಶೀಕರಣ, ಸಂಭೋಗ_ವಶೀಕರಣ ಇನ್ನೂಯಾವುದೇ ಕಠಿಣ,ಗುಪ್ತ ಸಮಸ್ಯೆಗಳಿಗೆ 11 ನಿಮಿಷಗಳಲ್ಲಿ ಶಾಶ್ವತ ಪರಿಹಾರ. 9900222591

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರವಾಸ

Travel

ಗೌರಿಗಣೇಶ ಹಬ್ಬದ ಶುಭಾಶಯಗಳು: 16.10.2021 7ದಿನಗಳ ತಮಿಳುನಾಡು, 24.10.2021 6ದಿನಗಳ ಕಾಶಿ,ಗಯಾ, 18.10.2021 12ದಿನಗಳ ಗುಜರಾತ್, ಮಧ್ಯಪ್ರದೇಶ, 18.10.2021,24.10.2021 10ದಿನಗಳ ಲೇಹ್‌ಲಡಾಕ್. ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್, 9342848791, 9880847001

ಕಾಶಿ, ಗಯಾ, ಬುದ್ಧಗಯಾ, ಕೋಲ್ಕತ, ಭುವನೇಶ್ವರ್, ಕೊನಾರ್ಕ್,ಪುರಿಜಗನ್ನಾಥ್, ನವಂಬರ್,ಡಿಸೆಂಬರಿನಲ್ಲಿ. ಪ್ರತಿದಿನ ತಿರುಪತಿ ಪ್ಯಾಕೇಜ್ ವಿಜಯ ಟ್ರಾವಲ್ಸ್ ಮಲ್ಲೇಶ್ವರಂ, ಬೆಂಗಳೂರು. 9448294477

ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ : ದ್ವಿತೀಯಾರ್ಧಕ್ಕೆ ಮರುಭೂಮಿ ನಾಡು ಸಿದ್ಧ

ಮುಂದುವರಿಯುವುದೇ ಕನ್ನಡಿಗರ ಮಿಂಚಿನಾಟ?

ಮರುಭೂಮಿ ನಾಡು ಯುನೈಟೆಡ್ ಅರಬ್ ಎಮಿರೇಟ್ಸ್ ಮತ್ತೊಮ್ಮೆ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿ ಆಯೋಜನೆಗೆ ಸಿದ್ಧವಾಗಿದೆ.

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುನೈಟೆಡ್ ಅರಬ್ ಎಮಿರೇಟ್ಸ್ ಮತ್ತೊಮ್ಮೆ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿ ಆಯೋಜನೆಗೆ ಸಜ್ಜಾಗಿದೆ.

ಹೋದ ಮೇ ತಿಂಗಳಲ್ಲಿ ಭಾರತದಲ್ಲಿಯೇ ನಡೆದಿದ್ದ ಟೂರ್ನಿಯ ಬಯೋಬಬಲ್‌ನಲ್ಲಿದ್ದ ಕೆಲವು ಆಟಗಾರರು, ಸಿಬ್ಬಂದಿಗೆ ಕೋವಿಡ್ ಖಚಿತವಾಗಿತ್ತು. ಅದಕ್ಕಾಗಿ ಟೂರ್ನಿಯನ್ನು ಮಧ್ಯದಲ್ಲಿಯೇ ನಿಲ್ಲಿಸಿ, ಮುಂದೂಡಲಾಗಿತ್ತು. ಇದೀಗ ಅದೇ ಟೂರ್ನಿಯ ಮುಂದುವರಿದ ಭಾಗದ ಪಂದ್ಯಗಳ ಆಯೋಜನೆಯು ಇದೇ 19ರಿಂದ ಅಕ್ಟೋಬರ್ 15ರವರೆಗೆ ನಡೆಯಲಿದೆ.

ಮೊದಲ ಹಂತದಲ್ಲಿ ಬೇರೆ ಬೇರೆ ತಂಡಗಳಲ್ಲಿರುವ ಕರ್ನಾಟಕದ ಆಟಗಾರರು 'ಪಂದ್ಯವಿಜಯಿ'ಗಳಾಗಿ ಗಮನ ಸೆಳೆದಿದ್ದರು. ಇದೀಗ ಯುಎಇಯಲ್ಲಿಯೂ ತಮ್ಮ ಅಮೋಘ ಲಯವನ್ನು ಮುಂದುವರಿಸುವರೇ ಎಂಬ ಕುತೂಹಲ ಕ್ರಿಕೆಟ್ ವಲಯದಲ್ಲಿ ಮೂಡಿದೆ. ಈಗಾಗಲೇ ಟಿ20 ವಿಶ್ವಕಪ್ ಟೂರ್ನಿಯ ತಂಡವನ್ನು ಪ್ರಕಟಿಸಲಾಗಿದೆ.

ಅದರಲ್ಲಿ ಪಂಜಾಬ್ ಕಿಂಗ್ಸ್ ಇಲೆವನ್ ಪಂಜಾಬ್ ತಂಡದ ನಾಯಕ ಕೆ.ಎಲ್. ರಾಹುಲ್ ಮತ್ತು ಅವರ ಗೆಳೆಯ ಮಯಂಕ್ ಅಗರವಾಲ್ ಇಬ್ಬರ ಆಟವೂ ರಂಗೇರಿತ್ತು. ಮಯಂಕ್ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಪಂದ್ಯದಲ್ಲಿ ಅಜೇಯ 99 ರನ್ ಹೊಡೆದಿದ್ದು ಕ್ರಿಕೆಟ್‌ಪ್ರಿಯರ ಕಣ್ಣುಗಳಿಗೆ ಕಟ್ಟಿದಂತಿದೆ. ರಾಹುಲ್ ಗಾಯಗೊಂಡು ಕಣಕ್ಕಿಳಿಯದ ಆ ಪಂದ್ಯದಲ್ಲಿ ಮಯಂಕ್ ಹಂಗಾಮಿ ನಾಯಕರಾಗಿದ್ದರು.

ಆಗ ಕೋವಿಡ್‌ನಿಂದ ಚೇತರಿಸಿಕೊಂಡು ತಂಡಕ್ಕೆ ಮರಳಿದ್ದ ಬೆಂಗಳೂರು ಹುಡುಗ ದೇವದತ್ತ ಪಡಿಕ್ಕಲ್ ರಾಜಸ್ಥಾನ್ ರಾಯಲ್ಸ್ ವಿರುದ್ಧದ ಪಂದ್ಯದಲ್ಲಿ ಅಜೇಯ ಶತಕ ಬಾರಿಸಿದ್ದರು. ನಾಯಕ ವಿರಾಟ್ ಜೊತೆಗೆ ಮುರಿಯದ ಮೊದಲ ವಿಕೆಟ್ ಜೊತೆಯಾಟದಲ್ಲಿ ತಂಡವನ್ನು ಗೆಲುವಿನ ದಡ ಸೇರಿಸಿದ್ದರು. ಅದೇ ರೀತಿ ಮನೀಷ್ ಪಾಂಡೆ ಸನ್‌ರೈಸರ್ಸ್ ಹೈದರಾಬಾದ್ ತಂಡದ ಮಧ್ಯಮ ಕ್ರಮಾಂಕದ ಬ್ಯಾಟಿಂಗ್‌ಗೆ ಬಲ ತುಂಬಿದವರು. ಮಧ್ಯಮವೇಗಿ ಪ್ರಸಿದ್ಧ ಕೃಷ್ಣ ತಮ್ಮ ಸ್ವಿಂಗ್ ಅಸ್ತ್ರಗಳನ್ನು ಪರಿಣಾಮಕಾರಿಯಾಗಿ ಬಳಸಿದ್ದರು. ಈಚೆಗೆ ಇಂಗ್ಲೆಂಡ್‌ನಲ್ಲಿರುವ ಭಾರತ ಟೆಸ್ಟ್ ತಂಡದಲ್ಲಿಯೂ ಸ್ಥಾನ ಪಡೆದಿದ್ದರು.

ಗಮನ ಸೆಳೆದ ಕನ್ನಡಿಗರು (2021ರ ಮೊದಲ ಭಾಗ)

ದೇವದತ್ತ ಪಡಿಕ್ಕಲ್
ಎಡಗೈ ಬ್ಯಾಟ್ಸ್‌ಮನ್
ಆರ್‌ಸಿಬಿ

ಪಂದ್ಯ	6
ರನ್	195
ಶ್ರೇಷ್ಠ	101*
ಶತಕ	1
ಸಿಕ್ಸರ್	9

ಪ್ರಸಿದ್ಧ ಕೃಷ್ಣ
ಮಧ್ಯಮವೇಗಿ
ಕೆಕೆಆರ್

ಪಂದ್ಯ	7
ಓವರ್	26.3
ವಿಕೆಟ್	8
ಶ್ರೇಷ್ಠ	30ಕ್ಕೆ3

ಮನೀಷ್ ಪಾಂಡೆ
ಬ್ಯಾಟ್ಸ್‌ಮನ್
ಸನ್‌ರೈಸರ್ಸ್ ಹೈದರಾಬಾದ್

ಪಂದ್ಯ	5
ರನ್	193
ಶ್ರೇಷ್ಠ	61*
ಅರ್ಧಶತಕ	2
ಸಿಕ್ಸರ್	8

ಮಾಹಿತಿ: ಐಪಿಎಲ್ ವೆಬ್‌ಸೈಟ್

ಕೆ.ಎಲ್. ರಾಹುಲ್
ಬ್ಯಾಟ್ಸ್‌ಮನ್/ ವಿಕೆಟ್‌ಕೀಪರ್
ಪಂಜಾಬ್ ಕಿಂಗ್ಸ್

ಪಂದ್ಯ	7
ರನ್	331
ಶ್ರೇಷ್ಠ	91*
ಅರ್ಧಶತಕ	4
ಸಿಕ್ಸರ್	16

ಮಯಂಕ್ ಅಗರವಾಲ್
ಬ್ಯಾಟ್ಸ್‌ಮನ್
ಪಂಜಾಬ್ ಕಿಂಗ್ಸ್

ಪಂದ್ಯ	7
ರನ್	260
ಶ್ರೇಷ್ಠ	99*
ಅರ್ಧಶತಕ	2
ಸಿಕ್ಸರ್	11

ಅ.17ರಂದು ಹೊಸ ತಂಡಗಳಿಗೆ ಇ ಬಿಡ್ಡಿಂಗ್

ಮುಂಬೈ (ಪಿಟಿಐ): ಮುಂದಿನ ವರ್ಷದ ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಸೇರ್ಪಡೆಯಾಗಲಿರುವ ಎರಡು ತಂಡಗಳನ್ನು ಅಕ್ಟೋಬರ್ 17ರಂದು ಇ ಬಿಡ್ಡಿಂಗ್ ಮಾಡಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಯೋಜಿಸಿದೆ.

ಮಂಡಳಿಯು ಆಗಸ್ಟ್ 31ರಂದು ಐಪಿಎಲ್ ಫ್ರ್ಯಾಂಚೈಸಿಗಳನ್ನು ಖರೀದಿಸಲು ಬಿಡ್‌ಗಳನ್ನು ಆಹ್ವಾನಿಸಿದೆ. ಅಕ್ಟೋಬರ್ 5ರವರೆಗೂ ಬಿಡ್ ಸಲ್ಲಿಸಲು ಅವಕಾಶ ಇದೆ.

'ಐಪಿಎಲ್‌ನಲ್ಲಿ ಆಡುವ ಎರಡು ಹೊಸ ಫ್ರ್ಯಾಂಚೈಸಿಗಳನ್ನು ಪಡೆಯಲು ಟೆಂಡರ್ ಪ್ರಕ್ರಿಯೆ ನಡೆಸಲಾಗುತ್ತಿದೆ. ಅದಕ್ಕಾಗಿ ಐಪಿಎಲ್ ಆಡಳಿತ ಸಮಿತಿಯು ಆಹ್ವಾನವನ್ನೂ ಮಾಡಿದೆ. ಅ.5ರವರೆಗೆ ಬಿಡ್ ಸಲ್ಲಿಸಲು ಗಡುವು ನೀಡಿದೆ. 2022ರ ಋತುವಿನಲ್ಲಿ ಉಭಯ ತಂಡಗಳು ಆಡಲಿವೆ' ಎಂದು ಬಿಸಿಸಿಐ ಪ್ರಕಟಣೆಯಲ್ಲಿ ತಿಳಿಸಿದೆ.

ಹೊಸ ಎರಡು ತಂಡಗಳಿಗೆ ಕ್ರಮವಾಗಿ ಅಹಮದಾಬಾದ್, ಲಖನೌ ಅಥವಾ ಪುಣೆ ತವರಿನ ಕ್ರೀಡಾಂಗಣಗಳನ್ನಾಗಿ ಮಾಡುವ ಸಾಧ್ಯತೆ ಇದೆ.

ಫ್ರಾಂಚೈಸಿಗಳನ್ನು ಪಡೆಯಲು ದೇಶದ ಪ್ರಮುಖ ಕಾರ್ಪೊರೇಟ್ ಸಂಸ್ಥೆಗಳು ಸ್ಪರ್ಧೆಯಲ್ಲಿವೆ ಎನ್ನಲಾಗಿದೆ. ಅದರಲ್ಲಿ ಅದಾನಿ ಸಮೂಹ, ಆರ್‌ಪಿಜಿ ಸಂಜೀವ್ ಗೋಯೆಂಕಾ ಸಮೂಹ, ಟಾರೆಂಟ್ ಫಾರ್ಮಾ ಮತ್ತು ಪ್ರತಿಷ್ಠಿತ ಬ್ಯಾಂಕ್ ಕೂಡ ಈ ರೇಸ್‌ನಲ್ಲಿವೆ ಎಂದು ತಿಳಿದುಬಂದಿದೆ.

ಐಪಿಎಲ್ ಬಿಟ್ಟು ವಿಶ್ವಕಪ್, ಆ್ಯಷಸ್ ಆಯ್ಕೆ: ವೋಕ್ಸ್

ಲಂಡನ್ (ಪಿಟಿಐ): ಸತತ ಮೂರು ಟೂರ್ನಿಗಳಲ್ಲಿ ಆಡುವುದು ಅತ್ಯಂತ ಕಷ್ಟಕರ. ಹೀಗಾಗಿ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯನ್ನು ಬಿಟ್ಟು ಟಿ–20 ವಿಶ್ವಕಪ್ ಮತ್ತು ಆ್ಯಷಸ್ ಸರಣಿಯನ್ನು ಆಯ್ಕೆ ಮಾಡಿದೆ ಎಂದು ಇಂಗ್ಲೆಂಡ್ ತಂಡದ ವೇಗದ ಬೌಲರ್ ಕ್ರಿಸ್ ವೋಕ್ಸ್ ಹೇಳಿದ್ದಾರೆ.

ಐಪಿಎಲ್‌ನಲ್ಲಿ ವೋಕ್ಸ್ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಆಟಗಾರನಾಗಿದ್ದಾರೆ. ಇಂಗ್ಲೆಂಡ್‌ನ ಜಾನಿ ಬೇಸ್ಟೊ (ಸನ್ ರೈಸರ್ಸ್ ಹೈದರಾಬಾದ್) ಮತ್ತು ಡೇವಿಡ್ ಮಲಾನ್ (ಪಂಜಾಬ್ ಕಿಂಗ್ಸ್) ಕೂಡ ಈ ಬಾರಿಯ ಟೂರ್ನಿಯಲ್ಲಿ ಆಡುವುದಿಲ್ಲ ಎಂದಿದ್ದಾರೆ.

'ನಾನು ಟಿ20 ವಿಶ್ವಕಪ್ ತಂಡಕ್ಕೆ ಆಯ್ಕೆಯಾಗುತ್ತೇನೆ ಎಂದು ತಿಳಿದಿರಲಿಲ್ಲ. ಐಪಿಎಲ್‌ಅನ್ನು ಇದೇ ಬೇಸಿಗೆಯ ಅಂತ್ಯಕ್ಕೆ ಮರುನಿಗದಿ ಮಾಡಲಾಗಿದೆ. ವಿಶ್ವಕಪ್, ಆ್ಯಷಸ್ ಸರಣಿ ಮತ್ತು ಐಪಿಎಲ್ ಟೂರ್ನಿಗಳ ಮಧ್ಯೆ ತುಂಬಾ ಕಡಿಮೆ ಸಮಯ ಇದೆ. ಐಪಿಎಲ್ ಭಾಗವಾಗುವುದಕ್ಕೆ ಇಷ್ಟವಿತ್ತು. ಆದರೆ ಯಾವುದಾದರೊಂದನ್ನು ಬಿಟ್ಟುಕೊಡಲೇಬೇಕಿತ್ತು' ಎಂದು ವೋಕ್ಸ್ ಹೇಳಿದ್ದಾಗಿ 'ದ ಗಾರ್ಡಿಯನ್' ವರದಿ ಮಾಡಿದೆ.

ಕ್ರಿಸ್ ವೋಕ್ಸ್– ರಾಯಿಟರ್ಸ್ ಚಿತ್ರ

ಐಪಿಎಲ್ ಮುಕ್ತಾಯದ ಬಳಿಕ ಯುಎಇ ಮತ್ತು ಒಮನ್‌ನಲ್ಲಿ ಟಿ20 ವಿಶ್ವಕಪ್ ನಡೆಯಲಿದೆ. ಆ್ಯಷಸ್ ಸರಣಿ ಕೂಡ ಅಷ್ಟೇ ಮಹತ್ವದ್ದಾಗಿದೆ ಎಂದು ವೋಕ್ಸ್ ಹೇಳಿದ್ದಾರೆ.

ಕೋವಿಡ್‌ನ ಕಟ್ಟುನಿಟ್ಟಿನ ನಿರ್ಬಂಧಗಳ ಹಿನ್ನೆಲೆಯಲ್ಲಿ ಇಂಗ್ಲೆಂಡ್‌ನ ಹಲವು ಆಟಗಾರರು ಆ್ಯಷಸ್ ಸರಣಿಗೆ ತೆರಳಲು ಹಿಂದೇಟು ಹಾಕುತ್ತಿದ್ದಾರೆ. ಆದರೆ ಆಸ್ಟ್ರೇಲಿಯಾಕ್ಕೆ ತೆರಳಲು ವೋಕ್ಸ್ ಬಹಳ ಉತ್ಸುಕರಾಗಿದ್ದಾರೆ.

ಇಂಗ್ಲೆಂಡ್ ಆಟಗಾರರಿಗೆ ತಮ್ಮ ಕುಟುಂಬದೊಂದಿಗೆ ತೆರಳಲು ಆಸ್ಟ್ರೇಲಿಯಾ ಅವಕಾಶ ನೀಡುತ್ತದೆ ಎಂದು ನಿರೀಕ್ಷಿಸಲಾಗಿದೆ.

ಕ್ರಿಕೆಟ್‌ಗೆ ಲಸಿತ್ ಮಾಲಿಂಗ ವಿದಾಯ

ಕೊಲಂಬೊ (ಪಿಟಿಐ): ಕ್ರಿಕೆಟ್ ಅಂಗಳದಲ್ಲಿ ಘಟಾನುಘಟಿ ಬ್ಯಾಟ್ಸ್‌ಮನ್‌ಗಳನ್ನು ತಮ್ಮ ಯಾರ್ಕರ್ ಎಸೆತಗಳಿಂದ ಕಂಗೆಡಿಸಿದ ಶ್ರೀಲಂಕಾದ ವೇಗಿ ಲಸಿತ್ ಮಾಲಿಂಗ ಎಲ್ಲ ಮಾದರಿಗಳ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದರು.

ಲಸಿತ್ ಮಾಲಿಂಗ

38 ವರ್ಷದ ಲಸಿತ್ ನಾಯಕತ್ವದಲ್ಲಿ ಲಂಕಾ ತಂಡವು 2014ರ ಟಿ20 ವಿಶ್ವಕಪ್ ಜಯಿಸಿತ್ತು.

'ನನ್ನ ಟಿ20 ಬೂಟುಗಳನ್ನು ಗೂಟಕ್ಕೆ ನೇತು ಹಾಕುತ್ತಿದ್ದೇನೆ. ಇದರೊಂದಿಗೆ ಎಲ್ಲ ಮಾದರಿಯ ಕ್ರಿಕೆಟ್‌ಗಳ ವಿದಾಯ ಹೇಳುತ್ತಿದ್ದೇನೆ. ನನ್ನ ಈ ಪಯಣದಲ್ಲಿ ಬೆನ್ನು ತಟ್ಟಿ ಪ್ರೋತ್ಸಾಹಿಸಿದವರಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಭವಿಷ್ಯದಲ್ಲಿ ಯುವ ಆಟಗಾರರಿಗೆ ನನ್ನ ಅನುಭವಧಾರೆಯುವ ಯೋಚನೆಯಲ್ಲಿದ್ದೇನೆ' ಎಂದು ಲಸಿತ್ ಟ್ವೀಟ್ ಮಾಡಿದ್ದಾರೆ.

ಹೋದ ಜನವರಿಯಲ್ಲಿ ಅವರು ಟೆಸ್ಟ್ ಮತ್ತು ಏಕದಿನ ಕ್ರಿಕೆಟ್ ಮಾದರಿಗಳಿಂದ ನಿವೃತ್ತರಾಗಿದ್ದರು. ಲಸಿತ್ ತಮ್ಮ ವಿಶಿಷ್ಟ ಬೌಲಿಂಗ್ ಶೈಲಿಯಿಂದ ಜನಪ್ರಿಯರಾಗಿದ್ದಾರೆ.

ಮಾದರಿ	ಪಂದ್ಯ	ವಿಕೆಟ್	ಶ್ರೇಷ್ಠ
ಟೆಸ್ಟ್	30	101	50ಕ್ಕೆ5
ಏಕದಿನ	226	338	38ಕ್ಕೆ6
ಟಿ20	83	107	6ಕ್ಕೆ5
ಐಪಿಎಲ್	122	170	13ಕ್ಕೆ5

ಹೋದ ವರ್ಷ ಅಕ್ಟೋಬರ್–ನವೆಂಬರ್‌ನಲ್ಲಿ ನಡೆಯಬೇಕಿದ್ದ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಶ್ರೀಲಂಕಾ ತಂಡವನ್ನು ಮುನ್ನಡೆಸುವ ಕುರಿತು ಆಗ ಇಂಗಿತ ವ್ಯಕ್ತಪಡಿಸಿದ್ದರು. ಆದರೆ, ಕೋವಿಡ್ ಕಾರಣದಿಂದಾಗಿ ಟೂರ್ನಿ ಮುಂದೂಡಲಾಗಿತ್ತು.

'ಮುಂಬರುವ ದಿನಗಳಲ್ಲಿ ಯುವ ಆಟಗಾರರಿಗೆ ಮಾರ್ಗದರ್ಶನ ನೀಡುತ್ತೇನೆ. ರಾಷ್ಟ್ರೀಯ ತಂಡ, ನಾನು ಪ್ರತಿನಿಧಿಸುವ ಎಲ್ಲ ಫ್ರ್ಯಾಂಚೈಸಿಗಳಿಗೆ ಧನ್ಯವಾದ ಅರ್ಪಿಸುತ್ತೇನೆ. ಟಿ20 ಕ್ರಿಕೆಟ್‌ನಿಂದ ಶೇ 100ರಷ್ಟು ನಿವೃತ್ತನಾಗಿದ್ದೇನೆ' ಎಂದು ಮಾಲಿಂಗ ಸ್ಪಷ್ಟಪಡಿಸಿದ್ದಾರೆ.

2006ರಲ್ಲಿ ರೋಸ್ ಬೌಲ್‌ನಲ್ಲಿ ನಡೆದಿದ್ದ ಇಂಗ್ಲೆಂಡ್ ವಿರುದ್ಧದ ಟಿ20 ಪಂದ್ಯದಲ್ಲಿ ಲಸಿತ್ ಪದಾರ್ಪಣೆ ಮಾಡಿದ್ದರು.

ಏಕದಿನ ರ‍್ಯಾಂಕಿಂಗ್: ಜಂಟಿ ಅಗ್ರಸ್ಥಾನದಲ್ಲಿ ಮಿಥಾಲಿ

ದುಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ನಾಯಕಿ ಮಿಥಾಲಿ ರಾಜ್ ಅವರು ಏಕದಿನ ಬ್ಯಾಟಿಂಗ್ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನವನ್ನು ಹಂಚಿಕೊಂಡಿದ್ದಾರೆ. ದಕ್ಷಿಣ ಆಫ್ರಿಕಾ ತಂಡದ ಆರಂಭಿಕ ಬ್ಯಾಟರ್ ಲಿಜೆಲಿ ಲೀ ಅವರು ಮಿಥಾಲಿ ಅವರೊಂದಿಗೆ ಮೊದಲ ಸ್ಥಾನಕ್ಕೇರಿದ್ದಾರೆ.

ವೆಸ್ಟ್ ಇಂಡೀಸ್ ಎದುರಿನ ಸರಣಿ ಮೊದಲ ಪಂದ್ಯದಲ್ಲಿ ಲಿಜೆಲಿ ಔಟಾಗದೆ 91 ರನ್ ಗಳಿಸಿದ್ದರು. ಇದು ಅವರ ಕ್ರಮಾಂಕದಲ್ಲಿ ಬಡ್ತಿಗೆ ಕಾರಣವಾಗಿದೆ. ಮಿಥಾಲಿ ಹಾಗೂ ಲೀ ಅವರ ಬಳಿ ಸದ್ಯ ತಲಾ 762 ರೇಟಿಂಗ್ ಪಾಯಿಂಟ್‌ಗಳಿವೆ. ಆಸ್ಟ್ರೇಲಿಯಾದ ಅಲಿಸಾ ಹೀಲಿ ಮೂರನೇ ಸ್ಥಾನದಲ್ಲಿದ್ದರೆ, ಭಾರತದ ಆರಂಭಿಕ ಆಟಗಾರ್ತಿ ಸ್ಮೃತಿ ಮಂದಾನ ಒಂಬತ್ತನೇ ಸ್ಥಾನದಲ್ಲಿ ಸ್ಥಿರವಾಗಿದ್ದಾರೆ.

ಲೀ ಅವರು 2018ರ ಜೂನ್‌ನಲ್ಲಿ ಮೊದಲ ಬಾರಿ ಅಗ್ರಸ್ಥಾನದಲ್ಲಿದ್ದರು. ಈ ವರ್ಷದ ಮಾರ್ಚ್‌ನಲ್ಲಿ ಮತ್ತೆ ಮೊದಲ ಸ್ಥಾನಕ್ಕೆ ಏರಿದ್ದರು.

ಭಾರತದ ಅನುಭವಿ ವೇಗಿ ಜೂಲನ್ ಗೋಸ್ವಾಮಿ ಮತ್ತು ಸ್ಪಿನ್ನರ್ ಪೂನಂ ಯಾದವ್ ಬೌಲರ್‌ಗಳಲ್ಲಿ ಕ್ರಮವಾಗಿ ಐದನೇ ಮತ್ತು ಒಂಬತ್ತನೇ ಸ್ಥಾನದಲ್ಲಿದ್ದಾರೆ. ಆಲ್‌ರೌಂಡರ್‌ಗಳ ಪಟ್ಟಿಯಲ್ಲಿ ದೀಪ್ತಿ ಶರ್ಮಾ ಐದನೇ ಸ್ಥಾನವನ್ನು ಕಾಯ್ದುಕೊಂಡಿದ್ದಾರೆ. ಟಿ–20 ಕ್ರಮಾಂಕದಲ್ಲಿ ಭಾರತದ ಶೆಫಾಲಿ ವರ್ಮಾ 759 ಪಾಯಿಂಟ್ಸ್‌ನೊಂದಿಗೆ ಅಗ್ರಸ್ಥಾನ ಉಳಿಸಿಕೊಂಡಿದ್ದಾರೆ. ಅವರು ಆಸ್ಟ್ರೇಲಿಯಾದ ಬೆಥ್ ಮೂನಿ (744) ಮತ್ತು ಭಾರತ ಟಿ–20 ತಡಂಡದ ಉಪನಾಯಕಿ ಮಂದಾನ (716) ಅವರನ್ನು ಹಿಂದಿಕ್ಕಿದ್ದಾರೆ. ಟಿ20 ಬೌಲರ್‌ಗಳಲ್ಲಿ ದೀಪ್ತಿ (ಆರು) ಮತ್ತು ಪೂನಂ (ಎಂಟನೇ) ಸ್ಥಾನಗಳಲ್ಲಿದ್ದಾರೆ.

ಚಾಂಪಿಯನ್ಸ್ ಲೀಗ್: ಕಣಕ್ಕಿಳಿಯಲು ಮೆಸ್ಸಿ ಸಜ್ಜು

ಬ್ರೂಷ್, ಬೆಲ್ಜಿಯಂ (ಎಎಫ್‌ಪಿ): ಅರ್ಜೆಂಟೀನಾದ ತಾರಾ ಆಟಗಾರ ಲಯೊನೆಲ್ ಮೆಸ್ಸಿ ತಮ್ಮ ಹೊಸ ಕ್ಲಬ್ ಪ್ಯಾರಿಸ್ ಸೇಂಟ್ ಜರ್ಮನ್ (ಪಿಎಸ್‌ಜಿ) ಪರ ಕಣಕ್ಕಿಳಿಯಲು ಸಜ್ಜಾಗಿದ್ದಾರೆ. ಯುಇಎಫ್‌ಎ ಚಾಂಪಿಯನ್ಸ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಬುಧವಾರ ತಡರಾತ್ರಿ ನಡೆಯುವ ಪಂದ್ಯದಲ್ಲಿ ಪಿಎಸ್‌ಜಿ ಆತಿಥೇಯ ಕ್ಲಬ್ ಬ್ರೂಷ್ ತಂಡದ ಸವಾಲು ಎದುರಿಸಲಿದೆ.

ಮೆಸ್ಸಿ ಅವರು ಪಿಎಸ್‌ಜಿ ಸೇರಿ ಐದು ವಾರಗಳು ಕಳೆದಿವೆ. ಕ್ಲಬ್ ಫುಟ್‌ಬಾಲ್‌ನಲ್ಲಿ ಅತಿದೊಡ್ಡ ಟ್ರೋಫಿಯನ್ನು ಐದನೇ ಬಾರಿಗೆ ಗೆಲ್ಲಲು ತಾನು ಸೂಕ್ತ ತಂಡದಲ್ಲಿರುವುದಾಗಿ ಅವರು ತಿಳಿಸಿದ್ದಾರೆ.

ರಿಮ್ಸ್‌ನಲ್ಲಿ ನಡೆದ ಲೀಗ್ ಒನ್ ಟೂರ್ನಿಯ ಪಂದ್ಯವೊಂದರಲ್ಲಿ ಕೇವಲ 24 ನಿಮಿಷಗಳ ಕಾಲ ಅವರು ಬದಲಿ ಆಟಗಾರನಾಗಿ ಪಿಎಸ್‌ಜಿ ಜರ್ಸಿಯಲ್ಲಿ ಕಾಣಿಸಿಕೊಂಡಿದ್ದರು.

ಆರು ಬಾರಿ 'ಬ್ಯಾಲನ್ ಡಿ ಒರ್' ವಿಜೇತ ಮೆಸ್ಸಿ 'ಎ' ಗುಂಪಿನ ಈ ಮೊದಲ ಪಂದ್ಯದಲ್ಲಿ ಪೂರ್ಣಪ್ರಮಾಣದಲ್ಲಿ ಕಣಕ್ಕಿಳಿಯಲಿದ್ದಾರೆ. ಒಂದು ವೇಳೆ ಸಹ ಆಟಗಾರರಾದ ನೇಮರ್ ಮತ್ತು ಕಿಲಿಯನ್ ಬಾಪೆ ಆಡಲಿಳಿದರೆ ಮೂವರು ತಾರಾ ಆಟಗಾರರು ಪಿಎಸ್‌ಜಿ ಪರ ಮೊದಲ ಬಾರಿ ಜೊತೆಯಾಗಿ ಕಾಣಿಸಿಕೊಂಡಂತಾಗುತ್ತದೆ.

ಲಯೊನೆಲ್ ಮೆಸ್ಸಿ– ಎಎಫ್‌ಪಿ ಚಿತ್ರ

ಇಂಟರ್ ಮಿಲನ್ ಮತ್ತು ರಿಯಲ್ ಮ್ಯಾಡ್ರಿಡ್ ತಂಡಗಳ ನಡುವಣ ಪಂದ್ಯವೂ ಬುಧವಾರ ನಿಗದಿಯಾಗಿದೆ. ಪಂದ್ಯ ಆರಂಭ: ಬುಧವಾರ ತಡರಾತ್ರಿ 12.30

ಪ್ರಜಾವಾಣಿ
ಪ್ರಶ್ನೆಯ ಗುಟ್ಟು ಮಾಡಿರಿ ರಟ್ಟು
ಗಲಿಬಿಲಿ ಪ್ರಶ್ನೆ ನಮ್ಮದು, ಚುರುಕು ಉತ್ತರ ನಿಮ್ಮದು
ಗಡಿಬಿಡಿ ಆಗದೆ ಸರಿಯಾದ ಉತ್ತರವನ್ನು www.bit.ly/pvgutturattuಗೆ ಇಂದು ಸಂಜೆ 6ರ ಒಳಗೆ ಕಳುಹಿಸಿ ಆಕರ್ಷಕ ಬಹುಮಾನ ಗೆಲ್ಲಿ!

ಪ್ರಶ್ನೆ 1	ಹಿಡಿದರೆ ಹಿಡಿಯಷ್ಟು ಬಿಟ್ಟರೆ ಮನೆತುಂಬ
ಪ್ರಶ್ನೆ 2	ಕಾಂತಾಮಣಿ ಎಂಬ ಪಕ್ಷಿ, ಚಿಂತಾಮಣಿ ಎಂಬ ಕೆರೆ, ಕೆರೆಯಲ್ಲಿ ನೀರಿಲ್ದೆ ಹೋದ್ರೆ ಪಕ್ಷಿಗೆ ಮರಣ

ಬಂಪರ್ ಬಹುಮಾನ 1 ವಾಟರ್ ಪ್ಯೂರಿಫೈಯರ್
3D ಪಝಲ್ 3 ಸ್ಪೆಶಲ್ ಬಹುಮಾನ
ಗಿಫ್ಟ್ ವೌಚರ್ ₹500 ಪ್ರತಿ ದಿನ 10 ಅದೃಷ್ಟಶಾಲಿಗಳಿಗೆ
*ಷರತ್ತುಗಳು ಅನ್ವಯ
ಹಿಂದಿನ ಪ್ರಶ್ನೆಗೆ ಉತ್ತರ: 1) ಹಿಂದಿನ ದಿನ 2) ಶನಿವಾರ

ಉದ್ಯೋಗ ವಾಣಿ

ಕರ್ನಾಟಕ ಸರ್ಕಾರ
ಆಡಳಿತ ತರಬೇತಿ ಸಂಸ್ಥೆ
ಲಲಿತ ಮಹಲ್ ರಸ್ತೆ, ಮೈಸೂರು–570011
ದೂ.ಸಂ.: 0821–2520906(ಂ), 2520904(ಖ), ಫ್ಯಾಕ್ಸ್: (0821) 2523899, 2520164 Email: dgatimysore@gmail.com
Web: www.atimysore.gov.in
File No: ATI/93/EST/EST1/2020-ADMN-ATI Date: 13.09.2021

ಅಧಿಸೂಚನೆ

ಆಡಳಿತ ತರಬೇತಿ ಸಂಸ್ಥೆ, ಮೈಸೂರು ಇಲ್ಲಿ ಸುಸ್ಥಿರ ಅಭಿವೃದ್ಧಿ ಗುರಿಗಳು ಕೇಂದ್ರದಲ್ಲಿ ಖಾಲಿಯಿರುವ ಕೆಳಕಂಡ ಹುದ್ದೆಗಳನ್ನು ಗುತ್ತಿಗೆ/ನಿಯೋಜನೆ ಆಧಾರದ ಮೇಲೆ ಭರ್ತಿ ಮಾಡಲು ಅಧಿಸೂಚನೆ ಹೊರಡಿಸಲಾಗಿದೆ.

ಕ್ರ.ಸಂ	ಹುದ್ದೆ ವಿವರ	ಹುದ್ದೆಗಳ ಸಂಖ್ಯೆ
1	ಬೋಧಕರು	01
2	ಕೋರ್ಸ್ ಅಸಿಸ್ಟೆಂಟ್	02
3	ಮಲ್ಟಿ ಟಾಸ್ಕಿಂಗ್ ಅಸಿಸ್ಟೆಂಟ್	02
	ಒಟ್ಟು	05

ಮೇಲ್ಕಂಡ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅಗತ್ಯವಿರುವ ವಿದ್ಯಾರ್ಹತೆ ವಿವರವು ಸಂಸ್ಥೆಯ ವೆಬ್ ಸೈಟ್ www.atimysore.gov.in ನಲ್ಲಿ ದಿ: 15.09.2021 ರಿಂದ ಲಭ್ಯವಿರುತ್ತದೆ. ಆಸಕ್ತ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಭರ್ತಿ ಮಾಡಿ ಅಗತ್ಯ ದಾಖಲೆಗಳೊಂದಿಗೆ ಮಹಾನಿರ್ದೇಶಕರು, ಆ.ತ.ಸಂ. ಮೈಸೂರು ವಿಳಾಸಕ್ಕೆ ದಿ: 24.09.2021 ರೊಳಗಾಗಿ ನೊಂದಾಯಿತ ಅರ್ಜಿಯ ಮೂಲಕ ಹಾಗೂ ಸಾಫ್ಟ್ ಕಾಪಿಯನ್ನು ಇ–ಮೇಲ್ ಮೂಲಕ atimysurujobs@gmail.com ವಿಳಾಸಕ್ಕೆ ಕಳುಹಿಸುವುದು. ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಅರ್ಜಿ ಸಲ್ಲಿಸುವವರು ಪ್ರತಿ ಹುದ್ದೆಗೂ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸುವುದು. ಅರ್ಹ ಅಭ್ಯರ್ಥಿಗಳು ಸಂದರ್ಶನಕ್ಕೆ ತಮ್ಮ ಸ್ವಂತ ಖರ್ಚಿನಲ್ಲಿಯೆ ಹಾಜರಾಗುವುದು.

ಮಹಾನಿರ್ದೇಶಕರ ಪರವಾಗಿ
ಆಡಳಿತ ತರಬೇತಿ ಸಂಸ್ಥೆ, ಮೈಸೂರು
DIPR/DDMYS/MCA/503/2021-22

Geetha Shishu Shikshana Sangha (R)
GSSS School of Architecture for Women
KRS Road, Metagalli, Mysuru – 570016
(Approved by Council of Architecture, New Delhi, Affiliated to VTU, Belagavi & Approved by Govt. of Karnataka)
APPOINTMENT NOTIFICATION

Position	Nature of Appointment	Qualification & Experience
Associate Professor/ Assistant Professor	Full time / Tenure	Qualification as per COA Norms

Salary will be based on qualification and experience. 2/3 BHK accommodation will be provided for the post of Associate Professor. Application with Colour photo and copies of certificates must be sent to Hon. Secretary before 25-09-2021.
Dr. M. Jagannatha Shenoi, President
Smt. Vanaja B. Pandit, Hon. Secretary

REGIONAL INSTITUTE OF EDUCATION
National Council of Educational Research and Training, New Delhi
MHRD, Government of India MYSURU - 570 006
Ph: 0821-2514095, 2511411, Fax: 0821-2515665
Email: riemysore@rediffmail.com, website: www.riemysore.ac.in
WALK-IN-INTERVIEW
The Regional Institute of Education, Mysuru will conduct Walk-in-Interview on the dates as shown against each post purely on contractual basis for the Academic Session 2021-22.

Sl. No.	Name of the Post	Posts	Consolidated Remuneration Per Month Rs.	Date of Interview and Time
1	PGT (English)	01	Rs. 27,500/-	20.09.2021 at 10:00 am
2	PGT (Hindi)	01		20.09.2021 at 11:30 am
3	TGT (Social Science)	01	Rs. 26,250/-	20.09.2021 at 02:30 pm
4	TGT (Kannada)	01		20.09.2021 at 03:30 pm
5	TGT (Sanskrit)	01		20.09.2021 at 04:30 pm
6	Pre-Primary/Nursery School Teachers	03	Rs. 21,250/-	21.09.2021 at 10:00 am
7	Lab Assistant (Physics)	01	Rs. 17,000/-	21.09.2021 at 12:00 Noon
8	Lab Assistant (Chemistry/Biology)	01		21.09.2021 at 02:30 pm
9	Lab Assistant (Computer Science)	01		21.09.2021 at 04:00 pm
10	Production Assistant	01	Rs. 24,000/-	22.09.2021 at 10:00 am

FOR MORE DETAILS PLEASE LOG ON TO www.riemysore.ac.in
Sd/-
PRINCIPAL

ಪ್ರಜಾವಾಣಿ ಉದ್ಯೋಗ ವಾಣಿ
ಉದ್ಯೋಗಾವಕಾಶದ ಜಾಹೀರಾತಿಗಾಗಿ ಸಂಪರ್ಕಿಸಿ:
Mob : 96069 12220

ಉದ್ಯೋಗ ಜಾಹಿರಾತು
ಕರ್ನಾಟಕ ರಾಜ್ಯ ಜಿಲ್ಲೆ / ತಾಲ್ಲೂಕುಗಳಲ್ಲಿ ಜಿಲ್ಲಾ ಹಾಗೂ ತಾಲ್ಲೂಕು ಸಂಯೋಜಕರು ಬೇಕಾಗಿದ್ದಾರೆ.

ಭಾರತೀಯ ಜೈನ್ ಸಂಘಟನೆಯು ಕರ್ನಾಟಕ ರಾಜ್ಯದಲ್ಲಿ 'ಕೋವಿಡ್ ಮುಕ್ತ ಗ್ರಾಮ' ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಜಿಲ್ಲೆ / ತಾಲ್ಲೂಕು ಮಟದಲ್ಲಿ ಕೆಲಸ ನಿರ್ವಹಿಸಲು ನುರಿತ ಹಾಗೂ ದಕ್ಷ ಸಂಯೋಜಕರನ್ನು ಆಹ್ವಾನಿಸುತ್ತದೆ.
ಕೋವಿಡ್ ಮುಕ್ತ ಕಾರ್ಯಕ್ರಮವು ಗ್ರಾಮಗಳ ಮಟ್ಟದಲ್ಲಿ ಸಮುದಾಯದ ನೇತೃತ್ವದಲ್ಲಿ ಗ್ರಾಮಗಳಿಗೆ ತಮ್ಮದೇ ಆದ ಜವಾಬ್ದಾರಿ ಹಾಗೂ ಹೆಚ್ಚಿನ ಹೊಣೆಗಾರಿಕೆಯನ್ನು ನೀಡಿ ಈ ಸಾಂಕ್ರಾಮಿಕ ರೋಗದಿಂದ ತಮ್ಮನ್ನು ತಾವು ರಕ್ಷಿಸಿ ಕೊಳ್ಳುವಂತೆ ಮಾಡುವುದೇ ಆಗಿದೆ.
ಕರ್ನಾಟಕ ಸರ್ಕಾರದಿಂದ ಬೆಂಬಲಿತ ಈ ಕಾರ್ಯಕ್ರಮದಲ್ಲಿ ಗ್ರಾಮ ಸಮುದಾಯಗಳು ಒಟ್ಟಾಗಿ ಸೇರಿ ಒಂದು ಜವಾಬ್ದಾರಿಯುತ 'ಕೊವಿಡ್ ಕಾರ್ಯಪಡೆ' ಯನ್ನು ರಚಿಸಿ ಕೊವಿಡ್‌ನಿಂದ ಉಂಟಾಗಬಹುದಾದ ಅಪಾಯಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದರ ಜೊತೆಗೆ ಅಪಾಯದಿಂದ ರಕ್ಷಿಸುವುದೇ ಆಗಿದೆ.
ಜಿಲ್ಲೆ / ತಾಲ್ಲೂಕು ಸಂಯೋಜಕರಾದ ನೀವು ಸರ್ಕಾರಿ ಅಧಿಕಾರಿಗಳು ಹಾಗೂ ಗ್ರಾಮ ಪಂಚಾಯಿತಿ ಅದ್ಯಕ್ಷರು / ಸದಸ್ಯರು ಹಾಗು ಗ್ರಾಮ ಸೇವಕರ ಜೊತೆ ಉತ್ತಮ ಸಂಪರ್ಕ ಸಾದಿಸಿ ಕೆಲಸ ಮಾಡಬೇಕಾಗುತ್ತದೆ. ಈ ಕಾರ್ಯಕ್ರಮದ ಅವದಿ 4 ರಿಂದ 6 ತಿಂಗಳು.

ವಿದ್ಯಾರ್ಹತೆ ಹಾಗೂ ಅನುಭವ
1. ಪದವಿ / ಸ್ನಾತಕೋತ್ತರ ಪದವಿ
2. ಅನುಭವ..
ಅ. ಜಿಲ್ಲಾ ಸಂಯೋಜಕರು 5 ರಿಂದ 7 ವರ್ಷಗಳು
ಆ. ತಾಲ್ಲೂಕು ಸಂಯೋಜಕರು 2ರಿಂದ 5 ವರ್ಷಗಳು
3. ಇಬ್ಬರು ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಸರ್ಕಾರಿ ಅಧಿಕಾರಿಗಳೊಂದಿಗೆ ತಳಮಟ್ಟದಿಂದ ಕೆಲಸ ಮಾಡಿದ ಅನುಭವ ಹೊಂದಿರಬೇಕು.
4. ಸ್ಥಳಿಯ ಭಾಷೆಯ ಅರಿವು ಅವಶ್ಯಕ.
5. ಮೊಬೈಲ್ ಹಾಗೂ ಕಂಪ್ಯೂಟರ್ ತಿಳಿವು ಅನಿವಾರ್ಯ
6. ದ್ವಿಚಕ್ರ ವಾಹನ ಹೊಂದಿದ ಅಭ್ಯಾರ್ಥಿಗಳಿಗೆ ಆದ್ಯತೆ ನೀಡಲಾಗುವುದು.

BJS Bharatiya Jain Sanghatana COVID FREE VILLAGE
ದಿನಾಂಕ 20 ಸೆಪ್ಟೆಂಬರ್ 2021 ರವಳಗೆ ಕೆಳಕಂಡ ಜಾಲ ತಾಣತಲ್ಲಿ ಅರ್ಜಿ ಸಲ್ಲಿಸಬಹುದು. hrd@bjsindia.org www.bjsindia.org

ರಾಜ್ಯ ರ್‍ಯಾಂಕಿಂಗ್ ಟೂರ್ನಿ: ದೇಶ್ನಾ ವಂಶಿಕಾ, ಸಹನಾ ಮೂರ್ತಿಗೂ ಗರಿ

ಟಿಟಿ: ಆಕಾಶ್‌ಗೆ ಪ್ರಶಸ್ತಿ 'ಡಬಲ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ಯುತ್ತಮ ಸಾಮರ್ಥ್ಯ ತೋರಿದ ಆಕಾಶ್ ಕೆ.ಜೆ. ಅವರು ರಾಜ್ಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯ ಎರಡು ವಿಭಾಗಗಳಲ್ಲಿ ಪ್ರಶಸ್ತಿ ಜಯಿಸಿದರು. ಬಾಲಕರ 17 ವರ್ಷದೊಳಗಿನ ಹಾಗೂ 19 ವರ್ಷದೊಳಗಿನವರ ವಿಭಾಗಗಳಲ್ಲಿ ಅವರು ಚಾಂಪಿಯನ್ ಆಗಿ ಹೊರಹೊಮ್ಮಿದರು.

ಇಲ್ಲಿಯ ಮಲ್ಲೇಶ್ವರಂ ಸಂಸ್ಥೆಯ ಕ್ರೀಡಾಂಗಣದಲ್ಲಿ ಪಂದ್ಯಗಳು ನಡೆದವು.

ಬಾಲಕಿಯರ 17 ವರ್ಷದೊಳಗಿನ ಬಾಲಕಿಯರ ವಿಭಾಗದ ಪ್ರಶಸ್ತಿಯು ಸಹನಾ ಎಚ್. ಮೂರ್ತಿ ಅವರಿಗೆ ಒಲಿದರೆ, 19 ವರ್ಷದೊಳಗಿನವರ ವಿಭಾಗದಲ್ಲಿ ದೇಶ್ನಾ ಎಂ. ವಂಶಿಕಾ ಪ್ರಶಸ್ತಿಗೆ ಮುತ್ತಿಕ್ಕಿದರು.

17 ವರ್ಷದೊಳಗಿನವರ ಬಾಲಕರ ವಿಭಾಗದ ಫೈನಲ್ ಹಣಾಹಣಿಯಲ್ಲಿ ಆಕಾಶ್ 6–11, 11–4, 12–10, 11–4, 9–11, 11–7ರಿಂದ ಪಿ.ವಿ. ಶ್ರೀಕಾಂತ್ ಕಶ್ಯಪ್ ಅವರ ಸವಾಲು ಮೀರಿದರು.

ನಾಲ್ಕರ ಘಟ್ಟದ ಪಂದ್ಯಗಳಲ್ಲಿ ಆಕಾಶ್ 11-7,11-6, 12 -10, 9-11, 5 -11, 11-9ರಿಂದ ಸಮ್ಯಕ್ ಕಶ್ಯಪ್ ಅವರನ್ನು ಪರಾಭವಗೊಳಿಸಿದರೆ, ಶ್ರೀಕಾಂತ್ ಕಶ್ಯಪ್ 8–11, 11–7, 11–4, 11–6, 7–11, 11–8ರಿಂದ ರೋಹಿತ್ ಶಂಕರ್ ಎದುರು ಗೆದ್ದಿದ್ದರು.

19 ವರ್ಷದೊಳಗಿವರ ವಿಭಾಗದ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಆಕಾಶ್ 11–6, 11–7, 8–11, 11–8, 11–2ರಿಂದ ಸಮ್ಯಕ್ ಕಶ್ಯಪ್ ಅವರನ್ನು ಮಣಿಸಿದರು. ಸೆಮಿಫೈನಲ್‌ನಲ್ಲಿ ಆಕಾಶ್ ಅವರು ರೋಹಿತ್ ಶಂಕರ್ ಎದುರು 6 -11, 12-10, 10-12, 11-7, 10-12, 13 -11, 11-7ರಿಂದ ಜಯ ಸಾಧಿಸಿದರೆ, ಸಮ್ಯಕ್ 11-3, 11-8, 11-9, 8-11, 11-7ರಿಂದ ಶ್ರೀಕಾಂತ್ ಕಶ್ಯಪ್ ಅವರನ್ನು ಮಣಿಸಿದ್ದರು.

17 ವರ್ಷದೊಳಗಿನ ಬಾಲಕಿಯರ ಜಿದ್ದಾಜಿದ್ದಿ ಪೈಪೋಟಿಯ ಫೈನಲ್‌ನಲ್ಲಿ ಸಹನಾ 11-5, 11-9,13-11, 8-11, 9-11, 10-12, 11-9ರಿಂದ ಕರುಣಾ ಜಿ. ಅವರನ್ನು ಸೋಲಿಸಿದರು. ನಾಲ್ಕರ ಘಟ್ಟದಲ್ಲಿ ಸಹನಾ 8-11, 11-9,11-6, 4-11, 11-5, 11-8ರಿಂದ ಶ್ವೇತಾ ಪಿ.ಎಂ. ಎದುರು, ಕರುಣಾ 10-12, 12-10, 8-11, 11- 13, 12- 10, 11-7,13-11ರಿಂದ ತೃಪ್ತಿ ಪುರೋಹಿತ್ ಎದುರು ಗೆದ್ದಿದ್ದರು.

19 ವರ್ಷದೊಳಗಿನ ಬಾಲಕಿಯರ ಫೈನಲ್‌ನಲ್ಲಿ ದೇಶ್ನಾ ಅವರು ಕರುಣಾ ಅವರನ್ನು 11-9, 13-11, 12-10, 11-8ರಿಂದ ಮಣಿಸಿ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ನಾಲ್ಕರ ಘಟ್ಟದ ಹಣಾಹಣಿಗಳಲ್ಲಿ ದೇಶ್ನಾ 9-11, 3 -11, 11- 6, 11-8, 11-9, 11-6ರಿಂದ ಅನರ್ಘ್ಯಾ ಮಂಜುನಾಥ್ ಎದುರು, ಕರುಣಾ 10–12, 11–6, 11–7, 11–7,11–3ರಿಂದ ಕಲ್ಯಾಣಿ ಅವರನ್ನು ಸೋಲಿಸಿದ್ದರು.

ಪ್ರಶಸ್ತಿ ಜಯಿಸಿದ (ಎಡದಿಂದ) ದೇಶ್ನಾ ಎಂ. ವಂಶಿಕಾ, ಸಹನಾ ಎಚ್. ಮೂರ್ತಿ ಮತ್ತು ಆಕಾಶ್ ಕೆ.ಜೆ. ಸಂಭ್ರಮ

ಬ್ಯಾಸ್ಕೆಟ್‌ಬಾಲ್ ತಂಡದಲ್ಲಿ ಕರ್ನಾಟಕದ ಸಹನಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಸಹನಾ ಎಸ್.ಎಂ ಅವರು ಜೋರ್ಡಾನ್‌ನ ಅಮನ್‌ನಲ್ಲಿ ನಡೆಯಲಿರುವ ಫಿಬಾ ಏಷ್ಯಾಕಪ್ ಮಹಿಳಾ ಬ್ಯಾಸ್ಕೆಟ್‌ಬಾಲ್ ಟೂರ್ನಿಗೆ ಭಾರತ ತಂಡದಲ್ಲಿ ಸ್ಥಾನ ಗಿಟ್ಟಿಸಿದ್ದಾರೆ. ಸೆಪ್ಟೆಂಬರ್ 27ರಿಂದ ಅಕ್ಟೋಬರ್ 3ರವರೆಗೆ ಈ ಟೂರ್ನಿಯು ನಿಗದಿಯಾಗಿದೆ.

ಭಾರತ, ಕೊರಿಯಾ ಮತ್ತು ನ್ಯೂಜಿಲೆಂಡ್ ತಂಡಗಳು 'ಎ' ಗುಂಪಿನಲ್ಲಿ ಸ್ಥಾನ ಗಳಿಸಿವೆ.

ಸೆಪ್ಟೆಂಬರ್ 27ರಂದು ಮೊದಲ ಪಂದ್ಯದಲ್ಲಿ ಭಾರತ ತಂಡವು ಜಪಾನ್ ಎದುರು ಸೆಣಸಲಿದೆ. ಸೆಪ್ಟೆಂಬರ್ 28ರಂದು ಕೊರಿಯಾ ತಂಡದ ಸವಾಲು ಎದುರಿಸಲಿದ್ದು ಮತ್ತು 29ರಂದು ನ್ಯೂಜಿಲೆಂಡ್ ತಂಡದ ವಿರುದ್ಧ ಕಣಕ್ಕಿಳಿಯಲಿದೆ.

ತಂಡ ಇಂತಿದೆ: ಶಿರಿನ್ ಲಿಮಯೆ (ನಾಯಕಿ), ಸಹನಾ ಎಸ್.ಎಂ, ಮಧು ಕುಮಾರಿ, ಶೃತಿ ಅರವಿಂದ್, ಎಸ್. ಪುಷ್ಪಾ, ನವನೀತಾ ಪಿ.ಯು, ಎಸ್.ಸತ್ಯಾ, ಎಂ.ನಿಶಾಂತಿ, ವೈಷ್ಣವಿ ಯಾದವ್, ಶ್ರೀಕಲಾ ರಾಣಿ, ಅನುಮರಿಯಾ ಮತ್ತು ಸ್ಟೆಫಿ ನಿಕ್ಸೊನ್.

ತರಬೇತಿ ಸಿಬ್ಬಂದಿ: ಮುಖ್ಯ ಕೋಚ್: ಜೊರಾನ್ ವಿಸಿಕ್, ಸಹಾಯಕ ಕೋಚ್‌ಗಳು: ಶ್ರೀನಿವಾಸ ಮೂರ್ತಿ, ಮೀನಲತಾ ಎಂ. ಫಿಸಿಯೊ: ಅಹಾನಾ ಪುರಾಣಿಕ್. ರಾಕೇಶ್ ಆರ್: ತಂಡದೊಂದಿಗಿರುವ ರೆಫರಿ.

ಬಳ್ಳಾರಿಯಲ್ಲಿ ರಾಷ್ಟ್ರೀಯ ಬಾಕ್ಸಿಂಗ್ ಇಂದಿನಿಂದ

ಕಣದಲ್ಲಿ ಶಿವ ಥಾಪಾ, ಗೌರವ್

ಬಳ್ಳಾರಿ(ಪಿಟಿಐ): ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಸ್ಥಾನ ಗಳಿಸಲು ಏಷ್ಯನ್ ಪದಕವಿಜೇತ ಶಿವ ಥಾಪಾ ಮತ್ತು ಈ ಹಿಂದೆ ವಿಶ್ವ ಚಾಂಪಿಯನ್‌ಷಿಪ್ ಪದಕ ವಿಜೇತ ಗೌರವ್ ಬಿಧುರಿ ಸೇರಿದಂತೆ 400 ಬಾಕ್ಸರ್‌ಗಳು ಬುಧವಾರ ಬಳ್ಳಾರಿಯಲ್ಲಿ ಆರಂಭವಾಗಲಿರುವ ರಾಷ್ಟ್ರೀಯ ಪುರುಷರ ಚಾಂಪಿಯನ್‌ಷಿಪ್‌ನಲ್ಲಿ ಕಣಕ್ಕಿಳಿಯಲಿದ್ದಾರೆ.

ಈ ಸ್ಪರ್ಧೆಯಲ್ಲಿ ಚಿನ್ನದ ಪದಕ ಜಯಿಸುವವರು ನೇರವಾಗಿ ಮುಂಬರುವ ವಿಶ್ವ ಚಾಂಪಿಯನ್‌ಷಿಪ್‌ಗೆ ಪ್ರವೇಶ ಪಡೆಯಲಿದ್ದಾರೆ. ಬೆಳ್ಳಿ ಪದಕ ಪಡೆದವರು ರಾಷ್ಟ್ರೀಯ ತರಬೇತಿ ಶಿಬಿರಕ್ಕೆ ಅರ್ಹತೆ ಗಿಟ್ಟಿಸುವರು.

'ಇನ್ನುಳಿದ ಎರಡು ಸ್ಥಾನಗಳನ್ನು ಆಯ್ಕೆ ಟ್ರಯಲ್ಸ್ ಮೂಲಕ ನಿರ್ಧರಿಸಲಾಗುತ್ತದೆ. ಅದರಲ್ಲಿ ಕಂಚಿನ ಪದಕ ವಿಜೇತರು ಮತ್ತು ಹೋದ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿಅಗ್ರಮೂರರಲ್ಲಿ ಸ್ಥಾನ ಪಡೆದ ತಂಡಗಳಾದ ಸರ್ವಿಸಸ್, ರೈಲ್ವೆಸ್ ಮತ್ತು ಹರಿಯಾಣ ಗಳಲ್ಲಿ ಆಯ್ಕೆ ಟ್ರಯಲ್ಸ್ ನಡೆಸಲಾಗುವುದು' ಎಂದು ಭಾರತ ಬಾಕ್ಸಿಂಗ್ ಫೆಡರೇಷನ್ ತಿಳಿಸಿದೆ

ಶಿವ ಥಾಪಾ

ಈಚೆಗೆ ಟೋಕಿಯೊದಲ್ಲಿ ನಡೆದಿದ್ದ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಿದ್ದ ಐವರು ಬಾಕ್ಸರ್‌ಗಳು ಬಳ್ಳಾರಿಯ ಸ್ಪರ್ಧೆಯಲ್ಲಿ ಭಾಗವಹಿಸುತ್ತಿಲ್ಲ. ಅದರಲ್ಲಿ ಅಮಿತ್ ಪಂಘಾಲ್ ಕೂಡ ಇದ್ದಾರೆ.

ಶಿವ ಥಾಪಾ 63.5 ಕೆಜಿ ವಿಭಾಗದಲ್ಲಿ ಅಸ್ಸಾಂ ತಂಡವನ್ನು ಪ್ರತಿನಿಧಿಸುವರು. ಗೌರವ್ 57 ಕೆಜಿ ವಿಭಾಗದಲ್ಲಿ ರೈಲ್ವೆಸ್ ಪರ ಕಣಕ್ಕಿಳಿಯುವರು.

ಇವರಲ್ಲದೇ ಸರ್ವಿಸಸ್‌ನ ಮೊಹಮ್ಮದ್ ಹುಸಾಮುದ್ದೀನ್, ದೀಪಕ್ ಕುಮಾರ್ ಕೂಡ ಸ್ಪರ್ಧೆಯಲ್ಲಿದ್ದಾರೆ.

ತೂಕದ ವಿಭಾಗಗಳನ್ನು 10 ರಿಂದ 13ಕ್ಕೆ ಏರಿಸಲಾಗಿದೆ. 48ಕೆಜಿ, 51ಕೆಜಿ, 54ಕೆಜಿ, 57ಕೆಜಿ, 60ಕೆಜಿ, 63.5ಕೆಜಿ, 67ಕೆಜಿ, 71ಕೆಜಿ, 75ಕೆಜಿ, 80ಕೆಜಿ, 86ಕೆಜಿ, 92ಕೆಜಿ, ಮತ್ತು +92ಕೆಜಿ ವಿಭಾಗಗಳಲ್ಲಿ ಸ್ಪರ್ಧೆಗಳು ಜರುಗಲಿವೆ.

ಒಂದು ವರ್ಷದ ನಂತರ ಈ ಸ್ಪರ್ಧೆಯು ನಡೆಯುತ್ತಿದೆ. ಹೋದ ವರ್ಷ ಕೋವಿಡ್ ಕಾರಣದಿಂದಾಗಿ ರದ್ದಾಗಿತ್ತು.

ಈ ಬಾರಿ ಕೋವಿಡ್ ತಡೆ ನಿಯಮವನ್ನು ಜಾರಿಗೊಳಿಸಲಾಗಿದೆ. ಸ್ಪರ್ಧಿಗಳು, ಸಿಬ್ಬಂದಿ ಮತ್ತು ಅಧಿಕಾರಿಗಳು 72 ತಾಸುಗಳ ಮುನ್ನ ಆರ್‌ಟಿ–ಪಿಸಿಆರ್ ನೆಗೆಟಿವ್ ವರದಿ ಪಡೆಯಬೇಕು.

ಬಾಕ್ಸರ್‌ಗಳಿಗೆ ಶಿರಸ್ತ್ರಾಣ: ಈ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಬಾಕ್ಸರ್‌ಗಳು ಹೆಡ್‌ಗೇರ್ (ಶಿರಸ್ತ್ರಾಣ) ಬಳಸಲಿದ್ದಾರೆ.

ಒಟ್ಟು 35 ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು ಮತ್ತು ಮಂಡಳಿಗಳ ಸ್ಪರ್ಧಿಗಳು ಭಾಗವಹಿಸುವರು.

ಸಂಕ್ಷಿಪ್ತ ಸುದ್ದಿ

'ಸಿ' ಡಿವಿಷನ್ ಬ್ಯಾಸ್ಕೆಟ್‌ಬಾಲ್ ಇಂದಿನಿಂದ

ಬೆಂಗಳೂರು: ಕರ್ನಾಟಕ ರಾಜ್ಯ ಬ್ಯಾಸ್ಕೆಟ್‌ಬಾಲ್ ಸಂಸ್ಥೆಯು ಪುರುಷರ 'ಸಿ' ಡಿವಿಷನ್ ಬ್ಯಾಸ್ಕೆಟ್‌ಬಾಲ್ ಟೂರ್ನಿಯನ್ನು ಬುಧವಾರದಿಂದ ಆಯೋಜಿಸಲಿದೆ. ಎಸ್. ರಂಗರಾಜನ್ ಸ್ಮಾರಕ ಟ್ರೋಫಿಗಾಗಿ ನಡೆಯುವ ಟೂರ್ನಿಗೆ ಕಂಠೀರವ ಕ್ರೀಡಾಂಗಣ ಆತಿಥ್ಯ ವಹಿಸಲಿದೆ.

2021ರ ಋತುವಿನಲ್ಲಿ ಲೀಗ್, ನಾಕೌಟ್ ಮಾದರಿಯಲ್ಲಿ ಆಡುತ್ತಿರುವ 46 ತಂಡಗಳ ಪೈಕಿ ಮೊದಲ ಎರಡು ಸ್ಥಾನ ಪಡೆದ ತಂಡಗಳು ಮುಂದಿನ ವರ್ಷಕ್ಕೆ 'ಬಿ' ಡಿವಿಷನ್‌ಗೆ ಅರ್ಹತೆ ಪಡೆಯಲಿವೆ.

ಮಹಿಳಾ ಫುಟ್‌ಬಾಲ್ ಪುನರಾರಂಭ

ಬೆಂಗಳೂರು: ರೌಡಿಯೊಬ್ಬನ ಹತ್ಯೆಯ ಹಿನ್ನೆಲೆಯಲ್ಲಿ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಮುಂದೂಡಲಾಗಿದ್ದ ಕೆಎಸ್‌ಎಫ್‌ಎ ಟೂರ್ನಿಯ ಪಂದ್ಯಗಳು ಬುಧವಾರ ಪುನರಾರಂಭವಾಗಲಿವೆ.

ಕರ್ನಾಟಕ ಮಹಿಳಾ ಫುಟ್‌ಬಾಲ್ ತಂಡದ ಶಿಬಿರ ಮತ್ತು ಸ್ಪೋರ್ಟ್ಸ್ ಪ್ಲಾನೆಟ್ ಮಹಿಳಾ 'ಎ' ಡಿವಿಷನ್ ಪಂದ್ಯಗಳು ನಡೆಯಲಿವೆ.

ಭಾನುವಾರ ರೌಡಿ ಅರವಿಂದ್ ಎಂಬುವವನ ಕೊಲೆಯಾಗಿತ್ತು.

ಎಫ್‌ಸಿಬಿಯು ಜಯಭೇರಿ

ಕಲ್ಯಾಣಿ (ಪಿಟಿಐ): ತೋಕ್‌ಚೋಮ್ ಜೇಮ್ಸ್ ಸಿಂಗ್ ಹಾಗೂ ಲೂಕಾ ಮ್ಯಾಜ್‌ಸೆನ್ ಗಳಿಸಿದ ಗೋಲುಗಳ ಬಲದಿಂದ ಎಫ್‌ಸಿ ಬೆಂಗಳೂರು ಯುನೈಟೆಡ್ (ಎಫ್‌ಸಿಬಿಯು) ತಂಡವು ಗೆದ್ದಿತು. ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಮಂಗಳವಾರ 2–0ಯಿಂದ ಮೊಹಮ್ಮಡನ್ ಎಸ್‌ಸಿ ತಂಡವನ್ನು ಸೋಲಿಸಿತು. ಇದರೊಂದಿಗೆ 'ಎ' ಗುಂಪಿನಲ್ಲಿ ಅಗ್ರಸ್ಥಾನ ಗಳಿಸಿತು.

64ನೇ ನಿಮಿಷದಲ್ಲಿ ಕಾಲ್ಚಳಕ ತೋರಿದ ತೋಕ್‌ಚೋಮ್, ಎಫ್‌ಸಿಬಿಯುಗೆ ಮುನ್ನಡೆ ತಂದುಕೊಟ್ಟರು. ಇಂಜುರಿ ಅವಧಿಯ ಐದನೇ ನಿಮಿಷದಲ್ಲಿ ಲೂಕಾ ಮ್ಯಾಜ್‌ಸೆನ್ ಗೋಲು ದಾಖಲಿಸಿ ತಂಡದ ಸಂಭ್ರಮ ಹೆಚ್ಚಿಸಿದರು.

ಇಂದು ಬಿಎಫ್‌ಸಿ ಕಣಕ್ಕೆ: ಕೋಲ್ಕತ್ತಾದ ಯುವ ಭಾರತಿ ಕ್ರೀಡಾಂಗಣದಲ್ಲಿ ನಡೆಯುವ ಪಂದ್ಯದಲ್ಲಿ ಬೆಂಗಳೂರು ಎಫ್‌ಸಿ ತಂಡವು ಕೇರಳ ಬ್ಲಾಸ್ಟರ್ಸ್ ಎದುರು ಆಡಲಿದೆ.